ಮಾನವಿಕ ಕರ್ಣಾಟಕ

ಸಂಪುಟ ೨೦ ; ಸಂಚಿಕೆ ೧-೨

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೯೦

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨೦; ಸಂಚಿಕೆ ೧-೨
(ಸಂಯುಕ್ತ ಸಂಚಿಕೆ)

೭೭-೭೮

ಜನವರಿ-ಏಪ್ರಿಲ್ ೧೯೯೦ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೦

MANAVIKA KARNATAKA, Kannada Quarterly of the *University of Mysore*, Volume 20, Number 1-2, January-April 1990, Edited by Dr. M. V. Srinivas and Sri M. N. Nanjundaraje Urs.

ಪ್ರಧಾನ ಸಂಪಾದಕರು

ಡಾ. ಸಿ. ಹಿ. ಕೃಷ್ಣಕುಮಾರ್

ಸಂಪಾದಕರು

ಡಾ. ಎಂ. ವಿ. ಶ್ರೀನಿವಾಸ್
ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು—೫೭೦ ೦೦೬

ಮುದ್ರಕರು

ಬಿ. ಎಸ್. ಸಿದ್ದೇಗೌಡ
ಕಾರ್ಯಭಾರಿ ನಿರ್ದೇಶಕರು
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು—೫೭೦ ೦೦೬

ವಿಷಯ ಸೂಚಿ

ಲೇಖಕರ ಸೂಚಿ

೧. ಯಮುನಾಬಾಯಿ ಆರ್. ರಾವ್	'ಶ್ರೀ', ೪೧೯, ೨ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು
೨. ಬಿಂ. ಬಿ. ಸೋಮಣ್ಣ	ಸಂಶೋಧಕರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೩. ಎಂ. ಆರ್. ಸತೀಶ್	ಪ್ರವಾಚಕರು, ಸಮಾಜಶಾಸ್ತ್ರ ವಿಭಾಗ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೪. ಡಾ|| ಟಿ. ಬಿ. ಬಸವರಾಜು	ಅಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೫. ಬಿ. ಎನ್. ಮಂಜುನಾಥಯ್ಯ	ಪ್ರವಾಚಕರು, ಶಿಕ್ಷಣಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೬. ಡಾ|| ಟಿ. ಪದ್ಮಿನಿ	ಪ್ರವಾಚಕರು, ಶಿಕ್ಷಣಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೭. ವೈ. ಸಿ. ಭಾನುಮತಿ	ಸಂಶೋಧನ ಸಹಾಯಕಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೮. ವೈ. ಎನ್. ಸಿದ್ದೇಗೌಡ	ಅಧ್ಯಾಪಕರು, ಸಮಾಜಕಾರ್ಯ ವಿಭಾಗ, ಮಾನಸಗಂಗೋತ್ರಿ, ಮೈಸೂರು
೯. ಕೆ. ಚಂದ್ರಶೇಖರ್	ಅಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ
೧೦. ಬಸವರಾಜಪ್ಪ	ಅಧ್ಯಾಪಕರು, ಮನಶ್ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೧. ಬಿ. ಎನ್. ಯಶೋಧ	ಸಂಶೋಧನ ಅಧ್ಯಾಪಕಿ, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಮೂಲ : ಎಚ್. ಜಿ. ವೇಲ್ಸ್
ಅನು : ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಕಳೆದ ಸಂಚಿಕೆಯಿಂದ ಮುಂದುವರಿದುದು)

69–ಎರಡನೆ ಮಹಾಯುದ್ಧ

ಈಗ ಮುಗಿಯುತ್ತಾಬಂದಿರುವ ಪ್ರಪಂಚಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ನಡೆದ ಘಟನಾವಳಿಗಳನ್ನು ಸಾಧ್ಯವಿದ್ದಷ್ಟು ವಿಸ್ತಾರ ಹೇಳೋಣ.

ಮಧ್ಯ ಯೂರೋಪಿನಲ್ಲಿ ಮುಂದೆಯಾದರೂ ಆಕ್ರಮಣ ನಡೆಯುವುದನ್ನು ತಡೆಗಟ್ಟಲು ಬ್ರಿಟನ್, ಫ್ರಾನ್ಸ್, ಅಮೆರಿಕ ಮತ್ತು ಸೋವಿಯತ್ ರಷ್ಯಗಳ ಸರ್ಕಾರಗಳು ಒಂದೆಡೆ ಸೇರಿ ಸಮಾಲೋಚನೆ ನಡೆಸುವ ಅವಶ್ಯಕತೆ ಬಗ್ಗೆ ಚರ್ಚಿಸಬೇಕೆಂದು 1938ರ ಮಾರ್ಚಿ ತಿಂಗಳಲ್ಲಿ ರಷ್ಯದ ವಿದೇಶಾಂಗಮಂತ್ರಿ ಲಿಟ್ವಿನೋವ್ ಅವರು ಸಲಹೆಮಾಡಿದರು. ಈ ಸಮಾಲೋಚನೆಗೆ ಜರ್ಮನಿ, ಜಪಾನು ಹಾಗೂ ಇಟಲಿಗಳನ್ನು ಆಮಂತ್ರಿಸಲಿಲ್ಲ. ಏಕೆಂದರೆ "ಆಕ್ರಮಣದ ವಿಷಯವನ್ನು ಆಕ್ರಮಣಕಾರರೊಂದಿಗೆ ಚರ್ಚಿಸುವುದು ನಮಗೆ ಇಷ್ಟವಿಲ್ಲ"ವೆಂದು ಲಿಟ್ವಿನೋವ್ ಹೇಳಿದರು. ಈ ಸಲಹೆ ನೇರವೂ ಅಂದಿನ ಪರಿಸ್ಥಿತಿಗೆ ಯೋಗ್ಯವಾದುದೂ ಆಗಿತ್ತು. ಇದಕ್ಕೆ ಒಪ್ಪಿದ್ದರೆ ಯೂರೋಪಿನಲ್ಲಿ ಈ ಕಾದಾಟ ನಡೆಯುತ್ತಲೇ ಇರಲಿಲ್ಲ ಅಥವಾ ಅದನ್ನು ಮೊಳಕೆಯಲ್ಲಿಯೇ ಚಿವುಟಿಹಾಕಬಹುದಾಗಿತ್ತು. ಆದರೆ ಬಹುಮತ ಪಡೆದಿದ್ದ ಬ್ರಿಟನ್ನಿನ ಕನ್ಸರ್ವೇಟಿವ್ ಪಕ್ಷದವರಿಗೆ ಜರ್ಮನಿಯಿಂದ ಅಪಾಯ ಬರಬಹುದೆಂಬ ಭಾವನೆಗಿಂತ ಕಮ್ಯೂನಿಸಮ್ಮಿನ ವಿರುದ್ಧ ಗೀಳೇ ಹೆಚ್ಚಾಗಿತ್ತು. ಇದೇ ಸಲಹೆ 1939ರ ಮಾರ್ಚಿಯಲ್ಲಿ ಸ್ಟಾಲಿನ್ನನಿಂದ, ಮೇಯಲ್ಲಿ ಮಾಲತೋವ್‌ನಿಂದ ಪುನಃ ಮುಂದಿಡಲ್ಪಟ್ಟಿತು. ಜರ್ಮನ್ ಆಕ್ರಮಣದ ವಿರುದ್ಧ ರಷ್ಯದ ಜೊತೆ ಇದ್ದ ಬಾಲ್ಟಿಕ್ ರಾಷ್ಟ್ರಗಳಿಗೆ ತಾವು ಏನೂ ಭರವಸೆ ಕೊಡಲಾರೆವು ಎಂದು ಬ್ರಿಟನ್ ಮತ್ತು ಫ್ರಾನ್ಸುಗಳು ಹೇಳಿದುವೆಂಬುದನ್ನೂ ಈ ಸಂದರ್ಭದಲ್ಲಿ ಜನರು ಬಹಿರಂಗಪಡಿಸಿದರು. ಜರ್ಮನಿಯ ಮೇಲೆ ಯುದ್ಧ ಘೋಷಿಸುವವರೆಗೂ ರಷ್ಯ ಇದೇ ಅಭಿಪ್ರಾಯಕ್ಕೆ ಗಟ್ಟಿಯಾಗಿ ಅಂಟಿಕೊಂಡಿತ್ತು.

ಜರ್ಮನಿ ಹಾಕಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಮುಂದಿನದು ಜೆಕೋಸ್ಲೋವಾಕಿಯದ ವಿನಾಶ. ಆಸ್ಟ್ರಿಯವನ್ನು ಜರ್ಮನಿ ಸೇರಿಸಿಕೊಂಡುಬಿಟ್ಟಮೇಲೆ ಪುಟ್ಟದಾದರೂ ಬಲಶಾಲಿಯಾಗಿದ್ದ ಕುತೂಹಲಕರ ದೇಶ ಜೆಕೋಸ್ಲೋವಾಕಿಯ ಮೂರು ಕಡೆಯಲ್ಲಿ ಸುತ್ತುವರೆಯಲ್ಪಟ್ಟಿತ್ತು. ಮಿಲಿಟರಿ ರಕ್ಷಣಾದೃಷ್ಟಿಯಿಂದ ಸರಹದ್ದುಗಳನ್ನು ವರ್ಸೈಲ್ಸಿನ ಪ್ರಕಾರ ರೂಪಿಸಿದಾಗ ಬೊಹೀಮಿಯದಲ್ಲಿ ಜರ್ಮನ್ ಜನಾಂಗದ ಜನ ಸೇರಿಹೋಗಿದ್ದರು. ಈ ಜರ್ಮನರ ಹಿತರಕ್ಷಣೆಗಾಗಿ ಎಂದು ಬಿರುಸಾದ ದೋಷಪೂರಿತ ಪ್ರಚಾರ ಮೊದಲುಮಾಡಿ ಜರ್ಮನಿ ಯುದ್ಧ ಬೆದರಿಕೆ ಹಾಕಿತು. ಅತ್ಯಂತ ವಿಚಿತ್ರವಾದ ಸಮಾಲೋಚನೆಗಳೂ ನಡೆದುವು. ಎಲ್ಲರಿಗೂ ಶತ್ರುವಾಗಿದ್ದ ಹಿಟ್ಲರನನ್ನು ಸಮಾಧಾನಪಡಿಸಲು ಚೇಂಬರ್‌ಲೇನ್ ಬಹುವಾಗಿ ಶ್ರಮಿಸಿದನು. ಈಗ ಬ್ರಿಟಿಷ್ ಜನತೆ ಆತನ ರಾಜನೀತಿಯನ್ನು ತಿರಸ್ಕರಿಸಿದೆ. ಆದರೆ ಆಗ ಅವರೆಲ್ಲ ಆತನಿಗೆ ಪೂರ್ಣ ಬೆಂಬಲಕೊಟ್ಟಿದ್ದರು. ಆತ ಮ್ಯೂನಿಚ್‌ಗೆ ಮೇಲಿಂದ ಮೇಲೆ ಓಡಾಡಿದನು. ಕಾಲವಿಳಂಬದೊಡನೆ ರಷ್ಯಾ, ಫ್ರಾನ್ಸ್, ಬ್ರಿಟನ್ ಜೆಕೋಸ್ಲೋವಾಕಿಯಗಳು ಜರ್ಮನಿಯನ್ನು ದಮನಮಾಡಬೇಕೆಂಬುದನ್ನು ತಿರಸ್ಕರಿಸಿ ಜೆಕೋಸ್ಲೋವಾಕಿಯದ ಡಾ|| ಬೆನೆಸ್‌ನ ಕೈಬಿಟ್ಟು, ಅಲ್ಲಿನ ಮಿಲಿಟರಿ ಅನುಕೂಲತೆಗಳನ್ನೆಲ್ಲ ಜರ್ಮನಿಗೆ ಒಪ್ಪಿಸಿಕೊಟ್ಟು ಇಷ್ಟೆಲ್ಲಕ್ಕೆ ಬದಲಾಗಿ ಹಿಟ್ಲರನ ಸಹಿಯಿದ್ದ ಕಾಸಿನ ಬೆಲೆಯಿಲ್ಲದ ಕಾಗದಹಿಡಿದು ಚೇಂಬರ್‌ಲೇನ್ ಹೆಸ್ಟನ್ನಿನ ವಿಮಾನನಿಲ್ದಾಣದಲ್ಲಿ ಬಂದಿಳಿದಾಗ, ಮತ್ತು ಡೌನಿಂಗ್ ರಸ್ತೆಯಲ್ಲಿ ನೆರೆದಿದ್ದ ಜನರಿಗೆ "ಮಿತ್ರರೆ, ನಮ್ಮ ಕಾಲದಲ್ಲಂತೂ ಶಾಂತಿ ಇರುತ್ತದೆ, ನೀವೆಲ್ಲ ಮನೆಗೆಹೋಗಿ ನಿಶ್ಚಿಂತೆಯಿಂದ ನಿದ್ರಿಸಿ" ಎಂದು ಹೇಳಿದಾಗ ಜನ ಹರ್ಷೋದ್ರೇಕದಿಂದ ಚಪ್ಪಾಳೆ ತಟ್ಟಿದರು. ಇದನ್ನೆಂದಿಗೂ ಮರೆಯುವಂತಿಲ್ಲ. ಜನ ಮನೆಗೆಹೋಗಿ ನಿದ್ರಿಸಿದರು.

ಪ್ರಕೃತಿಯ ನಿಯಮಗಳು ಅತಿ ಕಠೋರವಾದುವು. ಪ್ರಕೃತಿಯ ನ್ಯಾಯಾಲಯದಲ್ಲಿ ಅಪರಾಧಗಳಿಗೆಷ್ಟು ಕಠಿಣಶಿಕ್ಷೆಯೋ ಮೂರ್ಖತನ ದೌರ್ಬಲ್ಯಗಳಿಗೂ ಅಷ್ಟೇ ಶಿಕ್ಷೆ. ಆ ದಿನ ಬ್ರಿಟನ್ ಮರ್ಯಾದೆಗೆಟ್ಟು ಕರ್ತವ್ಯದಿಂದ ನುಣುಚಿಕೊಂಡಿದ್ದರ ಫಲವಾಗಿ ಈಗ ಬ್ರಿಟನ್ ಒಂದೇ ಅಲ್ಲದೆ ಮಾನವವರ್ಗದವರೆಲ್ಲರೂ ಶಿಕ್ಷೆ ಅನುಭವಿಸಬೇಕಾಗಿ ಬಂದಿದೆ. ಜರ್ಮನಿ ಒಂದುಕ್ಷಣ ಕೂಡ ಕರಾರುಗಳನ್ನು ಪಾಲಿಸಲಿಲ್ಲ. ಆ ದೇಶ ಕರಾರಿಗೆ ಸರಿಯಾಗಿ ನಡೆದುಕೊಳ್ಳಬಹುದೆಂದು ನಂಬುವಷ್ಟು ಜನರು ತಿಳಿಗೇಡಿಗಳಾಗಿದ್ದರೆಂಬುದು ಈಗ ಸೋಜಿಗವೆನಿಸುತ್ತದೆ. ಜರ್ಮನಿ ಸದಾ ಸನ್ನದ್ಧವಾಗಿತ್ತು. ಇಂಗ್ಲೆಂಡ್, ಚೇಂಬರ್‌ಲೇನಿನ ಸಜ್ಜನರು ನಿದ್ದೆಹೋದರು. ಜೆಕೋಸ್ಲೋವಾಕಿಯದಲ್ಲಿ ತಮಗೆ ವಹಿಸಿಕೊಟ್ಟಿದ್ದ ಪ್ರದೇಶಗಳಿಗೆ ಹೋದ ಜರ್ಮನ್ ಸೈನ್ಯಗಳು ಅಷ್ಟಕ್ಕೆ ನಿಲ್ಲದೆ ಮುನ್ನುಗ್ಗುತ್ತಲೇ ಇದ್ದುವು. 1939ರ ಮಾರ್ಚ್ ಹೊತ್ತಿಗೆ ಜೆಕೋಸ್ಲೋವಾಕಿಯ ಇಲ್ಲವಾಯಿತು. ಅಲ್ಲಿಯ ಸೋಡಾಫ್ಯಾಕ್ಟರಿ ದಿನೇ ದಿನೇ ಬಲವಾಗುತ್ತಿದ್ದ ಜರ್ಮನ್ ಸೈನ್ಯಗಳಿಗೋಸ್ಕರ ಯುದ್ಧಸಾಮಗ್ರಿಗಳನ್ನು

ತಯಾರುಮಾಡಲಾರಂಭಿಸಿತು. ತಾವೂ ಜೆಕೋಸ್ಲೋವಾಕಿಯದಂತೆ ಮುಳುಗಿಹೋಗ ಬಹುದೆಂಬ ಭೀತಿಯೋ ಇಲ್ಲದೆ ಪೋಲೆಂಡ್ ಮತ್ತು ಹಂಗೆರಿ ನಿಶ್ಚೇಷ್ಟವಾಗಿದ್ದ ಆ ರಾಜ್ಯದ ಮೇಲೆ ದುರಾಸೆಯಿಂದ ಏರಿಹೋದುವು. ಟಿಷೆನ್ (Teschen) ಜಿಲ್ಲೆಯನ್ನು ಪೋಲೆಂಡ್ ಕಿತ್ತುಕೊಂಡಿತು. ಉಕ್ರಾಯಿನಿನ ಒಂದು ಭಾಗವನ್ನು ಹಂಗೆರಿ ಸ್ವಾಧೀನ ಪಡಿಸಿಕೊಂಡಿತು.

ಈ ಹೊಸ ಸ್ವತ್ತನ್ನು ಬಹುದಿನ ಸಮಾಧಾನವಾಗಿ ಅನುಭವಿಸಲು ಪೋಲೆಂಡಿಗೆ ಆಗಲಿಲ್ಲ. ಜರ್ಮನಿಯ ಮುಂದಿನ ಗುರಿ ಪೋಲೆಂಡೇ ಆಗಿತ್ತು. ಅಲ್ಲಿ ಡಾಂಜ್ಸಿಗ್ ವಿಷಯವಾಗಿ ತಕರಾರು ಎಬ್ಬಿಸಲಾಯಿತು. ಈ ಸಮಸ್ಯೆ ಕೆರಳುತ್ತಾ ಹೋದಂತೆ ಚೇಂಬರ್‌ಲೇನಿನ ಬ್ರಿಟನ್ನಿನ ಹೊಯ್ದಾಟ ನಿಜವಾಗಿಯೂ ಅತ್ಯಂತ ಶೋಚನೀಯ ವಾಯಿತು. ಬಾಲ್ಷೆವಿಸಂ ಕುರಿತು ಭಯಸಂಶಯಗಳಿದ್ದುದರಿಂದ ಅದು ಜೆಕೋಸ್ಲೋವಾಕಿಯದ ರಕ್ಷಣೆಮಾಡಲು ಹಿಂದೆಗೆಯಿತು. ತನ್ನ ನಿಜವಾದ ಗುರಿ ಕಮ್ಯುನಿಸಂನ್ನು ನಾಶಮಾಡುವುದು ಎಂದು ಹಿಟ್ಲರ್ ಸೂಚಿಸಿದ್ದಕ್ಕೇ ಬ್ರಿಟನ್ ತಗಲಿಕೊಂಡಿತು. ಜರ್ಮನಿ ಪೂರ್ವದಿಕ್ಕಿಗೆ ನುಗ್ಗುತ್ತದೆ, ಬಳಿಕ ಪಾಶ್ಚಿಮಾತ್ಯ ಪ್ರತಿಗಾಮಿಗಳು ಘನತೆಗೆ ಕುಂದುಬಂದರೂ ಸರಿ ಅವನ ಹಿಂಬಾಲಕರಾಗಿ ಹೋಗಿ ಅವನ ವಿಜಯದ ಲಾಭ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದೇ ಬ್ರಿಟನ್ ಆಶಿಸುತ್ತಿದ್ದಿರಬಹುದು. ಆದರೆ ಪೋಲಂಡ್ ಎಂದಿನಿಂದಲೂ ಸರ್ವಾಧಿಕಾರಿಗಳ ಕೆಳಗೇ ಇತ್ತು. ಕ್ಯಾಥೋಲಿಕ್ ಧರ್ಮ ಪಾಲಿಸುತ್ತಿದ್ದ ಪ್ರತಿಗಾಮಿ ಪೋಲಂಡ್ ರಷ್ಯಾ ವಿರೋಧಿಯೂ ಆಗಿತ್ತು. ಜರ್ಮನಿಯನ್ನು ಎಲ್ಲರೂ ಒಂದುಗೂಡಿ ವಿರೋಧಿಸಬೇಕೆಂದು ಮತ್ತೊಮ್ಮೆ ಸಂಧಾನ ಗಳು ನಡೆದುವು. ಬ್ರಿಟನ್ನಿನ ಮೇಲ್ವರ್ಗದ ಜನರಿಗೆ ರಷ್ಯದೊಡನೆ ಪ್ರಾಮಾಣಿಕ ವಾಗಿ ಸಹಕರಿಸಲು ಇಷ್ಟವಿಲ್ಲದುದರಿಂದ ಪುನಃ ಈ ಎಲ್ಲ ಸಂಧಾನಗಳೂ ಕುಂಟುತ್ತಾ ಹೋದುವು. ಈ ಜನರಿಗೆ ಜರ್ಮನಿ ವೈರಿಯೆನಿಸಲಿಲ್ಲ. ಅಂದೇ ಏಕೆ ಇಂದಿಗೂ ಸಾಮಾಜಿಕ ಕ್ರಾಂತಿಯೇ ಅವರ ಪ್ರಮುಖ ವೈರಿಯಾಗಿದೆ.

ಮಾರ್ಚಿಯಲ್ಲಿ ಲಿಥುವೇನಿಯದ ಮೆಮಲ್ ಬಂದರು ಜರ್ಮನಿಗೆ ಸೇರಿತು. ರಾಷ್ಟ್ರಗಳ ಸಂಘವನ್ನು ನೇರವಾಗಿ ಧಿಕ್ಕರಿಸಿ 1939ರ ಏಪ್ರಿಲಿನಲ್ಲಿ ಇಟಾಲಿಯನ್ನರು ಹಠಾತ್ತಾಗಿ ಆಲ್ಬೇನಿಯವನ್ನು ವಶಮಾಡಿಕೊಂಡರು. ಇದಕ್ಕೂ ಎಲ್ಲ ಸಲ ಆದಂತೆ ನಿಷ್ಪ್ರಯೋಜಕವಾದ ದುರ್ಬಲ ಪ್ರತಿಭಟನೆಗಳು ಬಂದುವು ಅಷ್ಟೆ. ರಾಷ್ಟ್ರಗಳ ಸಂಘದ ಗೋಷ್ಠಿಗಳಲ್ಲಿ ಮತ್ತೊಂದು ಸ್ಥಳ ಖಾಲಿಯಾಯಿತು. ಅದುವರೆಗೂ ಸ್ಪಷ್ಟ ವಾಗಿ ಒಂದೇ ರೀತಿಯಲ್ಲಿ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳೊಂದಿಗೆ ಸಹಕಾರ ದೃಷ್ಟಿಯನ್ನಿಟ್ಟುಕೊಂಡಿದ್ದ ರಷ್ಯದ ವಿದೇಶಾಂಗ ಅಧಿಕಾರಿ ಲಿಟ್ವಿನೋವ್ ಮೇ ತಿಂಗಳಿನಲ್ಲಿ ಈ ಸಂಘಕ್ಕೆ ರಾಜೀನಾಮೆ ನೀಡುವುದರ ಮೂಲಕ ಈ ರಾಜ್ಯಗಳಿಗೆ ಮುನ್ನೆಚ್ಚರಿಕೆ ನೀಡಿದನು. ಬುದ್ಧಿವಂತ, ಅನುಭವಿ ಹಾಗೂ ವಿಶ್ವಾಸಪಾತ್ರನಾದ ಈತ ಹಿನ್ನೆಲೆಯಲ್ಲಿ ನಿಂತನು. ಈತನ ಸ್ಥಾನಕ್ಕೆ ಬಂದ ಮಲತೋವ್‌ನಿಗೆ

ಲಿತ್ವಿನೋವನಿಗಿದ್ದಂತೆ ಪಾಶ್ಚಾತ್ಯರಲ್ಲಿ ಅಭಿಮಾನವಿರಲಿಲ್ಲ. ಲಿತ್ವಿನೋವನ ಈ ಅರ್ಥ ಪೂರಿತ ಕ್ರಿಯೆಯಿಂದ ಬ್ರಿಟಿಷ್ ವಿದೇಶಾಂಗ ಕಚೇರಿಗೆ ಏನೂ ಅನ್ನಿಸಲೇ ಇಲ್ಲ. ನಿಜ ಹೇಳುವುದಾದರೆ ರಷ್ಯದ ಕ್ರಾಂತಿಯಾದಂದಿನಿಂದ ಅಲ್ಲಿನ ಘಟನೆಗಳನ್ನು ಕಂಡೂ ಕಾಣದಂತೆ ಇರುತ್ತದೆ ಈ ಕಚೇರಿ. ರಷ್ಯಾ ಇಲ್ಲದಿದ್ದರೇ ಚೆನ್ನಾಗಿತ್ತು ಎಂದು ಇದರ ಅಭಿಲಾಷೆ ಎನ್ನುವುದು ಸುಸ್ಪಷ್ಟ.

ಆಗಸ್ಟ 24 ರಂದು ಕಡೆಗಳಿಗೆಯಲ್ಲಿ ಬ್ರಿಟಿಷ್ ವಿದೇಶಾಂಗ ಕಚೇರಿ ಪೋಲೆಂಡಿನೊಡನೆ ಪರಸ್ಪರ ಸಹಾಯ ಕರಾರಿಗೆ ಸಹಿಹಾಕಿತು. ಇದಕ್ಕೆ ಮೊದಲು ಜರ್ಮನಿ ಮತ್ತು ರಷ್ಯಾಗಳು ಪರಸ್ಪರ ಆಕ್ರಮಣ ವಿರೋಧ ಕೌಲುಮಾಡಿಕೊಂಡಿದ್ದುವು. ಜರ್ಮನಿಯ ವಿದೇಶಾಂಗ ಮಂತ್ರಿ ರಿಬೆನ್‌ಟ್ರಾಪ್ ರಷ್ಯಕ್ಕೆ ಹೋಗಿ ಸ್ಟಾಲಿನ್ ಮತ್ತು ಮಲತೋವ್‌ರನ್ನು ಭೇಟಿಮಾಡಿದನು. ಬ್ರಿಟನ್ ವಂಚನೆಮಾಡುತ್ತದೆ ಎಂದು ಅವರಿಗೆ ಮನದಟ್ಟುಮಾಡಲು ಬಹುಶಃ ಈತ ಸಮರ್ಥನಾಗಿದ್ದಿರಬೇಕು. ಕೋಪ ಮತ್ತು ಸಂಶಯಗಳು ತುಂಬಿದ್ದ ರಷ್ಯಾ (ಇದಕ್ಕೆ ಸಾಕಷ್ಟು ಕಾರಣಗಳಿದ್ದುವು) ಪ್ರಜಾಪ್ರಭುತ್ವಗಳ ಕಡೆ ಬೆನ್ನು ತಿರುಗಿಸಿತು. ಜರ್ಮನಿ ತಾನು ಕೊಮಿಂಟರ್ನ್ (ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್)ಗೆ ವಿರೋಧಿ ಎಂದು ಹೇಳಿಕೊಳ್ಳುತಿದ್ದುದನ್ನು ಪೂರ್ತಿ ನಿಲ್ಲಿಸಿತು. ಫ್ರಾನ್ಸ್ ಮತ್ತು ಬ್ರಿಟನ್ನುಗಳ ಪ್ರಭಾವಿ ವಲಯಗಳಲ್ಲಿ ಜರ್ಮನಿ ಕೋಮಿನ್‌ಟರ್ನ್ ವಿರೋಧಿಯೆಂಬ ಸಂಗತಿಯೇ ನಾಜಿಗಳ ಪರ ಒಲವು ಇಟ್ಟುಕೊಳ್ಳಲು ಕಾರಣವಾಗಿತ್ತು. ಈ ತಂತ್ರದ ಉದ್ದೇಶ ಸಫಲವಾಗಿತ್ತು ಸೆಪ್ಟೆಂಬರ್ ಒಂದನೆ ತಾರೀಖು ಜರ್ಮನರು ಪೋಲೆಂಡಿನ ಎಲ್ಲೆಯನ್ನು ದಾಟಿ ಮುನ್ನಡೆದರು. ಸೆಪ್ಟೆಂಬರ್ ಮೂರರಂದು ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿದರು. ಹೀಗೆ " ನಿದ್ದೆ ಮಾಡಲು ಮನೆಗೆ ತೆರಳಿದ್ದ ಬ್ರಿಟನ್ನಿನ ಸಜ್ಜನರು " ಎಚ್ಚತ್ತು ಇದ್ದಕ್ಕಿದ್ದಂತೆ ಹಿಂದೆಂದೂ ಇಲ್ಲದಿದ್ದಂಥ ಅತ್ಯಂತ ವಿವರವಾಗಿ ವ್ಯವಸ್ಥೆಗೊಳಿಸಿದ ಯುದ್ಧ ಮನೋಭಾವದ ರಾಷ್ಟ್ರದೊಡನೆ ಸೆಣಸಲು ಹೋಗಬೇಕಾಯಿತು. ಅಲ್ಲದೆ ಇವರಿಗೆ ಮಿತ್ರನಾಗಬಹುದಾಗಿದ್ದ ದೊಡ್ಡ ಪ್ರಬಲರಾಷ್ಟ್ರ ಸಂಪೂರ್ಣವಾಗಿ ಇವರಿಂದ ದೂರವಾಗಿತ್ತು. ಇಷ್ಟಾದರೂ ಇನ್ನೂ ಆರು ತಿಂಗಳಕಾಲ ಈ ಜನ ಜಡರಾಗಿಯೇ ಕಾಲಕಳೆದರು. ಇವರಿಗೆ ಈ ವಿಷಯದಲ್ಲಿ ಏನೂ ತಿಳಿವಳಿಕೆಯಿರಲಿಲ್ಲ, ಮುನ್ನೆಚ್ಚರಿಕೆಯಿರಲಿಲ್ಲ, ಸಿದ್ಧತೆಯಿರಲಿಲ್ಲ ಮತ್ತು ಮರ್ಯಾದೆಗೇಡಿನ ಸಂಗತಿಯೆಂದರೆ ಇವರಿಗೆ ಸುಳ್ಳು ಭರವಸೆ ನೀಡಲಾಗಿತ್ತು.

ಪೋಲೆಂಡಿನ ಮೇಲಿನ ಜರ್ಮನ್ ಕಾರ್ಯಾಚರಣೆ ಅತ್ಯಂತ ದಕ್ಷವಾಗಿದ್ದು ಬಹು ಬೇಗನೇ ಮುಗಿಯಿತು. ಆ ದೇಶದೊಳಗೇ ' ಪಂಚಮದಳ ' (ಶತ್ರುಗಳ ಪರವಾಗಿರುವ ದ್ರೋಹಿಗಳ ತಂಡ)ದ ಚಟುವಟಿಕೆ ಸಾಕಷ್ಟಿದ್ದಿರಬೇಕು. ಅನೇಕ ಪೋಲಿಷ್ ವಿಮಾನ ತಂಗುದಾಣಗಳ ಮೇಲೆ ಬಲವಾದ ವಿಮಾನಧಾಳಿಗಳು ನಡೆದು ಅವು ನಿಷ್ಪ್ರಯೋಜಕವಾದುವು. ಪೋಲಿಷ್ ಸೈನ್ಯ ಕೆಚ್ಚೆದೆಯಿಂದ ಹೋರಾಡಿತು, ಆದರೆ

ಜರ್ಮನರ ಯುದ್ಧಸಾಧನಗಳು ಇವರದಕ್ಕಿಂತ ಬಹು ಉತ್ತಮವಾಗಿದ್ದುವು. ಜರ್ಮನ್ ಟ್ಯಾಂಕುಗಳೂ ಮುನ್ನುಗ್ಗಿ ಬಂದುವು. ಹೀಗಾಗಿ ಪೋಲಿಷ್ ಸೈನ್ಯ ಹಿಂದೊತ್ತರಿಸಲ್ಪಟ್ಟಿತು. ಮಿಲಿಟರಿಯಲ್ಲಿಲ್ಲದ ಪೋಲಿಷ್ ನಾಗರಿಕರ ಪ್ರತಿಭಟನೆಯನ್ನು ಜಜ್ಜಿಹಾಕುವುದಕ್ಕಾಗಿ ಪೋಲೆಂಡಿನ ನಗರಗಳು ಮತ್ತು ಹಳ್ಳಿಗಳ ಮೇಲೆ ವಿಮಾನಧಾಳಿ ಮತ್ತು ಫಿರಂಗಿಧಾಳಿ ನಡೆಸುವುದಾಗಿ ಸೆಪ್ಟೆಂಬರ್ 12ನೇ ತಾರೀಖು ಜರ್ಮನ್ ಹೈಕಮ್ಯಾಂಡ್ ಘೋಷಿಸಿತು. ಪೋಲಿಷ್ ನಾಗರಿಕರ ಕಗ್ಗೊಲೆ ನಡೆಯಿತು. ಪೋಲಿಷ್ ಸೈನ್ಯದಳಗಳು ಲಿಥುವೇನಿಯ, ಹಂಗೆರಿ ಮತ್ತು ರುಮೇನಿಯಗಳ ಕಡೆ ಹಿನ್ನಡೆದುವು. ಸರ್ಕಾರ ರುಮೇನಿಯಕ್ಕೆ ತಪ್ಪಿಸಿಕೊಂಡುಹೋಯಿತು. ಸೆಪ್ಟೆಂಬರ್ 28 ರಂದು ವಾರ್ಸಾ ಜರ್ಮನರ ಕೈಸೇರಿತು.

ಪೋಲೆಂಡ್ ಸೋಲುವುದು ಖಂಡಿತ ಎಂದು ಸೆಪ್ಟೆಂಬರ್ 16ರ ಹೊತ್ತಿಗೇ ತಿಳಿದುಕೊಂಡು ರಷ್ಯವು ತಾನೂ ಪೋಲೆಂಡಿನ ಗಡಿದಾಟಿತು. ಇದಕ್ಕೆ ಪ್ರತಿಭಟನೆ ಬರಲಿಲ್ಲ. ಕರ್ಜನ್ ಒಪ್ಪಂದದ ಪ್ರಕಾರ 1918 ರಿಂದ 1920ರ ವರೆಗೆ ರಷ್ಯದ ಗಡಿ ಎಂದು ಗೊತ್ತಾಗಿದ್ದ ಗಡಿರೇಖೆಯವರೆಗೆ ರಷ್ಯದ ದಳಗಳು ನುಗ್ಗಿದುವು. ಈ ಸೈನ್ಯ ಆಕ್ರಮಿಸಿಕೊಂಡ ಈ ಪ್ರದೇಶದಲ್ಲಿ ನಿಜವಾಗಿಯೂ ಪೋಲರು ಎಂಬ ಜನರು ಇರಲಿಲ್ಲ ಎಂದೇ ಹೇಳಬೇಕು. ರಾಷ್ಟ್ರಗಳ ಸಂಘವನ್ನು ಧಿಕ್ಕರಿಸಿ ಲಿಥುವೇನಿಯದಿಂದ ಪೋಲರು ಕಿತ್ತುಕೊಂಡಿದ್ದ ವಿಲ್ನಾವನ್ನು ಅದರ ಮೂಲ ಮಾಲೀಕರಿಗೆ ಒಪ್ಪಿಸಲಾಯಿತು. ಅನಂತರ ಮೂರು ಬಾಲ್ಟಿಕ್‌ರಾಜ್ಯಗಳೊಂದಿಗೆ ರಷ್ಯಾ ಒಪ್ಪಂದಗಳನ್ನು ಮಾಡಿಕೊಂಡಿತು (ಈ ರಾಜ್ಯಗಳಿಗೆ ಫ್ರಾನ್ಸ್ ಮತ್ತು ಬ್ರಿಟನ್ ಭರವಸೆ ನೀಡಲು ನಿರಾಕರಿಸಿದ್ದರೆಂಬುದನ್ನು ಮೊದಲೇ ಹೇಳಿದೆ). ಈ ಒಪ್ಪಂದಗಳ ಪ್ರಕಾರ ಈ ರಾಜ್ಯಗಳನ್ನು ವಾಯುಧಾಳಿ ಮತ್ತು ಜಲಧಾಳಿಗಳಿಂದ ರಕ್ಷಿಸುವ ಅಧಿಕಾರ ರಷ್ಯದ ಸೈನ್ಯಗಳದ್ದಾಯಿತು. ಅಂದಿನ ಪರಿಸ್ಥಿತಿಯ ಉಪಯೋಗ ಪಡೆದು ಬಾಲ್ಟಿಕ್ ಸಮುದ್ರತೀರದ ನಿಯಂತ್ರಣವನ್ನು ಭದ್ರಪಡಿಸಿಕೊಳ್ಳುವುದು ರಷ್ಯದ ಉದ್ದೇಶವೆಂದು ಸ್ಪಷ್ಟವಾಯಿತು. 'ಬಂಡವಾಳಶಾಹಿ' ರಾಜ್ಯಗಳೆಲ್ಲ ಒಂದುಗೂಡಿ ತನ್ನ ಮೇಲೆ ಬೀಳಬಹುದೆಂಬ ಭಯ ರಷ್ಯಕ್ಕೆ ಯಾವಾಗಲೂ ಇದ್ದೇ ಇತ್ತು. ಈ ದಾಳಿಯ ಮುಮ್ಮಾರ್ಗ ಬಹುಶಃ ಫಿನ್ಲೆಂಡ್ ಆಗಿರುತ್ತದೆ ಎಂದು ನಿರ್ಧರಿಸಲೂ ಸಾಕಷ್ಟು ಕಾರಣ ಇತ್ತು. ಈ ಭಯ ಉತ್ಪ್ರೇಕ್ಷೆಯಿಂದ ಕೂಡಿದ್ದಾಗಿದ್ದರೂ ಇರಬಹುದು. ಪೀಟರ್ಸ್‌ಬರ್ಗನ್ನು ಸೇರುವ ದಾರಿ ಅದೆಷ್ಟರಮಟ್ಟಿಗೆ ಫಿನ್ಲೆಂಡಿನ ಫಿರಂಗಿಗಳ ಕೆಳಗೆ ಇತ್ತು ಎಂದರೆ ಬೇರಾವ ರಾಜ್ಯವೂ ಅಂಥ ಪರಿಸ್ಥಿತಿಯನ್ನು ಸಹಿಸುತ್ತಿರಲಿಲ್ಲ. ಸ್ಟಾಟೆನ್ ದ್ವೀಪವನ್ನು ವಿದೇಶಿಬಲವೊಂದು ಬಲವಾಗಿ ಭದ್ರಪಡಿಸಿಕೊಂಡಿತ್ತೆಂದುಕೊಳ್ಳೋಣ. ಆಗ ಅದನ್ನು ಅಮೆರಿಕ ತಾಳ್ಮೆಯಿಂದ ಅದನ್ನು ಸಹಿಸಿಕೊಂಡಿರುತ್ತಿತ್ತೆಂದು ಭಾವಿಸಲು ಸಾಧ್ಯವೇ ಇಲ್ಲ. ರಷ್ಯ ಫಿನ್ಲೆಂಡುಗಳ ಮಧ್ಯೆ ಮಾತುಕತೆಗಳು ನಡೆದರೂ ಅವುಗಳಿಂದ ಏನೂ ಫಲ ಕಾಣಲಿಲ್ಲ. ನವೆಂಬರ್ 30 ರಂದು ರಷ್ಯ ಫಿನ್ಲೆಂಡಿನ ಊರುಗಳ ಮೇಲೆ

ಬಾಂಬು ಹಾಕಿ ಯುದ್ಧ ಪ್ರಾರಂಭಿಸಿತು. ರಷ್ಯಾ ಇಷ್ಟು ಕ್ರೂರವಾಗಿ ವರ್ತಿಸಬೇಕಾಗಿರಲಿಲ್ಲ. ಸೋವಿಯತ್ ಜನರಿಗೆ ಈ ಯುದ್ಧದಿಂದ ಸಾಕಷ್ಟು ಕಷ್ಟ ಮತ್ತು ಖರ್ಚು ಆಯಿತು. ಮೂರೂವರೆ ತಿಂಗಳ ಕಾಲ ಘನವಾಗಿ ಹೋರಾಡಿ ಬಳಿಕ ಫಿನ್ಲೆಂಡ್ ಸೋಲೊಪ್ಪಿಕೊಂಡು ಶಾಂತಿ ಕರಾರು ಮಾಡಿಕೊಂಡಿತು.

ಇಷ್ಟು ಕಾಲವೂ ಪಶ್ಚಿಮದಲ್ಲಿ ಯುದ್ಧ ಸಮುದ್ರಕ್ಕೆ ಸೀಮಿತವಾಗಿತ್ತು. ಜರ್ಮನರು ಮತ್ತು ಫ್ರೆಂಚರು ಎದುರುಬದರಾಗಿ ಆಯುಧ ರಕ್ಷಣೆ ಇರುವಂತಹ ಸೀಗ್‌ಫ್ರೀಡ್ ಮತ್ತು ಮ್ಯಾಜಿನೋ ಶ್ರೇಣಿಗಳೆಂಬ ಪಾಳೆಯಗಳ ಸಾಲನ್ನು ನಿರ್ಮಿಸಿ ಅವುಗಳ ಹಿಂದೆ ಯುದ್ಧಮಾಡಲು ಕಾಯುತ್ತಾ ಇದ್ದರು. ಯುದ್ಧರಂಗದ ಉತ್ತರ ಭಾಗದಲ್ಲಿ ಒಂದು ಸಣ್ಣ ಪ್ರಮಾಣದ ಕದನ ನಡೆಯಿತು. ಜರ್ಮನಿಯು–ದೋಣಿಗಳನ್ನುಪಯೋಗಿಸಿ ಯುದ್ಧ ಪುನರಾರಂಭಮಾಡಿದ್ದೂ ನಿಷ್ಪ್ರಯೋಜಕವಾಯಿತು. ಹೊಸಹೊಸ ತಾಂತ್ರಿಕ ಸಾಧನಗಳನ್ನು ಉಪಯೋಗಿಸಿ ಬ್ರಿಟಿಷ್ ನೌಕಾದಳವು ಈ ಪೀಡೆಗಳನ್ನು ಶಕ್ತಿ ಉತ್ಸಾಹಗಳಿಂದ ಬೇಟೆಯಾಡಿತು. ಒಂದೆರಡು ಯುದ್ಧ ನೌಕೆಗಳು, ಕರೇಜಿಯಸ್ ಎಂಬ ಒಂದು ದೊಡ್ಡ ವಿಮಾನವಾಹಕ ನೌಕೆ ಮತ್ತು ಕೆಲವು ಸಣ್ಣನಾವೆಗಳನ್ನು ಬ್ರಿಟನ್ನು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಕಳೆದುಕೊಳ್ಳಬೇಕಾಯಿತು. ಆದರೆ ಆಗಬಹುದೆಂದು ನೆನೆಸಿದ್ದಷ್ಟು ಸಂಖ್ಯೆಯಲ್ಲಿ ಇಂತಹ ರಕ್ಷಣೆಗಾಗಿ ಉಪಯೋಗಿಸುವ ಹಡಗುಗಳು ನಾಶವಾಗಲಿಲ್ಲ. ಬ್ರಿಟನ್ನಿಗೆ ಬಳಕೆಗೆ ಬೇಕಾದ ಸಾಮಾನುಗಳು ಸಮೃದ್ಧಿಯಾಗಿ ಸರಬರಾಜಾದುವು. ತಾನು ಕಳೆದುಕೊಂಡಿದ್ದಕ್ಕಿಂತ ಹೆಚ್ಚು ಹಡಗುಗಳನ್ನು ಬ್ರಿಟನ್ನು ಕಸಿದುಕೊಂಡಿತು. ಗ್ರಾಫ್‌ಸ್ಪೀ ಎಂಬ ಹಡಗನ್ನು ಅದಕ್ಕಿಂತ ಸಣ್ಣವೂ ದುರ್ಬಲವೂ ಆದ ಎಕ್ಸಿಟರ್ ಏಕಿಲೀಸ್ ಮತ್ತು ಏಜಾಕ್ಸ್ ಎಂಬ ಮೂರು ಹಡಗುಗಳು ಹಿಡಿದು ಸೋಲಿಸಿದುವು. ಕಡೆಗೆ ಕದನವನ್ನು ಪುನಃ ಪ್ರಾರಂಭಿಸುವುದಕ್ಕೆ ಇಷ್ಟಪಡದೆ ಈ ಹಡಗನ್ನು ಮುಳುಗಿಸಲಾಯಿತು. ಅದರ ಕಮ್ಯಾಂಡರ್ ಆತ್ಮಹತ್ಯೆ ಮಾಡಿಕೊಂಡನು.

ಆರು ತಿಂಗಳ ಕಾಲ ಪಶ್ಚಿಮ ರಣರಂಗದಲ್ಲಿ ಅನಿಶ್ಚಿತ ಪರಿಸ್ಥಿತಿಯೇ ಮುಂದುವರೆಯಿತು. ಬ್ರಿಟಿಷರು ಭರದಿಂದ ಯುದ್ಧ ಸಿದ್ಧತೆಗೆ ತೊಡಗಿದರು. ಸೈನ್ಯದಳಗಳು, ಆಯುಧಗಳು ಮತ್ತು ಇತರ ಸಾಮಗ್ರಿಗಳನ್ನು ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ ಯೂರೋಪಿಗೆ ತರಲಾಯಿತು.

ಇದೇ ಸಮಯದಲ್ಲಿ ಫ್ರಾನ್ಸಿನಲ್ಲಿ ಕಮ್ಯೂನಿಸ್ಟರನ್ನೂ ವಾಮಪಂಥದ ನಾಯಕರನ್ನೂ ಹಿಡಿದು ಅವರಿಗೆ ಕಿರುಕುಳ ಕೊಡಲಾಯಿತು. ಇದಕ್ಕಾಗಿ ಮುಂದೆ ಫ್ರೆಂಚ್ ಜನ ತುಂಬ ಪಶ್ಚಾತ್ತಾಪ ಪಡಬೇಕಾಯಿತು. ಈ ಬೇಟೆಯಲ್ಲಿ ಕಮ್ಯೂನಿಸ್ಟರಷ್ಟೇ ಅಲ್ಲದೆ ಕೆಲಸಗಾರರ ಸಂಘಗಳ ನಾಯಕರ ಮೇಲೂ ಆಡಳಿತದ ದೃಷ್ಟಿಯಿತ್ತು ಎನಿಸುತ್ತಿತ್ತು. ಶಾಸನ ಸಭೆಯಲ್ಲಿದ್ದ ಐವತ್ತಕ್ಕೂ ಹೆಚ್ಚು ಮಂದಿ ಕಮ್ಯೂನಿಸ್ಟ್ ಪ್ರತಿನಿಧಿಗಳಲ್ಲಿ ಕೆಲವರು ಸೆರೆಸಿಕ್ಕಿದರು. ಉಳಿದವರು ತಲೆಮರೆಸಿ

ಕೊಳ್ಳಬೇಕಾಯಿತು. ದೇಶದಲ್ಲಿ ಕಮ್ಯೂನಿಸ್ಟರ ಕೈಯ್ಯಲ್ಲಿದ್ದ ಎಲ್ಲ ನಗರಸಭೆಗಳನ್ನೂ ವಜಾಮಾಡಿ ಅವುಗಳ ಸ್ಥಾನದಲ್ಲಿ ವಿಶೇಷ ಅಧಿಕಾರಿಗಳನ್ನು ಸರ್ಕಾರ ನೇಮಿಸಿತು. ಇದೆಲ್ಲ ಅದೆಷ್ಟು ಬುದ್ಧಿಗೇಡಿತನದ ಕೆಲಸಗಳು ಎಂದು ಹೇಳುವುದು ಕಷ್ಟ. ಫ್ರೆಂಚ್ ಜನಸಾಮಾನ್ಯರಲ್ಲಿ ಹಳ್ಳಿಗರು ಪಟ್ಟಣಿಗರೆನ್ನದೆ ಎಲ್ಲರಲ್ಲೂ ಎಡಪಂಥದ ಸಮತಾ ಭಾವನೆ ಚೆನ್ನಾಗಿ ಹರಡಿತ್ತು. ಅವರಲ್ಲಿ ಅನೇಕರಿಗೆ ರಷ್ಯಾದೇಶ ಸಾಮಾಜಿಕ ಕ್ರಾಂತಿಯ ಸಂಕೇತವಾಗಿತ್ತು. ತಾವು ಫ್ರಾನ್ಸಿನ ಐಶ್ವರ್ಯವಂತರ ಸಲುವಾಗಿ ಮಾತ್ರ ಹೋರಾಡುತ್ತಿದ್ದೇವೆಯೋ ಎಂದು ಈ ಜನ ಪ್ರಶ್ನಿಸಲಾರಂಭಿಸಿದರು. ಅಸಮಾಧಾನ ದಿಂದ ಬಂದ ಪ್ರತಿ ಕ್ರಿಯಾಭಾವನೆ ಸೈನ್ಯದ ಕೆಳದರ್ಜೆಯವರಲ್ಲಷ್ಟೇ ಅಲ್ಲದೆ ಮದ್ದು ಗುಂಡಿನ ಕಾರ್ಖಾನೆಗಳಿಗೂ ಹಬ್ಬಿತು. ಸಾಮಾನ್ಯ ಮಾನವರಲ್ಲಿರುವ ಪ್ರತಿಗಾಮಿ ಭಾವನೆ ಮತ್ತು ಕ್ರಾಂತಿಕಾರಿ ಭಾವನೆಗಳ ನಡುವೆ ಆಕ್ರಮಣಕಾರರು ತಮ್ಮ ಕೈವಾಡ ತೋರಲು ಇದರಿಂದ ಅವಕಾಶವಾಯಿತು. ಫ್ರಾನ್ಸಿನ ಅಧ್ಯಕ್ಷ ಡಲಾಡಿಯೆಯ ಬಲ ಪಾರ್ಶ್ವದಲ್ಲಿ ದೇಶದ್ರೋಹ ರೂಪುಗೊಂಡಿತು. ಯಾರಿಗೂ ಸಂದೇಹವೇ ಬರದಂತೆ ವಿರೋಧವೇ ಇಲ್ಲದಂತೆ ಎದ್ದ ಈ ದೇಶದ್ರೋಹ ಎಡಪಾರ್ಶ್ವದ ಪ್ರತಿಕ್ರಿಯೆಗಿಂತ ದುಸ್ಸಾಧ್ಯವಾಗಿತ್ತು.

ಆ ಚಳಿಗಾಲ ಎಂದಿಗಿಂತ ಕಷ್ಟಕರವಾಗಿತ್ತು. ರಣಕ್ಷೇತ್ರಗಳಲ್ಲಿದ್ದ ಸೈನಿಕರಿಗೆ ತುಂಬ ತೊಂದರೆಯಾಯಿತು. ಇಡೀ ಯೂರೋಪಿನಲ್ಲಿ ಚಳಿ ಕಡಿಮೆಬರುವಂತೆ ತೋರಿತು. ಫೆಬ್ರವರಿಯ ಮಧ್ಯಭಾಗದಲ್ಲಿ ನಾರ್ವೆ ಎಲ್ಲರ ಗಮನ ಸೆಳೆಯಿತು. ಈ ದೇಶ ತಟಸ್ಥವಾಗಿ ಮುಂದುವರಿಯುವುದೇ ಎಂಬುದು ಸಂಶಯಾತ್ಮಕವಾಯಿತು. ಅಲ್ಲಿಯ ರಾಜ ಹಾಕನ್‌ರಿಗೆ ಬ್ರಿಟನ್ನಿನ ಮೇಲೆ ಪ್ರಾಮಾಣಿಕವಾದ ನಿಷ್ಠೆ ಇತ್ತು. ಅಲ್ಲಿನ ಸಾಮಾನ್ಯ ಜನರು ಪ್ರಜಾಪ್ರಭುತ್ವವಾದಿಗಳಾಗಿದ್ದರು. ಆದರೆ ನಾರ್ವೆಯ ತೀರದಲ್ಲಿ ಆ ದೇಶಕ್ಕೆ ಸೇರಿದ ಮೂರು ಮೈಲು ಮಿತಿಯಲ್ಲಿನ ಸಮುದ್ರದಲ್ಲಿ ಜರ್ಮನ್ ನೌಕೆಗಳು ತಮ್ಮ ಸಾಮಗ್ರಿಗಳನ್ನು ತಂದಿಟ್ಟುಕೊಂಡು ಅಲ್ಲಿಂದ ಬ್ರಿಟಿಷರ ಮೇಲೆ ದಾಳಿಮಾಡಲು ಹೊರಬೀಳುತ್ತಿದ್ದುವೆಂಬುದು ಮಿತ್ರರಾಷ್ಟ್ರಗಳಿಗೆ ಇದ್ದಕ್ಕಿದ್ದಂತೆ ಗೊತ್ತಾಯಿತು. "ಆಲ್ಟ್‌ಮಾರ್ಕ್" ಘಟನೆಯೆಂದು ಈಗ ಕರೆಯುವ ಘಟನೆಯಿಂದ ಬಿಕ್ಕಟ್ಟಿನ ಪರಿಸ್ಥಿತಿ ಬಂತು. ತಾನು ಮುಳುಗುವ ಮುನ್ನ ಗ್ರಾಫ್‌ಸ್ಪೀ ನೌಕೆಯು ಮುಳುಗಿಸಿದ್ದ ಹಡಗುಗಳಿಂದ ಸೆರೆಹಿಡಿದಿದ್ದ ನಾವಿಕರಲ್ಲಿ ಮುನ್ನೂರು ನಾನೂರು ಮಂದಿಯನ್ನು ನಾರ್ವೆಯ ಬಂದರು ಅಧಿಕಾರಿಗಳ ಗುಟ್ಟಾದ ಒಪ್ಪಿಗೆಯಿಂದ ರಹಸ್ಯ ವಾಗಿ ಒಯ್ಯಲಾಗುತ್ತಿತ್ತು. ಇವರನ್ನು ಹಿಡಿಯಲು ಒಂದು ಬ್ರಿಟಿಷ್ ಡಿಸ್ಟ್ರಾಯರನ್ನು ಕಳುಹಿಸಲಾಯಿತು. ನಾರ್ವೆಯ ಎರಡು ಗನ್ ಬೋಟುಗಳು ಇದನ್ನು ವಿರೋಧಿಸಿ ದರೂ, ಯುದ್ಧ ಬಂದಿಗಳು ನೌಕೆಯಲ್ಲಿಲ್ಲವೇ ಇಲ್ಲ ಎಂದು ನಾರ್ವೆಯ ಬಂದರಿನ ಅಧಿಕಾರಿಗಳು ಹೇಳಿಕೆಕೊಟ್ಟರೂ ಬ್ರಿಟಿಷ್ ಯುದ್ಧನೌಕೆಯೋ ಸಿಂಗ್‌ಫಿಯೋರ್ಡನ್ನು ಪ್ರವೇಶಿಸಿತು. ಬ್ರಿಟಿಷರು ಅಪರಾಧಿನೌಕೆಯ ಒಳಹೊಕ್ಕು ಯುದ್ಧಕೈದಿಗಳನ್ನು ಬಿಡುಗಡೆಮಾಡಿದರು. ಈ ಘರ್ಷಣೆಯಲ್ಲಿ ಆ ನೌಕೆ ನೆಲಕಚ್ಚಿತು.

ಇದರ ಬಳಿಕ ಸ್ಕಾಂಡಿನೇವಿಯದ ಪರಿಸ್ಥಿತಿ ಬಹುಬೇಗನೇ ಹದಗೆಟ್ಟಿತು. ಜರ್ಮನರು ಡೆನ್ಮಾರ್ಕ್ ನಾರ್ವೆಗಳ ಮೇಲೆ ಏಕಕಾಲದಲ್ಲಿ ನುಗ್ಗಿದರು. ಡೆನ್ಮಾರ್ಕ್ ತಕ್ಷಣ ಶರಣಾಗತವಾಯಿತು. ನಾರ್ವೆ ಸ್ವಲ್ಪ ವಿರೋಧ ತೋರಿದರೂ ಅದರ ಜನತೆಯಲ್ಲಿದ್ದ ಫ್ಯಾಸಿಸ್ಟರಿಂದ ದ್ರೋಹಕ್ಕೀಡಾಯಿತು. ಕೆಲವು ವಾರಗಳು ಗೊಂದಲಗೂಡಿದ ಕಾದಾಟ ನಡೆಯಿತು. ಜರ್ಮನರು ನಾರ್ವೆ ಡೆನ್ಮಾರ್ಕುಗಳ ಮೇಲೆ ದಾಳಿ ನಡೆಸಿದ್ದು ಏಪ್ರಿಲ್ 9 ರಂದು, ಮೇ 8 ರಂದು ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ದಿಗ್ಭ್ರಮೆಗೊಳಿಸಿದ ಸೋಲಿನ ಪಂಚನಾಮ ನಡೆಯಿತು. ಆ ದಿನ ಲಾಯಿಡ್‌ಜಾರ್ಜ್‌ರು ಮಾಡಿದ ಭಾಷಣದ ಒಂದು ಭಾಗ ಇಲ್ಲಿದೆ.

"1914ರಲ್ಲಿ ತನ್ನ ಹಿಂದಿನವರು ನಡೆಸಿದ್ದುದಕ್ಕಿಂತ ಬಹು ಉತ್ತಮವಾದ ಯುದ್ಧಸಜ್ಜಿಕೆ ನಡೆಸಿದ್ದ ಹಿಟ್ಲರ್. ಯುದ್ಧವ್ಯೂಹಕ್ಕೆ ಅತಿಮುಖ್ಯವಾದ ನಾರ್ವೆ ಮತ್ತು ಸ್ಕಾಂಡಿನೇವಿಯ ಈಗಾಗಲೇ ಜರ್ಮನಿಯ ಕೈಯ್ಯಲ್ಲಿವೆ. ತನ್ನೆರಡೂ ಪಕ್ಕಗಳಲ್ಲಿಯೂ ಇರುವ ಜರ್ಮನಿಯ ಮಧ್ಯೆ ಸಿಕ್ಕಿಬಿದ್ದಿರುವ ಸ್ವೀಡನ್ನನ್ನು ಈಗ ಟೀಕಿಸಿ ಫಲವಿಲ್ಲ. ಚಿಕ್ಕವುಟ್ಟ ರಾಜ್ಯಗಳನ್ನು ಟೀಕಿಸಲು ನಮಗೆ ಈಗ ಹಕ್ಕಿದೆಯೇ? ಅವುಗಳನ್ನು ಆಕ್ರಮಣದಿಂದ ಬಿಡಿಸಿ ರಕ್ಷಿಸುವುದಾಗಿ ನಾವು ವಾಗ್ದಾನ ಮಾಡಿದ್ದೆವು. ಪೋಲೆಂಡಿಗೆ ಒಂದಾದರೂ ವಿಮಾನವನ್ನು ನಾವು ಕಳುಹಿಸಲಿಲ್ಲ. ನಾರ್ವೆಯಲ್ಲಿ ನಾವು ಹೋಗಿದ್ದು ತೀರಾ ತಡವಾಗಿ. ಈಗ ನಮ್ಮ ಮಾನ ಹೋಗಿದೆಯೆನ್ನುವುದರಲ್ಲಿ ಏನಾದರೂ ಸಂಶಯವಿದೆಯೇ ? ಜೆಕೊಸ್ಲೊವಾಕಿಯ, ಪೋಲೆಂಡ್, ಫಿನ್ಲೆಂಡ್ ಎಲ್ಲಕ್ಕೂ ನಾವು ಮಾತು ಕೊಟ್ಟಿದ್ದೆವು. ಈ ನಮ್ಮ ವಾಗ್ದಾನ ಪತ್ರಗಳಿಗೆ ಹರಕಲು ಕಾಗದದ ಬೆಲೆಯೂ ಈಗ ಉಳಿದಿಲ್ಲ.

1935 ರಲ್ಲಿ ನಮ್ಮ ದೇಶದಲ್ಲಿ ಪುನಃ ಶಸ್ತ್ರೀಕರಣ ನಡೆಯುವುದೆಂದು ಸರ್ಕಾರ ಮಾತುಕೊಟ್ಟಿತು. 1936ರಲ್ಲಿ ಇದರ ಬಗ್ಗೆ ಸಲಹೆಗಳು ಕೂಡಾ ಶಾಸನಸಭೆಯ ಮುಂದೆ ಬಂದುವು. ಆದರೆ ಇಂಥದೇನನ್ನು ಮಾಡಿದ್ದರೂ ಅರೆಮನಸ್ಸಿನಿಂದ, ಅಸಮರ್ಥವಾಗಿ ಹುರುಪಿಲ್ಲದೆ ಮಂದಬುದ್ಧಿಯಿಂದ ಮಾಡಿದರೆಂಬುದು ಎಲ್ಲರಿಗೂ ಗೊತ್ತು. ಹಿಂದೆಂದೂ ಇಲ್ಲದಷ್ಟು ಸುಲಭವಾಗಿ ಆಕ್ರಮಣ ಸಾಧ್ಯವಾಗುವಂಥ ಪರಿಸ್ಥಿತಿಗೆ ಈ ದೇಶವನ್ನು ತಂದಿಡಲಾಗಿದೆಯೆಂದು ಪ್ರಪಂಚಕ್ಕೆಲ್ಲ ಗೊತ್ತು.

ಶ್ರೀಮಾನ್ ಚೇಂಬರ್ ಲೇನ್ ಹೇಳಿದ್ದರು 'ನನಗೆ ನನ್ನ ಮಿತ್ರರಿದ್ದಾರೆ' ಎಂದು. ಪ್ರಧಾನ ಮಂತ್ರಿಯವರ ಮಿತ್ರರು ಯಾರು ಎಂಬುದು ಈಗಿನ ಪ್ರಶ್ನೆಯಲ್ಲ, ನಾವೆದುರಿಸುತ್ತಿರುವುದು ಅದಕ್ಕಿಂತ ದೊಡ್ಡ ಸಮಸ್ಯೆ. ಈ ದುಸ್ಸಾಧ್ಯನಾದ ಶತ್ರುವನ್ನು ಶಾಂತಿಸ್ಥಿತಿ ಯುದ್ಧಸ್ಥಿತಿ, ಎರಡೂ ಪರಿಸ್ಥಿತಿಗಳಲ್ಲಿ ತಾವು ಸಂಧಿಸಿದ್ದಾರೆಂಬುದನ್ನೂ ಯಾವಾಗಲೂ ಅವನಿಂದ ಪರಾಜಿತರಾಗಿದ್ದಾರೆಂಬುದನ್ನೂ ಪ್ರಧಾನ ಮಂತ್ರಿ ಜ್ಞಾಪಿಸಿಕೊಳ್ಳಬೇಕು. ಜನರು ತ್ಯಾಗಕ್ಕೆ ಸಿದ್ಧರಾಗಬೇಕೆಂದು ಅವರು ಕರೆಕೊಟ್ಟಿದ್ದಾರೆ. ಸರಿಯಾದ ನಾಯಕರುಗಳಿದ್ದಾಗ ಈ ರಾಷ್ಟ್ರ ಎಂದೂ ಸಹ

ತ್ಯಾಗಕ್ಕೆ ಸಿದ್ಧವಾಗಿಯೇ ಇರುತ್ತದೆ. ಈಗ ನಾನು ಗಂಭೀರವಾಗಿ ಹೇಳುತ್ತೇನೆ, ಪ್ರಧಾನಮಂತ್ರಿಯವರೇ ತ್ಯಾಗಕ್ಕೆ ಒಂದು ಮಾದರಿಯಾಗಲಿ, ಏಕೆಂದರೆ ಈ ಯುದ್ಧದಲ್ಲಿ ಜಯಸಿಗಬೇಕಾದಲ್ಲಿ ಅದಕ್ಕೆ ಅತ್ಯಂತ ಅವಶ್ಯವಾಗಿ ಬೇಕಾದುದು ಪ್ರಧಾನಮಂತ್ರಿಯವರಿಂದ ತಮ್ಮ ಹುದ್ದೆಯತ್ಯಾಗ.

ಉಸಿರುಗಟ್ಟಿಸುವ ಮುಖವಾಡದಂತಿದ್ದ ಚೇಂಬರ್ಲೇನರ ಪ್ರಧಾನಮಂತ್ರಿ ಸ್ಥಾನವನ್ನು ಬ್ರಿಟನ್ನು ನಿದಾನವಾಗಿ ಕಳಚಿಕೊಳ್ಳುತ್ತಿದ್ದಂತೆಯೇ ಜರ್ಮನಿಯೆಂದರೆ ಗೋರಿಂಗ್, ಗೋಬೆಲ್ಸ್ ಮತ್ತು ಹಿಟ್ಲರ್ ಈ ಭಯಂಕರ ನಾಯಕತ್ರಯ ಎಂಬ ಮೂರ್ತೀಕರಣ ನಡೆದೇ ಇತ್ತು. ಹಾಲೆಂಡು, ಬೆಲ್ಜಿಯಂ ಮತ್ತು ಲಕ್ಸೆಂಬುರ್ಗ್‌ಗಳ ಮೇಲೆ ಮೇ 10 ರಂದು ಜರ್ಮನಿ ಏಕಕಾಲದಲ್ಲಿ ನುಗ್ಗಿದಾಗ ಫ್ರಾನ್ಸ್ ಮತ್ತು ಬ್ರಿಟನ್ನುಗಳ ಹಳತಾಗಿ ಹೋಗಿದ್ದ ಮಿಲಿಟರಿ ಜ್ಞಾನಕ್ಕೆ ಮುಂದಿನ ಪೆಟ್ಟುಬಿದ್ದಂತಾಯಿತು.

ಭವಿಷ್ಯಕಾಲದಲ್ಲಿ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ (ಮುಂದೆ ಬರುವ ದಿನಗಳಲ್ಲಿ ಅಂತಹ ಅಧ್ಯಯನಕಾರರು ಯಾರಾದರೂ ಇದ್ದಲ್ಲಿ) ಒಂದು ವಿಷಯ ತುಂಬ ಆಶ್ಚರ್ಯ ತರಿಸುತ್ತದೆ. ಅದೇನೆಂದರೆ ಹೀಗಾಗಬಹುದು ಎಂಬ ಸಾಧ್ಯತೆ ಆಗ ಇದ್ದೇ ಇತ್ತು ತಾನೇ ? ಇಷ್ಟಾದರೂ ಈ ಮೂರೂ ರಾಜ್ಯಗಳಲ್ಲಿ ಯಾವುವೂ ಸಹ ಫ್ರಾನ್ಸ್ ಮತ್ತು ಬ್ರಿಟನ್ನುಗಳೊಡನೆ ಸಮಾಲೋಚಿಸಿ ತಮ್ಮ ರಕ್ಷಣೆಗೆ ಏನೂ ವ್ಯವಸ್ಥೆಮಾಡಿಕೊಂಡಿರಲಿಲ್ಲ. ಇದೇ ರೀತಿಯಲ್ಲಿ ರಾಷ್ಟ್ರದ್ರೋಹಿಗಳು ಮತ್ತು ಅರೆಮನಸ್ಸಿನಿಂದ ಕೆಲಸಮಾಡುವವರು ಮುಂದಿನ ಅನಾಹುತಗಳಿಗೆ ತಮ್ಮ ಕೊಡುಗೆಯನ್ನಿತ್ತರು. ಬೆಲ್ಜಿಯನ್ ಗಡಿಯಾಚೆ ಫ್ರೆಂಚರು ಮ್ಯಾಜಿನೋ ಶ್ರೇಣಿಯನ್ನು ವಿಸ್ತರಿಸಿರಲೇ ಇಲ್ಲ. ಆಕ್ರಮಣಕ್ಕೆ ತೆರೆದಿಟ್ಟಿದ್ದಂತಿದ್ದ ಎಡಪಾರ್ಶ್ವದಲ್ಲಿ ಯುದ್ಧ ಚಲನೆ ನಡೆಸಲು ಈ ಮಿತ್ರರಾಷ್ಟ್ರಗಳು ಹಾಕಿದ್ದ ಏರ್ಪಾಡು ಅಪೂರ್ಣವಾಗಿತ್ತು. ಬೆಲ್ಜಿಯನರು ಮತ್ತು ಡಚ್ಚರಲ್ಲಿ ದೇಶಭಕ್ತರಾಗಿದ್ದವರು ದಿಟ್ಟತನದಿಂದ ಹೋರಾಡಿದರೂ ಸೋಲ ಬೇಕಾಯಿತು. ಏಕೆಂದರೆ ಅವರ ಬೆನ್ನಹಿಂದೆ ದ್ರೋಹನಡೆಯಿತು ಮತ್ತು ಜರ್ಮನಿ ಪ್ಯಾರಾಷ್ಯೂಟ್ ಹೋರಾಟಗಾರರನ್ನು ಹೇರಳವಾಗಿ ಉಪಯೋಗಿಸಿಕೊಂಡಿತು. ಮಿತ್ರರಾಷ್ಟ್ರಗಳ ಮಿಲಿಟರಿ ತಜ್ಞರಿಗೆ ಇವೆಲ್ಲವನ್ನೂ ಚಿಂತಿಸಲು ಬರಿ ಐದಾರು ವರ್ಷ ಮಾತ್ರ ಸಮಯವಿತ್ತು. ಪ್ಯಾರಾಷ್ಯೂಟ್ ಹೋರಾಟಗಾರರ ಬಳಕೆಯನ್ನು ಎದುರಿಸಲು ಇವರಿಗೆ ಸಿದ್ಧತೆಯಿರಲಿಲ್ಲ. ರಾಟರ್‌ಡಾಮಿನ ಅನೇಕ ಕಡೆಗಳಲ್ಲಿ ಸ್ಪೇನಿನ ಗೆರ್ನಿಕಾ ಮರುಕಳಿಸಿತು. ಬಿದ್ದುಹೋದ ಕಟ್ಟಡಗಳ ಪಾಳಿನಕೆಳಗೆ ಜನರ ಗುಂಪುಗಳಿಗೇ ಜೀವಸಮಾಧಿಯಾಯಿತು. ನಾಲ್ಕೇ ದಿನಗಳಲ್ಲಿ ಡಚ್ಚರ ಪ್ರತಿರೋಧ ಕುಸಿದು ಹೋಯಿತು.

ಮಿತ್ರರಾಜ್ಯಗಳ ರಕ್ಷಣಾಗಡಿಗಳು ಚಿಕ್ಕದಾಗಿ ಹೋದುವು. ಇವುಗಳ ಮೇಲೆ ಜರ್ಮನಿಯ ಒತ್ತಡ ಮುಂದುವರಿಯಿತು. ಇದಕ್ಕೆ ಅವರಲ್ಲಿದ್ದ ಅತ್ಯಂತ

ಪರಿಣಾಮಕಾರಿ ಸಾಧನವೆಂದರೆ ಸೋಡಾ ಫ್ಯಾಕ್ಟರಿಯ ಟ್ಯಾಂಕುಗಳು. ಸೆಡಾನಿನ ಬಳಿ ಫ್ರೆಂಚರ ರಕ್ಷಣಾರೇಖೆ ಶಿಥಿಲವಾಗತೊಡಗಿತು ಅಂತಹದಲ್ಲಿ ಮುನ್ನುಗ್ಗಲು ದಾರಿ ಸಿಕ್ಕಿದ ಜರ್ಮನರು ಅಲ್ಲಿಂದ ಪೂರ್ವಾಭಿಮುಖವಾಗಿ ಹೊರಟು ಪ್ಯಾರಿಸ್ಸನ್ನು ತಮ್ಮ ಎಡಕ್ಕೆ ಬಿಟ್ಟುಕೊಂಡು ಇಂಗ್ಲಿಷ್ ಕಡಲ್ಗಾಲುವೆ ಮತ್ತು ಇಂಗ್ಲೆಂಡ್ ಕಡೆ ಮುನ್ನಡೆದರು. ಈ ಕಂಡಿಯನ್ನು ಮುಚ್ಚಲು ಮಿತ್ರರಾಷ್ಟ್ರಗಳವರಿಗೆ ಸಾಧ್ಯವಾಗಲಿಲ್ಲ. ಇದರಿಂದ ಉತ್ತರ ಭಾಗದಲ್ಲಿದ್ದ ಬ್ರಿಟಿಷರು, ಬೆಲ್ಜಿಯನರು ಮತ್ತು ಫ್ರೆಂಚರು ಇದ್ದ ಒಂದು ದೊಡ್ಡ ಸೈನ್ಯ ವಿಭಾಗಕ್ಕೂ ಫ್ರಾನ್ಸಿನಲ್ಲಿದ್ದ ಪ್ರಮುಖ ರಕ್ಷಣಾ ವಿಭಾಗಕ್ಕೂ ಸಂಪರ್ಕ ಕತ್ತರಿಸಿಹೋಯಿತು. ಈ ಸೈನ್ಯ ವಿಭಾಗ ಕ್ಷಿಪ್ರದಲ್ಲಿಯೇ ಶತ್ರುಗಳ ವಶವಾಗುವಂತೆ ತೋರುತ್ತಿತ್ತು. ಉತ್ತರದಲ್ಲಿದ್ದ ಈ ಸೈನ್ಯದಲ್ಲಿ ಹೆಚ್ಚಾಗಿದ್ದವರು ಬ್ರಿಟಿಷರೇ. ಈ ವಿಭಾಗ ಶತ್ರುಗಳವಶವಾದರೆ ಬ್ರಿಟನ್ ರಕ್ಷಣೆಯಿಲ್ಲದೆ ಹೋಗುತ್ತಿತ್ತು. ಇಂಥಾ ಸಮಯದಲ್ಲಿ ರಾಜ ಲಿಯೋಪೋಲ್ಡ್ ಅತ್ಯಂತ ಹೇಡಿತನ, ದ್ರೋಹದ ಕಾರ್ಯಮಾಡಿದನು. ಇದೇ ವ್ಯಕ್ತಿಯೇ ತನ್ನ ರಾಜ್ಯವನ್ನು ಶತ್ರುಗಳು ಆಕ್ರಮಿಸತೊಡಗಿದ್ದಾಗ ಫ್ರಾನ್ಸ್ ಮತ್ತು ಬ್ರಿಟನ್ನುಗಳ ಸಹಾಯ ಯಾಚಿಸಿದ್ದನು. ತನ್ನ ಮಿತ್ರರಿಗೆ ಏನೊಂದು ಮಾತೂ ತಿಳಿಸದೆ, ತನ್ನ ಸರಕಾರ ಸರ್ವಾನುಮತದಿಂದ ಕೊಟ್ಟ ಸಲಹೆಯನ್ನು ಮಾನ್ಯಮಾಡದೆ ತಾನು ದಿಕ್ಕೆಟ್ಟು ಯಾಚಿಸಿದಾಗ ತನ್ನ ರಾಜ್ಯದ ಸಹಾಯಕ್ಕೆ ಬಂದಿದ್ದ ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರ ಬಗೆಗೆ ಯಾವ ಚಿಂತೆಯೂ ಇಲ್ಲದೆ ಈತ ಜರ್ಮನರೊಡನೆ ಸಂಧಾನ ಪ್ರಾರಂಭಿಸಿ ತನ್ನ ಸೈನ್ಯಕ್ಕೆ ಯುದ್ಧ ನಿಲ್ಲಿಸಲು ಆಜ್ಞಾಪಿಸಿದನು (ಮೇ 28).

ಬ್ರಿಟಿಷ್ ಸೈನ್ಯ ಜರ್ಮನ್ನರ ಕೈಗೆ ಸಿಕ್ಕಿಕೊಂಡೇ ಬಿಟ್ಟಿತು ಎನ್ನುವಂತಿತ್ತು. ಆದರೆ ಅದರಲ್ಲಿದ್ದ ಕೆಳದರ್ಜೆಯ ಸಿಪಾಯಿಗಳಲ್ಲಿ ಪ್ರತಿಯೊಬ್ಬನೂ ಬಹು ಯೋಗ್ಯನಾಗಿದ್ದನು. ಮೆಚ್ಚಿಗೆಗೆ ಅರ್ಹವಾದ ಈ ಯೋಗ್ಯತೆ ಈ ಸೈನ್ಯ ಸೋಲೊಪ್ಪಿಕೊಳ್ಳದಂತೆ ಉಳಿಸಿತು. ಹೋರಾಡುತ್ತಾ ಹೋರಾಡುತ್ತಾ ಈ ಸೈನ್ಯ ಡನ್‌ಕರ್ಕ್‌ವರೆಗೆ ಹಿನ್ನಡೆಯಿತು. ಆಪತ್ತಿನ ಸ್ಥಿತಿಯಲ್ಲೂ ಕೆಲವು ದಿನ ಡನ್‌ಕರ್ಕನ್ನು ವಶದಲ್ಲಿಟ್ಟುಕೊಂಡಿತು. ಕೇಂದ್ರೀಕೃತವಾಗಿದ್ದ ಅಗಾಧ ಜರ್ಮನ್ ಬಲ ಇದರ ಎದುರಾಗಿದ್ದರೂ ನಿಯತ್ತಿನಿಂದಿದ್ದ ಬೆಲ್ಜಿಯನ್ ಮತ್ತು ಫ್ರೆಂಚ್ ದಳಗಳೊಡನೆ ಈ ದಳವೂ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ ಇಂಗ್ಲೆಂಡನ್ನು ಸೇರಿಕೊಂಡಿತು. ಈ ಸೈನ್ಯದ ನಡೆವಳಿಕೆ ಅದೆಷ್ಟು ಉತ್ಕೃಷ್ಟವಾಗಿತ್ತೆಂದರೆ, ಈ ದೊಡ್ಡ ಜನಸಮೂಹವನ್ನು ಸಾಗಿಸುವಾಗ ಅದೆಷ್ಟು ಧೈರ್ಯಸ್ಥೈರ್ಯಗಳ ದೃಷ್ಟಾಂತಗಳು ಕಂಡುಬಂದುವೆಂದರೆ ಸೈನ್ಯ ಹಿನ್ನಡೆದರೂ ಬ್ರಿಟಿಷ್ ಜನತೆ ಹೆಮ್ಮೆಪಟ್ಟುಕೊಂಡಿತೇ ಹೊರತು ನಿರುತ್ಸಾಹಪಡಲಿಲ್ಲ. ಕೊನೆಗೂ ಕೆಳಗಿಳಿದ ಚೇಂಬರ್‌ಲೇನರ ಸ್ಥಾನಕ್ಕೆ ಬಂದಿದ್ದ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್‌ರವರು "ದಕ್ಷವಾಗಿ ನಡೆದ ಹಿನ್ನಡೆ ವಿಜಯವಲ್ಲ" ಎಂದು ಎಚ್ಚರಕೊಟ್ಟರು. ದೊಡ್ಡ ಪ್ರಮಾಣದಲ್ಲಿ ಬಂದೂಕುಗಳು ಮತ್ತಿತರ ಸಾಮಗ್ರಿಗಳು ಆಗ ನಷ್ಟ

ವಾಗಿದ್ದುವು. ಫ್ರಾನ್ಸಿನಲ್ಲಿ ಪ್ರತಿಭಟನಾದಳ ಕುಸಿದುಹೋಗುವ ಸೂಚನೆಗಳು ಕಂಡು ಬರುತ್ತಿದ್ದುವು.

ಈ ಸಮಯದಲ್ಲಿ ಜೂನ್ 10ರಂದು ಮುಸೋಲನಿ ಯುದ್ಧ ಘೋಷಿಸಿದನು. ಆಲ್ಪ್ಸ್ ಪರ್ವತಗಳಲ್ಲಿದ್ದ ಗಡಿಪ್ರದೇಶದಲ್ಲಿ ಇಟಲಿಯ ಸೈನ್ಯ ಬಂದುನಿಂತು "ಹಾವಭಾವ ಪ್ರದರ್ಶನ" ಮಾಡಿತು ಫ್ರೆಂಚ್‌ನೆಲದಲ್ಲಿ ಡೂಬೆಯ ಫೋಟೋ ಹಿಡಿಯಲಾಯಿತು. ಫ್ರೆಂಚ್‌ದಳಗಳು ಕುಸಿಯುತ್ತಿದ್ದುವು ಎಂದು ಹೇಳಿತ್ತಷ್ಟೆ. ಈಗ ಅವು ದಿಕ್ಕೆಟ್ಟು ಪಲಾಯನ ಮಾಡತೊಡಗಿದುವು. ಪ್ಯಾರಿಸ್ಸನ್ನು ತ್ಯಜಿಸಿ ಫ್ರೆಂಚ್ ಸರ್ಕಾರ ಬೋರ್ಡೋವಿಗೆ ಹೋಯಿತು. ಜೂನ್ 13ರಂದು ಅಧ್ಯಕ್ಷ ರೂಸ್‌ವೆಲ್ಟರಲ್ಲಿ ಮಾಷೀರ್‌ರೇನೋ ಹತಾಶೆಯಿಂದ ಕಟ್ಟಕಡೆಯದಾಗಿ ಸಹಾಯಕ್ಕಾಗಿ ಮನವಿ ಮಾಡಿಕೊಂಡನು. ಈ ಹೋರಾಟ ಫ್ರಾನ್ಸಿನ ಉಳಿವು ಅಳಿವಿನ ಪ್ರಶ್ನೆ ಎಂದಾತ ಹೇಳಿದನು. ಅಧ್ಯಕ್ಷ ರೂಸ್‌ವೆಲ್ಟರೇನೋ ಇದಕ್ಕೆ ತಕ್ಷಣ ಉತ್ತರ ಬರೆದು ತಮ್ಮ ಆಳವಾದ ಸಹಾನುಭೂತಿ ವ್ಯಕ್ತಪಡಿಸಿ ಪದಾರ್ಥಗಳನ್ನು ಸಹಾಯವಾಗಿ ಕೊಡುವೆನೆಂದು ತಿಳಿಸಿದರು. ಆದರೆ ಈ ಪತ್ರ ಕಡೆಗೆ ಇವನ್ನೊಸೆಯ ಪದಗಳಿಂದ ಕೊನೆಗಂಡಿತ್ತು "ಈ ಹೇಳಿಕೆಗಳನ್ನು ನೋಡಿ ನಾವು ನಿಮಗೆ ಸೈನ್ಯದಳಗಳ ಸಹಾಯ ಮಾಡುತ್ತೇವೆಂದು ನೀವು ತಿಳಿಯುವುದಿಲ್ಲವೆಂದು ನನಗೆ ಗೊತ್ತು. ಏಕೆಂದರೆ ಅಮೆರಿಕನ್ ಕಾಂಗ್ರೆಸ್ ಮಾತ್ರ ಇಂತಹ ವಾಗ್ದಾನ ಮಾಡಬಲ್ಲುದು".

ಮಷೀರ್ ರೇನೋ ತಕ್ಷಣ ರಾಜೀನಾಮೆಯಿತ್ತರು. ಮುಪ್ಪಿನ ಮುದುಕ ಮಾರ್ಷಲ್‌ಪೀತೇಂ ಇವರ ಸ್ಥಾನದಲ್ಲಿ ಪ್ರಧಾನಿಯಾದನು. ಈತನಿಗಿಂತ ಮುದುಕ ಮಾರ್ಷಲ್ ವೇಗಾಂಡ್ ರಕ್ಷಣಾ ಸಚಿವನಾದನು. ಈ ಹೊಸ ಫ್ರೆಂಚ್ ಸರಕಾರ ಬಳಿಕ ತನ್ನ ದೇಶವನ್ನು ಅತ್ಯಂತ ಶ್ರದ್ಧೆಯಿಂದ ಸಂಪೂರ್ಣವಾಗಿ ಶತ್ರುವಿಗೆ ಒಪ್ಪಿಸಲು ಸನ್ನದ್ಧವಾಯಿತು. ಕಡೆಯ ಗಳಿಗೆಯಲ್ಲಿ ಫ್ರಾನ್ಸಿನೊಡನೆ ಒಕ್ಕೂಟ ಮಾಡಿಕೊಳ್ಳುವ ಒಂದು ಸಲಹೆಯನ್ನು ಬ್ರಿಟಿಷ್ ಸರ್ಕಾರ ತಂದಿತು. ಪ್ರತ್ಯೇಕವಾಗಿ ತಮ್ಮಲ್ಲಿ ಯಾರೂ ಶಾಂತಿ ಕರಾರು ಮಾಡಿಕೊಳ್ಳಬಾರದೆಂದು ಬ್ರಿಟಿಷರು ಮತ್ತು ಫ್ರೆಂಚರು ಪ್ರಮಾಣವಚನ ತೆಗೆದುಕೊಂಡಿದ್ದರು. ಇದೂ ಸಹ ಫ್ರಾನ್ಸಿಗೆ ಮರೆತೇಹೋಯಿತು. ಫ್ರಾನ್ಸಿನಲ್ಲಿ ಸಿಕ್ಕಿಬಿದ್ದಿದ್ದ ಪಡೆಗಳನ್ನು ಹಿಂದೆ ಸಾಗಿಸುವ ಕೆಲಸ ಮತ್ತೊಮ್ಮೆ ಬ್ರಿಟಿಷರದ್ದಾಯಿತು. ವಿಜಯೋನ್ಮತ್ತರಾದ ಜರ್ಮನ್ ದಳಗಳು ಫ್ರಾನ್ಸ್ ಮತ್ತು ಛಾನೆಲ್ ದ್ವೀಪಗಳ ಮೇಲೆ ನದೀ ಪ್ರವಾಹದಂತೆ ಹರಿದುಬಂದುವು. ಈ ದ್ವೀಪಗಳು ಕ್ರಿ.ಶ. 1066 ರಿಂದ ಬ್ರಿಟಿಷ್ ರಾಜರಿಗೆ ಸೇರಿದ್ದು ನಾರ್ಮಂಡಿಡ್ಯೂಕ್ ಡಮ್ಮಿನ ಕಡೆಯ ಉಳಿಕೆಯಾಗಿದ್ದುವು. ಇವೂ ಸಹ ಜರ್ಮನ್ನರ ಕೈಸೇರಿದ್ದು ಬ್ರಿಟಿಷರಿಗೆ ಮಹದಾಶ್ಚರ್ಯ ವನ್ನುಂಟುಮಾಡಿತು. ಯುದ್ಧ ಪರಿಸ್ಥಿತಿ ಈಗ ನಿಜವಾಗಿಯೂ ಬ್ರಿಟಿಷರಿಗೆ ಕಠಿಣ ವಾಯಿತು. ಕಾರ್ಯಪ್ರವೃತ್ತರಾಗಬೇಕೆಂಬ ಹೊಸ ಲವಲವಿಕೆ ಅವರಿಗೆ ಬಂದಿತ್ತು. ಇದಕ್ಕೆ ಚರ್ಚಿಲ್ ಒಳ್ಳೆ ಪ್ರೋತ್ಸಾಹಕರಾದರು. ಫ್ರಾನ್ಸಿನ ಎಲ್ಲ ಬಂದರುಗಳು

ಅದಕ್ಕಿಂತ ಹೆಚ್ಚಾಗಿ ಫ್ರಾನ್ಸಿನ ನೌಕಾಪಡೆ ಬ್ರಿಟನ್ನಿಗೆ ಭಯತರುತ್ತಿದ್ದುವು. ಇದನ್ನು ಕಡೆಗಣಿಸುವಂತಿರಲಿಲ್ಲ. ಕೆಲವು ಫ್ರೆಂಚ್ ಹಡಗುಗಳು ತಾವಾಗಿ ಬ್ರಿಟಿಷರ ಪಕ್ಷ ಸೇರಿದುವು. ಫ್ರಾನ್ಸನ್ನು ಪುನಃ ವಶಪಡಿಸಿಕೊಳ್ಳಲು ವ್ಯವಸ್ಥೆಮಾಡುವ ಸಲುವಾಗಿ ಲಂಡನ್ನಿನಲ್ಲಿ ಜನರಲ್ ಡಿಗಾಲರ ಕೈಕೆಳಗೆ ಒಂದು ಫ್ರೆಂಚ್ ರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸಲಾಯಿತು. ಓರಾನಿನಲ್ಲಿದ್ದ ಫ್ರೆಂಚರ ಅವಿಧೇಯ ನೌಕಾ ದಳವನ್ನು (ಇದರಲ್ಲಿ ಸ್ಟ್ರಾಸ್‌ಬರ್ಗ್ ಮತ್ತು ಡನ್‌ಕರ್ಕ್ ಎಂಬ ಎರಡು ಮೊದಲನೆ ದರ್ಜೆ ಯುದ್ಧ ನೌಕೆಗಳೂ ಇದ್ದುವು) ಅಡ್ಮಿರಲ್ ಸೊಮರ್‌ವಿಲ್ ಎದುರಿಸಿ ನಿಷ್ಪ್ರಯೋಜಕವಾಗುವಂತೆ ಮಾಡಿದನು. ಇಟಲಿಯ ನೌಕಾದಳದೊಡನೆ ನಡೆದ ಮೊದಲ ಪ್ರಮುಖ ಜಲಕದನದಲ್ಲಿ ಪ್ರಪಂಚದಲ್ಲೇ ಅತ್ಯಂತ ವೇಗದ ನೌಕೆಗಳ ಲ್ಲೊಂದಾದ ಬಾರ್ತೊಲೋಮಿಯೊ ಕೋಲಿಯೋನಿ ಎಂಬ ಅತ್ಯುತ್ತಮ ಯುದ್ಧ ನೌಕೆಯನ್ನು ಆಸ್ಟ್ರೇಲಿಯದ ಕ್ರೂಯಿಸರ್ ಸಿಡ್ನಿ ಹೊಡೆದು ಮುಳುಗಿಸಿತು. ನೆಲ ಜಲ ವಾಯುಗಳೆಲ್ಲದರಲ್ಲೂ ಅದರಲ್ಲೂ ವಾಯುವಿನಲ್ಲಿ ಬ್ರಿಟಿಷ್ ಲೋಹಕ್ಕೆ ಅನೇಕ ವರ್ಷಗಳ ಲೋಲುಪತೆಯಿಂದ ಹತ್ತಿದ್ದ ತುಕ್ಕು ಉದುರಿ ಅದರ ಹೊಳಪು ತಿರುಗಿ ಬರುತ್ತಿದ್ದಂತಿತ್ತು. ಗೃಹರಕ್ಷಣಾದಳ ಬೆಳೆದು ದಕ್ಷತೆಯಿಂದ ಕೆಲಸ ಪ್ರಾರಂಭಿಸಿತು. ನಿರುತ್ಸಾಹಕೂಡಿದ ದಿಗಿಲಿನ ಬದಲು ಬಂದದ್ದನ್ನೆಲ್ಲ ಎದುರಿಸಿಬಿಡೋಣ ಎಂಬ ಉತ್ಸಾಹ ಕಾಣಿಸಿಕೊಂಡಿತು. ಬ್ರಿಟಿಷ್ ವಾಯುಪಡೆಗಳದ್ದೇ ಮೇಲುಗೈಯಾಗು ತ್ತಿದ್ದುದು ನಿಧಾನವಾಗಿ ವ್ಯಕ್ತವಾಗುತ್ತಾ ಹೋಯಿತು. ಈ ಪಡೆ ಸಮಾಜದ ಎಲ್ಲ ಮಟ್ಟಗಳ ವ್ಯಕ್ತಿಗಳನ್ನೂ ತನ್ನೆಡೆಗೆ ಸೆಳೆಯಿತು. ವಿಮಾನ ಚಾಲಕರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿವಿಧ ಪ್ರದೇಶಗಳವರೂ ಎಲ್ಲರೂ ಇದ್ದರು. ಇವರ ಗುಣಮಟ್ಟ ಎಂದಿಗಿಂತ ಅತ್ಯುತ್ತಮವಾಗಿತ್ತು. ಬ್ರಿಟನ್ನಿನ ಮೇಲೆ ದಂಡಯಾತ್ರೆ ನಡೆಸಿ ಗೆಲ್ಲುವ ಸಂಭಾವ್ಯತೆ ದಂಡಯಾತ್ರೆಯನ್ನು ಮುಂದೆ ಹಾಕುತ್ತಾ ಹೋದಂತೆ ಹಿಂದೆ ಸರಿಯುತ್ತಾ ಹೋಯಿತು.

ಈಗ ಸ್ಪೇನ್, ಬಳಿಕ ಮೆಡಿಟರೇನಿಯನ್ ಪ್ರದೇಶ, ಬಳಿಕ ಪೂರ್ವ ದಿಕ್ಕು ಹೀಗೆ ಯುದ್ಧ ಕೇಂದ್ರ ಬದಲಾಯಿಸುತ್ತಲೇ ಇದ್ದಿತು. ತನ್ನ ಭವಿಷ್ಯದ ಬಗ್ಗೆ ರಷ್ಯಕ್ಕೆ ತನ್ನದೇ ಆದ ಭಾವನೆಗಳಿದ್ದುವೆಂದು ತಿಳಿಯುತ್ತಾ ಬಂದಿತು. ಬ್ರಿಟನ್ನಿನ ಅಧಿಕಾರ ಚಲಾಯಿಸುತ್ತಿದ್ದ ವರ್ಗದ ಮೇಲೆ ಹೇಗೋ ಹಾಗೆ ಜರ್ಮನರ ಮೇಲೂ ರಷ್ಯಕ್ಕೆ ಅಂಥ ಒಲವಿರಲಿಲ್ಲ. ಜರ್ಮನಿಯ ಕಡೆಗಿನ ತನ್ನ ಗಡಿರೇಖೆಯನ್ನು ಮತ್ತು ಡ್ಯಾನ್ಯೂಬ್ ನದಿ ಹಾಗೂ ಕಪ್ಪು ಸಮುದ್ರದ ಮೇಲಿನ ತನ್ನ ಸ್ಥಾನಗಳನ್ನು ಬಲ ಪಡಿಸಲು ತಿರುಗಿ ಈ ರಾಷ್ಟ್ರ ಪ್ರಾರಂಭಿಸಿತು. 1918ರಲ್ಲಿ ರುಮೇನಿಯ ತೆಗೆದು ಕೊಂಡಿದ್ದ ಬೆಸ್ಸರೇಬಿಯ ಮತ್ತು ಉತ್ತರ ಬುಕೋವಿನಾಗಳನ್ನು ಖಂಡಿತ ತನಗೆ ವಾಪಸ್ಸು ಕೊಡಬೇಕೆಂದು ಅಗ್ರಹಪೂರ್ವಕ ವಿನಂತಿಮಾಡಿತು. ರುಮೇನಿಯ ಮೊದಲು ಈ ಬಗ್ಗೆ ಜರ್ಮನಿಗೆ ಅಹವಾಲು ಕಳುಹಿಸಿತು. ಆದರಿಂದ ಏನೂ

ಉಪಯೋಗವಾಗಲಿಲ್ಲ. ಬಳಿಕ ರಷ್ಯದ ಕೋರಿಕೆಗೆ ಒಪ್ಪಿಗೆ ಕೊಟ್ಟಿತು. ಬಾಲ್ಟಿಕ್ ರಾಜ್ಯಗಳಲ್ಲಿ ಇದೇ ಸಮಯದಲ್ಲಿ ಹೇಳಿಮಾಡಿಸಿದ್ದಂತೆ ನಡೆಯುತ್ತಿದ್ದ ಚಳುವಳಿಗೆ ಓಗೊಟ್ಟಿತು. ಈ ಮೂರೂ ಪ್ರದೇಶಗಳೂ ಸೋವಿಯತ್ ಒಕ್ಕೂಟವನ್ನು ಸೇರಿದುವು.

ಈ ಘಟನೆಯಿಂದ ಅಮೆರಿಕದ "ನೈತಿಕ ಪ್ರಜ್ಞೆ"ಗೆ ಕಿರಿಕಿರಿಯಾಯಿತು. ನೇವಾನದಿಯ ಅಳಿವೆ ಪ್ರದೇಶದಿಂದ ಫಿನ್ಲೆಂಡಿನ ಉಚ್ಚಾಟನೆಯಾದಾಗಲೂ ಈ ರಾಷ್ಟ್ರಕ್ಕೆ ಇಷ್ಟು ಅಸಮಾಧಾನವಾಗಿರಲಿಲ್ಲ. ಮೂರೂ ರಾಜ್ಯಗಳು ವಿಲೀನವಾಗಿ ಹೋಗಿದ್ದು ಅದಕ್ಕೆ ತುಂಬ ಬೇಸರ ತಂದಿತು. ಅಮೆರಿಕದ ವಿದೇಶಾಂಗ ಸಚಿವ ಕಾರ್ಡೆಲ್ ಹಲ್‌ರವರ ಈ ವಿಲೀನದ ವಿರುದ್ಧ ಬಿರುಸಾದ ಮಾತನ್ನಾಡಿದರು. ರಷ್ಯಾದ ವಿದೇಶಾಂಗ ಸಚಿವ ಮಲತೋವರವರು ಇದಕ್ಕೆ ಮಾಮೂಲಿನಂತೆ ಕಮ್ಯೂನಿಸ್ಟ್ ತತ್ತ್ವಗಳ ಆಧಾರ ಕೊಟ್ಟು ಕಹಿ ಉತ್ತರ ಕೊಟ್ಟರು. ನಿನ್ನ ಕೆಲಸ ನೀನು ನೋಡಿಕೊ ಮತ್ತೊಬ್ಬರ ಗೊಡವೆ ನಿನಗೇಕೆ ಎಂಬಂತೆ ಇತ್ತು ಇದು. ಈ ಎರಡು ಬೃಹದ್ ರಾಷ್ಟ್ರಗಳ ನಡುವಿನ ಕಂದರ ಅಗಲವಾಗುತ್ತಾ ಬಂದಿತು. ಈ ಎರಡೂ ರಾಷ್ಟ್ರಗಳಿಗೂ ಶಾಂತಿ ಬೇಕಾಗಿತ್ತು. ಪರಸ್ಪರ ಹೊಂದಾಣಿಕೆ ಇಲ್ಲದೆ ಇದನ್ನು ಸಾಧಿಸುವುದು ಶಕ್ಯವಿರಲಿಲ್ಲ. ಮನಸ್ಸನ್ನು ಹರಿಯಬಿಟ್ಟು ಒಬ್ಬರನ್ನೊಬ್ಬರು ತಿಳಿಯಲು ಪ್ರಯತ್ನಿಸಲಿಲ್ಲವೆಂಬುದನ್ನು ಬಿಟ್ಟರೆ ಇವರಿಬ್ಬರ ನಡುವೆ ಅಡ್ಡವಾಗುವಂಥದ್ದು ಏನೂ ಇರಲಿಲ್ಲ.

1940ರ ಹೊತ್ತಿಗೆ ಬ್ರಿಟನ್ನಿಗೆ ಸೇರಿದ ಎಲ್ಲ ರಾಜ್ಯಗಳೂ ಯುದ್ಧ ಮಾಡುವುದಕ್ಕಾಗಿ ಪೂರ್ಣ ಮನಸ್ಸಿನಿಂದ ತಮ್ಮೆಲ್ಲ ಶಕ್ತಿಗಳನ್ನೂ ಒಂದುಗೂಡಿಸುತ್ತಿದ್ದವು. ಆದರೆ ಪ್ರಚಾರ ಕಾರ್ಯದಲ್ಲಿ ಮಾತ್ರ ಅಲ್ಲಿನ ಸರ್ಕಾರಗಳು ಇನ್ನೂ ಕೂಡ ಗೊಂದಲದಿಂದ ಅವಿವೇಕವಾಗಿ ವರ್ತಿಸುತ್ತಿದ್ದುವು. ಬ್ರಿಟನ್ನಿಗೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನಿರಾಶ್ರಿತರು ಮತ್ತು ವಿದೇಶೀಯರು ಬಂದು ಸೇರುತ್ತಿದ್ದರು. ಇವರ ಜೊತೆ ವ್ಯವಹರಿಸಲು ರಹಸ್ಯಪೂರ್ಣವಾದ ಅರ್ಧ ಗೋಪ್ಯವಾಗಿಯೇ ಇರಿಸಲಾದ ಸ್ವಿನ್‌ಟನ್ ಕಮಿಟಿ ಎಂಬ ಸಂಸ್ಥೆಯನ್ನು ರಚಿಸಲಾಯಿತು. ಲಾಯಡ್ ಗ್ರೇವ್ ಎಂಬಾತ ಈ ಸಂಸ್ಥೆಯ ಮುಖ್ಯಸ್ಥನಾಗಿದ್ದನು. 1924ರಲ್ಲಿ ಈತ ತನಗೆ ತಾನೇ ಕನ್‌ಲಿಫ್–ಲಿಸ್ಟರ್ ಎಂಬ ಹೆಸರಿಟ್ಟುಕೊಂಡನು. 1929ರಲ್ಲಿ ಲಾರ್ಡ್ ಸ್ವಿನ್‌ಟನ್ ಎಂಬ ಹೆಸರಿತ್ತು. ಇವನನ್ನು ಇಂಗ್ಲೆಂಡಿನ ಲಾರ್ಡ್‌ಗಳ ಪಟ್ಟಿಗೆ ಸೇರಿಸಿದರು. ಯೂರೋಪನ್ನು ಸ್ವತಂತ್ರಗೊಳಿಸುವ ಹೋರಾಟದಲ್ಲಿ ಬ್ರಿಟನ್ ಯಾರು ಯಾರಿಂದ ಸಹಾಯ ಪಡೆಯಬಹುದಿತ್ತೋ ಅಂಥವರನ್ನೇ ಕ್ರೂರವಾಗಿ ಹಿಂಸಿಸುವ ಒಂದು ಪ್ರಕರಣ ಪ್ರಾರಂಭವಾಯಿತು. ಇವರನ್ನು ದ್ವೇಷ ಮತ್ತು ಹಿಂಸೆಗಳಿಗೆ ಗುರಿಮಾಡಲಾಯಿತು. ಇದು ಏಕೆ ಹೀಗೆ ಮಾಡಿದರು ಎನ್ನುವುದನ್ನು ತರ್ಕಬದ್ಧವಾಗಿ ವಿವರಿಸಲು ಸಾಧ್ಯವೇ ಇಲ್ಲ. ಬ್ರಿಟನ್ನಿನ ಒಳ್ಳೆ ಹೆಸರಿಗೆ ಎಂದೆಂದೂ ಅಳಿಸದಂತಹ ಮಸಿ ಬಳಿಯಿತು. ನ್ಯಾಷನಲ್ ಸೋಷಿಯಲಿಸಂ ಮತ್ತು ಫ್ಯಾಸಿಸಂನ್ನು ತೀವ್ರವಾಗಿ ದ್ವೇಷಿಸುತ್ತಿದ್ದ ಜನರನ್ನು

ಸಹಿಸಲಸಾಧ್ಯವಾದ ಸೆರೆಮನೆಗಳಿಗೆ ದೂಡಲಾಯಿತು, ಅವರ ಹೆಂಡಿರು ಮಕ್ಕಳಿಂದ ಬೇರ್ಪಡಿಸಲಾಯಿತು. ಗಡೀಪಾರು ಸಹ ಮಾಡಲಾಯಿತು. ಅವರಲ್ಲಿ ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಂಡರು. ಹಿಂದೆ "ಪವಿತ್ರ ಮೈತ್ರಿ"ಯು ಎದುರು ನಿಂತ ಕ್ಯಾನಿಂಗ್ ಪಾಮರ್‌ಸ್ಟನ್ ಮತ್ತು ಮೆಲ್ಬೋರ್ನರ ಕಾಲದಲ್ಲಿ ಯೂರೋಪಿನ ದೇಶಗಳ ಕ್ರಾಂತಿಕಾರಿ ಚಳುವಳಿಗಳೆಲ್ಲವನ್ನೂ ಸ್ನೇಹಭಾವದಿಂದ ಕಂಡು ಅವುಗಳಿಗೆ ಆಶ್ರಯ ಸಹಾಯ ನೀಡುವುದು ಬ್ರಿಟನ್ನಿನ ಕಾರ್ಯನೀತಿಯಾಗಿತ್ತು. ಗುಲಾಮರ ವ್ಯಾಪಾರವನ್ನೂ ಮೊದಲು ನಿಲ್ಲಿಸಿದ್ದು ಬ್ರಿಟನ್. ಬ್ರಿಟನ್ನಿನ ಧ್ವಜ ಹಾರುತ್ತಿರುವಲ್ಲೆಲ್ಲ ಜನ ಸ್ವತಂತ್ರರಾಗಿರುತ್ತಾರೆ ಎಂದು ಬ್ರಿಟಿಷರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಈಗ ಇಡೀ ಪ್ರಪಂಚವೇ ದಿಗ್ಭ್ರಮೆಗೊಂಡು ಬ್ರಿಟನ್ನು ಇದನ್ನೆಲ್ಲವನ್ನೂ ಮರೆತೇ ಬಿಟ್ಟಿದೆಯೋ ಎಂದು ಪ್ರಶ್ನಿಸುವಂತಾಯಿತು. ಪ್ರಜಾಪ್ರಭುತ್ವ ಪ್ರಜಾಸತ್ತೆ ಎಂದು ಇವರು ಮಾತಾಡುತ್ತಿದ್ದುದೆಲ್ಲ ಬರೀ ಬೂಟಾಟಿಕೆಯಿರಬಹುದೇ?

ಈ ಯುದ್ಧದಲ್ಲಿ ತನ್ನ ಉದ್ದೇಶವೇನು ಎಂದು ಸ್ಪಷ್ಟ ಹೇಳಿಕೆಕೊಡಲು ಯುದ್ಧ ಮೊದಲಾದಂದಿನಿಂದ ಒಂದೇ ಸಮನೆ ನಿರಾಕರಿಸಿತು. ಈ ಮೊದಲು ಹೇಳಿದ ಹಿಂಸಾ ಪ್ರಕರಣಗಳಿಂದಾದ ಕೆಟ್ಟ ಭಾವನೆಗಳಿಗೆ ಇದೂ ಸೇರಿಕೊಂಡಿತು. ಬ್ರಿಟಿಷ್ ಸಾಮ್ರಾಜ್ಯದ ಒಳಗಿದ್ದ ಹೊರಗಿದ್ದ ಪ್ರಪಂಚದ ಎಲ್ಲ ಉದಾರವಾದಿ ಗುಂಪುಗಳೂ ಈ ವಿಷಯದಲ್ಲಿ ಬ್ರಿಟನ್ನನ್ನು ಕುರಿತು ಗೋಗರೆದುವು. ಆದರೆ ಯುದ್ಧ ಮೊದಲಾದಾಗ ಹಟಮಾರಿತನದ ಹಿಡಿತದಲ್ಲಿದ್ದ ಬ್ರಿಟಿಷ್ ಜನತೆ ಎಚ್ಚೆತ್ತುಕೊಳ್ಳುತ್ತಿದ್ದರೂ ಟೋರಿಗಳ ಸಂಕೋಲೆಗಳಿಂದ ಬಿಡಿಸಿಕೊಳ್ಳಲು ಅಸಮರ್ಥರಾದರು.

ಹೀಗೆ ಒಂದೇಸಮನೆ ಒಂದು ಸಾಮಾಜಿಕ ಘರ್ಷಣೆ ತಾಯಿನಾಡಿನಲ್ಲಿ ರೂಪುಗೊಳ್ಳುತ್ತಿದ್ದಂತೆಯೇ ಬ್ರಿಟಿಷರು ಹೋರಾಟ ನಡೆಸಿದ್ದರು. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಎಡೆಬಿಡದಂತೆ ಲಂಡನ್ನಿನ ಮೇಲೆ ವಿಮಾನ ದಾಳಿ ನಡೆಯಿತು. ಆಗ ಅಲ್ಲಿನ ಸಾಮಾನ್ಯ ಜನತೆಯ ದಾರ್ಢ್ಯ ಮತ್ತು ಸಹನಾಶಕ್ತಿಗಳು ಬೆಳಕಿಗೆ ಬಂದುವು ಮತ್ತು ಬ್ರಿಟಿಷ್ ವಾಯುಪಡೆಯ ಸಾಮರ್ಥ್ಯ ಒಂದೇ ಸಮನೆ ಹೆಚ್ಚುತ್ತಿದ್ದುದು ವ್ಯಕ್ತವಾಯಿತು. ಅಧ್ಯಕ್ಷ ಫ್ರಾಂಕ್ಲಿನ ಡಿಲಾನೋ ರೋಸ್‌ವೆಲ್ಟರ ನೇತೃತ್ವದಲ್ಲಿದ್ದ ಅಮೇರಿಕ ಬ್ರಿಟಿಷರ ಯುದ್ಧ ಪ್ರಯತ್ನದ ಬಗೆಗೆ ಹೆಚ್ಚಾದ ಸಹಾನುಭೂತಿ ತೋರಿಸತೊಡಗಿತು. ಹೊಸವರ್ಷ ಬರುವ ಹೊತ್ತಿಗೆ ಯುದ್ಧದಲ್ಲಿ ಒಂದು ಹೊಸ ಅಧ್ಯಾಯ ಮೊದಲಾಯಿತು. ಮುಸೋಲಿನಿಯ ಸೈನ್ಯಗಳು ಈಜಿಪ್ಟಿನೊಳಗೆ ಸೂಯಜ್‌ಕಾಲುವೆಯ ಕಡೆಗೆ ನುಗ್ಗುತ್ತಿದ್ದುವು. ತನಗೆ ಎಂದಿದ್ದರೂ ವಿಜಯ ಸಿದ್ಧ ಅವನಿಗೆ ಅದೆಷ್ಟು ಆತ್ಮವಿಶ್ವಾಸವಿತ್ತೆಂದರೆ ಅವನು 1939ರಲ್ಲಿ ಆಲ್ಬೇನಿಯವನ್ನು ವಶಪಡಿಸಿಕೊಂಡಿದ್ದಲ್ಲದೆ 1941ರಲ್ಲಿ ಗ್ರೀಸಿನ ಮೇಲೆ ದಾಳಿ ಮಾಡಿದನು. ಗ್ರೀಸಿನ ಸೈನ್ಯ ಅಧ್ಯಕ್ಷ ಮೆಟಾಕ್ಸಾಸ್‌ರ ನೇತೃತ್ವದಲ್ಲಿ ಬಹು ಉನ್ನತ ಮಟ್ಟದ ದಕ್ಷತೆ ಪಡೆದಿತ್ತು. ದಕ್ಷನಾದ ಹೊಸ ತೆರದ ಬ್ರಿಟಿಷ್ ಕಮ್ಯಾಂಡರ್

ಜನರಲ್ ವೇವೆಲ್ ಈಗ ರಂಗದ ಮೇಲೆ ಕಾಣಿಸಿಕೊಂಡನು. ಉತ್ತರ ಆಫ್ರಿಕ, ಎರಿಟ್ರಿಯ ಮತ್ತು ಅಬಿಸೀನಿಯ ಈ ಎಲ್ಲ ಕಡೆಗಳಲ್ಲೂ ಇಟಲಿಯ ಸೈನ್ಯಗಳ ಮೇಲೆ ಈತ ಅದೆಷ್ಟು ಚುರುಕಾಗಿ ಶಕ್ತಿಯುತವಾದ ಹೊಡೆತ ಕೊಟ್ಟನೆಂದರೆ ಇದರಿಂದ ಇಟಾಲಿಯನ್ನರಿಗಾದಷ್ಟೇ ವಿಸ್ಮಯ ಆತನದೇ ನಾಡಿನ ಬ್ರಿಟಿಷರಿಗೂ ಆಯಿತು. ಹತ್ತೇವಾರಗಳಲ್ಲಿ ಫ್ಯಾಸಿಸಂ ಎಂಬ ಬೆಲೂನು ಒಡೆದು ಚೂರಾಯಿತು. ಬ್ರಿಟಿಷ್ ಕಾಮನ್‌ವೆಲ್ತಿನ ಸೈನ್ಯಪಡೆಗಳು ಪುನಶ್ಚೈತನ್ಯ ಪಡೆದಿದ್ದುವು. ಶತ್ರುಸೈನ್ಯಗಳಲ್ಲಿದ್ದಷ್ಟು ಜನರು ಇವುಗಳಲ್ಲಿರಲಿಲ್ಲವಾದರೂ ಈ ಸೈನಿಕರು ಧೃಢಸಂಕಲ್ಪರಾಗಿದ್ದರು, ಸೈನ್ಯಗಳು ಚೆನ್ನಾಗಿ ಸಜ್ಜುಗೊಳಿಸಲ್ಪಟ್ಟಿದ್ದುವು. ಕೆಂಪು ಸಮುದ್ರದಿಂದ ಸಿರೆನೈಕದವರೆಗೂ ಹರಡಿಹೋಗಿದ್ದ ಇಟ್ಯಾಲಿಯನ್ ಪಡೆಗಳನ್ನು ಈ ಸೈನ್ಯಗಳು ಸೋಲಿಸಿ ಸೆರೆಹಿಡಿದುವು. ಬ್ರಿಟಿಷ್ ವಾಯುಪಡೆಯ ಬೆಂಬಲ ಪಡೆದ ಗ್ರೀಕರು ಅಲ್ಬೇನಿಯದಲ್ಲಿ ಇಟಲಿಯವರನ್ನು ಪೂರ್ತಿ ಸೋಲಿಸಿದರು. ಇದೇ ರೀತಿಯಲ್ಲಿ ದೃಢಮನಸ್ಸುಮಾಡಿ ಬುದ್ಧಿವಂತಿಕೆಯಿಂದ ಮುಂದಾಳುತನ ತೋರಿದ್ದಲ್ಲಿ 1947ರಲ್ಲಿ ನಾರ್ವೆಯಲ್ಲಿ ನಾಜ್ಸಿಗಳು ನುಗ್ಗಿದ್ದಾಗಲೇ ಬ್ರಿಟಿಷರು ಅವರನ್ನು ಧ್ವಂಸಮಾಡಬಹುದಾಗಿತ್ತು. ಆದರೆ ಉದ್ದೇಶಪೂರ್ವಕವಾಗಿಯೋ ಅಲ್ಲವೋ ಸಮಾಜದಲ್ಲಿ ಒಳಗೊಳಗೇ ವಿಶ್ವಾಸಘಾತಕತನ ನಡೆಯುತ್ತಿರುತ್ತದೆ. ಸಮಾಜದ ಸಾಮಾನ್ಯ ವ್ಯಕ್ತಿಗಳು ಸಾಧಾರಣವಾಗಿ ಯಾವುದಕ್ಕೂ ಮೇಲೆ ಬಿದ್ದು ಹೋಗಲು ಹಿಂದೆಗೆಯುತ್ತಾರೆ. ಈ ನಮ್ಮ ಮುಳುಗಿ ಏಳುತ್ತಿರುವ ಪ್ರಪಂಚವನ್ನು ಉದ್ಧರಿಸಲು ಇಂಥ ಜನತೆಯಲ್ಲಿರುವ ಕ್ರಿಯಾಶೀಲ ಪ್ರವೃತ್ತಿ ಪ್ರಯತ್ನಿಸುತ್ತಿದ್ದರೂ ಇಂತಹ ವಿಶ್ವಾಸಘಾತಕತನ ಈ ಪ್ರಯತ್ನಗಳಿಗೆ ಅಡ್ಡಿಯಾಗುತ್ತದೆ.

70. ಮಾನವಕುಲ—ಮುಂದೇನು ?

ಸದ್ಯದಲ್ಲಿ ಮನುಕುಲ ತಲೆಗೆಟ್ಟಂತೆ ವರ್ತಿಸುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಈಗ ನಮಗೆ ಎಲ್ಲಕ್ಕಿಂತ ಹೆಚ್ಚಿಗೆ ಅಗತ್ಯವಾದುದೆಂದರೆ ನಮ್ಮ ಮನಸ್ಸುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು. ಒಬ್ಬ ವ್ಯಕ್ತಿಯನ್ನು ಹುಚ್ಚನೆನ್ನುವುದು ಯಾವಾಗ? ಅವನ ಮನಸ್ಸನ್ನು ಆಳುವ ಭಾವನೆಗಳು ಸಂದರ್ಭಗಳಿಗೆ ಸ್ವಲ್ಪವೂ ಹೊಂದುವಂತೆ ಇಲ್ಲದಿದ್ದು ಅವುಗಳಿಂದ ಸ್ವತಃ ಅವನಿಗೆ ಮತ್ತು ಇತರರಿಗೆ ಅಪಾಯವಾಗುವಂತಿದ್ದಾಗ ಹುಚ್ಚು ಎಂದರೇನೆಂದು ವಿವರಿಸುವ ಈ ಸೂತ್ರ ಇಂದು ಇಡೀ ಮನುಕುಲಕ್ಕೆ ಒಪ್ಪುವಂಥದಾಗಿದೆ. ಮಾನವ ತನ್ನ ಮನಸ್ಸಿಗೆ ಕಡಿವಾಣಹಾಕಬೇಕು ಇಲ್ಲದಿದ್ದರೇ ಮನುಕುಲವೇ ನಾಶವಾಗುತ್ತದೆ ಎಂಬ ಮಾತು ಅಲಂಕಾರಿಕ ಉಕ್ತಿಯಲ್ಲ, ನಿಜಸಂಗತಿಯ ವರದಿ ನಾಶವಾಗಬೇಕು ಇಲ್ಲವೇ ಇಂದಿನಗಿಂತ ವಿವೇಚನಾಯುತ ರೀತಿಯಲ್ಲಿ ಬಾಳುವ ಪ್ರಯತ್ನ ನಡೆಸುವ ಒಂದು ಹಂತವನ್ನು ಮುಟ್ಟಬೇಕು.

ಈ ಎರಡುಮಾರ್ಗಗಳನ್ನು ಬಿಟ್ಟರೆ ಮಧ್ಯಮಮಾರ್ಗ ಇಲ್ಲವೇ ಇಲ್ಲ. ಮೇಲೇರಬೇಕು ಇಲ್ಲವೇ ಕೆಳಗೆ ಬೀಳಬೇಕು. ಈಗಿರುವಂತೆಯೇ ಇರಲು ಸಾಧ್ಯವಿಲ್ಲ.

ಮನುಕುಲದ ಚರಿತ್ರೆಯ ಈ ಸಂಕ್ಷಿಪ್ತ ಸಾರಾಂಶದಲ್ಲಿ ಮಾನವಸಮಾಜ ಒಂದೇ ಸಮನೆ ಬೆಳೆದು ಬಂದ ಬಗೆಯನ್ನು ಚಿತ್ರಿಸಲಾಗಿದೆ. ಸಂಪರ್ಕ ಮತ್ತು ಸಾರಿಗೆ ವ್ಯವಸ್ಥೆಗಳಲ್ಲಿ ಒಂದೊಂದಾಗಿ ಹೊಸ ಉತ್ತಮವಾದ ಮಾರ್ಪಾಟು ಆದಾಗಲೆಲ್ಲ ಜನರು ತಮ್ಮ ಸಮಾಜ ಜೀವನವನ್ನೂ ವಿಶಾಲಗೊಳಿಸಿಕೊಳ್ಳಬೇಕಾಗಿ ಬಂದಿದೆ ಈ ಒಂದೊಂದು ವಿಸ್ತರಣಕ್ಕೂ ಪೂರ್ವಾಗ್ರಹಗಳು, ಹಳೆಯ ಪದ್ಧತಿಗಳು, ಹಳೆಯ ಕಂದಾಚಾರದ ಧರ್ಮಗಳು, ಹಳೆವ್ಯವಸ್ಥೆ ಇರುತ್ತಿದ್ದ ನಿಷ್ಠೆಗಳು ಅಡ್ಡಿಬರುತ್ತಿದ್ದುವು, ಎಷ್ಟೋವೇಳೆ ಇಂಥ ಸಂದರ್ಭಗಳಲ್ಲಿ ಅಸಂಖ್ಯಾತ ಜೀವಹಾನಿಯಾಗುತ್ತಿತ್ತು. ಜನರು ಬಹಳ ಸಂಕಷ್ಟಕ್ಕೊಳಗಾಗುತ್ತಿದ್ದರು. ಆದರೂ ಈ ವಿಸ್ತರಣಗಳು ನಡೆದೇ ನಡೆದುವು. ಕಳೆದ ಶತಮಾನದಲ್ಲಿ ವಿಶೇಷವಾಗಿ ವಿಜ್ಞಾನ ಅನಿರ್ಬಂಧಿತವಾಗಿ ಬೆಳೆದು ಹೊಸ ಹೊಸ ಉಪಜ್ಞೆಗಳು ಹುಟ್ಟಿಕೊಂಡದ್ದರ ಫಲವಾಗಿ ಮೂಡಿಬಂದ ಹೊಸ ಅವಕಾಶಗಳು ಮತ್ತು ಹಳೆವ್ಯವಸ್ಥೆಯಲ್ಲುಂಟಾದ ವ್ಯತ್ಯಾಸಗಳನ್ನು 57, 58 ಮತ್ತು 59ನೇ ಅಧ್ಯಾಯಗಳಲ್ಲಿ ಪರಿಶೀಲಿಸಲಾಯಿತು. ಪ್ರಪಂಚದ ಎಲ್ಲ ಕಡೆಗಳಲ್ಲೂ ಈಗ ಜನಸಾಮಾನ್ಯರಲ್ಲಿ ವಿದ್ಯಾಭ್ಯಾಸ ಅಷ್ಟಾಗಿ ಹರಡಿದೆಯೆಂದು ಹೇಳಲಾಗದಿದ್ದರೂ ಈಗ ಆಗಿರುವಷ್ಟರಿಂದಲೇ ಒಡೆತನದ ಹಕ್ಕುಗಳನ್ನು ಕುರಿತು ಉಂಟಾಗಿರುವ ಬಿಕ್ಕಟ್ಟು ಒತ್ತಡಗಳನ್ನೂ ವಿಶೇಷವಾಗಿ ಚರ್ಚಿಸಲಾಯಿತು. ಜನಸ್ತೋಮದಲ್ಲಿ ಮೊದಲಿನ ವಿಧೇಯತೆಯಿಲ್ಲ. ಹಣ ಅಥವಾ ಹಣಸಿಗುವುದೆಂಬ ಆಶ್ವಾಸನೆ ಆಸ್ತಿಯ ಸುಲಭ ಚಲಾವಣೆಯ ಒಂದು ರೂಪ. ಮಹಾಯುದ್ಧದಿಂದೀಚೆಗೆ ಜನಸಾಮಾನ್ಯರ ಗಮನವನ್ನು ಹಣದ ಸಮಸ್ಯೆಗಳು ಹೆಚ್ಚು ಹೆಚ್ಚಾಗಿ ಸೆಳೆಯುತ್ತಿವೆ. ಆದರೆ ಈ ಚರ್ಚೆಗಳ ಬಹುಭಾಗ ನಿಷ್ಪ್ರಯೋಜಕ. ಏಕೆಂದರೆ ಬಹುವಾಗಿ ಎಲ್ಲರೂ ಹಣವನ್ನು ಅದೇ ಒಂದು ಸ್ವತಂತ್ರ ವ್ಯವಸ್ಥೆ ಅಥವಾ ಅಸ್ತಿತ್ವವೆಂಬಂತೆ ನೋಡುತ್ತಾರೆ. ಆದರೆ ಹಣವು ಆಸ್ತಿ–ಹಣ ಈ ಸಂಕೀರ್ಣದ ಜಟಿಲ ಸಂಬಂಧಗಳಲ್ಲಿನ ಒಂದು ಭಾಗ ಮಾತ್ರ. ಈ ಸಂಕೀರ್ಣದ ಯಾವ ಭಾಗ ಬದಲಾದರೂ ಸಂಕೀರ್ಣವೇ ಬದಲಾಗುವುದು. ಉದಾಹರಣವಾಗಿ ಹಣದುಬ್ಬರವಾಗಿ ಬೆಲೆಗಳು ಏರಿದಾಗ ಸಾಲಕೊಟ್ಟವರಿಗೆ ನಷ್ಟ. ಹಣದ ಬೆಲೆ ಕುಸಿದಾಗ ಸಾಲತೆಗೆದುಕೊಂಡವರಿಗೆ ದೊಡ್ಡಹೊರೆ ಬೀಳುತ್ತದೆ. ಕೊಳ್ಳುವ, ಮಾರುವ ವಸ್ತುಗಳಿಗನುಸಾರವಾಗಿ ಹಣದ ಸ್ವರೂಪವೇ ಬದಲಾಗುತ್ತದೆ. ಖಾಸಗಿ ಬ್ಯಾಂಕುಗಳಲ್ಲಿ ಜನರ ಹಣವನ್ನಿಟ್ಟುಕೊಳ್ಳುವುದರ ಫಲವಾಗಿ ಈ ಬ್ಯಾಂಕುಗಳಿಗೆ ಸಲ್ಲದ ಪ್ರಭಾವ ದೊರಕುವುದೆಂಬ ಜನ ಒಪ್ಪಬಹುದಾದ ಒಂದು ಹೇಳಿಕೆಯಿದೆ. ಹಣ ಹೇಗೆ ವಿನಿಯೋಗವಾಗುತ್ತದೆ ಎನ್ನುವುದರ ಮೇಲೆ ಅದರ ಗುಣವೇ ಬೇರೆಯಾಗುತ್ತದೆ ಬೇರೆ ಬೇರೆ ವಿಧದ ಹಣಗಳಿವೆ. ಕಮ್ಯೂನಿಸಮ್ಮಿನ ಹಣವೇ ಬೇರೆ. ಉಗ್ರ ವ್ಯಕ್ತಿ ಸ್ವಾತಂತ್ರ್ಯವಾದದ ಹಣವೇ ಬೇರೆ. ಆಸ್ತಿಯ ಒಡೆತನ, ಆದರ ಉಪಯೋಗದ

ಮಾರ್ಗ ಮತ್ತು ಸ್ವತಂತ್ರ ಚಟುವಟಿಕೆಗಳು ಇವುಗಳನ್ನು ಕುರಿತು ಅನೇಕ ಅಭಿಪ್ರಾಯಗಳು ಮತ್ತು ವ್ಯವಸ್ಥೆಗಳು ಸಾಧ್ಯ. ಈ ಎಲ್ಲವುಗಳಿಗೂ ಹಣದ ಸ್ವಭಾವವೇ ಬೇರೆಯಾಗುತ್ತದೆ.

ಈಗ ಈ ಕ್ಷೇತ್ರದಲ್ಲಿ ಸಾಕಷ್ಟು ಬೌದ್ಧಿಕಚೈತನ್ಯ, ವ್ಯವಸ್ಥೆ ಮತ್ತು ಮುಂದಾಳು ತನಗಳ ಕೊರತೆಯಿದೆ. ಹೀಗಾಗಿ ಹಣ ಮತ್ತು ನಿದರ ಕೊಡುಕೊಳ್ಳುವ ವ್ಯವಸ್ಥೆಯಲ್ಲಿ ದುಸ್ಸಾಹಸಿಗಳ ಸಟ್ಟಾ ಮನೋಭಾವವುಳ್ಳವರ ಕೈವಾಡವೇ ಹೆಚ್ಚಾಗಿ ಪ್ರತಿನಿತ್ಯದ ಆರ್ಥಿಕ ಜೀವನದಲ್ಲಿ ನಿರಂತರವಾಗಿ ಅತೀವ ಏರುಪೇರುಗಳಾಗುತ್ತಿವೆ. ಈ ಅವ್ಯವಸ್ಥೆಗೆ ಯಾವ ಸಿದ್ಧೌಷಧವೂ ಇಲ್ಲ. ಯಾವೆಡೆಯಲ್ಲೂ ಯಾವನೂ ಈಗ ಬಡತನ ಅಭಾವ ಗಳ ಭಯವಿಲ್ಲದೆ ಸುರಕ್ಷಿತನಂತಿರಬಲ್ಲ ಎಂದು ಹೇಳಲಾಗದು.

ಮಾನವ ಜೀವನದ ಪರಿಸ್ಥಿತಿಗಳಲ್ಲಿ ಆಗಿರುವ ಬದಲಾವಣೆಗಳ ನಿಜವಾದ ಪ್ರಮಾಣ ಮತ್ತು ಪ್ರಭಾವಗಳ ಮಹತ್ವವನ್ನು ನಾವು ಇದೀಗ ತಾನೇ ಗ್ರಹಿಸಿದ್ದೇವೆ. 19ನೆಯ ಶತಮಾನದಲ್ಲಿದ್ದ ಚೈತನ್ಯವಂತರಾದ ಇವರು ವಿಜ್ಞಾನ ನೀಡಿದ ವರಗಳಾದ ಶಕ್ತಿ ಮತ್ತು ಸಮೃದ್ಧಿಗಳನ್ನು ಬೇರಾವ ಯೋಚನೆಯಿಲ್ಲದೆ ಕೃತಜ್ಞತಾಭಾವನೆಯೂ ಇಲ್ಲದೆ ಸ್ವೀಕರಿಸಿಬಿಟ್ಟರು. ಇವುಗಳಿಗೆ ಮುಂದೆ ಬೆಲೆತೆರಬೇಕಾಗಬಹುದೆಂಬ ಚಿಂತೆಯೇ ಇವರಿಗೆ ಇರಲಿಲ್ಲ. ಈಗ ಈ ವರಗಳಿಗೆ ದಂಡಕೊಡುವ ಪ್ರಸಂಗ ಬಂದಿದೆ. ಸ್ಥಳಗಳ ನಡುವಿನ ದೂರದ ಕಲ್ಪನೆಯೇ ಬದಲಾಯಿಸಿಹೋಗಿವೆ. ಮಾನವರ ಕೈಗೆ ಸಿಗುವ ಶಕ್ತಿಯು ಪ್ರಮಾಣ ಯದ್ವಾತದ್ವಾ ಹೆಚ್ಚಾಗಿದೆ. ಹೀಗಾಗಿ ಈಗ ಇರುವ ರಾಷ್ಟ್ರಗಳು ತಮ್ಮ ಪರಮಾಧಿಕಾರಗಳನ್ನು ಬೇರೆಬೇರೆಯಾಗಿರಿಸಿಕೊಳ್ಳುವುದು ಅಸಾಧ್ಯವಾಗಿದೆ. ಆದರೂ ಹಠಮಾರಿತನದಿಂದ ಅಪಾಯ ಸಂಭವಿಸುವಂತಿದ್ದರೂ ಇದಕ್ಕೇ ನಾವು ಅಂಟಿಕೊಂಡಿದ್ದೇವೆ. ಹೇಗಾದರೂ ಮಾಡಿ ಹಣ ಕ್ಷೇತ್ರದ ಭ್ರಮಾಪ್ರಪಂಚವನ್ನು ನಾವು ನಿವಾರಿಸಿಕೊಳ್ಳಬೇಕು. ಪ್ರಪಂಚದ ಆರ್ಥಿಕ ಮತ್ತು ರಾಜಕೀಯ ಜೀವನ ಗಳನ್ನು ಇಡೀ ಪ್ರಪಂಚಕ್ಕೆ ಅನ್ವಯಿಸುವ ನಿಯಂತ್ರಣಗಳಿಗೆ ಒಳಪಡಿಸಬೇಕು ಮತ್ತು ಇಡೀ ಮಾನವವರ್ಗದ ಜೀವನಕ್ರಮವನ್ನು ಜೀವವಿಜ್ಞಾನದ ಸಹಾಯದಿಂದ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಮಾನವಜೀವನ ಮುಂದುವರಿಯುವುದೇ ದುಸ್ಸಾಧ್ಯ ವಾಗಬಹುದು.

ಈಗ ವ್ಯವಸ್ಥಿತವಾಗಿರುವ ಎಷ್ಟೋ ಸಂಗತಿಗಳನ್ನು ಗುರುತೇಸಿಗದಂತೆ ಬದಲಾಯಿಸುವುದು ಅಗತ್ಯ. ಬ್ರಿಟಿಷರು ಪ್ರಪಂಚದಲ್ಲಿ ಈಗ ಪಡೆದಿರುವ ಅತ್ಯುನ್ನತ ಸ್ಥಾನದಿಂದ ಕೆಳಗಿಳಿಯಬೇಕಾಗಬಹುದು. ಇದನ್ನೋದುತ್ತಿರುವ ಇಂಗ್ಲಿಷ್ ವ್ಯಕ್ತಿಗೆ ಇದು ಸಂಕಟವನ್ನುಂಟುಮಾಡಕೂಡದು. ಹಲವಾರು ವರ್ಷ ನಮಗೆ ಈ ಸ್ಥಾನ ಸಿಕ್ಕಿತ್ತು. ಆಗ ನಾವೇನೂ ಅಷ್ಟು ಸಮರ್ಪಕವಾಗಿ ಕಾರ್ಯ ನಿರ್ವಹಿಸಲಿಲ್ಲ ಕೆಲವು ಒಳ್ಳೆಯ ಉದಾತ್ತಕಾರ್ಯಗಳನ್ನು ನಾವು ಮಾಡಿದ್ದರೂ ಅದು ಸಾಲದು. ನಾವೇ ಮುಖಂಡರಾಗಿರಬೇಕು ಎಂದು ಸಮರ್ಥಿಸಿಕೊಳ್ಳುವಷ್ಟು ಕೆಲಸ ನಾವು ಮಾಡಲಿಲ್ಲ.

ಸಾಕಷ್ಟು ಕಷ್ಟ ಇರುವ ಈ ಕಾಲದಲ್ಲಿ ಇಂಗ್ಲಿಷ್ ಜನರು ಒಂದು ಅಂಶವನ್ನು ಅರ್ಥಮಾಡಿಕೊಳ್ಳಬೇಕು. ಅದೇನೆಂದರೆ ಪ್ರಪಂಚದ ಎಲ್ಲ ಕಡೆಯೂ ಸಮಾನತೆ ಮತ್ತು ಒಗ್ಗಟ್ಟುಗಳೇ ಮಾನವನ ಆದರ್ಶಧ್ಯೇಯ ಎಂಬುದು ಡಿಸ್ರೇಲಿ ಮತ್ತು ಕಿಪ್ಲಿಂಗರ ಕಾಲದ ಆ ಸುಖಸಮಯದಲ್ಲಿ ಇದನ್ನು ನಾವು ಖಂಡಿತ ಒಪ್ಪಿಕೊಳ್ಳುತ್ತಿರಲಿಲ್ಲ. "ಔನ್ನತ್ಯ" ಎಂಬ ಭಾವನೆಗೆ ಈಗ ಅಸ್ತಿತ್ವವಿಲ್ಲ. "ಪ್ರತಿಷ್ಠೆ" ಎನ್ನುವುದು ನೆಚ್ಚಿಕೊಳ್ಳತಕ್ಕಂಥಾ ಆದರ್ಶವಲ್ಲ. ಇಷ್ಟವಿರಲಿ ಇಲ್ಲದಿರಲಿ ನಾವೆಲ್ಲ ಪ್ರಚಂಡ ಗಣರಾಜ್ಯ ಮತ್ತು ವಿಶ್ವ ಬಂಧುತ್ವಗಳಿಗೆ ಒಗ್ಗಿಕೊಳ್ಳಲೇಬೇಕು. ಇಲ್ಲದಿದ್ದಲ್ಲಿ ಸರ್ವನಾಶ ಸಂಭವಿಸಬಹುದು.

71. 1940 ರಿಂದ 1944 ರ ವರೆಗೆ ಮಾನವನ ಮನಸ್ಸು ನನ್ನ ವ್ಯಾಪ್ತಿಯ ಕೊನೆಯಲ್ಲಿ

1. 1941 ರಿಂದ ಈ ಪುಸ್ತಕ ಪ್ರಕಟವಾಗುವವರೆಗೆ.

ಈ ಹಿಂದಿನ ಅಧ್ಯಾಯಗಳಲ್ಲಿ ಈ ಚರಿತ್ರೆಯನ್ನು 1940-41ರ ವರೆಗೆ ತರಲಾಯಿತು. ಅದುವರೆಗಿನ ಘಟನೆಗಳ ಕ್ರಮಾನುಗತಿಯಲ್ಲಿ ಏನೂ ಬದಲಾವಣೆ ಮಾಡಬೇಕಾಗಿಲ್ಲ. ಕೆಲವು ಮುದ್ರಣಗಳಲ್ಲಿ ರಾಜಕೀಯ ಒತ್ತಡಗಳಿಂದ ಕೆಲವೊಂದು ಭಾಗಗಳನ್ನು ಕೈಬಿಡಲಾಗಿತ್ತು. ಅವುಗಳನ್ನೆಲ್ಲ ತಿರುಗಿ ಸೇರಿಸಲಾಗಿದೆ. ಈ ಪುಸ್ತಕವನ್ನು ಈಗ ಗ್ರಂಥಕರ್ತನ ಹೆಸರಿನಲ್ಲಿ ಇಡಿಯಾಗಿ ಕಾಪಿರೈಟ್. ಇನ್ನು ಮುಂದೆ ಹಾಗೆ ವಿಷಯಲೋಪಮಾಡುವುದು ಅಕ್ಷಮ್ಯ.

ಈ ಚರಿತ್ರೆ ಪುಸ್ತಕದಲ್ಲಿನ ವಿಷಯಗಳ ಕ್ರಮಾನುಗತಿಯನ್ನು ಹಾಗೇ ಉಳಿಸಿಕೊಂಡು ಮುದಿ ಕೈಬಿಟ್ಟಭಾಗಗಳೆಲ್ಲವನ್ನೂ ಸೇರಿಸಿದ್ದರೂ ಅಲ್ಲಿಗೆ ಎಲ್ಲ ನೇರವಾದಂತಾಯಿತು ಎನ್ನುವಹಾಗಿಲ್ಲ ಈ ಘಟನೆಗಳ ಮೌಲ್ಯಗಳಲ್ಲಿ ಆಳವಾದ ಬದಲಾವಣೆಗಳಾಗಿವೆ. ಈ ಅಂಶವನ್ನು ವಿಶದೀಕರಿಸುವ ಮೊದಲು ಈ ಕಾಲದ ಘಟನೆಗಳನ್ನು ತಿರುಗಿ ನೆನಪಿಸಿಕೊಳ್ಳೋಣ. ಇದನ್ನು ಅತಿ ಸಂಗ್ರಹವಾಗಿಯೇ ಮಾಡಬಹುದು. ಏಕೆಂದರೆ ಇವುಗಳಲ್ಲಿ ಅನೇಕ ಘಟನೆಗಳ ನೆನಪು ಇನ್ನೂ ಓದುಗರ ಮನಸ್ಸಿನಲ್ಲಿ ಹಚ್ಚಹಸುರಾಗೇ ಇದೆ.

1940-41ರ ಸಾಲಿನಲ್ಲಿ ಪ್ರಪಂಚವು ಯುದ್ಧಕ್ಕೆ ಸಿದ್ಧವಾಗಿರಲಿಲ್ಲ. ಇಡೀ ಪ್ರಪಂಚವೇ ಕಾಲಾವಕಾಶಕ್ಕಾಗಿ ಕಾಯುತ್ತಿತ್ತು. ಯಾರಿಗೂ ಯಾರಮೇಲೂ ನಂಬಿಕೆ ಇರಲಿಲ್ಲ. ಹಿಟ್ಲರನಂತೂ ನಂಬಲಸಾಧ್ಯವಾದಷ್ಟು ಸುಳ್ಳು ಹೇಳುತ್ತಿದ್ದು ತಾನು ಗೆಲ್ಲಬೇಕೆಂದು ಹವಣಿಸುತ್ತಿದ್ದವರೆಲ್ಲರೊಡನೆಯೂ ಕರಾರುಗಳನ್ನೂ ಒಡಂಬಡಿಕೆಗಳನ್ನೂ ಮಾಡಿಕೊಳ್ಳುತ್ತಿದ್ದನು. ಯಹೂದ್ಯರೊಡನೆ ಮಾತ್ರ ಅವನು ಈ ವಿಧದ ವ್ಯವಹಾರ ನಡೆಸಲಿಲ್ಲ. ಏಕೆಂದರೆ ಅವರನ್ನು ನಾಶಪಡಿಸಬೇಕೆಂದು ಗೊತ್ತುಪಡಿಸಲಾಗಿತ್ತು. ಆ ಸಮಯದಲ್ಲಿ ಅಮೆರಿಕನ್ನರ ಬಗೆಗೆ ಅವನು ಇನ್ನೂ ಏನೂ ಹಂಚಿಕೆ ಹೂಡಿರಲಿಲ್ಲವೆನಿಸುತ್ತದೆ. ಐರೋಪ್ಯ ಜಗತ್ತನ್ನೆಲ್ಲ ಜಯಿಸಬೇಕೆಂಬುದೇ ಅವನ

ಅಂದಿನ ಗುರಿಯಾಗಿತ್ತು. ಮಲತೋವ್, ಬಲ್ಗೇರಿಯದ ರಾಜಬರೀಸ್ ಮತ್ತು ಯುಗೋಸ್ಲಾವಿಯದ ಕೈಗೊಂಬೆ ಸರಕಾರದ ಪ್ರತಿನಿಧಿ ಇವರೆಲ್ಲರೂ ಚೇಂಬರ್‌ಲೇನರ ಮೇಲ್ಪಂಕ್ತಿಯನ್ನೇ ಅನುಸರಿಸಿ ಹಿಟ್ಲರನ ಜೊತೆ ಮಾತುಕತೆಯಾಡಲು ಹೊರಟರು. ಸ್ವಲ್ಪಕಾಲ ಬ್ರಿಟನ್ನು ಒಂಟಿಯಾಗಿ ಜರ್ಮನಿಯ ಬಲವಾದ ದಾಳಿಗಳನ್ನೆದುರಿಸಿತು. ಆದರೆ ಮಾಲತೋವನೊಡನೆ ಮಾತನಾಡಿದ ಮೇಲೆ ಹಿಟ್ಲರನಿಗೆ ರಷ್ಯ ಕುರಿತು ನಿಶ್ಚಿಂತೆಯಾಗಲಿಲ್ಲ. ಘಳಿಗೆಘಳಿಗೆಗೂ ರಷ್ಯ ಬಲಕೂಡಿಸಿಕೊಳ್ಳುತ್ತಿತ್ತು. ಜರ್ಮನಿಗೆ ರಷ್ಯವೇ ತಕ್ಷಣದ ಅಪಾಯ ಎನ್ನಿಸಿತು. ಸ್ವರಕ್ಷಣೆಗೆ ಬ್ರಿಟನ್ನು ಸಿದ್ಧವಿದ್ದರೂ ಪರರ ಮೇಲೆ ದಾಳಿನಡೆಸಲೂ ಅದಿನ್ನೂ ಸಿದ್ಧವಾಗಿರಲಿಲ್ಲ. ಹೀಗಾಗಿ 1941ರ ಜೂನ್ 22ರಂದು ಹಿಟ್ಲರ್ ರಷ್ಯದ ಮೇಲೆ ತನ್ನ ಸೈನ್ಯವನ್ನು ನುಗ್ಗಿಸಿದನು. ರಷ್ಯವನ್ನು ಮಣ್ಣುಮುಕ್ಕಿಸುವವರೆಗೂ ಇಂಗ್ಲೆಂಡನ್ನು ಹಾಗೇ ಬಿಡಬಹುದೆಂದು ಅವನಿಗೆನಿಸಿತು. ಅಮೆರಿಕದಲ್ಲಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಬ್ರಿಟನ್ನಿನಮೇಲೆ ಹೋದಲ್ಲಿ ರೂಸ್‌ವೆಲ್ಟ್ "ಹಳೆತಾಯಿನಾಡಿ"ನೊಂದಿಗೆ ಮೈತ್ರಿಕೂಟಮಾಡಿಕೊಳ್ಳಲು ತಕ್ಷಣ ನಿಶ್ಚಯಿಸುವ ಸಂಭವವಿತ್ತು. ಇಂಗ್ಲೆಂಡಿಗೆ ಜರ್ಮನ್ ಸೈನ್ಯಗಳನ್ನು ಕಳುಹಿಸುವುದು ಸುಲಭಸಾಧ್ಯವಾಗಿತ್ತು. ಆದರೆ ಅಲ್ಲಿ ಮೋಸ್ಲಿಯಗುಂಪಿನ ಜನರ ಸಹಾಯ ಇದ್ದರೂ ಆ ಸೈನ್ಯಗಳನ್ನು ಅಲ್ಲಿಂದ ಪಡೆಯುವುದು ಬಹು ಕಷ್ಟವಾಗುತ್ತಿತ್ತು. ಹೀಗೆ ಜರ್ಮನರ ಮುಷ್ಟಿ ಎಲ್ಲಕಡೆ ಓಡಾಡುತ್ತಿತ್ತು. ಅವರ ಗಮನ ಅತಿಯಾಗಿ ಎಲ್ಲೆಲ್ಲೋ ಹರಡಿಹೋಗಿತ್ತು. ಬ್ರಿಟನ್ನಿನ ಸಾಮಾನ್ಯ ಜನತೆಯ ಗಡಸುತನ ಪ್ರಖ್ಯಾತವಾಗಿತ್ತು. ಈ ಕಾರ್ಯಕ್ಕೆ ಜರ್ಮನಿಗೆ ಒಂದು ಮಿಲಿಯನ್ ಜನರೇ ಬೇಕಾಗಬಹುದಾಗಿತ್ತು. ಆದರೆ ಅಲ್ಲಿ ಈ ಕಾರ್ಯಕ್ಕೆ ಕಳುಹಿಸಲು ಕಾಲುಮಿಲಿಯನ್ನಿನಷ್ಟೂ ಜನರಿರಲಿಲ್ಲ. ಯುದ್ಧ ಕೈದಿಗಳಿಗಾಗಿ ಒಂದು ಶಿಬಿರವನ್ನಾಗಿ ಬ್ರಿಟನ್ನನ್ನು ಉಪಯೋಗಿಸಬಹುದೆಂದು ಅವರೆಂದುಕೊಂಡರು. ಕಡೆಗೂ ಇಂಗ್ಲೆಂಡು ನಾಜಿಗಳಿಗೆ ಬಂದೀಖಾನೆ ಶಿಬಿರವೇ ಆಯಿತು.

ಹಿಟ್ಲರನ ಆಡಳಿತ ಬ್ರಿಟನ್ನಿನ ದವಡೆಗಳಿಂದ ತನ್ನ ತಲೆಯನ್ನು ಹೊರಗಿಟ್ಟುಕೊಂಡಿತಾದರೂ ಲಂಡನ್ನಿನ ಜನತೆಯ ಮನೋಸ್ಥೈರ್ಯದ ಮೇಲೆ ಬಲವಾದ ದಾಳಿ ನಡೆಸತೊಡಗಿತು. ಲಂಡನ್ನಿನಲ್ಲಿ ಎಲ್ಲ ತರಹೆಯ ಜನರೂ ಇದ್ದು ಇವರಲ್ಲಿ ಬಹು ಜನರಿಗೆ ಅಷ್ಟೇನೂ ವಿದ್ಯೆ ಇರಲಿಲ್ಲ. ಆದರೆ ಇವರೆಲ್ಲ ಒಳ್ಳೆ ಗಟ್ಟಿಗರಾಗಿದ್ದರು ಹೀಗೆ ಬ್ರಿಟನ್ನಿನ ಕಾಳಗ ಮಾಡಲಾಯಿತು. ಬ್ರಿಟನ್ನಿನ ವಾಯುಪಡೆ ದಿನದಿನಕ್ಕೆ ಉತ್ತಮಗೊಳ್ಳುತ್ತಾ ಹೋಯಿತು. 1940ರ ಸೆಪ್ಟೆಂಬರ್ 18ರ ವೇಳೆಗೆ 1867 ಶತ್ರು ವಿಮಾನಗಳನನ್ನು ಹೊಡೆದುಕೆಡವಲಾಯಿತು. ಈ ಕಾರ್ಯದಲ್ಲಿ 621 ಬ್ರಿಟಿಷ್ ವಿಮಾನಗಳು ನಾಶವಾದವು. 600ಕ್ಕೂ ಕಡಿಮೆ ಬ್ರಿಟಿಷ್ ವೈಮಾನಿಕರು ಮರಣ ಹೊಂದಿದರು. ಉಳಿದವರೆಲ್ಲ ಪ್ಯಾರಾಷ್ಯೂಟ್ ಮಾರ್ಗವಾಗಿ ಇಳಿದುಬಂದು ಪುನಃ ಯುದ್ಧಕ್ಕೆ ಸಿದ್ಧರಾದರು. ಆದರೆ ಲಂಡನ್ನಿನ ನಾಗರಿಕರು ಇದಕ್ಕಿಂತ ಹೆಚ್ಚು

ಕಷ್ಟಪಟ್ಟರು. ನವೆಂಬರ್ 5ರ ವೇಳೆಗೆ 14000 ಜನ ಸತ್ತರು. 20000 ಜನ
ಗಾಯಗೊಂಡರು. ಇದರಲ್ಲಿ ಐದನೇನಾಲ್ಕು ಭಾಗ ಲಂಡನ್ನಿನವರು. ಗಿಲ್ಡ್‌ಹಾಲ್
ಕಟ್ಟಡ ಹಾಳಾಯಿತು. ಸರ್ ಕ್ರಿಸ್ಟೋಫರ್‌ರೆನ್ ಕಟ್ಟಿದ ಚರ್ಚುಗಳಲ್ಲಿ ಎಂಟು
ಚರ್ಚುಗಳು ನಾಜಿಗಳ ಸಾಂಸ್ಕೃತಿಕ ಹೋರಾಟದಲ್ಲಿ ಧ್ವಂಸವಾದುವು. ಚರ್ಚಿಲ್ಲರು
ಎಲ್ಲರ ಪರವಾಗಿ ಮಾತನಾಡುತ್ತಾ "ನಮಗೆ ಸಲಕರಣೆಗಳನ್ನು ಕೊಡಿ, ನಾವು ಕೆಲಸ
ಮುಗಿಸುತ್ತೇವೆ" ಎಂದು ಅಮೆರಿಕಕ್ಕೆ ಹೇಳಿದರು. ಏಕೆಂದರೆ ಅಮೆರಿಕ ಇವೆಲ್ಲವನ್ನೂ
ದೂರ ಇದ್ದುಕೊಂಡು ನೋಡುತ್ತಾ ಬ್ರಿಟನ್ನನ್ನು ಸುಮ್ಮನೆ ಅತಿಯಾಗಿ ಹೊಗಳು
ತ್ತಿತ್ತು. ಈ ಹೋರಾಟದಲ್ಲಿ ಸಹಾಯಮಾಡುವ ಯಾವ ಉದ್ದೇಶವೂ ಅದಕ್ಕೆ ಇದ್ದಂತೆ
ತೋರುತ್ತಿರಲಿಲ್ಲ. ಇಂಗ್ಲೆಂಡನ್ನು ನಾಶಮಾಡುವುದರಲ್ಲಿ ತಾವೂ ಪಾಲ್ಗೊಳ್ಳು
ತ್ತೇವೆಂದು ಕೇಳಿಕೊಂಡು ಅಕ್ಟೋಬರಿನಲ್ಲಿ ಇಟ್ಯಾಲಿಯನ್ನರು ಈ ಹೋರಾಟಕ್ಕೆ
ಸಹಾಯಮಾಡಿದರು.

ಆದರೆ 1941ರ ಡಿಸೆಂಬರ್ ಏಳರಂದು ಅರ್ಥಗರ್ಭಿತವಾದುದೂ ಬುದ್ಧಿವಂತಿಕೆ
ಯಿಂದ ಕೂಡಿದ್ದೂ ವಿಶಾಲವ್ಯಾಪ್ತಿಯುಳ್ಳದ್ದೂ ಆದ ವಿಷಯ ಬೆಳಕಿಗೆ ಬಂದಿತು.
ಅಮೆರಿಕನ್ನರು ಮತ್ತು ಬ್ರಿಟಿಷರಿಗೆ ಹೀಗಾಗಬಹುದೆಂಬ ಊಹೆಯೇ ಇರಲಿಲ್ಲ.
ಏಷ್ಯದಲ್ಲಿ ಅನೇಕ ವರ್ಷಗಳಿಂದ ಯೂರೋಪಿಯನ್ನರ ವಿರುದ್ಧ ಒಂದೇ ಸಮನೆ
ಪ್ರಚಾರ ನಡೆದಿತ್ತು. ಜಪಾನೀಯರ ಜೀವಂತಿಕೆಯುಳ್ಳ ಸೂಕ್ಷ್ಮ ಹಾಗೂ ಆಕ್ರಮಣ
ಕಾರಿ ಕಲ್ಪನಾಶಕ್ತಿಯಲ್ಲಿತ್ತು ಇದರ ಕೇಂದ್ರ. ಪಾಶ್ಚಿಮಾತ್ಯರಿಗೆ ತಿಳಿಯುತ್ತಿದ್ದ
ಏಷ್ಯದ ಭಾಷೆ ಹಿಂದೂಸ್ತಾನಿಯಲ್ಲಿ ಈ ವಿಷಯ ಕುರಿತು ಹೊರಬಂದುದು ಬಹುಸ್ವಲ್ಪ
ಇಂಡಿಯದಿಂದ ಫಿಲಿಪೈನ್ಸ್‌ನವರೆಗಿನ ಪೌರ್ವಾತ್ಯ ದೇಶಗಳ ಸ್ಥಳೀಯ ಭಾಷಾ ಪತ್ರಿಕಾ
ಪ್ರಪಂಚದಲ್ಲಿ ಈ ಪ್ರಚಾರ ಚೆನ್ನಾಗಿ ನಡೆದಿತ್ತು. ಚೀನಾದೇಶವಿಡೀ ಈ ಪ್ರಚಾರ
ನಡೆಯಿತು. ಪುನರುಜ್ಜೀವನಗೊಳ್ಳುತ್ತಿದ್ದ ಏಷ್ಯನ್ ಪ್ರಪಂಚಕ್ಕಾಗಿ ಹೋರುವ
ವೀರನಾಯಕನೆಂಬ ಚಿತ್ರ ಈ ಎಲ್ಲ ಕಡೆಗಳಲ್ಲೂ ಜಪಾನಿಗೆ ಸಂದಿತ್ತು. ಕಡೆಗೆ
ಭೂಗ್ರಹದಲ್ಲಿ ಎಲ್ಲರಿಗಿಂತ ಪ್ರಬಲ ಸ್ಥಾನ ಪಡೆದ ಭಾಗ್ಯ ಈ ಜನತೆಯದು ಎಂದೂ
ಹನೊಲುಲು ಮತ್ತು ಕ್ಯಾಲಿಫೋರ್ನಿಯದ ಮೂಲಕ ಏಷ್ಯದ ಈ ಬಲ ಆಗಲೇ
ಪೂರ್ವದಿಂದ ಪಶ್ಚಿಮಕ್ಕೆ ಹೋಗಿದೆ, ಅಲ್ಲಿ ಅಮೆರಿಕೀಕರಣ ಹೊಂದಿದ ಪ್ರಬಲ
ಜಪಾನೀ ಜನತೆಯಿದೆ, ಇವರಲ್ಲಿ ಅನೇಕ ಗೂಢಚಾರರೂ ರಹಸ್ಯ ಕಾರ್ಯಕರ್ತರೂ
ಇದ್ದಾರೆ, ಇವರೆಲ್ಲ ತಮ್ಮ ಮೂಲ ರಾಷ್ಟ್ರಸಂಪ್ರದಾಯಗಳಿಗೆ ಹಿಂದಿರುಗಿ ಬರುತ್ತಾರೆ
ಎಂದೂ ಪ್ರಚಾರ ಮಾಡಲಾಗುತ್ತಿತ್ತು. ಜರ್ಮನರಲ್ಲೇ ಆಗಲಿ ಇತರ ಜಪಾನೀಯರಲ್ಲೇ
ಆಗಲಿ ಜಪಾನೀಯರಿಗೆ ಸ್ವಲ್ಪವೂ ಗೌರವಭಾವವಿರಲಿಲ್ಲ. ಈ ಗಿಡ್ಡ ಹಳದಿ ಜನರನ್ನು
ಕಂಡರೆ ಮೊದಮೊದಲು ಹಿಟ್ಲರನಿಗೂ ಅಷ್ಟೇ ಕೀಳುಭಾವನೆಯಿತ್ತು.

ಎಷ್ಟೋ ಕಾಲದಿಂದ ಸಿದ್ಧವಾಗುತ್ತಿದ್ದ ಈ ಯೋಜನೆ ಇದ್ದಕ್ಕಿದ್ದಂತೆ
ಪ್ರಪಂಚದ ಮುಂದೆ ಪ್ರಕಟವಾಗಿದ್ದು 1941ರ ಡಿಸೆಂಬರ್ ಏಳರಂದು. ಆಗಲೂ ಸಹ

ಜಪಾನೀ ರಾಯಭಾರಿಗಳು ವಾಷಿಂಗ್‌ಟನ್ನಿನಲ್ಲಿ ಮಾತುಕತೆ ನಡೆಸುತ್ತ ಅಮೆರಿಕದ ಸಂಶಯ ಪರಿಹರಿಸುವುದರಲ್ಲಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನಗಳ ಫೆಸಿಫಿಕ್ ಸಾಗರದ ನೌಕಾಪಡೆ ಪರ್ಲ್‌ಹಾರ್ಬರಿನ ನೌಕಾನೆಲೆಯಲ್ಲಿ ಆರಾಮವಾಗಿ ವಿಶ್ರಾಂತಿಯಲ್ಲಿತ್ತು. ಹೀಗಿದ್ದಾಗ ಜಪಾನೀಯರು ಹಠಾತ್ತಾಗಿ ಅವರಮೇಲೆರಗಿದರು. ಎರಡು ಯುದ್ಧನೌಕೆಗಳು, ಮೂರು ಡಿಸ್ಟ್ರಾಯರ್‌ಗಳು ಮತ್ತು ಇತರ ಎರಡು ನೌಕೆಗಳು ನಾಶವಾದುವು ಅಥವಾ ಕಾಣೆಯಾದುವು. ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಡನೆ ತಾನು ಯುದ್ಧ ಪ್ರಾರಂಭಿಸಿರುವುದಾಗಿ ಜಪಾನ್ ಘೋಷಿಸಿತು. ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್ ಎಂಬ ನೌಕೆಗಳು ವಿಮಾನಗಳ ಸಂರಕ್ಷಣೆಯಿಲ್ಲದುದರಿಂದ (!!) ಜಪಾನೀ ವಿಮಾನಗಳು ಪ್ರಯೋಗಿಸಿದ ಟಾರ್ಪೆಡೋಪೆಟ್ಟಿನಿಂದ ಮುಳುಗಿಹೋದುವು. 'ವಿಮಾನಗಳ ಸಂರಕ್ಷಣೆಯಿಲ್ಲದುದರಿಂದ' ಮತ್ತೊಮ್ಮೆ ಈ ಪದಗಳನ್ನು ನೆನೆಸಿಕೊಳ್ಳೋಣವೇ ? ಈ ಅಪಘಡಕ್ಕೆ ಯಾರು ಕಾರಣರೆಂದು ಇನ್ನೂ ಇದುವರೆಗೂ ತಿಳಿದುಬಂದಿಲ್ಲ.

2. ಜೀವದ ಸ್ವಭಾವದ ಬಗೆಗೆ ಇಂದೇನು ತಿಳಿದಿದೆ?

1940ರ ವರೆಗಿನ ಚರಿತ್ರೆಯನ್ನು ಈ ಪುಸ್ತಕದ 70ನೆಯ ಅಧ್ಯಾಯದಲ್ಲಿ ಪೂರ್ತಿಮಾಡಲಾಯಿತು. ಅಂದಿನಿಂದ ಇದುವರೆಗೆ ಅದೆಷ್ಟೋ ಮಹತ್ತರ ಘಟನೆಗಳು ನಡೆದಿವೆ. ತಿಳಿವಳಿಕಸ್ಥರಾದವರಿಗೆ ಇವುಗಳನ್ನು ನೋಡಿದರೆ ಮಾನವ ಕುಲದ ಚರಿತ್ರೆಯು ಮುಗಿದುಹೋಗುವುದರಲ್ಲಿದೆ, ಮಾನವ ಜಾತಿಗಳಲ್ಲಿ ಹೋಮೋ ಸೇಪಿಯನ್ಸ್ ಅಂದರೆ 'ಪ್ರಜ್ಞಾವಂತ ಮಾನವ'ನೆಂದು ತನಗೆ ತಾನೇ ನಾಮಕರಣ ಮಾಡಿಕೊಂಡ ಆಧುನಿಕ ಮಾನವನ ಇಂದಿನ ಅವತಾರ ಮುಗಿದು ಹೋಗುವುದರಲ್ಲಿದೆ ಎನಿಸುತ್ತದೆ. ಇವನ ಗ್ರಹಗತಿಗಳು ಚೆನ್ನಾಗಿಲ್ಲ. ಮಾನವಕುಲದ ಮೇಲೆ ಕವಿಯುತ್ತಿರುವ ದುರದೃಷ್ಟವನ್ನು ಎದುರಿಸಲು ಈತನಿಂದಾಗದು. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯವಿರುವ ತನಗಿಂತ ಉತ್ತಮವಾದ ಜೀವಕ್ಕೆ ಇವನು ಸ್ಥಳ ತೆರವು ಮಾಡಿಕೊಡಬೇಕು.

ಈ ಹೊಸ ಪ್ರಾಣಿ ಸಂಪೂರ್ಣವಾಗಿ ಬೇರೆ ಜಾತಿಗೆ ಸೇರಿದ್ದಾಗಿರಬಹುದು ಅಥವಾ ಹೋಮಿನಿಡೇ ವರ್ಗದ್ದೇ ಬದಲಾವಣೆ ಹೊಂದಿದ ಹೊಸ ಶಾಖೆಗೆ ಸೇರಿದ್ದಾಗಬಹುದು. ಅಥವಾ ಈಗ ಇರುವ ಮಾನವ ಕುಲದ್ದೇ ನೇರಸಂತತಿಯದೇ ಆಗಬಹುದು. ಏನೇ ಆಗಲಿ ಅದು ಈಗಿನ ಮನುಷ್ಯ ಜಾತಿಗೆ ಸೇರಿದ್ದಾಗಿರುವುದಿಲ್ಲ. ಮಾನವ ಕಡಿದಾದ ಎತ್ತರಕ್ಕೆ ಏರಿಹೋಗಬೇಕು ಇಲ್ಲವೇ ಅಷ್ಟೇ ಕಡಿದಾದ ಇಳಿಜಾರಿನಲ್ಲಿ ಜಾರಿ ಬೀಳಬೇಕು. 'ಹೊಂದಿಕೊ ಇಲ್ಲವೇ ಹಾಳಾಗು' ಇದೇ ಎಂದಿನಂತೆ ಇರುವಂತೆ ಇಂದಿಗೂ ಪ್ರಕೃತಿಯ ದಯಾದಾಕ್ಷಿಣ್ಯರಹಿತ ಆಜ್ಞೆ.

ನಮ್ಮಲ್ಲನೇಕರಿಗೆ 'ಏಳು ಇಲ್ಲ ಬೀಳು' ಈ ತತ್ವ ರುಚಿಸುವುದಿಲ್ಲ ನಮ್ಮ

ಸ್ಥಾನವನ್ನು ಇಲಿಗಳಿಗೋ ಅಥವಾ ಸ್ಟ್ರೆಪ್ಟೋಕಾಕ್ಕೈನಂತಹ ಸೂಕ್ಷ್ಮಜೀವಿಗಳಿಂದ ಸಜ್ಜಾಗಿ ನಮ್ಮನ್ನು ಮುಗಿಸಲು ಮಾನವ ಜಗತ್ತಿಗೆ ನುಗ್ಗಿಬರುವ ಕೊಳಕಾದ ವಿಕಾರ ರೂಪದ ಪ್ರಾಣಿಗಳಿಗೋ ಬಿಟ್ಟುಕೊಡುವ ಪ್ರಶ್ನೆಬಂದಾಗ ಜೀವಪ್ರಪಂಚದ ದೀರ್ಘ ಪರಂಪರೆಯಲ್ಲಿ ನಮ್ಮ ಸ್ವಂತಿಕೆಯನ್ನುಳಿಸಿಕೊಂಡು ಬರಲು ಅನುವಾದ ಶಕ್ತಿಯೇ ಪಿಡಿದೇಳುತ್ತದೆ. ಮಾನವವರ್ಗದ ಅವಸಾನವನ್ನು ನಾವೂ ವೀಕ್ಷಿಸಬಯಸುತ್ತೇವೆ. ಮಾನವನಸ್ಥಾನಕ್ಕೆ ಅಂತಿಮವಾಗಿ ಬರುವ ಅವನ ಅನಂತರದ 'ಸೃಷ್ಟಿಯ ನಾಯಕ' ನೆಲೆಗೊಳ್ಳುವುದರಲ್ಲಿ ನಮಗೂ ಒಂದು ಅಧಿಕಾರವಾಣಿ ಬೇಕೆಂದು ಆಶಿಸುತ್ತೇವೆ. ಈಡಿಪಸ್ಸನಂತೆ ಈ ಉತ್ತರಾಧಿಕಾರಿಮಾಡುವ ಮೊಟ್ಟಮೊದಲ ಕಾರ್ಯ ಪಿತೃಹತ್ಯೆ ಆಗಿದ್ದರೂ ಪರವಾಗಿಲ್ಲ.

ಈ ನಮ್ಮ ಗ್ರಹದಲ್ಲಿ ಎಲ್ಲ ಕಡೆಯಲ್ಲೂ ಮಾನವನ ಕುರುಹುಗಳು ಮತ್ತು ಸಾಧನೆಗಳು ಹರಡಿಹೋಗಿವೆ. ಮಾನವಜನ್ಯ ಉತ್ಪನ್ನಗಳ ಈ ವಿಶಾಲಹರವು ಕಳೆದ ಒಂದುಲಕ್ಷ ವರುಷಗಳ ಸಾಧನೆಯೆಂದು ಅರ್ಥಮಾಡಿಕೊಳ್ಳಲು ನಮ್ಮಲ್ಲನೇಕರಿಗೆ ಆಳವಾಗಿ ಚಿಂತಿಸಿದರೆ ಮಾತ್ರ ಸಾಧ್ಯ. ಸೌರವ್ಯೂಹದಲ್ಲಿ ಈಗ ಮೂರುಸಾವಿರ ಮಿಲಿಯನ್ ವರ್ಷಗಳ ಹಿಂದೆಯೇ ವಿಕಿರಣಕ್ರಿಯೆಯುಳ್ಳ ವಸ್ತುಗಳು ಮತ್ತು ರೇಡಿಯಮ್ಮಿನ ಶಿಥಿಲೀಕರಣ ಮೊದಲಾಗಿರಬೇಕು ಮತ್ತು ಭೂಗ್ರಹದ ಮೇಲೆ ಜೀವ ನೆಲೆನಿಲ್ಲಲು ಸಾಧ್ಯವಾಗುವುದಕ್ಕೆ ಮುಂಚೆಯೇ ಅದೆಲ್ಲ ನಿಂತುಹೋಗಿರಬೇಕು. ಕೇಂಬ್ರಿಡ್ಜಿನ ಕ್ಯಾವೆಂಡಿಷ್ ಪ್ರಯೋಗಶಾಲೆಯ ಡಾ. ಎನ್. ಎಚ್. ಫೆದರ್ ಹೀಗೆನ್ನುತ್ತಾರೆ.

ವಿಕಿರಣ ಕ್ರಿಯಾಶಕ್ತಿ ಇರುವ ಜೀವಜಾತಿಗಳೂ 'ಸ್ವಾಭಾವಿಕ' ಎಂದೇ ಹೇಳಬಹುದು. ಏಕೆಂದರೆ ಈ ವಿಶ್ವದ ವಿಕಾಸಕ್ರಿಯೆಯ ಯಾವುದೋ ಹಂತದಲ್ಲಿ ಅಂತಹ ಜಾತಿಗಳೂ ಇದ್ದಿರಬೇಕು. ಏಕೆ, ಈಗಲೂ ಪ್ರಾಯಶಃ ಅಧಿಕ ತಾಪ ಇರುವ ನಕ್ಷತ್ರಗಳ ಒಳಭಾಗದಲ್ಲಿ ಅಂಥವು ಉತ್ಪತ್ತಿಯಾಗಿ ಈಗಲೂ ಇರಬಹುದೂ ಆದರೆ ಸೂರ್ಯನಿಂದ ಬೇರೆಯಾದಂದಿನಿಂದ ಭೂಗ್ರಹದಲ್ಲಿ ಅಂಥಸ್ಥಿತಿ ಏರ್ಪಡಿಸಲಿಲ್ಲ. ಸೂರ್ಯನಿಂದ ಬೇರೆಯಾದಾಗಿನಿಂದ ಇದುವರೆಗೆ ಅಂದರೆ 3000 ಮಿಲಿಯನ್ ವರ್ಷಗಳ (3×10^7 ವರ್ಷಗಳು) ಕಾಲ ಭೂಮಿಯಲ್ಲಿ ಉಳಿದುಕೊಂಡು ಬಂದಿರುವ ವಿಕಿರಣ ಕ್ರಿಯೆಯುಳ್ಳ ಮೂಲವಸ್ತುಗಳು ಮಾತ್ರ ಈ ಗ್ರಹದ ನಿವಾಸಿಗಳಾದ ನಮಗೆ ಸ್ವಾಭಾವಿಕ ಎನಿಸುತ್ತವೆ.

ಈ ಸಂಕ್ಷಿಪ್ತ ಚರಿತ್ರೆಯ ಮೊದಲ ಅಧ್ಯಾಯಗಳಲ್ಲಿ 1940ರ ಹೊತ್ತಿಗೆ ಈ ಗ್ರಹದ ಜೀವರಾಶಿಯ ಚರಿತ್ರೆ ಎಷ್ಟು ತಿಳಿದಿತ್ತೋ ಅಷ್ಟನ್ನು ಹೇಳಿದೆ. ಈಗ ಡಾ. ಫೆದರ್ ಅಧಿಕಾರವಾಣಿಯಿಂದ ಹೇಳುವ ಸಮಯ ಮಿತಿ ಆಗ ಸ್ಪಷ್ಟವಾಗಿರಲಿಲ್ಲ. ಇನ್ನು ಜೀವದ ಸ್ವಭಾವವನ್ನು ಕುರಿತು ಬಹುಕ್ರಾಂತಿಕಾರಿಯೆನಿಸುವ ಸಂಗತಿಗಳು ಬಯಲಿಗೆ ಬರುತ್ತಿವೆ. ಮನುಷ್ಯಪ್ರಾಣಿ ಕಾಣಿಸಿಕೊಂಡದ್ದಕ್ಕೆ ಮೊದಲಿನಿಂದ ಅದೇ

ಕತೆಯನ್ನೆತ್ತಿಕೊಂಡು ಕಡೆಯ ಈ ಅಧ್ಯಾಯದಲ್ಲಿ ಈಗಿನ ಬುದ್ಧಿಶಾಲಿ ವೀಕ್ಷಕರ ನೂತನ ಗ್ರಹಿಕೆಗಳ ಬೆಳಕಿನಲ್ಲಿ ತಿರುಗಿ ಹೇಳಲಾಗುತ್ತದೆ. ಅನುಕೂಲಕ್ಕೋಸ್ಕರ ಈ ಅಧ್ಯಾಯವನ್ನು ಹಲವು ಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ಶಿರೋನಾಮೆ ಗಳನ್ನು ಕೊಡಲಾಗಿದೆ. ವಸ್ತುತಃ ನೋಡಿದರೆ ಇದೂ ಮೊದಲು ಹೇಳಿದ ಕತೆಯೇ ಆದರೂ ಈ ಹೊಸ ಕಥನದ ಆಯಾಮಗಳು ಬಹು ವಿಶಾಲವಾದುವು. ಸಮಯದ ಚೌಕಟ್ಟೂ ಸಹ ಸ್ಥಳದ ಚೌಕಟ್ಟಿನಂತೆಯೇ. ಅದೂ ನಮ್ಮ ಮನಸ್ಸುಗಳಿಗೆ ಚೌಕಟ್ಟು ಹಾಕಿಕೊಡುವ ಒಂದು ಚಿಂತನೆ. ಈ ಚೌಕಟ್ಟಿನಲ್ಲಿಯೇ ನಾವು ಯೋಚಿಸುತ್ತೇವೆ ಆದರಲ್ಲೇ ಒಂದು ವಿಧದ ಭ್ರಮೆಯನ್ನೂ ಕಂಡುಕೊಂಡು ಕಾಲದ ಅನಂತತೆ ಮತ್ತು ಮಿಥ್ಯತ್ವದ ಬಗೆಗೆ ಮಾತನಾಡುತ್ತೇವೆ. ಆದರೆ ಇವು ಏನೂ ತಿರುಳಿಲ್ಲದ ನಕಾರಾತ್ಮಕ ಶಬ್ದಗಳು. ನಮ್ಮ ವಾಸ್ತವಿಕ ಊಹಾಶಕ್ತಿ 'ರೇಡಿಯಂಗಡಿಯಾರ' ಮೊದಲ ಘಂಟನಾದದಾಚೆಗೆ ಪ್ರವೇಶಿಸಲಾರದು.

ಹಂತಹಂತವಾಗಿ ಬದಲಾಯಿಸುತ್ತಾ ಬಂದ ಈ ಗ್ರಹ ಜೀವ ಎಂಬ ಈ ವಿಚಿತ್ರ ಅಭ್ಯಾಗತ ಉಳಿದುಕೊಳ್ಳಲು ಸಾಧ್ಯವಾಗುವ ವಸತಿಯಾಯಿತು. ಆಗ ಸೂರ್ಯನ ಸುತ್ತ ಈ ಗ್ರಹ ಅದೆಷ್ಟು ದೂರದಲ್ಲಿ ಯಾವ ವೇಗದಲ್ಲಿ ಸುತ್ತುತ್ತಿತ್ತೆಂಬುದು ನಮಗೆ ತಿಳಿಯದು. ಅಷ್ಟರಲ್ಲಿ ಈ ಗ್ರಹಕ್ಕೆ ಒಂದು ಉಪಗ್ರಹವೂ ಬಂದಿತು. ಈ ಉಪಗ್ರಹದ ವೇಗ ಉಬ್ಬರದ ಅಲೆಯ (Tidal wave) ಪರಿಣಾಮವಾಗಿ ಕಡಿಮೆಯಾಗುತ್ತಾ ಬಂದು ಕಡೆಗೆ ಅದು ಖಾಯಮ್ಮಾಗಿ ತನ್ನೊಂದು ಮುಖವನ್ನು ತಾಯಿ ಭೂಮಿಯ ಕಡೆ ತಿರುಗಿಸಿಕೊಂಡಿತು. ಹೀಗಾಗಿ ಚಂದ್ರನ ಒಂದು ತಿಂಗಳು ಒಂದು ದಿನಕ್ಕೆ ಸಮ. ನಮ್ಮ ಗ್ರಹದ ವೇಗ ಕೂಡ ಹೀಗೆಯೇ ಸೂರ್ಯನಿಗೆ ಸಂಬಂಧಿಸಿದಂತೆ ಕಡಿಮೆಯಾಗು ತ್ತಿರಬಹುದು. ಅಂದರೆ ಭೂಮಿಯ ಪ್ರಥಮ ದಿನಗಳಲ್ಲಿ ವರ್ಷಗಳು ಮತ್ತು ಜೀವ ಜಗತ್ತಿನ ವಿವಿಧ ಯುಗಗಳು ಇಂದಿನ ಈ ನಿದಾನಗತಿಗೆ ಹೋಲಿಸಿದರೆ ಅತಿವೇಗವಾಗಿ ಕಳೆದುಹೋಗಿರಬೇಕು. ಆಗ ಈ ಯಂತ್ರದ ಬ್ರೇಕುಗಳು ದುರ್ಬಲವಾಗಿದ್ದುವು. ರಭಸದ ಯುಗದಲ್ಲಿ ಯಾವಾಗಲೋ ದಟ್ಟವಾದ ಆವಿಯ ಮೋಡಗಳ ಮುಸುಕಿನ ಆಶ್ರಯದಲ್ಲಿ ಜೀವ ಎಂದು ನಾವೀಗ ಕರೆಯುವ ತಾಳಬದ್ಧವಾಗಿ ಪುನರಾವರ್ತಿಸುವ ಘಟನೆಗಳ ಶ್ರೇಣಿಗಳು ಮೊದಲಾದುವು.

ಆಳವಾದ ಸಮುದ್ರದ ತಳದ ನಿರಂತರ ಅಂಧಕಾರದಲ್ಲಿ ಒಣನೆಲದ ಕಠೋರ ಶುಷ್ಕತೆಯಲ್ಲಿ ಇಂತಹ ಲಯಪೂರ್ಣ ಘಟನೆಗಳಿಗೆ ಅವಕಾಶವೇ ಇರಲಿಲ್ಲ. ಪ್ರೊಫೆಸರ್ ಜೆ. ಬಿ. ಎಸ್. ಹಾಲ್ಡೇನರು ತಮ್ಮ ಜನಪ್ರಿಯ ಲೇಖನಗಳಲ್ಲೊಂದರಲ್ಲಿ ಬಹು ಚೆನ್ನಾಗಿ ವರ್ಣಿಸಿರುವಂತೆ ಇಂಥ ಅವಕಾಶಗಳಿದ್ದುದು ಸಮುದ್ರದ ಉಬ್ಬರ ವಿಳಿತಗಳಿಗೆ ಒಳಪಡುವ ನೆಲದಲ್ಲಿ ಮಾತ್ರ. ಅಲ್ಲಿ ಕತ್ತಲು, ಬೆಳಕು ಒಂದನ್ನೊಂದು ಅನುಸರಿಸಿ ಬರುತ್ತಿದ್ದುವು. ಅಲ್ಲಿಯೇ ಜಡಪದಾರ್ಥದಲ್ಲಿನ ವಿಚಿತ್ರ ತುಡಿತವಾದ ಜೀವ ಹುಟ್ಟಿದ್ದು. ಬಂಡೆಗಳ ದಾಖಲೆಗಳಲ್ಲಿ ಒಂದೇ ಸಮನೆ ಹೊಸ ವಿಷಯಗಳಿಗಾಗಿ

ಹುಡುಕುತ್ತಲೇ ಇರುವ ಲುಪ್ತವಂಶಜೀವಿಶಾಸ್ತ್ರಜ್ಞನಿಗೆ ಅನಿರ್ದಿಷ್ಟಕಾಲ ನಡೆದ ಜೀವಿರಹಿತವಾದ ಒಂದು ಯುಗದ ಸೂಚನೆಗಳು ಕಾಣಬರುತ್ತವೆ. ಅದರ ನಂತರವೇ ಸೂರ್ಯರಶ್ಮಿಗಳು ಹಬೆಯ ಮುಸುಕನ್ನು ಭೇದಿಸಿ 'ಜೀವ'ವೆಂಬ ಕ್ರಿಯೆಯ ಪ್ರಾರಂಭೋತ್ಸವ ಮಾಡಿದ್ದು.

ಎಂದೋ ನಡೆದ ಈ ತಾಳಬದ್ಧ ಕ್ರಿಯೆಗಳ ವಿವರಗಳನ್ನು ಇನ್ನೂ ನಿರ್ಧರಿಸಲು ಆಗಿಲ್ಲ. ಇವು ಅತ್ಯಂತ ಮೂಲಭೂತ ಕ್ರಿಯೆಗಳಾಗಿದ್ದುವು. ಇವುಗಳನ್ನು ಸ್ವಲ್ಪವಾದರೂ ಹೋಲುವಂಥ ಕ್ರಿಯೆಗಳನ್ನು ಆಧುನಿಕ ಜೀವಿಗಳ ಅಂಗಾಂಶಗಳಲ್ಲಿ ನಡೆಯುವ ಸೂಕ್ಷ್ಮದರ್ಶಿನಿಯಿಂದ ಮಾತ್ರ ತಿಳಿದುಬರುವಂತಹ ಕ್ರಿಯೆಗಳಲ್ಲೋ ಅಥವಾ ಸಮುದ್ರದ ಮೇಲ್ಪದರದಲ್ಲೋ ಕಾಣಬೇಕು. ಆ ಸಮಯದಲ್ಲಿ ಡಯಾಟಮುಗಳು ಮತ್ತಿತರ ಅಂಥದೇ ಜೀವಿಗಳು ಅಪಾರವಾಗಿ ಬೆಳೆದುವು. ಬಹುಬೇಗನೇ ಅಲ್ಲಿ ಅನುವಂಶಿಕ ದ್ರವ್ಯದಲ್ಲಿ ಮಾರ್ಪಾಟಾಗಿ ಹಸುರು ಪದಾರ್ಥ ಕ್ಲೋರೋಫಿಲ್ ಉತ್ಪತ್ತಿಯಾಯಿತು. ಸೂರ್ಯನ ಬೆಳಕಿನಲ್ಲಿ ಬೆಳಕಿರುವಷ್ಟು ಕಾಲವೂ ಅರೆ-ಶಾಶ್ವತವಾದ ಸಂಯುಕ್ತವನ್ನು ಈ ಕ್ಲೋರೋಫಿಲ್ ತಯಾರಿಸುತ್ತಿತ್ತು. ಹೀಗೆ ಬಂಡೆಗಳ ದಾಖಲೆಯಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಯಾಗಿ ಜೀವಾವಶೇಷಗಳೇ ಇಲ್ಲದಿದ್ದ ದಾಖಲೆಗಳಲ್ಲಿ ಮುಂದೆ ಸಮುದ್ರದ ಉಬ್ಬರವಿಳಿತಗಳಲ್ಲಿರುವಂಥ ಅನೇಕ ರೀತಿಯ ಜೀವಿಗಳ ಉಳಿಕೆಗಳು ಕಂಡು ಬರುತ್ತವೆ.

ಇವುಗಳಲ್ಲಿ ಎಷ್ಟೇ ವೈವಿಧ್ಯ ವ್ಯತ್ಯಾಸಗಳಿದ್ದರೂ ಎಲ್ಲದರಲ್ಲೂ ಒಂದು ಸಾಮಾನ್ಯ ಪ್ರವೃತ್ತಿ ಕಂಡುಬರುತ್ತದೆ. ಅದೇ ಜೀವೋತ್ಸಾಹ, ತಮ್ಮ ಇರುವಿಕೆಯನ್ನು ಪ್ರತಿಪಾದಿಸುವ ಸ್ವಭಾವ. ಒಡ್ಡೊಡ್ಡಾದ ಈ ಪ್ರಾರಂಭಿಕ ಹಂತದಲ್ಲೂ 'ಬದುಕಿಗಾಗಿ ಹೋರಾಟ' ಇವುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಜೀವ ಚರಿತ್ರೆಯ ಮೂಲಭೂತ ಪಲ್ಲವಿಯಾಗಿದೆ ಇದು. ಹೀಗೇ ಈ ಪ್ರಥಮಹಂತಗಳಲ್ಲೇ ಜೀವಸಾಮಗ್ರಿ ಒಡೆದು ವಿವಿಧ ಬಿಡಿ ಚೂರುಗಳಾಗಿ ವಿವಿಧ ಸಂದರ್ಭಗಳನ್ನೆದುರಿಸುತ್ತಿದ್ದುವು. ಹೀಗೆ ಇವುಗಳಲ್ಲಿ ಕೆಲವು ಒಂದೆಡೆ ಒಣಗಿಹೋದರೂ, ಇನ್ನು ಯಾವ ವಿಧದಲ್ಲಿ ನಾಶವಾದರೂ ಮತ್ತೊಂದೆಡೆಯಲ್ಲಿ ಜೀವಸಹಿತ ಉಳಿಯಬಹುದು. ಈ ಬಿಡಿಜೀವಿಗಳಲ್ಲಿ ತಾವು ಸೇವಿಸುತ್ತಿದ್ದ ಆಹಾರದ ವಿರುದ್ಧವಾಗಲೀ ತಮ್ಮಲ್ಲೇ ಒಂದರ ಮೇಲೊಂದಾಗಲೀ ಯಾವುದೋ ಹೋರಾಟದ ಭಾವನೆ ಕಂಡುಬರುವುದಿಲ್ಲ. ಪರಸ್ಪರ ಸೇರಿದಾಗ ಎಲ್ಲ ಒಂದೇ ಎನ್ನುವಂತೆ ಪ್ರವಹಿಸುತ್ತವೆ. ಹಾಗೇ ತಿರುಗಿ ಬೇರೆ ಬೇರೆಯಾಗುತ್ತವೆ. ಈ ಮಿಲನದಿಂದ ಬಹುಶಃ ಪುನಶ್ಚೇತನಪಡೆದಂತೆ ಕಾಣುತ್ತವೆ. ಇಲ್ಲಿ ಲೈಂಗಿಕ ಭೇದದ ಪ್ರಶ್ನೆಯೇ ಇಲ್ಲ ಪರಸ್ಪರ ಸಮಾನರ ವ್ಯವಹಾರ ಇದು.

3. ಕುಟುಂಬದ ಹುಟ್ಟು

ಜೀವಿಗಳ ಚರಿತ್ರೆಯಲ್ಲಿ ಬಹು ಮುಂಚೆಯೇ ಎರಡು ರೀತಿಯ ವ್ಯಕ್ತಿಗಳಿರುವಂಥ

ಒಂದು ವ್ಯವಸ್ಥೆ ಏರ್ಪಟ್ಟಿತು. ಒಂದು ರೀತಿಯದು ಸಾಹಸ, ಪ್ರಯೋಗ, ಸಾವು ಇವಕ್ಕೆಲ್ಲಾ ಸಿದ್ಧವಾಗಿರುವಂಥದ್ದು. ಮತ್ತೊಂದು ರೀತಿಯದು ಜೀವಜಾತಿಯನ್ನು ಮುಂದುವರಿಸುವುದರಲ್ಲಿ ಮಗ್ನವಾಗಿರುವಂಥದ್ದು. ಈ ಗ್ರಹದಲ್ಲಿರುವ ಬಹುಕೋಶ ಜೀವಿಗಳಲ್ಲಿ ಅಧಿಕಾಂಶ ಜೀವಿಗಳ ಆಯುಸ್ಸಿನ ಪ್ರಾರಂಭ ಮತ್ತು ಅಂತ್ಯ ಗರ್ಭಕಟ್ಟಿದ ಅಂಡಾಣುಗಳ ರೂಪದಲ್ಲಿ ಆಗುತ್ತವೆ. ಹಲವು ಜಾತಿಗಳಲ್ಲಿ ದೇಹದಲ್ಲಿ ಮೊಗ್ಗೊಡೆದು ಆ ಮೊಗ್ಗು ಮುರಿದು ಸಂತಾನ ಬೆಳೆಯುತ್ತದೆ. ಮತ್ತೆ ಕೆಲವು ಜಾತಿಗಳಲ್ಲಿ ಕತ್ತರಿಸಿದ ಚೂರುಗಳಿಂದ ವಂಶ ಬೆಳೆಯಬಹುದು. ಹಸಿರು ನೊಣದಂತಹ ಕೆಲವು ಪ್ರಾಣಿಗಳಲ್ಲಿ ನಿರ್ಲಿಂಗ ರೀತಿ ಸಂತಾನೋತ್ಪತ್ತಿಯಾಗಬಹುದು. ಆದರೆ ಇಂಥ ಸಂತಾನೋತ್ಪತ್ತಿ ಮಾರ್ಗಗಳಲ್ಲಿ ಜೀವಜಾತಿಯಲ್ಲಿ ಏನೊಂದೂ ವ್ಯತ್ಯಾಸಕ್ಕೆ ಅಸ್ಪದವಿಲ್ಲದೆ ಒಂದೇ ರೀತಿಯಾಗಿದ್ದು ಹೊಂದಾಣಿಕೆ ಸಾಧ್ಯವಿಲ್ಲದೆ ಅಪಾಯಗಳಿಂದ ರಕ್ಷಣೆ ಇಲ್ಲದಂತಾಗುತ್ತದೆ. ಇಂಥ ಜೀವ ಜಾತಿಗಳು ಉಳಿದುಕೊಳ್ಳಬೇಕಾದರೆ ಏನಾದರೂ ಪುನಶ್ಚೇತನ ಆಗಬೇಕು. ಲುಪ್ತಜೀವಿಶಾಸ್ತ್ರದ ಮೊಟ್ಟಮೊದಲ ಅಧ್ಯಾಯಗಳಲ್ಲೇ ವ್ಯವಸ್ಥಿತವಾಗಿದ್ದಂತೆ ಕಂಡು ಬರುವ ಗಂಡು ಹೆಣ್ಣು ಎಂಬ ಪಾತ್ರಗಳ ವ್ಯವಸ್ಥೆಗೆ ಬದಲಾವಣೆಯಾಗಬೇಕು.

ಒಂದೇ ಒಳಜಾತಿಯಲ್ಲಿ ಸಹ ಜೀವನದ ಅವಶ್ಯಕತೆಗಳು ಪದೇ ಪದೇ ಬದಲಾಯಿಸುತ್ತಿದ್ದಂತೆ ಲೈಂಗಿಕ ವಿಶಾದೃಶ್ಯಗಳಲ್ಲೂ ಬದಲಾವಣೆಗಳಾಗುತ್ತವೆ. ಹುಲಿಯೊಂದು ನಮಗೆ ಎದುರಾಯಿತೆಂದರೆ ಅದು ಗಂಡೋ ಹೆಣ್ಣೋ ನಿರ್ಧರಿಸಲು ಯಾರೂ ಕಾಯುವುದಿಲ್ಲ ಎಂದಿಟ್ಟುಕೊಳ್ಳೋಣ. ಆದರೂ ಬೆಕ್ಕು, ಮೊಲ, ಮುಳ್ಳು ಹಂದಿ, ಗುಂಪಿನಲ್ಲಿರುವ ತೋಳ, ನೊಣ, ಹಲ್ಲಿ ಇವು ಯಾವುದರದ್ದೂ ಲಿಂಗ ಮೇಲ್ನೋಟಕ್ಕೆ ತಿಳಿಯುವುದಿಲ್ಲ.

ಮನುಷ್ಯರಲ್ಲಿ ಸಹ ಹೊರರೂಪದ ಲಿಂಗವ್ಯತ್ಯಾಸಗಳು ನೂರು ವರ್ಷಗಳ ಹಿಂದಿದ್ದಂತೆ ಎದ್ದು ಕಾಣುವುದಿಲ್ಲ. ಬಿಗಿಯಾಗಿ ಕಟ್ಟಿ ಸೊಂಟ ಅತಿಯಾಗಿ ಸಣ್ಣಗಿರುವಂತೆ ಮಾಡುವ ಪದ್ಧತಿ ಈಗಿನ ಸ್ತ್ರೀಯರಲ್ಲಿಲ್ಲ. ಹಾಗೆಯೇ ಹುಡುಗಿಯರ ಅತಿ ಬಿಗಿಯಾದ ರಹಸ್ಯ ಒಳ ಉಡುಪುಗಳೂ ಈಗ ಬಳಕೆಯಲ್ಲಿಲ್ಲ. ಈ ಬಿಡುಗಡೆಗೆ ಬೈಸಿಕಲ್ಲೂ ಒಂದು ಕಾರಣ. ಬೆಳೆಯುತ್ತಿದ್ದ ಹುಡುಗಿ ತನ್ನ ಅಜ್ಜಿ ವಿಶ್ರಾಂತಿ ಪಡೆಯುತ್ತಿದ್ದಾಗ ಧೈರ್ಯಮಾಡಿ ಈ ಹೊಸ ಆಟಿಕೆಯ ಸವಾರಿಗಾಗಿ ಹೋದಳು. ಇದರ ಪರಿಣಾಮ ಏನೆಂದರೆ ಅವಳ ಪರಿಸ್ಥಿತಿ ಉತ್ತಮಗೊಂಡಿತು. ಏನಾದರೂ ಬಿಕ್ಕಟ್ಟು ಎದುರಾದಾಗ ನಮ್ಮ ಮುತ್ತಜ್ಜಿಯರು ಜ್ಞಾನತಪ್ಪಿ ಬೀಳುತ್ತಿದ್ದರು. ಈಗ ಹಾಗಾಗುವುದನ್ನು ಯಾರಾದರೂ ಕೇಳಿದ್ದಾರೆಯೇ? ಈಗ ಹೆಂಗಸರಿಗಿಂತ ಗಂಡಸರೇ ಹೆಚ್ಚಾಗಿ ಮೂರ್ಛೆಹೋಗುವಂತೆ ಕಾಣುತ್ತದೆ.

ಈಗ ವೃದ್ಧನಾಗಿರುವ ಒಬ್ಬ ಮನುಷ್ಯ ತನ್ನ ಜೀವನದ ಸಣ್ಣ ಕಾಲಮಾನದಲ್ಲಿಯೇ ಎಷ್ಟೋ ವ್ಯತ್ಯಾಸಗಳನ್ನು ಕಂಡಿದ್ದಾನೆ. ಬ್ರಿಟಿಷ್ ಸಮಾಜದಲ್ಲಿ ಗಂಡು ಹೆಣ್ಣುಗಳ ಸಂಬಂಧ, ಮದುವೆಮಾಡಿಕೊಳ್ಳುವವರ ವಯಸ್ಸಿನಲ್ಲಿನ ವ್ಯತ್ಯಾಸಗಳು

ಬಹಳವಾಗಿ ಬದಲಾಯಿಸಿವೆ. ಈ ಮಾರ್ಪಾಡುಗಳಿಗನುಸಾರವಾಗಿ ಸಾಮಾಜಿಕ ಹೊಂದಾಣಿಕೆಗಳೂ ಬಹುವಾಗಿ ಬದಲಾಗಿವೆ. ಗಂಡಸರು ಮುಂಚೆ (pendulum) ತಿರುಗಿ ಮೊದಲಸ್ಥಾನಕ್ಕೇ ಹೋಗಬಹುದು. ಅಥವಾ ಮುಂದೆ ಈ ರೀತಿಯ ಲೋಲಕದ ತೂಗಾಟದಂತಿರಲಾರದು ಸಾಮಾಜಿಕ ಪರಿಸ್ಥಿತಿ. ಅದರ ಬದಲು ಉದ್ದೇಶ ಪೂರ್ವಕವಾಗಿ ತಂದ ಕಾನೂನುಗಳು, ಆಹಾರದಕೊರತೆ ಅಥವಾ ಅಂಥ ಇತರ ಆರ್ಥಿಕ ಸಮಸ್ಯೆಗಳು, ತಾಯಿತನದ ಪರ ಅಥವಾ ವಿರುದ್ಧ ಭಾವನೆಗಳು, ದೇಶಭಕ್ತಿ ಅದಿಲ್ಲದಿರುವುದು, ಪ್ರಕೃತಿಸಹಜ ಪ್ರೇಮದ ಜೊತೆ ಶಾಶ್ವತವಾಗಿ ಸಮಾನ ಆಸಕ್ತಿಯನ್ನಾಧರಿಸಿ ಗಟ್ಟಿಸಂಬಂಧ ಬೆಳೆಸಬೇಕೆಂಬ ಆಸೆ, ದೈಹಿಕವಾಗಿ ಮಾನಸಿಕವಾಗಿ ಒಳ್ಳೆ ಸ್ಥಿತಿಯಲ್ಲಿ ಮಕ್ಕಳು ಹುಟ್ಟಬೇಕೆಂಬ ಹೆಮ್ಮೆ, ಇಂತಹ ಅನೇಕ ಸಂಗತಿಗಳು ಒಂದು ಹೊಸ ರೀತಿಯ ಮಾನವಸಮಾಜ ಉತ್ಪತ್ತಿಯಾಗುವುದರಲ್ಲಿ ಅತ್ಯಮೂಲ್ಯ ಪಾತ್ರವಹಿಸಬಹುದು. ತಲೆಸುತ್ತುವಷ್ಟು ಬೇಗ ಬದಲಾಗುತ್ತಿರುವ ಅವಶ್ಯಕತೆಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಇಂಥ ನೂತನ ಸಮಾಜ ಪಡೆದಿರಬಹುದು. ಭೂಗ್ರಹದ ಮೇಲಿನ ಜೀವಪ್ರಪಂಚದ ಕತೆಯಲ್ಲಿ ಕಡೆವರೆಗೆ ಪಾತ್ರವಹಿಸುವ ಶಕ್ತಿ ಇದಕ್ಕಿರಬಹುದು.

ಕುಟುಂಬ ವ್ಯವಸ್ಥೆಯನ್ನು ತಾವು ಸಂರಕ್ಷಿಸುತ್ತೇವೆ ಎಂದು ಧಾರ್ಮಿಕ ಸಂಸ್ಥೆಗಳು ಅದರಲ್ಲೂ ರೋಮನ್‌ಕ್ಯಾಥೊಲಿಕ್ ಚರ್ಚ್ ಘೋಷಿಸುತ್ತವೆ. ಇದು ನಿಜವೆನಿಸುವುದಿಲ್ಲ. ಪ್ರಾಣಿಗಳು ಜೊತೆಗೂಡಿ ಮರಿಹಾಕಿ ಅವುಗಳನ್ನು ರಕ್ಷಿಸಿ ಬೆಳೆಸುವುದಕ್ಕಾಗಿ ಬೇರೆಹೋಗಿ ವಾಸಿಸುವ ಪ್ರವೃತ್ತಿ ಬಂದಾಗಿನಿಂದ ಪ್ರಾಣಿಗಳಲ್ಲಿ ಕುಟುಂಬ ವ್ಯವಸ್ಥೆ ನಡೆದುಬಂದಿದೆ. ಸ್ವಚ್ಛವಾದ ಈ ಸರಳ ಸಂಬಂಧ ಧರ್ಮಾಧಿಕಾರಿಗಳ ಪ್ರವೇಶದಿಂದ ಕೀಳುಮಟ್ಟಕ್ಕಿಳಿದಿದೆ. ಇನ್ನೂ ಹುಟ್ಟದಿರುವ ಮಕ್ಕಳಿಗೂ ಅವು ಪಾಪಸಂಭೂತರೆಂದು ಹೇಳಿ ಕಳಂಕಹಚ್ಚುವುದು, ವಿವಾಹಸಂಬಂಧವಿಲ್ಲದೆ ಮಗುವಾಗುವುದು ನಾಚಿಕೆಗೇಡೆಂದು ಗುಟ್ಟುಗುಟ್ಟುಮಾಡುವುದು ಕೌಟುಂಬಿಕ ಜೀವನದ ಮೂಲಭೂತ ಸತ್ಯಗಳನ್ನೂ ಸಾಧ್ಯತೆಗಳನ್ನೂ ಅದರಿಂದ ಉಪಯೋಗವಾಗಬಹುದೆನ್ನುವ ವಯಸ್ಸಿನಲ್ಲಿ ಕಿರಿಯರಿಂದ ಮುಚ್ಚಿಟ್ಟು ಸಮಯಮೀರಿದ ಮೇಲೆ ತಿಳಿಸುವುದು ಇವೆಲ್ಲ ಧರ್ಮದ ಪ್ರವೇಶದಿಂದ ಆಗುತ್ತಿರುವ ತಪ್ಪುಗಳು.

4. ದೈತ್ಯಗಾತ್ರ ಮತ್ತು ಕುಲದ ಆತ್ಮಹತ್ಯೆ

ಉಳಿದ ಪ್ರಾಣಿಗಳಿಗೆ ಹೋಲಿಸಿದರೆ ಮನುಷ್ಯ ಬಹುಕಾಲ ಬದುಕುತ್ತಾನೆ. ರೇಡಿಯಂ ಗಡಿಯಾರದ ಪ್ರಕಾರ ಹೆಚ್ಚೆಂದರೆ 10000 ಮಿಲಿಯನ್ ವರ್ಷ ಕಡಿಮೆಯೆಂದರೆ 5000 ಮಿಲಿಯನ್ ಭೂವರ್ಷಗಳ ಕಾಲಜೀವ ಇಲ್ಲಿದೆ ಎಂದು ತಿಳಿಯುತ್ತದೆ. ಇದಿಷ್ಟುಕಾಲವೂ ಒಂದಾದಮೇಲೊಂದರಂತೆ ವಿವಿಧ ಜೀವಮಾದರಿಗಳು ತಾತ್ಕಾಲಿಕವಾಗಿ ಪ್ರಾಧಾನ್ಯ ಪಡೆದುಕೊಳ್ಳುತ್ತಿವೆ ಇದು ಒಂದೊಂದೂ ಅತ್ಯಂತ ಪ್ರಬಲ

ವಾಗಿದ್ದು ಬಳಿಕ ತನಗಿಂತ ಪರಿಸರಕ್ಕೆ ಹೆಚ್ಚು ಹೊಂದಾಣಿಕೆಯಿದ್ದ ಜೀವಮಾದರಿಗಳಿಂದ ತಳ್ಳಲ್ಪಟ್ಟು ಹಿಂದೆಬಿದ್ದುಹೋಗಿವೆ. ಇವುಗಳಲ್ಲಿ ಒಂದೊಂದೂ ಪ್ರಕೃತಿ ಸಹಜವಾದ-ಪಾಲಿಸಲೇಬೇಕಾದ ನಿಯಮಗಳಿಗೆ ಅಧೀನವಾಗಿ ನಡೆದಿವೆ.

ಇವುಗಳಲ್ಲಿ ಮೊದಲ ನಿಯಮ ಆಕ್ರಮಣ ಪ್ರವೃತ್ತಿ ಅತ್ಯಗತ್ಯವೆನ್ನುವುದು. ಇದರ ಮೊದಲನೆ ಕಟ್ಟಲೆ ಬದುಕಿಗೆ ಭದ್ರವಾಗಿ ಅಂಟಿರಬೇಕು ಮತ್ತು ಸಾಧ್ಯವಾದಷ್ಟು ಸಮೃದ್ಧವಾಗಿ ಬದುಕಬೇಕು ಎನ್ನುವುದು "ನಿನ್ನ ಒಡಹುಟ್ಟಿದವರಿಗಿಂತ ಹೆಚ್ಚು ಬದುಕು, ಹೆಚ್ಚಾಗಿ ತಿನ್ನು, ಹೆಚ್ಚು ಗಾತ್ರಕ್ಕೆ ಬೆಳೆ''. ತಮ್ಮೆಲ್ಲರಿಗೂ ಸಾಮಾನ್ಯನಾದ ಪ್ರತಿಸ್ಪರ್ಧಿಯೆದುರು ಪರಸ್ಪರ ಸಹಾಯಮಾಡಬೇಕೆಂಬ ಭಾವನೆ ಮೊದಮೊದಲು ಇರಲೇಇಲ್ಲವಾದುದರಿಂದ ಈ ಆಕ್ರಮಣಕಾರಿ ಪ್ರವೃತ್ತಿಗೆ ಯಾವ ಪರಿಮಿತಿಯೂ ಬರಲಿಲ್ಲ. ದೊಡ್ಡ ಪ್ರಾಣಿಗಳು ಸಣ್ಣಪ್ರಾಣಿಗಳನ್ನು ನೇರವಾಗಿ ತಿನ್ನದಿದ್ದರೂ ಅವುಗಳಿಗೆ ಅವಶ್ಯವಿದ್ದ ಆಹಾರವನ್ನೆಲ್ಲ ತಿಂದು ದೊಡ್ಡ ದೊಡ್ಡದಾಗಿ ಬೆಳೆದುವು. ಬಂಡೆಗಳ ದಾಖಲೆಗಳಲ್ಲಿ ಪ್ರತಿ ಅಧ್ಯಾಯದ ಕೊನೆಗೂ ಕಾಣಬರುವುವು ಇಂತಹ ದೈತ್ಯ ಗಾತ್ರದ ಪ್ರಾಣಿಗಳೇ.

ಭೂಗ್ರಹ ಸುತ್ತುತ್ತದೆ, ಹವಾಮಾನ ಬದಲಾಗುತ್ತದೆ. ಈ ಹಳೆಯ ಮಿತಿಮೀರಿ ಬೆಳೆದ ಸೃಷ್ಟಿಯ ರಾಜನಿಗೆ ಹೊಸ ಪರಿಸರ ಹೊಂದುವುದಿಲ್ಲ. ಪರಿಣಾಮ ಅವನ ನಿಷ್ಕ್ರಮಣ. ಪ್ರತಿ ಸಂದರ್ಭದಲ್ಲಿ ಅಲ್ಲದಿದ್ದರೂ ಸಾಮಾನ್ಯವಾಗಿ ಸಂಪೂರ್ಣವಾಗಿ ಬೇರೆ ವಿಧದ ಜೀವ ಇವನ ಉತ್ತರಾಧಿಕಾರಿಯಾಗುತ್ತದೆ. ಅಥವಾ ಕೆಲವುಸಲ ಷಾರ್ಕುಗಳಲ್ಲಿ ಆದಂತೆ ಇಂಥ ಜಾತಿಯ ಪ್ರಾಣಿಗಳ ಸಂಖ್ಯೆ ಕಡಿಮೆಆಗುತ್ತಾ ಹೋಗಿ ಆಹಾರಪೂರೈಕೆ ಈ ಪ್ರಾಣಿ ಸಂಖ್ಯೆಗೆ ಸಾಕಾಗುವ ಪರಿಸ್ಥಿತಿ ಬರಬಹುದು ಬಳಿಕ ಪ್ರಕೃತಿಯಲ್ಲಿ ಬೇರೆ ವ್ಯವಸ್ಥೆ ಆಗಿಲ್ಲದೆಹೋದಲ್ಲಿ ತಿರುಗಿ ಅಂಥ ಜೀವಜಾತಿಯ ಸಂಖ್ಯೆ ಮೊದಲಿನಂತೆ ಬೆಳೆಯಬಹುದು. ಷಾರ್ಕ್ ಮತ್ತು ಅಂತಹ ಇತರ ಪ್ರಾಣಿಗಳು ಹಿಂಸೆಯಲ್ಲೇ ಬದುಕಿ ಹಿಂಸೆಯಿಂದಲೇ ಸಾಯುವುವಾದುದರಿಂದ ಇವುಗಳಲ್ಲಿ ಪಳೆಯುಳಿಕೆಗಳಾಗಲು ಏನೂ ಉಳಿಯುವುದೇ ಇಲ್ಲ, ಆಧುನಿಕಕಾಲದಲ್ಲಿ ಬಿಸಿಲು ಕಾಯಿಸುವ ಪದ್ಧತಿಯುಳ್ಳ ಬೃಹತ್ ಗಾತ್ರದ ಷಾರ್ಕುಗಳು ಮತ್ತು ಅಂತಹೇ ಇತರ ಪ್ರಾಣಿಗಳಿವೆ. ಅವುಗಳು ಈ ಗಾತ್ರವನ್ನು ಈಚೀಚೆಗೆ ಪಡೆದುಕೊಂಡಿರಬಹುದು ಅಥವಾ ಯುಗಯುಗಗಳಾಗಿ ಕಾಲ ಹೀಗೇ ಬಿಸಿಲುಕಾಯಿಸುತ್ತಾ ಕಳೆದಿರಬಹುದು— ಅವುಗಳಿಗೆ ತಿನ್ನಲು ಸಾಕಾಗುವಷ್ಟು ಮೀನುಗಳು ಇದ್ದಾಗಿನಿಂದ, ನಾವು ಇದನ್ನೆಲ್ಲ ಊಹಿಸುತ್ತಾ ಕುಳಿತಿರಬಲ್ಲೆವು ಅಷ್ಟೆ.

5. ಅಕಾಲ ವಿಕಸನ, ಉಳಿಯಲು ಒಂದು ಮಾರ್ಗ

ಪ್ರಕೃತಿಜೀವದ ಸಾಧ್ಯತೆಗಳೊಡನೆ ಭಾವನಾಶೂನ್ಯವಾಗಿ ಚೆನ್ನಾಟವಾಡುತ್ತಾ ಅಂಡಾಣುವಿನ ಬಲಿಯುವಿಕೆ ಮತ್ತು ಗರ್ಭಕಟ್ಟುವಿಕೆಗಳು ಜೀವಚಕ್ರದ ಇತರ

ಹಂತಗಳೊಡನೆ ಹೋಲಿಸಿದರೆ ಬೇಗ ಬೇಗ ನಡೆಯುವಂತೆ ಮಾಡಿ ಹಠಾತ್ತಾಗಿ ಕೆಲವು ವೈಚಿತ್ರ್ಯಗಳನ್ನು ಸೃಜಿಸಿದೆ. ಯಾವುದೇ ಜೀವಿಯಾಗಲೀ ತನ್ನ ಪೂರ್ವಜರಿಂದ ಪೂರ್ಣಬೆಳೆದ ರೂಪವನ್ನು ಪಡೆಯುವುದಿಲ್ಲ, ಇಡಿಯಾದ ಜೀವನಚಕ್ರವನ್ನು ಪಡೆಯು ತ್ತದೆಯೆಂದು ಈ ತರಹ ಸಮಸ್ಯೆ ಬಂದಾಗಲೆಲ್ಲ ನೆನೆಯಬೇಕು. ಅನೇಕಸಲ ಪ್ರಕೃತಿ ಈ ವಯಸ್ಕ ರೂಪಗಳನ್ನು ತನ್ನ ದಾಖಲೆಗಳಿಂದ ತೆಗೆದೇಹಾಕಿ ಅದರ ಮೊದಲಿನ ಅಪಕ್ವ ರೂಪಗಳಿಗೆ ಲೈಂಗಿಕ ಪೂರ್ಣತೆಯನ್ನು ಕೊಟ್ಟಿದೆ.

ಬಹು ಹಿಂದಿನ ಒಂದು ಹಂತದಲ್ಲಿ ನಕ್ಷತ್ರ ಮೀನುಗಳಂಥ ಕಂಟಕಚರ್ಮಿಗಳು ಮತ್ತಿತರ ಅಂಥದೇ ಪ್ರಾಣಿಗಳ ಜೀವ ಪ್ರಪಂಚದ ರಾಜರಾಗಿದ್ದುವು ಇವುಗಳ ಶರೀರಗಳು ಒಂದು ಅಕ್ಷದ ಮೇಲೆ ಸಮವಿಭಾಗ ಮಾಡುವಂತಿರುತ್ತಿದ್ದುವು. ಪ್ರೌಢಾ ವಸ್ಥೆಯಲ್ಲಿ ಇವುಗಳಿಗೆ ಚಲನಶಕ್ತಿ ಇರುತ್ತಿರಲಿಲ್ಲ. ಕ್ರಿಡಾಯಿಡ್‌ಗಳಂತೆ ಇವುಗಳಲ್ಲಿ ಅನೇಕ ಜಾತಿಯವು ಬಂಡೆಗಳಿಗೆ ಅಂಟಿಕೊಂಡಿರುತ್ತಿದ್ದುವು ಇಂತಹ ಸಮಸೂತ್ರತೆ ಯುಳ್ಳ ಆಕಾರದ ಜೀವಿಗಳಲ್ಲಿ ಸೆಲ್ಯುಲೋಸನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಟ್ಯೂನಿಕಾಟಗಳ ಜೀವನಕ್ರಮ ಬಹುಮಟ್ಟಿಗೆ ಸಸ್ಯಗಳಂತೆ ಇತ್ತು. ಗರ್ಭಕಟ್ಟಿದ ತತ್ತಿ ಗಳನ್ನು ಇವು ನೀರಿನೊಳಗೆ ಬಿಡುತ್ತಿದ್ದುವು. ಇವುಗಳ ಪ್ರಸಾರಕ್ಕೆ ಅನುಕೂಲ ವಾಗುವಂತೆ ಇವುಗಳ ದೇಹಗಳಲ್ಲಿ ಕೆಲವು ವಿಶೇಷ ಸಹಾಯಕ ಅಂಗಗಳು ಅಭಿವೃದ್ಧಿ ಯಾದುವು. ಎಲ್ಲೆಲ್ಲೋ ತೇಲಿಹೋಗಬಹುದಾಗಿದ್ದ ಎಳೆ ಮರಿಗಳ ದೇಹ ಇವುಗಳಿಂದ ಗಡವಾಗಿ ಅವು ಸ್ವತಂತ್ರವಾಗಿ ಚಲಿಸಲು ಅನುಕೂಲವಾಯಿತು. ಪ್ರಮಾಣಕ್ಕಿಳಿದ ಈ ಮರಿಗಳ ಬೆನ್ನುಮೂಳೆಗೆ ನೊಟೊಕಾರ್ಡ್ ಎಂದು ಹೆಸರಿಸಿದ್ದಾರೆ. ಇವುಗಳಿಂದ ಉದ್ಭವಿಸಿದ ನೂತನ ಜೀವ ಮಾದರಿಗಳಿಗೆ ಕೋರ್ಡಾಟಾ ಎಂದು ಹೆಸರು. ಅದುವರೆಗೆ ಜೀವಿ ಪ್ರಪಂಚದ ರಾಜರಾಗಿದ್ದ ನೋಟೋಕಾರ್ಡುಗಳಿಲ್ಲದ ನಕ್ಷತ್ರ ಮೀನು, ಸಮುದ್ರ ಅರ್ಚಿನ್ ಮತ್ತು ಸಮುದ್ರ ಸೌತೆಗಳಿಂದ ವಿಶಿಷ್ಟವಾದವು ಈ ಕೋರ್ಡಾಟಾ; ಬೆನ್ನುಮೂಳೆಯಿರುವ ಇಂದಿನ ಅಸಂಖ್ಯಾತ ಪ್ರಾಣಿಗಳೆಲ್ಲ ನಾವೂ ಸೇರಿದಂತೆ, ಈ ಪ್ರಕೃತಿ ವೈಚಿತ್ರ್ಯದಿಂದ ಹುಟ್ಟಿದವೇ. ಆ ವೈಚಿತ್ರ್ಯ ಸಂಭವಿಸಲು ಏನೇನೂ ಕಾರಣ ಇರಲಿಲ್ಲ ಅದು ಹಾಗಾಯಿತು ಎಂದಷ್ಟೇ ಹೇಳ ಬಹುದು.

ಬೆನ್ನುಮೂಳೆಯಿರುವ ಪ್ರಾಣಿಗಳೆಲ್ಲದರಲ್ಲೂ ಬೆಳವಣಿಗೆಯ ಒಂದು ಹಂತದಲ್ಲಿ ನೋಟೋಕಾರ್ಡ್ ಕಾಣಿಸಿಕೊಳ್ಳುತ್ತದೆ. ಉನ್ನತವರ್ಗದ ಪ್ರಾಣಿಗಳಲ್ಲಿ ಇದರಲ್ಲಿ ಮೃದ್ವಸ್ಥಿ ಅಥವಾ ಮೂಳೆಯ ಸಾಮಾಗ್ರಿ ಬಂದು ಸೇರುತ್ತದೆ. ಹ್ಯಾಗ್‌ಫಿಷ್ ಮತ್ತು ಲಾಂಪ್ರಿಗಳಲ್ಲಿ ನೋಟೋಕಾರ್ಡು ಜೀವನ ಪೂರ್ತಿ ಹಾಗೇ ಇದ್ದು ಬಿಡುತ್ತದೆ. ಲ್ಯಾಂಪ್ರಿಯ ರೂಪದಲ್ಲಿ ಇದು ನಮ್ಮ ಊಟದ ತಟ್ಟೆಗೂ ಬರುವು ದುಂಟು.

6. ಹರೆಯುಮುಪ್ಪುಗಳ ವೈರ

ತನ್ನ ಮತ್ತು ಯುವಕರ ನಡುವೆ ಸಹಜವಾಗಿಯೇ ಬರಬಹುದಾದ ಘರ್ಷಣೆ ಕುರಿತು ಒಂದೆರಡು ಮಾತು ಹೇಳಲು ಇದು ಸುಸಮಯವೆಂದು ಈ ಲೇಖಕನ ಅನಿಸಿಕೆ. ಪ್ರಕೃತಿಯ ಸತ್ಯಗಳನ್ನು ಈ ಲೇಖಕ ಶಾಂತತೆಯಿಂದ ಒಪ್ಪಿಕೊಂಡು ಅವುಗಳು ಹಾಗಿರುವುದೇ ಸರಿ ಎನ್ನುತ್ತಾನೆ. ಆದರೆ ಮೂವತ್ತೈದು ವರ್ಷ ದಾಟಿಲ್ಲದ ಯಾವ ಯುವಕನೂ ಈ ಸತ್ಯಗಳನ್ನು ಅಂತಹದೆ ಮನೋಭಾವದಿಂದ ಸ್ವೀಕರಿಸುತ್ತಾನೆ ಎಂದು ನಂಬುವುದಕ್ಕಾಗುವುದಿಲ್ಲ. ಸುಮಾರು ಆ ವಯಸ್ಸಿನವರೆಗೆ ಪ್ರತಿಯೊಬ್ಬ ತರುಣನೂ ವಿಶ್ವದೊಡನೆ ಸೆಣಸುವುದರಲ್ಲಿರುತ್ತಾನೆ. ತನ್ನ ಹಟವೇ ನಡೆಯಬೇಕೆಂಬುದು ಆತನ ಇಚ್ಛೆಯಾಗಿರುತ್ತದೆ. ಬಂದದ್ದನ್ನೆಲ್ಲ ಬಂದಹಾಗೆ ಒಪ್ಪಿಕೊಳ್ಳುವ ತರುಣ ನಿಜಕ್ಕೂ ದುರ್ಬಲ ವ್ಯಕ್ತಿಯೆನಿಸುತ್ತದೆ.

ಆದರೆ ಈ ಲೇಖಕನಿಗೆ ಈಗ ಎಪ್ಪತ್ತೊಂಬತ್ತು ವರ್ಷ ವಯಸ್ಸಾಗಿದೆ, ಇವನು ಸಂತೋಷವಾಗಿ ಸಮೃದ್ಧವಾಗಿ ಬಾಳಿದ್ದಾನೆ. ಜೀವನವೆಂಬ ಬೆಂಕಿಯಲ್ಲಿ ಈತ ಲ್ಯಾಂಡರನಂತೆ ತನ್ನೆರಡೂ ಕೈಗಳನ್ನು ಬೆಚ್ಚಗೆಮಾಡಿಕೊಂಡಿದ್ದಾನೆ. ಎಚ್ಚರಿಕೆಯಿಂದ ಕಳೆಯುವಂಥ ಅಶಕ್ತತೆಯೆಡೆಗೆ ಜೀವಸಾಗುತ್ತಿದೆ, ಆದನ್ನು ಇವನ್ನು ತೊರೆದು ಹೋಗಲೂ ಸಿದ್ಧನಿದ್ದಾನೆ. ಮಾನಸಿಕ ಗೊಂದಲದಿಂದ ತುಂಬಿದ ಈ ಕಾಲದಲ್ಲಿ ಅಷ್ಟು ವರ್ಷಗಳಿಂದ ಕಂಡುಕೊಂಡಿರುವ ತನ್ನ ಅನುಭವಗಳಿಗೇನಾದರೂ ಉಪಯುಕ್ತತೆ ಇದೆಯೇ ತನ್ನ ಕಡೆಗಾಲಕ್ಕೆ ಕಾಯುತ್ತಿರುವ ಈ ಲೇಖಕ ಸಮಾನವವರ್ಗವನ್ನು ವೀಕ್ಷಿಸುತ್ತಾ ಚಿಂತಿಸುತ್ತಿದ್ದಾನೆ. ಆದರೆ ಜೀವನ ತನ್ನಪ್ರಶ್ನೆಗಳಿಗೆಲ್ಲ ಉತ್ತರ ಕೊಡಲೇಬೇಕೆಂಬ ಹಠ ಒತ್ತಡ ಇವನಿಗಿಲ್ಲ. ಈ ಹಠ ಚಿಕ್ಕಪ್ರಾಯದವರಿಗೆ ಅವರು ಗಂಡಸರಾಗಿರಲಿ ಹೆಂಗಸರಾಗಿರಲಿ ಸ್ವಾಭಾವಿಕವಾದುದು.

ವ್ಯಕ್ತಿತ್ವದ ರೂಪುಗೊಳ್ಳುವಿಕೆ ಮುಗಿದುಹೋಗಿರುವ ಪ್ರತಿ ಮನುಷ್ಯನ ಪರಿಸ್ಥಿತಿಯೂ ಈ ಲೇಖಕನದರಂತೇ ಇರುತ್ತದೆ. ಒಂದು ಕಾಲದಲ್ಲಿ ಇವನು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡ. ನಂಬಿಕೆಗಳಾಗಿ ಆಕೃತಿ ಪಡೆದ ಅಂದಿನ ಚಿಂತನೆಗಳನ್ನು ಜೀವನದಲ್ಲಿ ಬಳಕೆಗೆ ತರುವುದರಲ್ಲಿ ಮತ್ತು ವಿಸ್ತರಿಸುವುದರಲ್ಲಿ ತನ್ನ ಜೊತೆಯ ಇತರರಂತೆಯೇ ಆಗಿನಿಂದ ಇವನು ತೊಡಗಿದ್ದಾನೆ. ಇದರಲ್ಲಿ ಉತ್ಸಾಹ ಕಡಿಮೆ ಆಗುತ್ತಾ ಇರಬಹುದು. ರಾಜಕೀಯದಲ್ಲಿ ತೊಡಗಿದವರು, ಹಣಕಾಸಿನ ವ್ಯವಹಾರದವರು, ಧರ್ಮಶಾಸ್ತ್ರಜ್ಞರು ಅಥವಾ ವ್ಯಾಪಾರಸ್ಥರಿಗಿಂತ ತಾನು ಜೀವನದ ಸತ್ಯಗಳಿಗೆ ಹತ್ತಿರನಾದವನೆಂದು ಇವನಿಗೆನಿಸುತ್ತದೆ. ಏಕೆಂದರೆ ಇನ್ನೂ ಸಹ ಇವನಿಗೆ ಜೀವವಿಜ್ಞಾನದಲ್ಲಿ ಆಸಕ್ತಿ ಇದೆ. ಆದರೆ ಮುದುಕರಿಗೂ ಯುವಕರಿಗೂ ಮಧ್ಯೆ ಸೇತುವೆ ಕಟ್ಟುವುದಕ್ಕೆ ಇದರಿಂದ ಏನೂ ಪ್ರಯೋಜನವಿಲ್ಲ ಒಳ್ಳೆಯ ಹಾರೈಕೆಗಳಿಂದ ಅಥವಾ ಕೆಟ್ಟ ಮನಸ್ಸಿನಿಂದ, ಮತ್ಸರದಿಂದ ಅಥವಾ ಉದಾತ್ತ ಮನಸ್ಸಿನಿಂದ ಮುದುಕರಾದ

ನಾವು ಎಲ್ಲವನ್ನೂ ನೋಡುತ್ತಿರುತ್ತೇವೆ ನಾವು ಹೀಗೆ ಬರಿಯ ವೀಕ್ಷಕರಾಗಬಲ್ಲೆವಷ್ಟೆ. ನಾವು ಜೀವಿಸಿದ್ದು ನಿಜವಾಗಿ ನಾಲ್ವತ್ತು ವರ್ಷಗಳ ಹಿಂದೆ. ಇಂದಿನ ಯುವಜನರದೇ "ಜೀವನ". ಏನಾದರೂ ಘಟನೆಗಳಿದ್ದರೆ ಅವರಲ್ಲೇ ನಾವು ಕಾಣಬೇಕು

7. ಬಂಡೆಗಳ ದಾಖಲೆಗಳ ಮೇಲೆ ಹೊಸಬೆಳಕು

ಭೂಮಿಯ ದೈನಂದಿನ ಪರಿಭ್ರಮಣೆ ಮತ್ತು ಕಕ್ಷೆಯಲ್ಲಿ ಅದರ ಚಲನೆ ಎರಡೂ ನಿಧಾನವಾಗುತ್ತಿವೆ ಎಂದು ಆಗಲೇ ಸೂಚಿಸಿ ಆಗಿದೆ. ಈ ಪುಸ್ತಕದ ಮೊದಲ ಅಧ್ಯಾಯಗಳನ್ನು ಬರೆದು ಮುಗಿದ ಮೇಲೆ ಕೆಲವು ವಿಷಯಗಳು ಬೆಳಕಿಗೆ ಬಂದಿವೆ. ಅತಿ ನಿಖರವಾದ ರೇಡಿಯಂ ಗಡಿಯಾರದ ಪ್ರಕಾರ ಅಳೆದಾಗ ಬಂಡೆಗಳ ದಾಖಲೆಯ ಮೊದಲ ಭಾಗಗಳ ಕಾಲಾವಧಿ ಕೇನೋಜೋಯಿಕ್ ಯುಗಕ್ಕೆ ಹೋಲಿಸಿದರೆ ಮೊದಲೆಂದುಕೊಂಡಿದ್ದದಕ್ಕಿಂತ ಬಹಳವೇ ಕಡಿಮೆಯಾಗುತ್ತದೆ. ಇವುಗಳ ಲಕ್ಷಣಗಳು ಮೊದಲಿನಂತೇ ಇದ್ದರೂ ಪರಿಮಾಣಗಳಲ್ಲಿ ವ್ಯತ್ಯಾಸವಿದೆ. ಹೀಗೆ ಅಪಾರ ಕಾಲಾವಧಿಯಲ್ಲಿ ಭೂಗ್ರಹದ ಚಲನೆ ಅವಿರತವಾಗಿ ನಿಧಾನವಾಗುತ್ತಾ ನಡೆಯಿತೋ ಅಥವಾ ಬಿಟ್ಟು ಬಿಟ್ಟು ನಡೆಯಿತೋ ಗೊತ್ತಿಲ್ಲ. ಅದು ಅವಿರತವಾಗಿ ನಡೆದಿರಬೇಕೆಂದು ಈ ಲೇಖಕನಿಗೆನಿಸುತ್ತದೆ. ಅಂತೂ ಏನೂ ಸರಿಯಾಗಿ ತಿಳಿದಿಲ್ಲ. ರಭಸದಿಂದ ಮುಂದೆ ಓಡುತ್ತಿದ್ದ ಆ ಯುಗಗಳಲ್ಲಿ ಬಿಡಿಜೀವಿಗಳು ಬದುಕಿ ಉಳಿಯುವ ಸಂಭವ ಬಹಳ ಏರುಪೇರಾಗುತ್ತಿತ್ತು.

ಆದರೂ ಒಂದು ವಿಷಯ ಮಾತ್ರ ಖಂಡಿತ. ಇನ್ನೂ ಸಹ "ಸಿದ್ಧಾಂತ"ವೆಂದೇ ಕರೆಸಿಕೊಳ್ಳುತ್ತಿರುವ ಜೈವಿಕವಿಕಾಸ ಸಿದ್ಧಾಂತವನ್ನು ಕುರಿತು ಸಂಶಯಪಡಲು ಕಾರಣವಾಗುವಂತಹ ಒಂದು ವಿಷಯ ಕೂಡ ಇಂದಿನವರೆಗೆ ಸಂಗ್ರಹವಾಗಿರುವ ಅಗಾಧ ಪ್ರಮಾಣದ ನಿಜಾಂಶಗಳಲ್ಲಿ ಸಿಕ್ಕಿಲ್ಲ. ಧರ್ಮ ಶ್ರದ್ಧೆಯುಳ್ಳವರು ಆಕ್ರೋಶದಿಂದ ಏನೇ ಹೇಳಲಿ ವೈಚಾರಿಕ ಮನೋಭಾವವುಳ್ಳವರು ವಿಕಾಸವಾದವನ್ನು ಕುರಿತು ಚಕಾರವೆತ್ತಲೂ ಸಾಧ್ಯವಿಲ್ಲ. ಎ. ಎಂ. ಡೇವಿಸ್ ಎನ್ನುವವರು "ವಿಕಾಸವಾದ ಮತ್ತು ಅದರ ಆಧುನಿಕ ಟೀಕಾಕಾರರು" ಎಂಬ ಪುಟ್ಟ ಪುಸ್ತಕದಲ್ಲಿ ಈ ವಿಷಯವನ್ನು ಪೂರ್ಣವಾಗಿ ಮನದಟ್ಟಾಗುವಂತೆ ಸಂಗ್ರಹಿಸಿ ತಿಳಿಸಿದ್ದಾರೆ. ಈ ವಿಷಯ ಅಷ್ಟಾಗಿ ತಿಳಿದಿಲ್ಲದವರು ಈ ಪುಸ್ತಕವನ್ನು ಓದಬೇಕು.

ಭೂಗ್ರಹದ ಚಟುವಟಿಕೆ ಕಡಿಮೆಯಾಗುತ್ತಾ ಬಂದಿದೆಯೆಂದು ಈಗ ತಿಳಿದು ಬಂದಿದೆ. ವರ್ಷಗಳು ದಿನಗಳು ದೀರ್ಘವಾಗುತ್ತಾ ಬಂದಿವೆ ಮನುಷ್ಯನ ಮನಸ್ಸು ಚಟುವಟಿಕೆಯಿಂದಿದ್ದರೂ ಇನ್ನೂ ಸಹ ಸಾವು ಮತ್ತು ಅಂತ್ಯಗಳನ್ನೇ ಕುರಿತು ಚಿಂತಿಸಿ ಅವುಗಳನ್ನೇ ಸಾಧಿಸುತ್ತಿವೆ.

ಈ ಲೇಖಕ-ಅವನ ವಯಸ್ಸೆಷ್ಟೆಂದು ನೆನಪಿನಲ್ಲಿಡಬೇಕು. ಅವನಿಗೆ ಪುನರುಜ್ಜೀವನ ಶಕ್ತಿಯನ್ನೇ ಕಳೆದುಕೊಂಡು ಸುಸ್ತಾಗಿ ಹೋಗಿದೆಯೆಂದು ಎನಿಸು

ತ್ತದೆ. ಮನುಷ್ಯ ಇಂದಿನ ಈ ತೊಡಕುಗಳನ್ನು ಹೇಗೋ ಬಿಡಿಸಿಕೊಂಡು ಒಂದು ಹೊಸ ಕ್ರಿಯಾಶೀಲ ಹಂತಕ್ಕೆ ಕಾಲಿಡುವನೆಂಬ ಆಶೆ ವ್ಯಕ್ತವಾಗಿತ್ತು. ಆದರೆ ಈ ಕಳೆದ ಎರಡು ವರ್ಷಗಳಲ್ಲಿ ಎಲ್ಲೆಲ್ಲೂ ಕಾಣಬರುತ್ತಿರುವ ಮನುಷ್ಯ ದೇಹದ ಕುಂದು ಕೊರತೆಗಳನ್ನು ನೋಡಿದರೆ ಈ ಆಶಾಮನೋಭಾವ ಹೋಗಿ ಬಂದದ್ದನ್ನೆಲ್ಲ ಸಹಿಸ ಕೊಳ್ಳಬೇಕೆಂಬ ಒಂದು ವಿಧದ ಸಿನಿಕತೆ ಬಂದಿದೆ. ವೃದ್ಧರು ಬಹುತೇಕ ತುಚ್ಛವಾಗಿ ಜಿಗುಪ್ಸೆ ಬರುವಂತೆ ವರ್ತಿಸುತ್ತಾರೆ; ಕಿರಿಯರು ಒಂದೊಂದು ಸಲ ಒಂದೊಂದು ರೀತಿಯಲ್ಲಿ ಮೂರ್ಖರಂತೆ ನಡೆದುಕೊಳ್ಳುತ್ತಾರಲ್ಲದೆ ಸುಲಭವಾಗಿ ತಪ್ಪುದಾರಿಗೆ ಎಳೆಯಲ್ಪಡುತ್ತಾರೆ. ಮನುಷ್ಯ ಕಡಿದಾದ ದಾರಿಯಲ್ಲಿ ಏರುತ್ತಾನೆ ಅಥವಾ ಬರುತ್ತಾನೆ ಎಂದು ಹೇಳತಕ್ಕಿಲ್ಲ. ಅವನು ಕೆಳಗೆ ಜಾರಿ ಹಾಗೇ ಅದೃಶ್ಯವಾಗಿ ಬಿಡುತ್ತಾನೆ ಎಂಬ ಸಂಭವವೇ ಹೆಚ್ಚಾಗಿದೆ. ಮೇಲೇರಿದರೆ ಆ ಹೊಸಜೀವನಕ್ಕೆ ಹೊಂದಿಕೊಳ್ಳಲು ಅದೆಷ್ಟು ಬದಲಾವಣೆ ಹೊಂದಬೇಕೆಂದರೆ ಅವನು ಬಳಿಕ ಮನುಷ್ಯನಾಗಿರುವುದೇ ಇಲ್ಲ. ಸಾಮಾನ್ಯ ಮಾನವರು ತಮ್ಮ ಶಕ್ತಿಯ ಪರಮಾವಧಿಯನ್ನು ಮುಟ್ಟಿದ್ದಾರೆ. (ಈ ಅಧ್ಯಾಯದ ಉಪಶಿರೋನಾಮೆಯನ್ನು ಜ್ಞಾಪಿಸಿಕೊಳ್ಳಿ). ನಮ್ಮಲ್ಲಿ ಕೇವಲ ಕೆಲವರಿಗೆ ಮಾತ್ರ ಹೊಂದಿಕೊಳ್ಳುವಶಕ್ತಿ ಬಹು ಚೆನ್ನಾಗಿದೆ. ಇಂಥವರು ಮಾತ್ರ ಉಳಿದುಕೊಳ್ಳುವ ಸಾಧ್ಯತೆ ಇದೆ. ಉಳಿದವರು ಇವೆಲ್ಲದರ ಬಗ್ಗೆ ಚಿಂತೆ ಮಾಡುವುದೇ ಇಲ್ಲ. ತಮಗೆ ಇಚ್ಛೆ ಇರುವ ಉಪಶಮನಕಾರಕಗಳ ಅಥವಾ ಸಮಾಧಾನಕಾರಕಗಳ ಶರಣು ಹೋಗುತ್ತಾರೆ. ಜೀವ ಎನ್ನುವ ಈ ವಸ್ತುವಿನ ವಿಚಿತ್ರಚರಿತ್ರೆಯ ಕಡೆಯಹಂತ ಏನಿರಬಹುದೆಂಬ ಈ ಪರ್ಯಾಲೋಚನೆಯನ್ನು ಮನುಷ್ಯ ಪ್ರಾಣಿಗಳಲ್ಲಿ ಈಗ ಕಾಣಿಸಿಕೊಳ್ಳುತ್ತಿರುವ ಬದಲಾವಣೆಗಳನ್ನು ಸಮೀಕ್ಷಿಸಿ ಮುಗಿಸೋಣ.

ಪ್ರೈಮೇಟುಗಳು ಮೊದಲು ಕಾಣಿಸಿಕೊಂಡದ್ದು ಅಡವಿಗಳಲ್ಲಿ ಜೀವಿಸುವ ಪ್ರಾಣಿಗಳಾಗಿ, ಕೀಟಭಕ್ಷಕ ಪ್ರಾಣಿಗಳ ಗುಂಪಿನ ಸಂಬಂಧಿಗಳಾಗಿ ಮೊದಲು ಇವು ಮರಗಳ ಮೇಲೆ ವಾಸಿಸುತ್ತಿದ್ದುವು. ಮರಗಳ ಕೊಂಬೆಗಳ ಮಧ್ಯೆ ಚಲಿಸಿ ಚಲಿಸಿ ಇವುಗಳಿಗೆ ಕಣ್ಣು ಚುರುಕಾಯಿತು. ಸ್ನಾಯುಗಳ ವ್ಯವಸ್ಥೆಯೂ ಉತ್ತಮವಾಯಿತು. ಇವು ಸಂಘಪ್ರಿಯರಾಗಿದ್ದು ಚೆನ್ನಾಗಿ ವೃದ್ಧಿಯಾದುವು. ಸಹಜವಾಗಿಯೇ ಕಾಲ ಮುನ್ನಡೆದಂತೆ ಇವುಗಳ ಗಾತ್ರ, ತೂಕ, ಶಕ್ತಿ ಎಲ್ಲವೂ ಹೆಚ್ಚಿತು. ಬಳಿಕ ಗತ್ಯಂತರವಿಲ್ಲದೆ ಇವು ನೆಲಕ್ಕೆ ಬಂದುವು. ಕಾಡಿನಲ್ಲಿರುತ್ತಿದ್ದ ತಮಗಿಂತ ಹಿರಿದಾದ ಮಾಂಸಾಹಾರಿ ಪ್ರಾಣಿಗಳನ್ನು ಎದುರಿಸಿ ಅವುಗಳೊಡನೆ ಸೆಣಸಿ ಅಥವಾ ಅವುಗಳನ್ನು ಬುದ್ಧಿವಂತಿಕೆಯಲ್ಲಿ ಮೀರಿಸಿ ಬದುಕುವ ಶಕ್ತಿ ಇವುಗಳಿಗೆ ಬಂದಿತು. ಚತುಷ್ಪಾದಗಳ ಮೇಲೆ ನಿಲ್ಲುವುದನ್ನು ಬಿಟ್ಟು ಹಿಂಗಾಲುಗಳ ಮೇಲೆ ಅರ್ಧ ಎದ್ದು ನಿಲ್ಲುವ ಶಕ್ತಿಯನ್ನು ಇವು ಪಡೆದುವು. ಈ ಭಂಗಿಯಲ್ಲಿ ತಮ್ಮ ಎದುರಾಳಿಗಳಿಗೆ ಕಲ್ಲುಗಳಿಂದ ಹೊಡೆಯಲು ಸಾಧ್ಯವಾಗುತ್ತಿತ್ತು. ಕಲ್ಲು ಮತ್ತು ಉಗುರುಗಳಿಗೆ ಇದುವರೆಗೆ ಗೊತ್ತಿಲ್ಲದಿದ್ದ

ಒಂದು ಹೆಚ್ಚಿನ ಸಾಧನ ಸೇರಿತು ಆದರೆ ಅವುಗಳ ಸಂಘ ಜೀವನಕ್ಕೆ ಇದರಿಂದ ಸ್ವಲ್ಪ ತೊಂದರೆಯಾಯಿತು. ಏಕೆಂದರೆ ಆಹಾರಕ್ಕಾಗಿ ಇವು ಬಹುದೂರ ಸುತ್ತಾಡಬೇಕಾಗುತ್ತಿತ್ತು. ಜೀವ ಪ್ರಪಂಚದಲ್ಲಿ ಯುಗಯುಗಗಳಿಂದ ನಡೆದುಬಂದ ಸಂಪ್ರದಾಯದ ಪ್ರಕಾರ ಪುಟ್ಟವ್ಯಕ್ತಿಗಳು ದೊಡ್ಡ ವ್ಯಕ್ತಿಗಳ ಮುಂದೆ ನಿಲ್ಲಲಾರದೆ ಕಾಣೆಯಾದರು. ದೊಡ್ಡ ಗಾತ್ರದ ವಾನರ ಪ್ರಾಣಿಗಳಲ್ಲಿ ವೈಯಕ್ತಿಕ ಕುಟುಂಬವೆಂಬ ಸಂಸ್ಥೆ ಚೆನ್ನಾಗಿ ಬೆಳೆಯಿತು. ಇಂದಿನ ಗೊರಿಲ್ಲ, ಚಿಂಪಾಂಜಿ ಮತ್ತು ಒರಾಂಗ್ ಉತಾಂಗ್ ನಡೆದು ಬಂದ ಹಾದಿಯಿದು.

8. ಬೆಂಕಿ ಮತ್ತು ಆಯುಧಗಳು

ಆದರೆ ಯಾವುದೋ ಒಂದು ಹಂತದಲ್ಲಿ ಕಾಡುಗಳು ಕಡಿಮೆಯಾದಾಗ ಈ ದೊಡ್ಡ ದೊಡ್ಡ ವಾನರಗಳಿಗೆ ಬೇರೆ ವಿಧದ ತೊಂದರೆಗಳು ಬಂದುವು. ಹುಲ್ಲುಗಾವಲುಗಳು ಮತ್ತು ಒಣ ಸ್ಟೆಪ್ಪಿಗಳು ಹರಡಿದುವು. ಸಸ್ಯಾಹಾರದ ಸರಬರಾಜು ಕಡಿಮೆಯಾಯಿತು. ಇವುಗಳ ಆಹಾರದಲ್ಲಿ ಸಣ್ಣ ಪುಟ್ಟ ಪ್ರಾಣಿಗಳು ಹಾಗೂ ಮಾಂಸ ಬರಬರುತ್ತಾ ಪ್ರಧಾನವಾದುವು. ಎಂದಿನಂತೆ ಅಂದೂ ಇದ್ದ ಮಾರ್ಗಗಳು ಎರಡೇ. ಹೊಂದಿಕೊ ಇಲ್ಲ ಹಾಳಾಗು. ಈ ನಿಯಮ ಪಾಲಿಸಲು ಆಗದ ವಾನರಗಳು ಪ್ರಪಂಚದ ಎಲ್ಲ ಕಡೆಗಳಲ್ಲೂ ಸಾವಿಗೀಡಾದುವು. ಹೊಸ ಪ್ರಾಣಿ ಮಾದರಿಗಳ ಒಂದು ಸರಣಿ ಈ ದುರ್ಗತಿಯಿಂದ ತಪ್ಪಿಸಿಕೊಂಡಿತು. ಅಡವಿಯ ವಾನರಗಳಿಗಿಂತ ಇವುಗಳು ನೆಟ್ಟಗೆ ನಿಲ್ಲುತ್ತಿದ್ದುವು. ಓಡುತ್ತಾ ಓಡುತ್ತಾ ಬೇಟೆಯಾಡುತ್ತಿದ್ದ ಈ ಪ್ರಾಣಿಗಳಿಗೆ ಬೇಟೆಯಲ್ಲಿ ಪರಸ್ಪರ ಸಹಕರಿಸುವಷ್ಟು ಬುದ್ಧಿಯಿತ್ತು.

ಓಡುವ ಸ್ವಭಾವದ ಈ ನೆಲದ ವಾನರಗಳೇ ಹೋಮಿನಿಡೇ ಎಂದು ಕರೆಯುವ ಹಿಂಸಾಬುದ್ಧಿಯ ಪ್ರಾಣಿಜಾತಿ ಹೊರಾಂಗಣದಲ್ಲಿ ವಾಸಿಸುವ ಪ್ರಾಣಿಗಳು ಇವು, ಸಾಕಷ್ಟು ಬುದ್ಧಿಯಿರುವ ಇವು ಮುಳುಗಿ ಸಾಯುವುದು ಕಡಿಮೆ, ಹೀಗಾಗಿ ಇವುಗಳ ಪಳೆಯುಳಿಕೆಗಳು ಸಿಗುವುದು ಬಹು ಅಪರೂಪವಾದರೂ ಸಿಕ್ಕಷ್ಟರಿಂದಲೇ ಸಾಕಷ್ಟು ವಿಷಯ ತಿಳಿದು ಬರುತ್ತದೆ. ಭೂಮಿಯ ಮೇಲೆ ಇವು ತಮ್ಮ ಮೂಳೆಗಳನ್ನುಳಿಸಿಲ್ಲದಿರಬಹುದು. ಎಲ್ಲೆಲ್ಲೂ ಇವು ಬಳಸುತ್ತಿದ್ದ ಉಪಕರಣಗಳು ಹರಡಿವೆ. ನೆಟ್ಟಗೆ ನಿಲ್ಲಲು ಸಾಧ್ಯವಿದ್ದುದರಿಂದ ಇವುಗಳ ಕೈ ಮತ್ತು ಕಣ್ಣುಗಳ ಉಪಯೋಗದಲ್ಲಿ ಸ್ವಾತಂತ್ರ್ಯ ಬಂದು ಅವು ಪರಸ್ಪರ ಹೊಂದಿಕೊಂಡು ನಿಖರವಾಗಿ ಕೆಲಸ ಮಾಡುವಂತಾಯಿತು. ಒಡ್ಡೊಡ್ಡಾದ ಧ್ವನಿ ಹೊರಡಿಸುತ್ತಾ ಒಂದರೊಡನೊಂದು ವ್ಯವಹರಿಸುತ್ತಿದ್ದುವು. ಬಳಿಕ ತಮ್ಮ ಕೆಲಸಗಳಿಗಾಗಿ ಕೋಲುಗಳನ್ನೂ ಕಲ್ಲುಗಳನ್ನು ಬಳಸತೊಡಗಿದುವು. ದೊಡ್ಡ ದೊಡ್ಡ, ಕಲ್ಲುಗಳನ್ನು ಕುಟ್ಟಿ ಚೂಪಾಗಿರುವಂತೆ ಮಾಡಿಕೊಂಡುವು. ಹಾಗೆ ಮಾಡುವಾಗ ಬಂದ ಕಿಡಿಗಳು ಈ ಪ್ರಾಣಿಗಳು ಕುಳಿತ ಬಳಿ ಇದ್ದ ಒಣ ಎಲೆಗಳ ಮೇಲೆ ಹಾರಿ ಕೆಂಪು ಹೂವಿನಂತಿರುವ ಬೆಂಕಿಕಾಣಿಸಿಕೊಂಡ

ಅದು ಇವುಗಳಿಗೆ ಸರ್ವೇಸಾಧಾರಣ ಎನಿಸಿ ಅದಕ್ಕೆ ಇವು ಬೆದರಲೇ ಇಲ್ಲ. ಅದುವರೆಗೆ ಉಳಿದ ಪ್ರಾಣಿಗಳಿಗೆ ಬೆಂಕಿ ಕಾಣಿಸಿಕೊಂಡಿದ್ದುದು ಕಾಡು ಕಿಚ್ಚಿನ ರೂಪದಲ್ಲಿ. ವಿನಾಶಕಾರಿಯಾದ ಈ ಬೆಂಕಿಯಿಂದ ಬೆದರಿ ಅವು ದಿಕ್ಕಾಪಾಲಾಗಿ ಓಡುತ್ತಿದ್ದುವು. ಕಾಡುಕಿಚ್ಚು ಇವುಗಳನ್ನು ನಿಷ್ಕರುಣೆಯಿಂದ ಅಟ್ಟಿಸಿಕೊಂಡು ಬರುತ್ತಿತ್ತು. ಗವಿಗಳಲ್ಲಿ ವಾಸಿಸುತ್ತಿದ್ದ ಕರಡಿಗಳೂ ಸಹ ಬೆಂಕಿ ಹೊಗೆ ಎಂದರೆ ಬೇರೆ ಯೋಚನೆಯೇ ಇಲ್ಲದೆ ಓಡುತ್ತಿದ್ದುವು. ಇದಕ್ಕೆ ವ್ಯತಿರಿಕ್ತವಾಗಿ ಹೋಮಿನಿಡೇ ಜಾತಿಯ ಪ್ರಾಣಿಗಳು ಬೆಂಕಿಯನ್ನು ಒಬ್ಬ ಸೇವಕ, ಸ್ನೇಹಿತನನ್ನಾಗಿ ಮಾಡಿಕೊಂಡುವು. ಚಳಿ ಹೆಚ್ಚಾದಾಗ ಮತ್ತು ಮಾಂಸಾಹಾರಿ ಪ್ರಾಣಿಗಳು ಮೇಲೆ ಬೀಳಲು ಬಂದಾಗ ಗುಹೆಗಳಿಗೋ ಅಂಥವೇ ಇನ್ನಿತರ ಆಸರೆಗಳಿಗೆ ನುಸುಳಿಕೊಂಡು ಹೋಗಿ ಬೆಂಕಿ ಉರಿಸಿಕೊಂಡು ರಕ್ಷಣೆ ಪಡೆಯುತ್ತಿದ್ದುವು.

ಒಂದಾದ ಮೇಲೊಂದು ನಡೆದ ಹಿಮಯುಗಗಳ ಚಳಿಯಲ್ಲೂ ಈ ದೊಡ್ಡ ಗಾತ್ರದ ಅರ್ಧ ಮನುಷ್ಯರಂತಿದ್ದ ಈ ಒಡ್ಡು ಪ್ರಾಣಿಗಳು ಉಳಿದುಕೊಂಡು ಬಂದುವು. ಒಡ್ಡೊಡ್ಡಾಗಿ ಕಿರಿಚುತ್ತಾ ಸಂಜ್ಞೆಗಳನ್ನು ಮಾಡುತ್ತಾ ಇವು ಬೇಟೆಯಾಡುತ್ತಿದ್ದುವು, ಪ್ರಾಣಿಗಳನ್ನು ಕೊಲ್ಲುತ್ತಿದ್ದುವು. ಪ್ರೌಢಾವಸ್ಥೆಯಲ್ಲಿ ಇವುಗಳ ಗಾತ್ರ ಮತ್ತು ಭಾರ ಇಂದಿನ ಮನುಷ್ಯರಿಗಿಂತ ಹೆಚ್ಚಾಗಿರುತ್ತಿತ್ತು. ಫ್ರಾನ್ಸಿನ ಷೆಲ್ಲೆಸ್ ಎಂಬಲ್ಲಿ ಸಿಕ್ಕಿರುವ ಈ ಪ್ರಾಣಿಗಳು ಮಾಡಿದ ಆಯುಧಗಳು ಬಲು ದೊಡ್ಡವು. ಒಡೆದು ಕುಟ್ಟಿ ಇವುಗಳನ್ನು ಮಾಡಿದ ಕೈಗಳಷ್ಟು ದೊಡ್ಡದಾಗಿ ಯಾವ ಮನುಷ್ಯನ ಕೈಯೂ ಇರಲು ಸಾಧ್ಯವಿಲ್ಲ. ಪ್ರಾಚೀನ ಶಿಲಾಯುಗದ ಕಡೆಯ ಭಾಗದ ಮನುಷ್ಯರು ಮಾಡಿರುವ ಸಾಕಷ್ಟು ನಾಜೂಕಾದ ಆಯುಧಗಳಂಥವನ್ನು ಇಂದಿನ ಚತುರ ಕಲ್ಲುಕುಟಿಗರು ಚೆನ್ನಾಗಿಯೇ ತಯಾರಿಸಬಲ್ಲರು. ಷೆಲೆಸ್‌ನ ಆಯುಧದ ನಕಲು ತಯಾರಿಸುವುದು ಆದಿಶಿಲಾಯುಗದ ಅರೆಮಾನವರು ಶಿಲಾಯುಧ ತಯಾರಿಸುವಷ್ಟೇ ಕಠಿಣ. ಷೆಲ್ಲೆಸ್ ಆಯುಧ ದೊಡ್ಡ ಚಕಮುಂಕಿ ಕಲ್ಲಿನ ಒಳಭಾಗ, ಬಳಿಕ ಬಂದ ಮನುಷ್ಯರ ಆಯುಧ ಇಂಥ ಒಳಭಾಗದಿಂದ ಎಬ್ಬಿಸಿದ ಚಕ್ಕೆ ಮಾತ್ರ.

ಹೋಮೋ ಸೇಪಿಯನ್ಸ್ ಎಂದು ಕರೆಯುವ ಪ್ರಾಣಿ ಇತರ ಹೋಮಿನಿಡೆಗಳಲ್ಲಿ ಬಹು ಮುಂಚೆಯೇ ಎದ್ದು ಕಾಣುತ್ತದೆ. ಜೀವಚಕ್ರ ಮುಂದೆ ಸಾಗುತ್ತಿದ್ದಂತೆ ಜೀವಿಗಳ ವೈವಿಧ್ಯಪೂರ್ಣ ಚರಿತ್ರೆಯಲ್ಲಿ ಕೆಲವೊಮ್ಮೆ ಶೈಶವ ಘಟ್ಟದಲ್ಲೇ ನಿಂತು ಅದರಿಂದಲೇ ಜೈವಿಕವಾಗಿ ಹೊಂದಾಣಿಕೆ ನಡೆಸಲು ಹೆಚ್ಚು ಸಮರ್ಥವಾದ ಪ್ರಾಣಿಗಳು ಕಾಣಿಸಿಕೊಳ್ಳುತ್ತವೆ. ಹೋಮೋ ಸೇಪಿಯೆನ್ಸ್ ಸಹ ಅಂಥದೇ ರೂಪ. ಒಡ್ಡೊಡ್ಡಾದ ಪ್ರೌಢರೂಪದ ಹೈಡೆಲ್‌ಬರ್ಗ್ ಅಥವಾ ನಿಯಾಂಡರ್‌ಥಾಲ್ ಮನುಷ್ಯರಂತಲ್ಲ ಈತ. ಮೊದಮೊದಲು ಇವನು ಅಶಕ್ತ, ಕ್ರೀಡಾ ಪ್ರವೃತ್ತನಾದ, ಕಲಿಯುವ ಶಕ್ತಿಯಿದ್ದ ಕಿರಿವಯಸ್ಸಿನಲ್ಲೇ ಹೆಚ್ಚಾದ ಬುದ್ಧಿಯುಳ್ಳ ಮಗುವಿನಂತಿದ್ದನು. ಲೈಂಗಿಕವಾಗಿ ಪ್ರೌಢನಾದ ಮೇಲೂ ಸಾಮಾಜಿಕವಾಗಿ ವಿಧೇಯನಾಗಿರಲು ಇವನಿಗೆ ಆಗುತ್ತಿತ್ತು.

ಜೀವನ ಪರಿಸ್ಥಿತಿ ಒಂದೇ ಸಮನೆ ಬದಲಾಯಿಸುತ್ತಿತ್ತು. ಸಂಪೂರ್ಣವಾಗಿ ಬೆಳೆದು ನಿಂತ, ಹೊಂದಾಣಿಕೆ ಸಾಧ್ಯವಿಲ್ಲದ ಪ್ರೌಢಪ್ರಾಣಿಗೆ ಇದನ್ನು ತಾಳಲು ಸಾಧ್ಯವಾಗುತ್ತಿರಲಿಲ್ಲವಾದುದರಿಂದ ಜೀವಚಕ್ರದಿಂದ ಅಂತಹ ಪ್ರಾಣಿಗಳು ಬಿದ್ದುಹೋದುವು. ಹೀಗೆ ಆದಿಕಾಲದ ಮಂದಬುದ್ಧಿಯ ಪ್ರೌಢರೂಪಿನ ಹೋಮೋ ಮಾಯವಾಗುತ್ತಾನೆ. ಅವನ ಸ್ಥಳದಲ್ಲಿ ಎಳಸಾದ ಮಾದರಿ ಬಂದಿತೆಂದು ಬಂಡೆಗಳ ದಾಖಲೆಗಳು ಸ್ಪಷ್ಟವಾಗಿ ತೋರಿಸುತ್ತವೆ. ಆದರೆ ಈ ಬದಲಾವಣೆ ನಡೆದದ್ದು ಹೇಗೆ, ಅದರ ವಿವಿಧ ಹಂತಗಳೇನು ಎನ್ನುವುದು ಇನ್ನೂ ಊಹೆಯ ಘಟ್ಟದಲ್ಲೇ ಇವೆ. ಹೋಮೋ ಸೇಪಿಯೆನ್ಸ್ ಜಾತಿಯಲ್ಲಿರುವ ಎಲ್ಲ ಒಳಜಾತಿಗಳೂ ಪರಸ್ಪರ ವರ್ತನೆ ಸಂತಾನ ಪಡೆಯಬಲ್ಲುವು. ಮೊದ ಮೊದಲು ಈ ಜಾತಿಯ ಎಲ್ಲ ಪ್ರಭೇದಗಳಲ್ಲೂ ಒಂದೇ ಸಮನೆ ಇಂತಹ ಪರಸ್ಪರ ಬೆರೆಯುವಿಕೆ ನಡೆಯುತ್ತಿತ್ತೆನಿಸುತ್ತದೆ. ಮಧ್ಯೆ ಮಧ್ಯೆ ಇವು ಒಂದರಿಂದ ಒಂದು ಪ್ರತ್ಯೇಕಿಸಲ್ಪಟ್ಟಾಗ ನೆಂದರ್‌ಥಾಲರ್, ನೀಗ್ರೋ, ಕರಿ, ಬಿಳಿ, ಎತ್ತರ, ಕುಳ್ಳು ಹೀಗೆ ಹಲವು ವಿಧದ ಮನುಷ್ಯರು ಅಲ್ಲಲ್ಲೇ ಹುಟ್ಟಿಕೊಂಡಿರಬಹುದು. ಇವರೆಲ್ಲ ಈಗಲೂ ಪರಸ್ಪರ ಸಂಬಂಧ ಬೆಳೆಸಿ ಮಕ್ಕಳನ್ನು ಪಡೆಯಬಲ್ಲರು. ಹಲವು ವಿಧದ ನಾಯಿಗಳು ಅಡ್ಡಿಗಳನ್ನು ತೆಗೆದರೆ ಈಗಲೂ ಒಟ್ಟು ಸೇರಿ ಅಡ್ಡತಳಿ ನಾಯಿಮರಿಗಳನ್ನು ಹುಟ್ಟಿಸುವುದಿಲ್ಲವೇ ಹಾಗೆ. ಕುಟುಂಬಗಳು ಬಣಗಳು ಒಂದರ ಮೇಲೊಂದು ಯುದ್ಧ ಮಾಡಿರಬಹುದು. ಆಗೆಲ್ಲ ವಿಜಯಿಗಳು ಸೋತವರ ಹೆಂಗಸರನ್ನು ಸೇರುತ್ತಿದ್ದುದರಿಂದ ಬಣಗಳ ವಿಶಿಷ್ಟತೆ ಅಳಿಸಿ ಹೋಗುತ್ತಿದ್ದಿರಲೂಬಹುದು. ತುಲನಾತ್ಮಕ ಮಾನವಶಾಸ್ತ್ರ ಆದಿಮಾನವ ಕಾಣೆಯಾಗಿ ಅವನ ಸ್ಥಳದಲ್ಲಿ ಇಂದಿನ ಮಾನವ ಬಂದನೆಂಬ ಕತೆಯನ್ನು ಬಿಡಿಸಿ ತೋರಿಸುತ್ತದೆ. ಪ್ರೌಢಾವಸ್ಥೆಯ ಆದಿಮಾನವ ನಿಷ್ಪ್ರಯೋಜಕನಾಗಿ ಹೋದ. ತೊಟ್ಟಿಲಿನಿಂದ ಸಮಾಧಿ ಸೇರುವವರೆಗೆ ಒಳ್ಳೆಯ ಮನಸ್ಸಿದ್ದಾಗ ತಿಳಿಯಬೇಕೆಂಬ ಕುತೂಹಲ, ಕಲಿಯುವ ಶಕ್ತಿ, ಹಾಗೂ ಪ್ರಯೋಗಶೀಲತೆಗಳಿರುವ ಮಗುವಿನಂತೆ ತೆರೆದ ಮನಸ್ಸುಳ್ಳ ಹೋಮೋಸೇಪಿಯೆನ್ಸ್ ಅವನ ಉತ್ತರಾಧಿಕಾರಿಯಾದ.

"ಒಳ್ಳೆಮನಸ್ಸಿದ್ದಾಗ" ಈ ಪದಗಳೇ ಈ ಭಾಗದ ಮುಖ್ಯ ಅಂಶ, ಇಂದಿನ ಮಾನವರಲ್ಲಿ ಮನಸ್ಸನ್ನು ಹೊಂದಿಸಿಕೊಳ್ಳುವ ಶಕ್ತಿಯಲ್ಲಿ ಅಪಾರ ಭಿನ್ನತೆಗಳಿವೆ. ಇಂದಿನ ಜನತೆಯ ಅಧಿಕ ಭಾಗಕ್ಕೆ ಎಳೆಮನಸ್ಸು ಬುದ್ಧಿಗಳಿದ್ದ ಮೊದಲ ಪೀಳಿಗೆಗಿದ್ದಂತೆ ಹೊಸ ಭಾವನೆಗಳನ್ನು ಸ್ವಾಗತಿಸುವ ಮನೋಭಾವ ಇರಲಾರದು. ಅಥವಾ ಮಾನವ ಸಮಾಜ ಮತ್ತು ಸಂಸ್ಥೆಗಳು ಜಟಿಲವಾಗುತ್ತಾ ಅಪಾರವಾಗಿ ಬೆಳೆದಿದ್ದು ಈ ಬೆಳವಣಿಗೆಯ ಸಮಕ್ಕೆ ಮಾನವರ ಕಲ್ಪನಾಯುತ ಚಿಂತನೆ ಬೆಳೆದಿಲ್ಲದಿರಬಹುದು. ಮಾನವ ಕುಲದ ಆಶೆಗಳ ಮೇಲೆ ಕವಿದಿರುವ ಕಪ್ಪುನೆರಳು ಇದು.

ಜೀವದ ಚರಿತ್ರೆಯ ಕಡೆಗಾಣುವವರೆಗೂ ಪಾತ್ರವಹಿಸುವ ಶಕ್ತಿಯುಳ್ಳ ಒಂದು ಅಲ್ಪಸಂಖ್ಯಾತ ವರ್ಗ ನಮ್ಮಲ್ಲಿಲ್ಲ ಎಂದು ಹೇಳಲು ನನ್ನ ಸ್ವಭಾವ ಒಪ್ಪುವುದಿಲ್ಲ.

ಎಂ. ಬಿ. ಸೋಮಣ್ಣ

ವರದಕ್ಷಿಣೆ ನಿರ್ಮೂಲನೆ

ಭಾರತದಲ್ಲಿ ವರದಕ್ಷಿಣೆ ಯಾವಾಗ ಎಲ್ಲಿ ಪ್ರಾರಂಭವಾಯಿತು ಎಂದು ನಿಖರವಾಗಿ ಹೇಳುವುದು ಕಷ್ಟ. ಏಕೆಂದರೆ ವೇದಗಳ ಕಾಲದಲ್ಲಾಗಲಿ, ಉಪನಿಷತ್ತುಗಳ ಕಾಲದಲ್ಲಾಗಲೀ ಇದರ ಪ್ರಸ್ತಾಪವಿಲ್ಲ. ಆದರೂ ವಧುವನ್ನು ಗಂಡನ ಮನೆಗೆ ಕಳುಹಿಸುವಾಗ ಆಕೆಯ ತಂದೆ–ತಾಯಿಯರು ಅನೇಕ ಗೃಹಕೃತ್ಯದ ವಸ್ತುಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಪುರಾಣಗಳ ಕಾಲದಲ್ಲಿ ಹಸು, ಎಮ್ಮೆ, ಹಣ, ಚಿನ್ನ, ವಸ್ತ್ರ, ಪಾತ್ರೆ ಮುಂತಾದವುಗಳನ್ನು ಕಡ್ಡಾಯವಾಗಿ ಕೊಡುತ್ತಿದ್ದ ವ್ಯವಸ್ಥೆ ಕಂಡು ಬರುತ್ತದೆ. ಪ್ರಾರಂಭದಲ್ಲಿ ಇದನ್ನು ಸ್ತ್ರೀಧನವೆಂದು ಪರಿಗಣಿಸಲಾಗಿತ್ತು. ಅದರಂತೆ ಸ್ತ್ರೀ ತನ್ನ ಈ ಸ್ವತ್ತನ್ನು ಅನುಭವಿಸುವ, ವಿತರಣೆ ಮಾಡುವ ಅಥವಾ ದಾನ ಮಾಡುವ ಸಂಪೂರ್ಣ ಹಕ್ಕನ್ನು ಹೊಂದಿದ್ದಳು. ಅಕಸ್ಮಾತ್ ಗಂಡನಿಂದ ನಿರ್ಲಕ್ಷಿಸಲ್ಪಟ್ಟರೆ ಅಥವಾ ಅವನು ಮರಣ ಹೊಂದಿದರೆ ತನ್ನ ಜೀವನವನ್ನು ಸಾಗಿಸಲು ನೆರವಾಗಲೆಂದು ಸ್ತ್ರೀಧನವನ್ನು ಕೊಡಲಾಗುತ್ತಿತ್ತು. ಆದರೆ ಈ ನೇವು ಇತ್ತೀಚಿನ ದಿನಗಳಲ್ಲಿ ಸಂಪೂರ್ಣವಾಗಿ ರೂಪಾಂತರಗೊಂಡು ವರದಕ್ಷಿಣೆಯಾಗಿರಬಹುದೆಂದು ಊಹಿಸಲಾಗಿದೆ. ಹಿಂದೂ ಸಮಾಜದ ಮೇಲ್‌ಜಾತಿಗಳಲ್ಲಿ ಮಾತ್ರ ಇದ್ದಂಥ ಈ ಪದ್ಧತಿ ಕ್ರಮೇಣ ಎಲ್ಲಾ ಜಾತಿಗಳಲ್ಲಿ ಮತ್ತು ವರ್ಗಗಳಲ್ಲಿ ಜಾರಿಯಲ್ಲಿರುವುದು ಕಂಡುಬರುತ್ತಿದೆ. ಪುರುಷನಿಗೆ ಹಿಂದೂ ಸಮಾಜದಲ್ಲಿ ಕೊಟ್ಟಿರುವ ಹಾಗೂ ಸಿಕ್ಕಿರುವ ಶ್ರೇಷ್ಠಸ್ಥಾನ ಈ ವರದಕ್ಷಿಣೆಯ ಪದ್ಧತಿ ಮತ್ತಷ್ಟು ಬಲಗೊಳ್ಳಲು ಪ್ರೋತ್ಸಾಹ ನೀಡಿತು. ವರದಕ್ಷಿಣೆಯ ಕರಾಳ ಕಪಿಮುಷ್ಟಿಯಿಂದ ಪಾರಾಗಲು ಇಂದೂ ಸಾವಿರಾರು ಹೆಣ್ಣುಮಕ್ಕಳು ತೊಳಲಾಡುತ್ತಿದ್ದಾರೆ. ವರದಕ್ಷಿಣೆಯ ವ್ಯವಸ್ಥೆ ಬಲಗೊಳ್ಳಲು ಗಂಡಿನ ತಂದೆ–ತಾಯಿಯರು ಎಷ್ಟು ಮುಖ್ಯ ಕಾರಣರೋ ಹೆಣ್ಣು ಹಾಗೂ ಹೆಣ್ಣಿನ ತಂದೆ–ತಾಯಿಯರು ಅಷ್ಟೇ ಕಾರಣರು. ದಿನೇ ದಿನೇ ಕ್ಲಿಷ್ಟಗೊಳ್ಳುತ್ತಿರುವ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅನಿರೀಕ್ಷಿತವಾಗಿ ಒಂದೇ ಬಾರಿಗೆ ಹಣ ಸಂಪಾದನೆಯ ಮಾರ್ಗವಾಗಿ ಅನೇಕ ಗಂಡುಗಳು ಮತ್ತು ಅವರ ತಂದೆ-ತಾಯಿಯರು ವರದಕ್ಷಿಣೆಯನ್ನು ಬಯಸುತ್ತಿರುವುದನ್ನು ಇಂದಿನ ಸಮಾಜದಲ್ಲಿ ನೋಡಬಹುದಾಗಿದೆ. ಶ್ರೀಮಂತ ತಂದೆ-ತಾಯಿಯರು ತಮ್ಮ

ಹೆಣ್ಣುಮಕ್ಕಳಿಗೆ ಸಾಕಷ್ಟು ಹಣ, ಚಿನ್ನ ಸುರಿದು ತಕ್ಕ ವರನನ್ನು ತರುವುದು ಸುಲಭ. ಇಂತಹ ಗಂಡುಗಳು ಅನೇಕ ವೇಳೆ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು ಹೆಣ್ಣನ್ನು ಬಲಿಪಶುವನ್ನಾಗಿ ಮಾಡಿರುವುದು ಆಶ್ಚರ್ಯವಲ್ಲದ ದಿನನಿತ್ಯದ ಸಂಗತಿ. ವರದಕ್ಷಿಣೆಯು ನಿಜವಾಗಿಯೂ ಸಮಸ್ಯೆಯಾಗಿರುವುದು ಬಡವರಿಗೆ ಹಾಗೂ ಮಧ್ಯಮ ವರ್ಗದ ಜನರಿಗೆ. ವಿವಾಹದ ವೆಚ್ಚನೇ ದಿನೇ ದಿನೇ ಹೆಚ್ಚುಗುತ್ತಿರುವುದರಿಂದ ವರದಕ್ಷಿಣೆಯ ಹೊರೆ ಅತ್ಯಂತ ಗಂಭೀರವಾದ ಸಮಸ್ಯೆಯಾಗಿದೆ. ತಾನು ದುಡಿದ ದುಡಿಮೆಯನ್ನು ಮಾತ್ರವಲ್ಲದೆ ನಿರಂತರವಾದ ಸಾಲದ ಶೂಲದಲ್ಲಿ ಹೆಣ್ಣಿನ ತಂದೆ-ತಾಯಿಗಳು ತೊಳಲಾಡುವಂತೆ ಮಾಡುವಷ್ಟು ಪ್ರಭಾವವನ್ನು ವರದಕ್ಷಿಣೆಯು ಬೀರುತ್ತಿದೆ. ವರದಕ್ಷಿಣೆಯನ್ನು ಕೊಡಲಾಗದ ತಂದೆ-ತಾಯಿಗಳು ತಮ್ಮ ಮಗಳ ವಿವಾಹದ ವಯಸ್ಸನ್ನು ಮುಂದೂಡುವ ಅಥವಾ ವಿವಾಹವನ್ನೇ ಮಾಡಲಾರದ ಪರಿಸ್ಥಿತಿಯನ್ನು ಮುಟ್ಟುತ್ತಿದ್ದಾರೆ.

ಇಂದು 'ಹಣದ' ಹಾಗೂ 'ವಸ್ತುಗಳ' ರೂಪದಲ್ಲಿ ನೀಡಲಾಗುತ್ತಿರುವ ವರದಕ್ಷಿಣೆಗೆ ಒಂದು ನಿಶ್ಚಿತವಾದ ಮಿತಿಯೇನಿಲ್ಲ. ನೀಡುವವರ/ಕೇಳುವವರ ಅಂತಸ್ತಿಗೆ, ಅದಕ್ಕಿಂತ ಹೆಚ್ಚಾಗಿ ವರನ ಮತ್ತು ಆತನ ಕುಟುಂಬದವರ ಬೇಡಿಕೆಗಳಿಗನುಗುಣವಾಗಿ ನೂರು ರೂಪಾಯಿಯಿಂದ ಹತ್ತು ಲಕ್ಷದವರೆಗೂ ಹಣ ಸಂದಾಯವಾಗಬಹುದು. ಇಷ್ಟೇ ಅಲ್ಲದೆ ವಸ್ತುಗಳ ರೂಪದಲ್ಲಿ ಕೈಗಡಿಯಾರ, ಉಂಗುರ, ಬೆಲೆಬಾಳುವ ಬಟ್ಟೆಗಳು, ಟೇಪ್ ರೆಕಾರ್ಡರ್, ಟಿ.ವಿ., ಫ್ರಿಜ್, ಸೋಫಾಸೆಟ್ಟುಗಳು, ಮನೆ ಅಥವಾ ನಿವೇಶನ, ಕಾರು, ವಿದೇಶಿ ವೀಡಿಯೋ, ವಿದೇಶಿ ಪ್ರಯಾಣಕ್ಕೆ ವಿಮಾನದ ಟಿಕೆಟ್ಟುಗಳವರೆಗೆ ಬೇಡಿಕೆಗಳ ಸರಮಾಲೆಯನ್ನೇ ವಧುವಿನ ತಂದೆ-ತಾಯಿಗಳು ವರನ ಕೊರಳಿಗೆ ಹಾಕಬೇಕಾಗುತ್ತದೆ. ಅಪಾರ ವೆಚ್ಚದಲ್ಲಿ ತನ್ನ ಬಂಧುಗಳಿಂದ ಖರೀದಿಸಲ್ಪಟ್ಟ ಈ ವಸ್ತುಗಳ ಮೇಲಾಗಲೀ, ವರನಿಗೆ ನೀಡಿದ ಹಣದ ಮೇಲಾಗಲೀ, ಆತನ ಹೆಂಡತಿಗೆ ಯಾವ ಹಕ್ಕು ಇಲ್ಲವೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ವರದಕ್ಷಿಣೆ ಪದ್ಧತಿ ಇಷ್ಟೊಂದು ಬೃಹದಾಕಾರವಾಗಿ ಬೆಳೆಯಲು ಕಾರಣಗಳಿಲ್ಲದಿಲ್ಲ. ಈ ಪದ್ಧತಿಯನ್ನು ಪ್ರೋತ್ಸಾಹಿಸಿ, ಪೋಷಿಸಿಕೊಂಡು ಬರುತ್ತಿರುವುದರಲ್ಲಿ ವರನ ಹಾಗೂ ವಧುವಿನ ಎರಡು ಕುಟುಂಬಗಳ ಪಾತ್ರವೂ ಇದೆ. ಅನೇಕ ತಂದೆ-ತಾಯಿಗಳು ತಮ್ಮ ಪ್ರತಿಷ್ಠೆ ಹಾಗೂ ಐಶ್ವರ್ಯಗಳನ್ನು ಮೆರೆಸಲೂ, ತಮ್ಮ ಪೊಳ್ಳು ಗೌರವ-ಘನತೆಗಳನ್ನು ಕಾಪಾಡಿಕೊಂಡು ಬರಲೂ ವರದಕ್ಷಿಣೆ ನೀಡಿದರೆ, ಭಾವಿವರಗಳನೇಕರೂ, ಅವರ ಬಂಧುಗಳೂ ಮದುವೆಗೆ ಒಪ್ಪಲು ಬೇಡಿಕೆಗಳ ಸರಮಾಲೆಯನ್ನೇ ವಧುವಿನ ತಂದೆ-ತಾಯಿಗಳ ಮುಂದೆ ಇಡುತ್ತಾರೆ. ಈ ಬೇಡಿಕೆಗಳು ಇಷ್ಟೊಂದು ಹೆಚ್ಚಾಗಲೂ ಈ ಬೇಡಿಕೆಗಳನ್ನು ಈಡೇರಿಸಲು ತವಕದಿಂದ ಕಾದಿರುವವರ ಸಂಖ್ಯೆ ದ್ವಿಗುಣಗೊಳ್ಳಲೂ ಮುಖ್ಯವಾದೊಂದು ಕಾರಣವಿದೆ.

ಒಂದು ನಿಯಮಿತ ಗುಂಪಿನಲ್ಲಿ ಎಂದರೆ, ಸ್ವಜಾತಿಯಲ್ಲಿ ಅದರಲ್ಲೂ ತಮ್ಮ ಉಪಜಾತಿಯಲ್ಲಿ ಮಾತ್ರವೇ ವಿವಾಹ ಸಂಬಂಧಗಳನ್ನು ಏರ್ಪಡಿಸಲು ತವಕಿಸುವ ಸಂಪ್ರದಾಯವಾದಿಗಳೇ ನಮ್ಮ ಸಮಾಜದಲ್ಲಿ ಬಹುಸಂಖ್ಯೆಯಲ್ಲಿ ಈವತ್ತಿಗೂ ಇರುವುದು ಸರ್ವವಿಧಿತವಾದ ವಿಷಯ. ಇಷ್ಟೇ ಅಲ್ಲ ತಮ್ಮ ಸ್ವಜಾತಿ, ಉಪಜಾತಿ ಯಲ್ಲಿಯ ಗಂಡುಗಳು ನಿರ್ದಿಷ್ಟ ಉದ್ಯೋಗದಲ್ಲೇ (ಉದಾಹರಣೆಗೆ ಡಾಕ್ಟರ್, ಇಂಜನಿಯರು, ವಿಜ್ಞಾನಿ, ವಕೀಲ ಇತ್ಯಾದಿ) ಇರಬೇಕೆಂದೂ ಕೂಡ ಅನೇಕ ಹುಡುಗಿಯರೂ, ಅವರ ತಂದೆ-ತಾಯಿಗಳು ನಿಶ್ಚಿತ ಅಭಿಪ್ರಾಯಗಳನ್ನು ಹೊಂದಿರು ತ್ತಾರೆ. ಈ ರೀತಿ ಒಂದು ನಿಯಮಿತ ಚೌಕಟ್ಟಿನೊಳಗಡೆ ಮಾತ್ರ ಗಂಡುಗಳನ್ನು ಹುಡುಕುವ ಹೆಣ್ಣಿನ ತಂದೆ-ತಾಯಿಗಳಿಗೆ ನಿಯಮಿತ ಆಯ್ಕೆಗಳು ಮಾತ್ರ ಇರುತ್ತವೆ. ಇದರಿಂದ ವಿವಾಹ ಯೋಗ್ಯವಾದ ಗಂಡುಗಳ 'ಕೃತ್ರಿಮಕೊರತೆ' ಸೃಷ್ಟಿಯಾಗಿ ಅಂಥ ಗಂಡುಗಳು ಹುಸಿಗರ್ವವನ್ನು ಬೆಳೆಸಿಕೊಂಡು ಈ ಕೊರತೆಯನ್ನೂ ಹೆಣ್ಣಿನ ಹಾಗೂ ಅವಳ ತಂದೆ ತಾಯಿಗಳ ಕಾತುರತೆಯನ್ನೂ, ದುರುಪಯೋಗಪಡಿಸಿಕೊಂಡು ತಮ್ಮ ಬೇಡಿಕೆಗಳನ್ನೂ, ಹೆಚ್ಚಿಸುತ್ತಾ ಹೋಗುತ್ತಾರೆ. ತಮ್ಮ ಆಶೋತ್ತರ ಗಳನ್ನು ಈಡೇರಿಸುವ ಗಂಡಿಗೆ ಯಾವ ಮೌಲ್ಯವನ್ನಾದರೂ ಕಟ್ಟಿ ಆತನನ್ನು 'ಖರೀದಿಸುವ' ಹೆಣ್ಣು ಹೆತ್ತವರು ಸಿಗುವವರೆಗೂ ಈ ಗಂಡುಗಳು ತಾವು ಆಕ್ರಮಿಸಿ ಕೊಂಡಿರುವ ಉಚ್ಚಸ್ಥಾನದಿಂದ ಕೆಳಗಿಳಿಯುವುದು ಹಾಗಿರಲಿ, ಅತ್ತಿತ್ತ ಸ್ವಲ್ಪವೂ ಸರಿದಾಡುವುದೂ ಇಲ್ಲ.

ಇವರ ತುಚ್ಛಬೇಡಿಕೆಗಳನ್ನು, ಪೊಳ್ಳು ದುರಹಂಕಾರವನ್ನು ನಿರಾಕರಿಸಿ, ಹೆಣ್ಣಿನ ಗೌರವಗಳನ್ನು ಕಾಪಾಡಿ ಒಂದು ನಿಶ್ಚಿತ ಜಾತಿ, ಉಪಜಾತಿ, ಮತ್ತು ನಿಶ್ಚಿತ ಉದ್ಯೋಗ ಮುಂತಾದ ಸಂಕುಚಿತ ಸ್ವಯಂಬಂಧಿತ ಸಂಕೋಲೆಗಳಿಂದ ಹೊರಬಂದು ವಿವಾಹ ಸಂಬಂಧವನ್ನು ಹಣಕ್ಕಾಗಿ ಮಾರಾಟಕ್ಕಿಟ್ಟ ಒಂದು ವಸ್ತುವನ್ನಾಗಿ ಮಾಡದೆ ವಿಶಾಲವಾದ ಗುಂಪಿನತ್ತ ತಮ್ಮ ಹೆಣ್ಣು ಮಕ್ಕಳಿಗೆ ಗೌರವಾನ್ವಿತ-ಗಂಡು ಗಳನ್ನು ತರುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ತಂದೆ-ತಾಯಿಗಳ ಸಂಖ್ಯೆ ಹೆಚ್ಚುವ ವರೆಗೂ, ವರದಕ್ಷಿಣೆಯನ್ನು ಕೇಳುವ ಗಂಡುಗಳ ಸಂಖ್ಯೆಯೂ ಇಳಿಯುವುದಿಲ್ಲ.

ನಮ್ಮ ಇಂದಿನ ಸಮಾಜದಲ್ಲಿ ವರದಕ್ಷಿಣೆಯು ಎಷ್ಟರಮಟ್ಟಿಗೆ ತನ್ನ ಪ್ರಭಾವ ವನ್ನು ಬೀರಿದೆ ಎಂಬುದರ ಬಗ್ಗೆ ನಾವು ಪರಿಶೀಲಿಸುವುದಾದರೆ ದಿನನಿತ್ಯದ ಪತ್ರಿಕೆಗಳಲ್ಲಿ ವರದಕ್ಷಿಣೆಯ ಸಾವುಗಳನ್ನು ವರದಿಮಾಡಲು ಸಾಕಷ್ಟು ಜಾಗವನ್ನು ಖಾಲಿಬಿಟ್ಟು ಕೊಳ್ಳುವ ಮಟ್ಟ ಮುಟ್ಟಿದೆ. ಇಂದು ನಾವು ಪ್ರತಿನಿತ್ಯ ದಿನ ಪತ್ರಿಕೆಗಳನ್ನು ನೋಡಿದಾಗ ವರದಕ್ಷಿಣೆಯ ಕಾರಣದಿಂದ ಅಪಾರ ಸಾವುನೋವುಗಳು ಸಂಭವಿಸುತ್ತಿವೆ ಎಂಬುದು ವರದಿಯಾಗುತ್ತಿರುವುದನ್ನು ನೋಡಬಹುದಾಗಿದೆ.

ವರದಕ್ಷಿಣೆಯ ಸಾವು ನೋವುಗಳ ಬಗ್ಗೆ ಇಂದೂ ಅಂಕಿ-ಅಂಶಗಳು ನೈಜ ಚಿತ್ರಣವನ್ನು ನೀಡುವಲ್ಲಿ ಅಸಮರ್ಪಕವಾಗಿವೆ ಎಂದರೆ ತಪ್ಪಾಗಲಾರದು.

ವರದಕ್ಷಿಣೆಯ ಸಾವು/ನೋವುಗಳ ಬಗ್ಗೆ ಕೇಳುತ್ತಿದ್ದರೂ, ದಿನಪತ್ರಿಕೆಗಳಲ್ಲಿ ಅವುಗಳ ಬಗ್ಗೆ ಓದುತ್ತಿದ್ದರೂ ವರದಕ್ಷಿಣೆಯ ಬಗ್ಗೆ ನಂಬಲರ್ಹವಾದ ಅಂಕಿ-ಅಂಶಗಳನ್ನು ಪಡೆಯಲಾಗುತ್ತಿಲ್ಲ. ಉದಾಹರಣೆಯಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಪೋಲೀಸ್ ಇಲಾಖೆಯಲ್ಲಿ ದಾಖಲಾಗಿರುವ ಹಲವು ಅಂಕಿ–ಅಂಶಗಳನ್ನು ಇಲ್ಲಿ ನೀಡಲಾಗಿದೆ.

ವರ್ಷ	ದಾಖಲಾಗಿರುವುದು	ನಿಜವಾಗಿರುವುದು	ಸುಳ್ಳಾಗಿರುವುದು	ಪೋಲೀಸ್ ವಿಚಾರಣೆಯಲ್ಲಿರುವ ವಿಚಾರಣೆಗಳು
1986				
1. ವರದಕ್ಷಿಣೆಯ ಸಾವುಗಳು	03	03	—	—
2. ವರದಕ್ಷಿಣೆಯಲ್ಲಿನ ಕಿರುಕುಳಗಳು	18	12	5	—
1987				
1. ವರದಕ್ಷಿಣೆಯ ಸಾವುಗಳು	08	07	01	—
2. ವರದಕ್ಷಿಣೆಯಲ್ಲಿನ ಕಿರುಕುಳಗಳು	14	11	02	01
1988				
1. ವರದಕ್ಷಿಣೆಯ ಸಾವುಗಳು	11	08	—	02
2. ವರದಕ್ಷಿಣೆಯಲ್ಲಿನ ಕಿರುಕುಳಗಳು	28	23	02	13
1989 ಜೂನ್ 30ರ ವರೆಗೆ				
1. ವರದಕ್ಷಿಣೆಯ ಸಾವುಗಳು	06	06	—	05
2. ವರದಕ್ಷಿಣೆಯಲ್ಲಿನ ಕಿರುಕುಳಗಳು	23	23	—	18

ವರದಕ್ಷಿಣೆಯ ಸಾವುಗಳನ್ನು ರಾಜ್ಯವಾರು ವಿಂಗಡಣೆ ಮಾಡಿದಾಗ 1988ರಲ್ಲಿ ಕರ್ನಾಟಕ ರಾಜ್ಯವು ಇಡೀ ದೇಶದಲ್ಲೇ ಎರಡನೆ ಸ್ಥಾನವನ್ನು ಪಡೆದರೆ, ಮಹಾರಾಷ್ಟ್ರವು ಮೊದಲನೇ ಸ್ಥಾನವನ್ನು ಪಡೆದಿದೆ. "ಜುಲೈ 1989, 21ನೇ ತಾರೀಖಿನ ದಿನಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್"ನಲ್ಲಿ (ಪುಟ ಸಂಖ್ಯೆ 5) ಪ್ರಕಟಿಸಿರುವ ಅಂಕಿ–ಅಂಶಗಳ ಆಧಾರದ ಮೇಲೆ ಈ ಮೇಲ್ಕಂಡ ವಿಷಯವನ್ನು ತಿಳಿಯಲಾಗಿದೆ. ಇದೇ ಪತ್ರಿಕೆಯ ವರದಿಯಂತೆ ಕರ್ನಾಟಕದಲ್ಲಿ 1986ರಲ್ಲಿ 54 ಇದ್ದಂತಹ ವರದಕ್ಷಿಣೆಯ ಸಾವುಗಳು 1988ರ ವೇಳೆಗೆ 179ಕ್ಕೆ ಏರಿದೆ. ಅದೇ ಮಹಾರಾಷ್ಟ್ರದಲ್ಲಿ 1988ರ ಅಂಕಿ-ಅಂಶಗಳ ಪ್ರಕಾರ ವರದಕ್ಷಿಣೆ ಸಾವುಗಳ ಸಂಖ್ಯೆ 294. ಅಂದರೆ ಈ

ವರದಕ್ಷಿಣೆಯ ಪಿಡುಗು ಸಮಾಜವನ್ನು ಎಷ್ಟು ಅಧೋಗತಿಯತ್ತ ಕೊಂಡೊಯ್ಯುತ್ತದೆ ಎಂಬುದು ತಿಳಿಯುತ್ತದೆ.

ವರದಕ್ಷಿಣೆಯ ನಿರ್ಮೂಲನೆಯ ಬಗ್ಗೆ ಇರುವ ಶಾಸನಗಳು

ಸಮಾಜಕ್ಕೆ ಕಳಂಕಪ್ರಾಯವೂ, ಕಟಂಕಪ್ರಾಯವೂ ಆದ ವರದಕ್ಷಿಣೆ ಪದ್ಧತಿಯನ್ನು ನಿರ್ಮೂಲನ ಮಾಡಲು ಭಾರತ ಸರ್ಕಾರವು 1961ರಲ್ಲಿ ವರದಕ್ಷಿಣೆ ನಿಷೇಧ ಶಾಸನವನ್ನು ಪ್ರಥಮ ಬಾರಿಗೆ ಜಾರಿಗೆ ತಂದಿತು. ಈ ಶಾಸನದನ್ವಯ ವರದಕ್ಷಿಣೆಯನ್ನು ಕೊಡುವುದಾಗಲೀ ಅಥವಾ ತೆಗೆದುಕೊಳ್ಳುವುದಾಗಲೀ ಅಪರಾಧ ವಾಗುತ್ತದೆ. ವರದಕ್ಷಿಣೆಯಾಗಿ ಹಣ, ಒಡವೆ, ವಸ್ತು ಮುಂತಾದವುಗಳನ್ನು ಕೊಡುವುದು ನಿಷೇಧಿಸಲ್ಪಟ್ಟಿದೆ. ವಿವಾಹದ ಸಮಯದಲ್ಲಾಗಲೀ, ವಿವಾಹದ ನಂತರ ವಾಗಲೀ, ಈ ರೀತಿಯ ಬೇಡಿಕೆಯನ್ನು ಸಲ್ಲಿಸಿದರೆ ಅದು ಅಪರಾಧವೆನಿಸುತ್ತದೆ. ಈ ಬಗೆಯ ಅಪರಾಧಕ್ಕಾಗಿ 5000/=ರೂಪಾಯಿ ದಂಡ, ತಪ್ಪಿದರೆ 6 ತಿಂಗಳು ಜೈಲು ಶಿಕ್ಷೆ ಅಥವಾ ಈ ಎರಡು ಶಿಕ್ಷೆಗಳನ್ನು ವಿಧಿಸಬಹುದಾಗಿತ್ತು. ನಂತರದಲ್ಲಿ 1984ರಲ್ಲಿ ಈ ಶಾಸನಕ್ಕೆ ತಿದ್ದುಪಡಿ ಮಾಡಲಾಗಿ, ಇದರಲ್ಲಿ ಶಿಕ್ಷೆ ಮತ್ತು ದಂಡ ಎರಡರಲ್ಲೂ ಹೆಚ್ಚಳವನ್ನು ಮಾಡಲಾಯಿತು. ಮತ್ತೆ 1986 ವರದಕ್ಷಿಣೆ ನಿಷೇಧ ಶಾಸನಕ್ಕೆ ತಿದ್ದುಪಡಿ ಮಾಡಲಾಯಿತು. ಇದರ ಪ್ರಕಾರ 5 ವರ್ಷಗಳ ಸೆರೆಮನೆ ವಾಸ ಮತ್ತು 15,000/=ರೂಪಾಯಿಗಳವರೆಗೆ ದಂಡ ಅಥವಾ ಎರಡೂ ಶಿಕ್ಷೆಯನ್ನು ವಿಧಿಸುವುದರ ಜೊತೆಗೆ, ಭಾರತೀಯ ದಂಡ ಸಂಹಿತೆ ಅನ್ವಯ ಅಪರಾಧಿಗೆ ಶಿಕ್ಷೆ ವಿಧಿಸಬಹುದಾಗಿದೆ.

ಈ ರೀತಿಯ ಯಾವ ಶಾಸನವೇ ಆಗಲಿ ಜನತೆಯ ಬೆಂಬಲವಿಲ್ಲದೆ ಯಶಸ್ವಿಯಾಗಲು ಸಾಧ್ಯವಿಲ್ಲ. ಜನತೆಯ ದೃಷ್ಟಿಯಿಂದ ಮಾಡಿದ ಈ ಶಾಸನ ಜನತೆಯ ಬೆಂಬಲವಿಲ್ಲದೆ ಒಂದು ಬಗೆಯ ದುರದೃಷ್ಟಕರ ಪರಿಸ್ಥಿತಿಯನ್ನು ತಲುಪಿದೆ. ವರದಕ್ಷಿಣೆಯನ್ನು ಕೊಡುವ ತಂದೆ ತಾಯಿಗಳು ತಾವು ಕೊಡುತ್ತಿರುವ ಸಂಗತಿಯನ್ನು ಪೋಲಿಸರಿಗೆ ದೂರುಕೊಡುವ ಮೂಲಕ ತಿಳಿಸಬೇಕು. ಆದರೆ ಅದನ್ನು ಅವರು ಮಾಡಲಾರರು. ತಂದೆ-ತಾಯಿ, ಹೆಣ್ಣಿಗಲ್ಲದೆ ಬೇರೆ ಯಾರಿಗೂ ಈ ವಿಷಯದಲ್ಲಿ ಆಸಕ್ತಿ ಇರಲು ಸಾಧ್ಯವಿಲ್ಲ. ಇಂದೂ ಭಾರತದಲ್ಲಿ ಸುಮಾರು ಶೇಕಡಾ 64ರಷ್ಟು ಅನಕ್ಷರಸ್ಥರಿರುವುದರಿಂದ ನಮ್ಮ ದೇಶದಲ್ಲಿ ವರದಕ್ಷಿಣೆ ನಿಷೇಧಕಾಯ್ದೆ ಜಾರಿಯಲ್ಲಿದೆ ಎಂಬುದು ಬಹಳಷ್ಟು ಜನಂದಿಗೆ ತಿಳಿದಿಲ್ಲ. ತಿಳಿದಿರುವ ಕೆಲವು ಮಂದಿ ಇದರ ಬಗ್ಗೆ ಗಂಭೀರವಾಗಿ ಯೋಚಿಸುವುದಿಲ್ಲ. ಇಂತಹ ವಿಷಮ ಸ್ಥಿತಿಯು ಇನ್ನೂ ಮುಂದುವರೆಯುತ್ತಿದೆ.

ಆದ್ದರಿಂದ ವರದಕ್ಷಿಣೆ ಎಂಬ ದುಷ್ಟ ಪದ್ಧತಿಯನ್ನು ಕೇವಲ ಶಾಸನದಿಂದ ಮಾತ್ರ ನಿರ್ಮೂಲನ ಮಾಡಲು ಸಾಧ್ಯವಿಲ್ಲ. ಜನತೆಯು ಸಂಘಟಿತರಾಗಿ ಇದರ

ವಿರುದ್ಧ ಹೋರಾಟ ಮಾಡಬೇಕಾಗಿದೆ. ಇಂದು ದೇಶಾದ್ಯಂತ ಅನೇಕ ಮಹಿಳಾ ಸಂಘ-ಸಂಸ್ಥೆಗಳು ಮಹಿಳೆಯರ ಸ್ಥಾನಮಾನದ ಬಗ್ಗೆ ಹೋರಾಟ ನಡೆಸುತ್ತಿವೆ. ಆದರೆ ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಅನೇಕ ಪುರುಷರು ಮತ್ತು ಮಹಿಳೆಯರೂ ಕೂಡ ಈ ಹೋರಾಟಗಳ ಬಗ್ಗೆ ಸಂಕುಚಿತ ಮನೋಭಾವನೆ ತಾಳಿದ್ದು ಮಹಿಳೆಯರು ಪುರುಷರ ವಿರುದ್ಧ ಮಾಡುತ್ತಿರುವ ಹೋರಾಟವೆಂದು ಪರಿಗಣಿಸಿದ್ದಾರೆ. ಆದರೆ ಈ ರೀತಿಯ ತಪ್ಪು ಕಲ್ಪನೆಯನ್ನು ಬಿಟ್ಟು ವರದಕ್ಷಿಣೆಯ ಪಿಡುಗನ್ನು ದೂರಮಾಡಲು ಮಹಿಳಾ ಸಂಘ-ಸಂಸ್ಥೆಗಳಿಗೆ ಸಹಾಯ ನೀಡುವುದಷ್ಟೇ ಅಲ್ಲದೆ ವೈಯಕ್ತಿಕ ಮಟ್ಟದಲ್ಲೂ ಮಹಿಳೆಯರು ಮತ್ತು ಪುರುಷರು ಇಬ್ಬರೂ ಒಟ್ಟಾಗಿ ನೆರವಾಗಬೇಕು. ನಗರ ಸಮಾಜದಲ್ಲಿರುವ ಸಂಘ-ಸಂಸ್ಥೆಗಳು ಗ್ರಾಮೀಣ ಸಮಾಜದ ಮಟ್ಟದಲ್ಲಿ ತಮ್ಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಭಾರತದಲ್ಲಿ ಅನಕ್ಷರಸ್ಥರು ಇರುವುದರ ಜೊತೆಗೆ ಭಾರತವು ಗ್ರಾಮಗಳಿಂದ ಕೂಡಿದ ದೇಶ. ಆದ್ದರಿಂದ ಈ ಸಂಘ-ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕು.

ವರದಕ್ಷಿಣೆಯ ವಿಷಯದಲ್ಲಿ ಹೇಳುವುದಾದರೆ ಮುಖ್ಯವಾಗಿ ವರದಕ್ಷಿಣೆಯನ್ನು ತೆಗೆದುಕೊಳ್ಳಬಾರದೆಂದು ಗಂಡು, ವರದಕ್ಷಿಣೆಯ ಬಗ್ಗೆ ಆಸಕ್ತನಾಗಿರುವ ಗಂಡನ್ನು ಮದುವೆಯಾಗಬಾರದೆಂದು ಹೆಣ್ಣು ದೃಢ ನಿಶ್ಚಯ ಮಾಡಬೇಕು. ಹೆಣ್ಣು ಈ ರೀತಿಯ ದೃಢ ನಿಶ್ಚಯ ಮಾಡಬೇಕಾದರೆ ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಬೇಕು. ಹಾಗಾದಾಗ ಮಾತ್ರ ವರದಕ್ಷಿಣೆಯ ನಿರ್ಮೂಲನೆಗೆ ಒಂದು ನಿಜವಾದ ಅರ್ಥ ಬರುತ್ತದೆ. ಹೆಣ್ಣು ಸಹ ಕೆಲವು ವಾಸ್ತವಿಕ ಸಂಗತಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೈತುಂಬ ಹಣ ಸುರಿದು ವಿವಾಹವಾದ ಗಂಡು ತನ್ನನ್ನು ಸುಖವಾಗಿ ಇಡುತ್ತಾನೆ ಎಂಬ ಭ್ರಮೆಯನ್ನು ಬಿಡಬೇಕು. ಒಟ್ಟಿನಲ್ಲಿ ವರದಕ್ಷಿಣೆಯ ವಿರುದ್ಧ ವ್ಯವಸ್ಥಿತವಾದ ಸಾಮಾಜಿಕ ಪ್ರತಿಭಟನೆ ಇಂದು ಅತ್ಯಾವಶ್ಯಕವಾಗಿದೆ.

ಎಂ. ಆರ್. ಸತೀಶ್

ಸಮಕಾಲೀನ ಭಾರತದಲ್ಲಿ ಕೋಮುವಾದ

ಪ್ರಚಲಿತ ದಿನಗಳಲ್ಲಿ ಕೋಮುವಾದ ಭಾರತದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರ ಪ್ರಭಾವ ಬೀರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಉತ್ತರಪ್ರದೇಶ, ಗುಜರಾತ್ ಮತ್ತು ಆಂಧ್ರ ಪ್ರದೇಶಗಳಲ್ಲಿ ಉಂಟಾದ ಭೀಕರ ಗಲಭೆಗಳು ಭಾರತದಲ್ಲಿ ಕೋಮುವಾದವು ಸಾಂಸ್ಥಿಕ ಲಕ್ಷಣ ಪಡೆಯುತ್ತಿರುವ ಸೂಚಕವಾಗಿದೆ.

ಸಾಮಾನ್ಯವಾಗಿ ಕೋಮುವಾದವೆಂದರೆ ಒಂದು ಸಾಮಾಜಿಕ ಮತ್ತು ಧಾರ್ಮಿಕ ಗುಂಪು ಸಮಾಜದ ಇತರ ಗುಂಪುಗಳನ್ನು ವಂಚಿಸಿ, ತನ್ನ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳನ್ನು ಬೆಳೆಸಿಕೊಳ್ಳಲು ನಡೆಸುವ ಪ್ರವೃತ್ತಿಗಳೆಂದು ವ್ಯಾಖ್ಯಾನಿಸಲಾಗುತ್ತದೆ. ಭಾರತದಲ್ಲಿ ಜನಸಂಖ್ಯೆಯಲ್ಲಿನ ಒಂದು ಭಾಗವು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪೂರ್ಣಸಮಾಜವನ್ನೇ ಹಾಳುಮಾಡಲು ಹೊರಟಿರುವ ಸಂಘಟನೆಯೊಂದರ ಕಾರ್ಯಗಳನ್ನು ವಿವರಿಸಲು ಅಥವಾ ಧರ್ಮ ಮತ್ತು ಸಂಪ್ರದಾಯಗಳ ಹೆಸರಿನಲ್ಲಿ ಸಾಮಾಜಿಕ ಬದಲಾವಣೆಗಳನ್ನು ವಿರೋಧಿಸುವ ಶಕ್ತಿಗಳನ್ನು ಕೋಮುವಾದವೆಂದು ಪರಿಗಣಿಸಲಾಗುತ್ತದೆ. ಹಲವು ಸಂದರ್ಭಗಳಲ್ಲಿ ಕೋಮು ಸಮಸ್ಯೆಗಳು ಒಂದು ಸಮಾಜದ ಅನೇಕ ಧರ್ಮಗಳ, ಸಂಸ್ಕೃತಿಯ ಮತ್ತು ಸಂಪ್ರದಾಯಗಳ ಒಡನಾಟದ ನಿಶ್ಚಿತ ಪರಿಣಾಮಗಳೆಂದೂ ಹೇಳುತ್ತಾರೆ.

ಸಾಮಾನ್ಯವಾಗಿ ತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆ, ಹೆಚ್ಚು ಪ್ರಸಾರಿತ ಶಿಕ್ಷಣ ಇವೇ ಮುಂತಾದವು ಕೋಮು ಘರ್ಷಣೆಗಳನ್ನು ಕಡಿಮೆ ಮಾಡುತ್ತವೆಂದು ನಂಬಲಾಗುತ್ತದೆ. ಆದರೆ ಭಾರತದಲ್ಲಿನ ಪರಿಸ್ಥಿತಿಯೇ ಬೇರೆ.

ಸ್ವಾತಂತ್ರ್ಯಬಂದೆ ನಲವತ್ತಮೂರು ವರುಷಗಳನಂತರ ಆಧುನಿಕತೆ, ಶಿಕ್ಷಣ ಮತ್ತು ನಗರೀಕರಣಗಳಲ್ಲಿ ಬೆಳವಣಿಗೆಯಾಗಿದ್ದರೂ ಕೂಡ ಕೋಮು ಹಿಂಸೆಗಳು ಮತ್ತು ಕೋಮು ಚಿತ್ತಕ್ಷೋಭೆ ಮುಂದುವರಿಯುತ್ತಿವೆ. ಇದರ ಜೊತೆಗೆ ಸಮಕಾಲೀನ ಸಮಾಜದಲ್ಲಿ ಕೋಮು ಘರ್ಷಣೆ ಗಂಭೀರ ಪ್ರಮಾಣ ಪಡೆದಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜಕೀಯ ಪ್ರೇರಿತ ಜನರು, ಅದರಲ್ಲೂ ವಿವಿಧ

ರಾಜಕೀಯ ಪಕ್ಷಗಳು ಅಧಿಕಾರ ಪಡೆಯಲು ಇಲ್ಲವೇ ಅಧಿಕಾರದಲ್ಲಿ ಮುಂದುವರಿಯಲು ಜನರಲ್ಲಿ ಕೋಮು ಭಾವನೆಗಳನ್ನು ಕೆರಳಿಸಿ, ಆಗಿಂದಾಗ ಶೋಷಣೆಗೆ ಒಳಪಡಿಸುತ್ತಿದ್ದಾರೆ. ಈ ಮೇಲಿನ ಆರೋಪಗಳನ್ನು ನಿಜವೆಂದು ಪರಿಗಣಿಸಿದರೂ, ನಮ್ಮ ವ್ಯವಸ್ಥೆಯಲ್ಲಿಯೋ ಇಲ್ಲವೇ ನಮ್ಮ ರಾಷ್ಟ್ರನಿರ್ಮಾಣ ಪ್ರಕ್ರಿಯೆಯಲ್ಲಿಯೋ ದೋಷವಿದೆಯೆಂಬ ಅನುಮಾನ ದೇಶದ ಬಹುಜನರಲ್ಲಿ ಮೂಡಿದೆ. ಇದು ಅತಿಮುಖ್ಯವಾಗಿ ಆಗಬೇಕಾಗಿರುವ ಕೆಲಸ ಕಾನೂನು-ಶಿಸ್ತು ಪರಿಪಾಲನೆಯಾಗಿರದೆ, ಕೋಮು ಗಲಭೆಗೆ ಕಾರಣವಾದ ಸಾಮಾಜಿಕ, ರಾಜಕೀಯ, ಆರ್ಥಿಕ, ಮಾನಸಿಕ ಅಂಶಗಳನ್ನು ಮೊದಲು ಗುರುತಿಸಿ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

ಕೋಮು ಘರ್ಷಣೆಗೆ ಕಾರಣಗಳು

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಉಂಟಾಗುತ್ತಿರುವ ಕೋಮು ಗಲಭೆಗಳು ನಮ್ಮನ್ನು ದಿಗ್ಭ್ರಮೆಗೊಳಿಸುತ್ತವೆ. ಈ ಗೊಂದಲಗಳಿಗೆ ಧರ್ಮ ಮತ್ತು ಸಂಸ್ಕೃತಿಗಳು ನೇರ ಕಾರಣಗಳಾಗಿರದೆ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಅಧಾರ್ಮಿಕ ಮತ್ತು ಅಸಾಂಸ್ಕೃತಿಕ ಅಂಶಗಳು ಕಾರಣವಾಗಿವೆ. ನಾವು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದಾಗ ಕೋಮು ಮುಂದಾಳುಗಳ ಬೇಡಿಕೆಗಳು, ಧರ್ಮ ಮತ್ತು ಸಂಪ್ರದಾಯಗಳ ಮುಸುಕಿನಲ್ಲಿ ಕೋಮು ರಾಜಕೀಯದ ಹಿನ್ನಲೆ ಹೊಂದಿರುವುದನ್ನು ನಾವು ಕಾಣಬಹುದು. ಈ ಕೋಮು ಮುಂದಾಳುಗಳು ಸಾಮಾನ್ಯವಾಗಿ ಸಮಾಜದ ಮಧ್ಯಮವರ್ಗ ಮತ್ತು ನಗರ ಬುದ್ಧಿಜೀವಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುತ್ತಾರೆ. ಈ ದೃಷ್ಟಿಯಿಂದಾಗಿಯೇ ಕೋಮುವಾದವು ಮಧ್ಯಮ ವರ್ಗ ಸಂಗತಿಯಲ್ಲದೆ ರಚನಾತ್ಮಕ ಸಂಗತಿಯೂ ಆಗಿದೆ. ಕೋಮುವಾದದ ಮೂಲಕ ಆಡಳಿತ ವರ್ಗಗಳು ಜನಸಮೂಹವನ್ನು ವಿಭಜಿಸಿ ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಗರಿಷ್ಠ ಅವಕಾಶಗಳನ್ನು ಪಡೆದುಕೊಳ್ಳುತ್ತವೆ.

ಭಾರತವು ಅನೇಕತ್ವ (Pluralistic) ಸಮಾಜವಾಗಿರುವುದೇ ಕೋಮುವಾದ ಬೆಳೆಯಲು ಕಾರಣವಾಗಿದೆ. ಭಾರತೀಯ ಸಮಾಜದಲ್ಲಿ ಶಕ್ತಿಯುತ ಗುಂಪುನಿಷ್ಠೆ ಈ ಸಮಾಜದಲ್ಲಿನ ಆರ್ಥಿಕ ಅಭಾವ ಆಧಾರಿತವಾಗಿದ್ದು ಈ ದಿಸೆಯಲ್ಲಿ ಕಾರ್ಯಮಗ್ನವಾಗುತ್ತದಲ್ಲದೆ, ಸಮಾಜದಲ್ಲಿ ಅಂತರ ಗುಂಪುವೈಷಮ್ಯ ಮತ್ತು ಘರ್ಷಣೆಗಳು ಬೆಳೆಯಲು ಅವಕಾಶ ಮಾಡಿಕೊಟ್ಟಿದೆ.

ಬ್ರಿಟಿಷರ ಪ್ರಭಾವ

ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾದಾಗ ಅಸ್ತಿತ್ವದಲ್ಲಿದ್ದ ಹಿಂದುಳಿದ ಪರಿಸ್ಥಿತಿಯನ್ನು ಅವರು ಸುಧಾರಿಸಿದರಾದರೂ ಜೇಸಾಯುವನ್ನು 'ಆಧುನೀಕರಣ' ಗೊಳಿಸುವಲ್ಲಿ ವಿಫಲರಾಗಿದ್ದರು. ಸಮಾಜದ ಅಭಿವೃದ್ಧಿಗೆ ಅಡಚಣೆಯಾಗಿದ್ದ

ಹಳೆಯ ಸಂಪ್ರದಾಯಗಳು ಮತ್ತು ಸಂಸ್ಥೆಗಳು ಹಾಗೆಯೇ ಉಳಿದುಕೊಂಡವು. ಆಗಿನ ಕೋಮಿನ ಗಣ್ಯರ ಪ್ರವೃತ್ತಿಗಳು ಆರ್ಥಿಕ ಶೇಖರಣೆಯಲ್ಲಿ ಪರಿಮಾಣಾತ್ಮಕವಾದ ಪ್ರಭಾವ ಬೀರತೊಡಗಿದ್ದವು. ಇದರಿಂದಾಗಿ ವಿವಿಧ ಸಾಮಾಜಿಕ ಗುಂಪುಗಳಲ್ಲಿ ಅಡಗಿದ್ದ ದ್ವೇಷ, ಅಸೂಯೆಗಳು ಹೊರಹೊಮ್ಮುವುದರ ಜೊತೆಗೆ, ಜನರು ಅನ್ಯಾಕ್ರಾಂತತೆಗೆ ಒಳಪಡುವುದರ ಮೂಲಕ ಸಮಾಜದಲ್ಲಿ ಹಗೆತನ ಬೆಳೆಯಲು ಕಾರಣವಾಯಿತು. ಭಾರತದಲ್ಲಿ ಬ್ರಿಟಿಷರ ಅಧಿಕಾರ ಕೇಂದ್ರೀಕರಣ ಪ್ರಕ್ರಿಯೆಗಳನ್ನು ಹಿಂದೂಗಳು ಹಾಗೂ ಮುಸ್ಲಿಮರು ತಮ್ಮವೇ ದೃಷ್ಟಿಕೋನಗಳಲ್ಲಿ ಅಳೆಯ ತೊಡಗಿದರು.

ಹಿಂದೂಗಳು ಬ್ರಿಟಿಷರ ಈ ಅಧಿಕಾರ ಕೇಂದ್ರೀಕರಣವನ್ನು ಪುರಾತನ ರಾಜಕೀಯ ವ್ಯವಸ್ಥೆಯಿಂದ ಆಧುನಿಕ ರಾಜಕೀಯ ವ್ಯವಸ್ಥೆಗೆ ಉಂಟಾದ ಸ್ಥಿತ್ಯಂತರವೆಂದು ಪರಿಗಣಿಸಿದ್ದರು. ಭವಿಷ್ಯದ ದೃಷ್ಟಿಯಿಂದ ಈ ಹೊಸ ರಾಜಕೀಯ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅವಶ್ಯಕವೆಂದು ಹಿಂದೂಗಳು ಭಾವಿಸಿದ್ದರಲ್ಲದೆ ಆಧುನೀಕತೆಯ ಸಾಮಾನ್ಯ ಪ್ರಕ್ರಿಯೆಯೊಡನೆ ರಾಜೀಮಾಡಿಕೊಂಡಿದ್ದರು.

ಇದಕ್ಕೆ ಭಿನ್ನವಾಗಿ ಮುಸ್ಲಿಂರ ದೃಷ್ಟಿಯೇ ಬೇರೆಯಾಗಿದ್ದಿತು. ಇವರು ಬ್ರಿಟಿಷರನ್ನು ಅಧಿಕಾರ ದುರಾಕ್ರಮಿಗಳೆಂದು ಭಾವಿಸಿದ್ದರಲ್ಲದೆ, ಭಾರತದಲ್ಲಿ ಮುಸ್ಲಿಂ ಅಧಿಕಾರ ಅವನತಿಗೆ ಬ್ರಿಟಿಷರೇ ಕಾರಣರೆಂದು ಭಾವಿಸಿದ್ದರು. ಉತ್ತರ ಭಾರತದ ಮುಸ್ಲಿಂ ಶ್ರೀಮಂತವರ್ಗದ ಜನರ ಮನದಲ್ಲಿ ತಾವು ತೇಜೋವಧೆಗೆ ಒಳಗಾದವರೂ ಮತ್ತು ವಂಚಿತರಾದವರೆಂಬ ಭಾವನೆ ಬೇರೂರಿತ್ತು. ಇದರ ಜೊತೆಗೆ ಇವರಲ್ಲಿ ಸಾಂಪ್ರದಾಯಿಕವಾಗಿ ಬಂದಿದ್ದ ಕೈಕಸುಬುಗಳ ಅವನತಿ, ಹಿಂದೂ ವ್ಯಾಪಾರಿಗಳು ಮತ್ತು ಬ್ಯಾಂಕರ್‌ಗಳಿಂದಾದ ಅತಿಕ್ರಮಣ, ಹಿಂದೂಗಳಿಗೆ ಅನುಕೂಲಕರವಾದ ಭೂ ವರ್ಗಾವಣೆ ಪದ್ಧತಿ ಮುಸ್ಲಿಂರು ಹೆಚ್ಚು ಕಷ್ಟ ಅನುಭವಿಸುವಂತೆ ಮಾಡಿದ್ದಿತು. ಇದಾದನಂತರ ಮುಸ್ಲಿಂರ ಸ್ಥಾನಮಾನಗಳಲ್ಲಿ ಬದಲಾವಣೆ ಆಗತೊಡಗಿತ್ತು. ಬ್ರಿಟಿಷ್ ಸರಕಾರದ ರಾಜೀ ನೀತಿಯ ಮೂಲಕ ಮುಸ್ಲಿಂರು ಬ್ರಿಟಿಷರೊಡನೆ ಮೈತ್ರಿ ಬೆಳೆಸಿಕೊಂಡಿದ್ದರು. ಇದಕ್ಕೆ ನಗರದ ಹಿಂದೂ ಮಧ್ಯಮವರ್ಗವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದುದು ಮುಖ್ಯ ಕಾರಣವಾಗಿತ್ತು.

ಹಿಂದೂ ಮಧ್ಯಮ ವರ್ಗಗಳ ಬಗೆಗಿನ ಸಂಶಯ ಮನೋಭಾವ ಮತ್ತು ಧರ್ಮದ ಆಧಾರದ ಮೇಲೆ ಮುಸ್ಲಿಂರಿಗೆ ತೋರುತ್ತಿದ್ದ ಬ್ರಿಟಿಷರ ತಾರತಮ್ಯ, ಹಿಂದೂಗಳಿಗೆ ಅಸಂತೋಷವನ್ನುಂಟುಮಾಡಿತ್ತು. ಆದರ್ಶದ ಆಧಾರದ ಮೇಲೆ ಮುಸ್ಲಿಂಜಮೀನ್ದಾರರ ಪ್ರಭಾವವನ್ನು ಹಿಂದೂಗಳು ಧರ್ಮದ ಆದರ್ಶದ ಮೂಲಕ ಸಂಘಟಿತರಾಗಿ ಎದುರಿಸಲು ಸನ್ನದ್ಧರಾದರು. 1875 ರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜ ಹಿಂದೂಗಳ ನೆರವಿಗೆ ಬಂದಿತು ಈ ಹಿಂದೂ ಮಧ್ಯಮವರ್ಗವೇ ಆಗ ಕಾಂಗ್ರೆಸ್‌ಪಕ್ಷ ಪ್ರಬಲವಾಗಲು ಕಾರಣವಾಯಿತು.

ಇದಕ್ಕೆ ಎದುರಾಗಿ ಬ್ರಿಟಿಷರನ್ನು ಆಶ್ರಯಿಸಿದ ಮುಸ್ಲಿಂ ಜಮೀನ್ದಾರಿ ಶ್ರೀಮಂತ ವರ್ಗವು ಕಾಂಗ್ರೆಸ್ಸನ್ನು ಸಮರ್ಥಿಸಲು ಹಿಂಜರಿದಿತ್ತು. ಭಾರತದ ವಿವಿಧ ಕೋಮುಗಳಲ್ಲಿ ದ್ವೇಷಭಾವನೆ ಮೂಡಿಸಲು ಮೇಲಿನ ಅಂಶಗಳು ಕಾರಣವಾಗಿದ್ದವು. ಬ್ರಿಟಿಷರ ತಾರತಮ್ಯಾಧಾರಿತ ವ್ಯವಹಾರ ಸಾಮಾಜಿಕ-ರಾಜಕೀಯ ಪಂಗಡಗಳ ಮಧ್ಯೆ ಅಂತರವನ್ನು ಹೆಚ್ಚಿಸಿದ್ದೇ ಅಲ್ಲದೆ ವಿವಿಧ ರಾಜ್ಯಗಳಲ್ಲಿ ಬಹುಸಂಖ್ಯಾತ-ಅಲ್ಪಸಂಖ್ಯಾತರ ಸಂಬಂಧಗಳ ಮೇಲೆ ಪ್ರಭಾವ ಬೀರತೊಡಗಿತು. ಉದಾಹರಣೆಗೆ, ಪಂಜಾಬ್‌ನಲ್ಲಿ ಹಿಂದೂ-ಮುಸ್ಲಿಂ-ಸಿಕ್ಕರು, ಮದ್ರಾಸಿನಲ್ಲಿ ಬ್ರಾಹ್ಮಣರು-ಬ್ರಾಹ್ಮಣೇತರರು.

ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿ

ಭಾರತೀಯ ಸ್ವಾತಂತ್ರ್ಯ ಚಳವಳಿಯ ನಾಯಕರು, ಕೋಮುವಾದದ ಸಮಸ್ಯೆಗಳ ಬಗೆಗೆ ಹೆಚ್ಚಿನ ಗಮನ ನೀಡಲಿಲ್ಲ. ಸಂದರ್ಭಕ್ಕೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರಲ್ಲದೆ. ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರ ಇಲ್ಲವೇ ಸಣ್ಣ ಪುಟ್ಟ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರಲ್ಲದೆ, ಖಾಯಂ ಪರಿಹಾರ ಹುಡುಕಲಿಲ್ಲ. ಈ ಪ್ರವೃತ್ತಿಯೇ ಇಂದು ಕೋಮುವಾದ ಮುಂದುವರಿಯಲು ಕಾರಣವಾಯಿತು. ನಮ್ಮ ಮುಂದಾಳುಗಳು ಈ ಸಮಸ್ಯೆ ವಿಕೋಪಕ್ಕೆ ಹೋದಾಗಲೆಲ್ಲ ಆರೆಮನಸ್ಸಿನ ಕ್ರಮಕ್ಕೆಗೊಂಡಿದ್ದರು. ಅಲ್ಲದೆ ಅಲ್ಪಸಂಖ್ಯಾತ ಅಥವಾ ಧಾರ್ಮಿಕ ಗುಂಪುಗಳ ರಾಷ್ಟ್ರೀಯ ಸಮಸ್ಯೆಗಳು ಉದಯಿಸಿದ ಸಂದರ್ಭಗಳಲ್ಲಿ ಕಾಂಗ್ರೆಸ್ ಮುಂದಾಳುಗಳು ಮುಸ್ಲಿಂ ಅಥವಾ ಸಿಖ್ ಅಥವಾ ಕ್ರಿಶ್ಚಿಯನ್ ಮುಂದಾಳುಗಳತ್ತ ನೋಡುತ್ತಿದ್ದರಲ್ಲದೆ ಈ ಕೋಮುಗಳ ಜನರನ್ನು ಪೂರ್ಣವಾಗಿ ಅಲಕ್ಷಿಸುತ್ತಿದ್ದರು. ಮೇಲಿನ ಮುಸ್ಲಿಂ ವರ್ಗಕ್ಕೆ ಸೇರಿದ ಪ್ರತಿನಿಧಿಗಳಾದ ಸರ್ ಸಯೀದ್ ಅಥವಾ ಅಮೀರ್ ಆಲಿ ಅವರುಗಳನ್ನು ಮುಸ್ಲಿಂ ಸಮುದಾಯಕ್ಕೆ ಸಮಾನವಾಗಿ ಪರಿಗಣಿಸಿದ್ದರು.

ಕೋಮು ಗಲಭೆಗಳ ಬಗೆಗೆ ಹೆಚ್ಚು ಅಧ್ಯಯನ ನಡೆಸಿರುವ ಶ್ರೀ ಬಿಪನ್ ಚಂದ್ರ ಅವರು ಹೇಳುವಂತೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಆಸಕ್ತಿಗಳತ್ತ ಪ್ರಭಾವಿತರಾದ ಜನರು ತಮ್ಮ ಹಿಂದುಳಿಯುವಿಕೆಗೆ ಕಾರಣಗಳನ್ನು ಅರಿಯುವಲ್ಲಿ ವಿಫಲರಾದರು. ಇದರಿಂದಾಗಿ ಇವರು ತಮ್ಮ ಸ್ವಾರ್ಥಕ್ಕಾಗಿ ಪಂಗಡ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಕೋಮು ಆದರ್ಶದ ಮೊರೆ ಹೋದರಲ್ಲದೆ ಧಾರ್ಮಿಕ ಭಾವನೆಗಳಿಂದ ಪ್ರಚೋದಿತರಾಗಿ ಕೋಮುಗಲಭೆಗೆ ಕಾರಣರಾದರು.

ಸ್ವಾತಂತ್ರ್ಯಾನಂತರ ಭಾರತದ ಮುಂದಾಳುಗಳು ಕೂಡ ಕೋಮುವಾದವನ್ನು ಕಡಿಮೆ ಮಾಡುವಲ್ಲಿ ಸೋತಿದ್ದಾರೆ. ಒಂದು ಕಡೆ ಇವರ ಜಾತ್ಯಾತೀತತೆ ಒಲವು ಮತ್ತು ರಾಷ್ಟ್ರೀಯತೆ ಬಗೆಗಿನ ಅನಿಶ್ಚಿತ ಪ್ರವೃತ್ತಿ, ಮತ್ತೊಂದೆಡೆ ಬಂಡವಾಳಶಾಹಿ

ಮತ್ತು ವರ್ಗಾಧಾರಿತ ಬಂಡವಾಳಶಾಹಿ ಮತ್ತು ವರ್ಗಾಧಾರಿತ ಮಾದರಿಯಲ್ಲಿನ ಆರ್ಥಿಕ ಬೆಳವಣಿಗೆ ಮತ್ತು ಬದಲಾವಣೆಗೆ ಬದ್ಧರಾಗಿರುವುದು, ಪ್ರಾಂತೀಯ ಸಂಕುಚಿತ ಮನೋಗುಣಲಕ್ಷಣಗಳು ಬೆಳೆಯಲು ಕಾರಣವಾಗಿದೆ

೧೯೪೭ರ ನಂತರ ಬಂಡವಾಳಶಾಹಿ ಮಾದರಿಯ ದೇಶದ ಬೆಳವಣಿಗೆ ಕೋಮುವಾದ ಬೆಳೆಯಲು ಎರಡು ಮುಖ್ಯ ಸನ್ನಿವೇಶಗಳನ್ನು ಸೃಷ್ಟಿಸಿತು. ಮೊದಲನೆಯದಾಗಿ ಜನಸಂಖ್ಯಾ ಸ್ಫೋಟದೊಡನೆ ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಿರುವ ಬಂಡವಾಳಶಾಹಿಯ ಆರ್ಥಿಕ ವ್ಯವಸ್ಥೆ ಜನರ ಪ್ರಾಥಮಿಕ ಸಮಸ್ಯೆಗಳಾದ ಬಡತನ, ನಿರುದ್ಯೋಗ ಮತ್ತು ಅಸಮಾನತೆಗಳನ್ನು ತೊಡೆದು ಹಾಕುವಲ್ಲಿನ ವಿಫಲತೆ ಜನರಲ್ಲಿ ನಿರಾಶೆ ಮೂಡಲು ಕಾರಣವಾಗಿದೆ. 1947ರನಂತರ ಭಾರತದ ರಾಜಕೀಯದಲ್ಲಿ, ಅಂದರೆ ನೆಹರೂ ಯುಗದಲ್ಲಿ ಸಾಮಾಜಿಕ ಸ್ಥಿರತೆ ಇದ್ದು ಕೋಮು ಶಕ್ತಿಗಳು ಅಷ್ಟು ಪ್ರಬಲವಾಗಿರಲಿಲ್ಲ. ಆದರೆ ಮಧ್ಯಮ ವರ್ಗದ ಜನರಿಗೆ ಹೊಸ ಅವಕಾಶಗಳು ಬತ್ತಿ ಹೋಗಲು ಪ್ರಾರಂಭವಾಯಿತು. ಆಗ ಉಂಟಾದ ಆರ್ಥಿಕ ಬೆಳವಣಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಸೋತಿತ್ತು. ಈ ಅಂಶ ಮಧ್ಯಮ ವರ್ಗದ ವಿವಿಧ ಗುಂಪುಗಳಲ್ಲಿ ಅಸಮಾಧಾನ ಮತ್ತು ವೈರತ್ವ ಉಂಟಾಗಲು ಕಾರಣವಾಯಿತು.

ಎರಡನೆಯದಾಗಿ ಬೇಸಾಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿನ ಬಂಡವಾಳಶಾಹಿ ಬೆಳವಣಿಗೆ ಹೆಚ್ಚಿನ ಆದಾಯ ತರುವ ಮೂಲಕ "ಹೊಸ ಸಾಮಾಜಿಕ ಗುಂಪುಗಳು" ಹುಟ್ಟುವಲ್ಲಿ ನೆರವಾಯಿತು. ಇದರ ಜೊತೆಯಲ್ಲಿಯೇ ಉಂಟಾದ ಸ್ಪರ್ಧೆ, ಹೆಚ್ಚಿನ ನಿರೀಕ್ಷೆ, ಆದಾಯದಲ್ಲಿ ಅಸಮಾನತೆಯ ವಿತರಣೆ, ಸ್ಪಷ್ಟ ಸಾಮಾಜಿಕ ಮತ್ತು ರಾಜಕೀಯ ಬಿಗುವು ಕೋಮುವಾದ ಜನಪ್ರಿಯವಾಗಲು ಕಾರಣವಾಯಿತು. ಇವುಗಳೆಲ್ಲಕ್ಕಿಂತ ಈ ಹೊಸ ಸಾಮಾಜಿಕ ಗುಂಪುಗಳು ಸಾಮಾಜಿಕವಾಗಿ ಪ್ರಬಲವಾದುದೇ ಅಲ್ಲದೆ ಇತರರ ಅಧಿಕಾರ ಮತ್ತು ಘನತೆ ಕ್ಷೀಣಿಸತೊಡಗಿದಾಗ ಸಾಂಪ್ರದಾಯಿಕ ಪುನರುತ್ಥಾನಕ್ಕೆ ಮತ್ತು ಕೋಮುವಾದಗಳಿಗೆ ಆಮಂತ್ರಣ ದೊರಕಿದಂತಾಯಿತು. ಇದುವರೆವಿಗೆ ವ್ಯಕ್ತಿಗೆ ದೊರಕಿದ್ದ ಆಸ್ಪದ ಹಾಗೂ ನೆರವುಗಳಾದ ಸಾಂಪ್ರದಾಯಿಕ ಸಾಮಾಜಿಕ ಸಂಸ್ಥೆಗಳಾದ ಜಾತಿ, ಅವಿಭಕ್ತ ಕುಟುಂಬ, ಗ್ರಾಮ ಮತ್ತು ಮೊಹಲ್ಲಾ ಸಮುದಾಯಗಳು ಕ್ಷೀಣಿಸಲು ಪ್ರಾರಂಭವಾದವು. ಅಲ್ಲದೆ ಈಗ ಕೋಮು ಪ್ರವೃತ್ತಿಗಳು ಮತ್ತು ಭಾವನೆಗಳನ್ನು ಪ್ರೇರೇಪಿಸಿ ಶೀಘ್ರವಾಗಿ ರಾಜಕೀಯ ಅಧಿಕಾರವನ್ನು ಪಡೆಯಲು ವ್ಯಕ್ತಿಗಳು ಮತ್ತು ಗುಂಪುಗಳಿಗೆ ಹೊಸ ಹಾದಿಯೊಂದು ತೆರೆದುಕೊಂಡಿತ್ತು. ಈ ಅವಕಾಶಗಳು ಪ್ರಚಲಿತ ದಿನಗಳಲ್ಲಿ ಕೇಂದ್ರ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಹೆಚ್ಚುಹೆಚ್ಚಾಗಿ ಕಾಣಬರುತ್ತದೆ.

ಕೋಮುವಾದ ಬೆಳೆಯಲು ಮತ್ತೊಂದು ಮುಖ್ಯ ಕಾರಣವೆಂದರೆ ಕೋಮು ಆದರ್ಶಗಳ ಪ್ರಸರಣೆ. ಶ್ರೀ ಬಿಪಿನ್‌ಚಂದ್ರ ತಿಳಿಸಿರುವಂತೆ ಕೋಮುವಾದವು ಒಂದು ಆದರ್ಶಕ್ಕಿಂತಲೂ ಮಿಗಿಲಾಗಿದ್ದು ಕೆಲಮಟ್ಟಿಗೆ ಇದು ಆದರ್ಶದ ಸುತ್ತಲೂ ಗಚನೆ

ರಾಜಕೀಯವಾಗಿದೆ. ಆದರ್ಶಗಳೆಂದರೆ ಅದೊಂದು ನಂಬಿಕೆಗಳ ವ್ಯವಸ್ಥೆ ಅಥವಾ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯಗಳಿಗಿರುವ ಪರಸ್ಪರ ಹೊಂದಾಣಿಕೆಯ ನಂಬಿಕೆಗಳು.

ಕಳೆದ ನೂರು ವರುಷಗಳಿಂದಲೂ, ಕೋಮುವಾದವು ಒಂದು ಆದರ್ಶವಾಗಿ ಅಸ್ತಿತ್ವದಲ್ಲಿದೆ. ಇಂದು ಕೋಮುವಾದವು ಅದರ ಪ್ರತಿಪಾದಕರಿಂದಲೇ ಸ್ವತಂತ್ರವಾಗುವ ಸಂದರ್ಭಗಳಿವೆ. ಉದಾಹರಣೆಗೆ, ಕೋಮುವಾದದ ಆಧಾರದ ಮೇಲೆ ಪಾಕಿಸ್ತಾನ ಸ್ಥಾಪನೆಗೆ ಕಾರಣರಾದ ಮಹಮದಾಲಿ ಜಿನ್ನ ಆಗಸ್ಟ್ 13, 1947ರಂದು ಅಲ್ಲಿಯ ಸಂಸತ್ತಿನಲ್ಲಿ ಭಾಷಣ ಮಾಡುತ್ತಾ ಆ ಹೊಸ ರಾಷ್ಟ್ರವು ಧರ್ಮದ ಆಧಾರದ ಮೇಲೆ ದೇಶದ ಜನರಲ್ಲಿ ಯಾವುದೇ ರೀತಿಯ ತಾರತಮ್ಯ ಅಥವಾ ಪಕ್ಷಪಾತ ಮಾಡುವುದಿಲ್ಲವೆಂದು ಘೋಷಣೆ ಮಾಡಿದ್ದರು. ಇದಾದನಂತರ ಕೋಮುವಾದವು ಅವರ ಬಯಕೆಗೆ ಪ್ರತಿಯಾಗಿಯೇ ಮುಂದುವರಿಯುತ್ತಲೇ ಬಂದಿದೆ.

ಇದೇ ರೀತಿ ಇಂದು ಕೆಲವರು ಹೇಳುವಂತೆ ಶ್ರೀ ಅದ್ವಾಣಿಯವರು ಸೌಮ್ಯ ಸ್ವಭಾವದವರಾದರೂ ಇತ್ತೀಚಿನ ದಿನಗಳಲ್ಲಿ ರಥಯಾತ್ರೆಯ ಪ್ರಭಾವದಿಂದ ದೇಶದ ಹಲವೆಡೆಗಳಲ್ಲಿ ಉಂಟಾದ ಪರಿಸ್ಥಿತಿಯು ಬಿ.ಜೆ.ಪಿ. ಪಕ್ಷವು ಒಮ್ಮೆ ಅಧಿಕಾರಕ್ಕೆ ಬಂದ ನಂತರ ಮಾನವತೆಗೆ ಮತ್ತು ಜಾತ್ಯತೀತತೆಗೆ ಬಲಿಬರಬಹುದೆಂಬ ಅಭಿಪ್ರಾಯವಿದೆ.

ಈ ಮೇಲಿನ ಅಭಿಪ್ರಾಯಗಳು ಸೌಮ್ಯವಾಗಿ ಕಂಡರೂ ಅಪಾಯ ಸೂಚನೆಗಳನ್ನು ಪಡೆದಿವೆ. ಏಕೆಂದರೆ ಮುಂದಾಳುಗಳ ಮನೋಭಾವ ಮತ್ತು ರಾಜಕೀಯ ಪಕ್ಷಗಳನ್ನು ಈಗಾಗಲೇ ಚಾಲ್ತಿಯಲ್ಲಿರುವ ಆದರ್ಶಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ಕೋಮು ಗಲಭೆಗಳು

ಇಂದು ಉತ್ತರ ಪ್ರದೇಶದಲ್ಲಿ ಕೋಮು ಗಲಭೆಗಳು ಅವ್ಯಾಹತವಾಗಿ ಮುಂದುವರಿಯುತ್ತಲೇ ಇವೆ. ಒಂದು ಸ್ಥಳದಲ್ಲಿ ಗಲಭೆಯ ಉಗ್ರತೆ ಮತ್ತು ತೀವ್ರತೆ ಕಡಿಮೆಯಾಗುತ್ತಿರುವಂತೆಯೇ ತಕ್ಷಣ ಬೇರೊಂದು ಕಡೆ ಕಾಣಿಸಿಕೊಳ್ಳುತ್ತಲಿದೆ. ಈ ಕಾರಣದಿಂದಾಗಿಯೇ ಮೊದಲು ಅಲಿಗಡ್‌ನಲ್ಲಿ ಕಾಣಿಸಿಕೊಂಡ ಗಲಭೆ ಅಕ್ಕಪಕ್ಕದ ಸ್ಥಳಗಳಾದ ಕಾನ್ಪುರ್, ವಾರಣಾಸಿ, ಮೀರತ್, ಆಗ್ರ ನಗರಗಳಿಗೂ ಹರಡಿತು.

ಮಿತಗಾಮಿ—ಉಗ್ರಗಾಮಿ ಕೋಮುವಾದಿಗಳ ಮಧ್ಯೆ ಅಂತರ ಅತಿ ನವುರಿನಿಂದ ಕೂಡಿರುತ್ತದೆ. ಉದಾಹರಣೆಗೆ, ಪಂಜಾಬಿನಲ್ಲಿನ ಗಲಭೆಗೆ ಮಿತವಾದಿಗಳಾದ ಲೋಂಗೂವಾಲ್, ಬಾದಲ್ ಮತ್ತು ತೊಹರಾ ಇವರು ಆನಂದಪುರ ಸಾಹೇಬ್ ಸಂಕಲ್ಪದ ಆಧಾರದ ಮೇಲೆ ಧರ್ಮಯುದ್ಧ ಘೋಷಣೆಗೆ ಕಾರಣಕರ್ತರೇ ವಿನಃ ಸಂತ ಬಿಂದರ್‌ನವಾಲೇ, ಅಲ್ಲ. ಆದರೆ, ಬಿಂದರ್‌ನವಾಲೇ ಈ ಮಿತವಾದಿಗಳು ಸೃಷ್ಟಿಸಿದ ಪರಿಸ್ಥಿತಿಗೆ ಸಿಲುಕಿ ಉಗ್ರಗಾಮಿಯಾಗುವ ಮೂಲಕ ಕೋಮು ಭಾವೋದ್ರೇಕ ಹೆಚ್ಚಲು ಕಾರಣನಾದನು.

ಇದೇ ರೀತಿ ಹಿಂದೂ ಕೋಮುವಾದದ ಉಗ್ರತೆಗೆ - ಕಠೋರತೆಗೆ ವಿಶ್ವ ಹಿಂದೂ ಪರಿಷತ್ತಿಗೆ ಸೇರಿದ ಸಾಧು-ಸಂತರಾಗಲಿ ಅಥವಾ ಭಜರಂಗ ದಳ ಕಾರಣವಾಗದೆ ಭಾರತೀಯ ಜನತಾ ಪಕ್ಷ ಕಾರಣವಾಗಿದೆಯೆಂದು ಹೇಳಬಹುದು. ಈ ಪಕ್ಷದ ಲೋಕಸಭಾ ಸದಸ್ಯರಾದ ಉಮಾಭಾರತಿ ಅವರ ಭಾಷಣದ ಕ್ಯಾಸೆಟ್ ಉತ್ತರ ಪ್ರದೇಶದಲ್ಲಿ ಮತ್ತಿತರ ಕಡೆಗಳಲ್ಲಿ ಕೋಮು ಭಾವನೆಗಳನ್ನು ಕೆರಳಿಸುತ್ತಿದೆ ಎಂದು ಹೇಳಬಹುದು.

ದೇಶದ ವಿಭಜನೆಯನಂತರ 1961ರಲ್ಲಿ ಉಂಟಾದ ಕೋಮುದಂಗೆಯು ಮೊದಲಬಾರಿಗೆ ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಕಾಣಿಸಿಕೊಂಡಿತು. ಇದಾದ ಮೂರು ವರುಷಗಳನಂತರ ಹಜರತ್ ಬಾಲ್ ಮಸೀದಿಯಲ್ಲಿ ಉಂಟಾದ ಕಳ್ಳತನ ಮತ್ತು ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಬಂದ ನಿರಾಶ್ರಿತರ ದಂಡು 1964ರಲ್ಲಿ ಜೆಮ್‌ಷೆಡ್‌ಪುರ ಮತ್ತು ರೂರ್‌ಕೆಲಾಗಳಲ್ಲಿ ಕೋಮು ಗಲಭೆಗೆ ಕಾರಣವಾಯಿತು. ಎರಡನೇ ಸುತ್ತಿನ ಕೋಮು ಗಲಭೆಗಳು 1967-68ರಲ್ಲಿ ರಾಂಚಿ, ಅಲಿಘರ್, ಗೋರಕ್‌ಪುರ ಮತ್ತು ಮೀರತ್ ನಗರಗಳಲ್ಲಿ ಉಂಟಾದವು. ಇದಾದನಂತರ ಇತ್ತೀಚಿನ ರಾಮಜನ್ಮಭೂಮಿ ಬಾಬರಿ ಮಸೀದಿ ವಿಷಯದಲ್ಲಿ ದೇಶದ ವಿವಿಧ ಕಡೆಗಳಲ್ಲಿ ನಡೆಯುತ್ತಿರುವ ದಂಗೆಗಳನ್ನು ಉದಾಹರಿಸಬಹುದು.

ಕೋಮು ದಂಗೆಗಳಲ್ಲಿ ಉಂಟಾಗುವ ಸಾವು-ನೋವುಗಳ ಬಗೆಗಿನ ಆಡಳಿತದ ಅಂಕಿ-ಅಂಶಗಳು ವಾಸ್ತವ ಅಂಕಿ-ಅಂಶಗಳಿಗಿಂತ ಕಡಿಮೆ ಇರುತ್ತವೆ. ಇತ್ತೀಚಿನ ದಿನಗಳಲ್ಲಿ ಕೋಮು ಗಲಭೆಗೆ ಸಿಲುಕಿಕೊಂಡ ರಾಜ್ಯಗಳೆಂದರೆ ಆಂಧ್ರಪ್ರದೇಶ, ಅಸ್ಸಾಂ, ಬಿಹಾರ್, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರಗಳು. ಸ್ವಾತಂತ್ರ್ಯನಂತರದ ಗಲಭೆಗಳ ವಿಶ್ಲೇಷಣೆ ಮಾಡಿದಾಗ ಈ ದಂಗೆಗಳಿಂದ ಮುಕ್ತವಾಗಿದ್ದ ರಾಜ್ಯಗಳಲ್ಲೂ ಇಂದೂ ಈ ಗಲಭೆಗಳು ಸಂಭವಿಸುತ್ತಿವೆ. ಮೊದಲು ನಗರಪ್ರದೇಶಗಳಲ್ಲಿ ಕಂಡುಬರುತ್ತಿದ್ದರೂ, ಇಂದು ಇದು ಗ್ರಾಮೀಣ ಪ್ರದೇಶಗಳಿಗೂ ಹಬ್ಬಿದೆ. ತಮಿಳುನಾಡಿನ ಮೀನಾಕ್ಷಿಪುರಂನಲ್ಲಿ ಹರಿಜನರು ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡ ಮೇಲೆ, ನವೆಂಬರ್ 1982ರಲ್ಲಿ 45 ಮುಸ್ಲಿಂ ಲೋಕಸಭಾ ಸದಸ್ಯರು ಹಿಂದೂ ಸಂಘಟನೆಗಳನ್ನು ಬಹಿಷ್ಕರಿಸಬೇಕು, ಶಹಭಾನೂ ಕೇಸಿನ ತೀರ್ಮಾನವನ್ನು ಬದಲಾಯಿಸಲು ಅನುಕೂಲವಾಗುವಂತಹ ಹೊಸ ವಿಧಿಯನ್ನು ಕಾನೂನಿನಲ್ಲಿ ಅಳವಡಿಸಬೇಕೆಂಬ ಮನವಿಯೊಂದನ್ನು ಆಗಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಸಲ್ಲಿಸಿದ ಮೇಲೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ವಿಶ್ವಹಿಂದೂಪರಿಷತ್ತುಗಳು ಹೆಚ್ಚು ಹೆಚ್ಚಾಗಿ ಹಿಂದೂ ಕೋಮಿನವರನ್ನು ಸಂಘಟಿಸಲು ಪ್ರವೃತ್ತರಾದರು.

ಭಾರತದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಕೋಮು ಸಂಘಟನೆಗಳೊಡನೆ ವಿಚಿತ್ರ ಸಂಬಂಧ ವಿರುವುದನ್ನು ನೀವು ಕಾಣಬಹುದು. ಈ ಪಕ್ಷವು ಅಧಿಕಾರಕ್ಕೆ ಬರುವ ಎಲ್ಲೆಯಲ್ಲಿ

ಇಲ್ಲವೇ ಅಧಿಕಾರ ಕಳೆದುಕೊಳ್ಳುವ ಮೊದಲಲ್ಲಿ ಕೋಮು ದಂಗೆಗಳು ಪ್ರತೀಕಾರ ರೂಪದಲ್ಲಿ ಹರಡಿದ ಸಂದರ್ಭಗಳಿಗೇನೂ ಕಡಿಮೆ ಇಲ್ಲ. ಅಧಿಕಾರ ಪಡೆಯುವುದಕ್ಕಾಗಿ ಕಾಂಗ್ರೆಸ್ ಪಕ್ಷವು ಕೋಮು ತಳಹದಿ ನಿರ್ಮಿಸಿಕೊಳ್ಳುವ ದೃಷ್ಟಿಯಿಂದ ದಂಗೆಗಳನ್ನು ಪ್ರಚೋದಿಸುವ ತಂತ್ರಗಳನ್ನು ಬಳಸುವುದೆಂಬ ಅಪಾದನೆಗೆ ಒಳಗಾಗಿದೆ. ಹೈದ್ರಾಬಾದ್‌ನಲ್ಲಿ ಕಮ್ಯೂನಿಸ್ಟರ ಪ್ರಭಾವ ಬೆಳೆಯುವುದನ್ನು ವಿರೋಧಿಸುವ ದೃಷ್ಟಿಯಿಂದ ಮಜಲಿಗಳ ಇತ್ತೇಹಾದುಲ್ ಮುಸ್ಲಿಮೀನ್ ಸಂಘಟನೆಯನ್ನು ಪುನರ್ ಚೇತನಗೊಳಿಸುವ ಮೂಲಕ ಕಾಂಗ್ರೆಸ್ ಪಕ್ಷವು ಪಕ್ಷದಲ್ಲಿ ಜಾತ್ಯಾತೀತ ಮನೋಭಾವ ಅಳಿಯಲು ಕಾರಣವಾದುದಲ್ಲದೆ ತನ್ನ ರಾಜಕೀಯ ಚಟುವಟಿಕೆಗಳು ಮುಂದುವರಿಯಲು ಆಗಿಂದಾಗ್ಗೆ ಮುಸ್ಲಿಂ ಕೋಮು ಸಂಘಟನೆಗಳೊಡನೆ ಅಗಮ್ಯ ಸಂಬಂಧಗಳನ್ನೂ ಇರಿಸಿಕೊಂಡಿತ್ತು.

ಸಾಮಾನ್ಯವಾಗಿ ಕೋಮು ಗಲಭೆಗಳಿಗೆ ಬೇರೆ ಕೋಮಿನ ಬೀದಿಗಳಲ್ಲಿ ಧಾರ್ಮಿಕ ಮೆರವಣಿಗೆ ಹೋಗುವುದು, ಸಾರ್ವಜನಿಕ ಸ್ಥಳಗಳಲ್ಲಿ ಗೋಹತ್ಯೆ ಇವೇ ಮುಂತಾದವು ಕಾರಣಗಳೆಂದು ಹೇಳುತ್ತವೆಯಾದರೂ ನಿಜವಾದ ಕಾರಣ ಹಿಂದೂ-ಮುಸ್ಲಿಂ ಕೋಮುಗಳ ಮಧ್ಯೆ ಹೆಚ್ಚುತ್ತಿರುವ ಆರ್ಥಿಕ ಮತ್ತು ರಾಜಕೀಯ ಅಂಶಗಳು, ಉತ್ತರದ ವಿವಿಧ ಕೈಗಾರಿಕಾ ಸಂಘಟನೆಗಳಲ್ಲಿ ಹಿಂದೂ-ಮುಸ್ಲಿಂ ಕೆಲಸಗಾರರ ಮಧ್ಯೆ ಉಂಟಾಗುವ ವೈರತ್ವ, ಕೊಲ್ಲಿ ದೇಶದ ಹಣದಿಂದ ವ್ಯಾಪಾರಕ್ಕೆ ಧುಮುಕುತ್ತಿರುವ ಮುಸ್ಲಿಮರ ಮತ್ತು ಹಿಂದೂ ವ್ಯಾಪಾರಿಗಳ ಮಧ್ಯೆ ಹೆಚ್ಚುತ್ತಿರುವ ಸ್ಪರ್ಧೆಗಳೂ ಕಾರಣವಾಗಿವೆ

ಕೇಂದ್ರ ಸರಕಾರದ ಗೃಹ ಸಚಿವಾಲಯವು ದೇಶದಲ್ಲಿ ಕೋಮು ಘರ್ಷಣೆಗಳಿಗೆ ಕಾರಣವಾಗುವ 186 ಸೂಕ್ಷ್ಮಸ್ಥಳಗಳನ್ನು ಗುರುತಿಸಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಸ್ಥಳಗಳೂ ಕೂಡ ಹೆಚ್ಚಿವೆ. ರಾಮಜನ್ಮಭೂಮಿ-ಬಾಬ್ರಿಮಸೀದಿ ವಿವಾದಕ್ಕೆ ಸೇರಿದಂತೆಯೇ ಉತ್ತರ ಪ್ರದೇಶದಲ್ಲಿ 75ಕ್ಕೂ ಹೆಚ್ಚು ಕೋಮುಗಲಭೆಗಳು ಉಂಟಾಗಿವೆ.

ಭಾರತದಲ್ಲಿ ಹಿಂದೂ-ಮುಸ್ಲಿಂರ ಸಂಬಂಧಗಳ ಇತಿಹಾಸವನ್ನು ತಿಳಿಯಬೇಕಾದರೆ ರಾಜಕೀಯ ಅಂಶಗಳನ್ನು ಕಡೆಗಣಿಸುವಂತಿಲ್ಲ. ಇಂದಿನ ರಾಜಕೀಯ ವ್ಯವಸ್ಥೆ ಮುಸ್ಲಿಮರಿಗೆ ಅನುಕೂಲಕರವಾಗಿದೆ ಎಂದೇ ಹೇಳಬಹುದು. ಪಂಡಿತ ನೆಹರೂ ಪ್ರಧಾನಮಂತ್ರಿಯಾಗಿದ್ದಾಗಲೇ ಕೇರಳ ಮುಸ್ಲಿಂಲೀಗ್ ಕೋಮುಭಾವನಾ ರಹಿತವಾದುದೆಂದು ಕಾಂಗ್ರೆಸ್ ಇದರೊಡನೆ ಸಖ್ಯ ಬೆಳೆಸಿದ್ದಿತು. ಕೆಲವು ಕಾಲಾನಂತರ ಜನತಾ ಆಡಳಿತ ಸಂದರ್ಭದಲ್ಲಿ ಮುಸ್ಲಿಂಲೀಗ್ ಮತ್ತು ಜಮಾತ್ ಸಂಘಟನೆಗಳು ರಾಜಕೀಯ ಲಾಭ ಪಡೆದುಕೊಂಡುವು. ಇಲ್ಲಿ ಗಮನಾರ್ಹ ಅಂಶವೆಂದರೆ ಹಿಂದೂ ಅಥವಾ ಮುಸ್ಲಿಂ ಸಂಘಟನೆಗಳು ತಮ್ಮ ಧರ್ಮದ ತತ್ವದಲ್ಲಾಗಲೀ ಅಥವಾ ಸಂಸ್ಕೃತಿಯಲ್ಲಾಗಲೀ ಆಸಕ್ತಿ ಹೊಂದಿರದೆ ಧರ್ಮವನ್ನು ಅಧಿಕಾರ ಮತ್ತು ಅವಕಾಶಕ್ಕಾಗಿ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಭಾರತೀಯ ಮುಸ್ಲಿಂ ಲೀಗ್, ಅಖಿಲ ಭಾರತೀಯ ಮುಸ್ಲಿಂ ಲೀಗ್ ಮತ್ತು ಜಮಾತ್-ಇಸ್ಲಾಮಿ ಸಂಘಟನೆಗಳು ಮುಸ್ಲಿಂರ ಹಿತಾಸಕ್ತಿಗಳನ್ನು ರಕ್ಷಿಸುತ್ತಿದ್ದಾರೆ. ಮುಸ್ಲಿಂ ಜನರ ಮೇಲೆ ಈ ಸಂಘಟನೆಗಳ ಹಿಡಿತವನ್ನು ಗಮನಿಸಿದ ಮುಖ್ಯ ರಾಜಕೀಯ ಪಕ್ಷಗಳು ಅಧಿಕಾರ ಗಿಟ್ಟಿಸಲು ಮುಸ್ಲಿಂ ಓಟುಗಳಿಗಾಗಿ ಮೇಲಿನ ಸಂಘಟನೆಗಳ ಮುಂದಾಳುಗಳ ಮನ ಒಲಿಸಲು ಪ್ರಯತ್ನಿಸುತ್ತಿರುತ್ತಾರೆ. ಮುಸ್ಲಿಂರಲ್ಲಿ ಪ್ರತ್ಯೇಕತಾ ಮನೋಭಾವ ಬೇರೂರಿದೆ. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮುಸ್ಲಿಂ ಮುಂದಾಳುಗಳು ರಾಜಕೀಯ ವ್ಯವಸ್ಥೆಯಲ್ಲಿ ಸ್ಥಾನಗಳಿಸುವುದಕ್ಕಾಗಿ ತಮ್ಮ ಸಮೂಹದ ಜನರನ್ನು ಚುನಾವಣಾ ಸಮಯದಲ್ಲಿ ಶೋಷಣೆಗೆ ಒಳಪಡಿಸುತ್ತಿರುತ್ತಾರೆ. ಭಾರತದಲ್ಲಿ ಕೋಮು ಸಾಮರಸ್ಯ ಉಂಟುಮಾಡುವುದು ಬಹುಸಂಖ್ಯಾತರಷ್ಟೆ ಅಲ್ಪಸಂಖ್ಯಾತರ ಜವಾಬ್ದಾರಿಯೂ ಕೂಡ. 1982ರಲ್ಲಿ 45 ಮುಸ್ಲಿಂ ಲೋಕಸಭಾ ಸದಸ್ಯರು ಆಗಿನ ಪ್ರಧಾನ ಮಂತ್ರಿಗೆ ಹಿಂದೂ ಸಂಘಟನೆಯನ್ನು ಬಹಿಷ್ಕರಿಸುವಂತೆ ನೀಡಿದ್ದ ಮನವಿ, ಅರೇಬಿಯಾ ದೇಶದಲ್ಲಿ ಇಸ್ಲಾಂ ಅನ್ನು ರೋಮನ್ ದೇಶದಲ್ಲಿ ಕ್ರೈಸ್ತ ಧರ್ಮವನ್ನು ಬಹಿಷ್ಕರಿಸಲು ಕೋರಿದಂತಾಗುತ್ತದೆ.

ಇಂದು ಹದಗೆಡುತ್ತಿರುವ ಕೋಮು ಸೌಹಾರ್ದತೆಗೆ ಹಿಂದೂ ಮುಸ್ಲಿಂ ಸಮೂಹಗಳಲ್ಲಿ ತಲೆ ಎತ್ತಿಕೊಳ್ಳುತ್ತಿರುವ ವಿವಿಧ ಸೇನೆಗಳು ಕಾರಣವೆಂದು ಹೇಳಬಹುದು. ಅಹಮದ ಬುಕಾರಿಯವರ ಆಡಮ್ ಸೇನೆ, ಜಿಲಾನಿ ನೇತೃತ್ವದ ಕ್ವಾಮೀ ಮೋರ್ಚಾ, ಪಾಕೀಸ್ಥಾನಿ ಹಿನ್ನೆಲೆಯ ಜಮೇತಿ-ಇಸ್ಲಾಮೀ-ಹಿಂದ್, ವಿಶ್ವ-ಹಿಂದೂ ಪರಿಷತ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಭಜರಂಗ ದಳ ಮತ್ತು ಶಿವಸೇನೆ ಇವೇ ಮುಂತಾದ ಸಂಘಟಣೆಗಳು ಧರ್ಮದ ಹೆಸರಿನಲ್ಲಿ ವಿವಿಧ ಕೋಮುಗಳ ಮಧ್ಯೆ ವಿರಸವನ್ನು ಹುಟ್ಟುಹಾಕುತ್ತಿವೆ.

ದೆಹಲಿಯ ಶಾಹಿ ಇಮಾಂ ಕೋಮು ಗಲಭೆಗಳ ನಿಯಂತ್ರಣಕ್ಕಾಗಿ ವಿಶ್ವ ಸಂಸ್ಥೆಯ ಸೇನೆಯ ತುಕ್ಕಡಿಯೊಂದು ಇರಬೇಕೆಂದು ಮಾಡಿರುವ ಸಲಹೆ, ಇಂದು ಸನ್ನಿವೇಶ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ. ಮುಸ್ಲಿಂ ಮುಂದಾಳುಗಳು ತಮ್ಮ ಕೋಮಿನ ಸಮಸ್ಯೆಗಳನ್ನು ರಚನಾತ್ಮಕವಾಗಿ ಮಂಡಿಸಿ ಪರಿಹಾರ ಕಂಡು ಕೊಳ್ಳುವ ಬದಲಿಗೆ, ಈಗಾಗಲೇ ಬಹುಸಂಖ್ಯಾಂತರಲ್ಲಿ ಮುಸ್ಲಿಂರ ಬಗೆಗೆ ಇರುವ ಸಂಶಯ ಮತ್ತಷ್ಟು ಬೆಳೆಯುವಂತೆ ಮಾಡಿದ್ದಾರೆ. ಇಲ್ಲಿ ವಿಪರ್ಯಾಸವೆಂದರೆ ಎರಡೂ ಕಡೆಯ ಹೆಚ್ಚಿನ ಮುಗ್ಧ ಜನರು ಕೋಮುವಾದ ರಾಜಕೀಯದ ಮಧ್ಯೆ ಸಿಕ್ಕಿ ಭಯದ ವಾತಾವರಣದಲ್ಲಿ ಜೀವಿಸಬೇಕಾಗಿದೆ.

ಪ್ರೊ. ಎಸ್.ಕೆ. ಘೋಷ್ ಅವರು ಹೇಳುವಂತೆ ಇಂದು ನಮಗೆ ಧರ್ಮ ಬೇಕು—ಕೋಮುವಾದ ದುರಭಿಮಾನ ಆಧಾರದ ಧರ್ಮವಲ್ಲ—ವೇದಗಳ, ಕುರಾನಿನ ಮತ್ತು ಬೈಬಲ್ ಆಧಾರದ ಮೇಲಿನ ಪವಿತ್ರ ಸಹಬಾಳ್ವೆಯ ತತ್ವಗಳಾಧಾರಿತ ಧರ್ಮ ಬೇಕಾಗಿದೆ.

ಭಾರತದ ಸಂಸ್ಕೃತಿಯನ್ನು ನಿರ್ಧರಿಸಲು ಜಾತ್ಯಾತೀತತೆ ಮತ್ತು ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಬರುವ ಜವಾಬ್ದಾರಿ ಕೇವಲ ಬಹುಸಂಖ್ಯಾತರನ್ನೇ ಆಧರಿಸದೆ ಅಲ್ಪ ಸಂಖ್ಯಾತರು ಬಹುಸಂಖ್ಯಾತರ ನಡುವೆ ಹೊಂದಾಣಿಕೆ ಮತ್ತು ಉತ್ತಮ ಸಹಬಾಳ್ವೆ ಎಂದಿಗಿಂತಲೂ ಇಂದು ಹೆಚ್ಚಾಗಿಬೇಕಾಗಿದೆ. ಭಾರತದ ಪ್ರತಿಯೊಬ್ಬರೂ ತಮ್ಮ ಧರ್ಮಕ್ಕೆ ಅಂಟಿಕೊಳ್ಳದೆ ಇತರರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡದ ರೀತಿಯಲ್ಲಿ ಸಹಜ ಭಾರತೀಯರಂತೆ ಜೀವನ ನಡೆಸಬೇಕಾಗಿದೆ.

ಡಾ. ಟಿ. ಬಿ. ಬಸವರಾಜು

ಜ್ಞಾನಯೋಗ

ಮಾನವನ ಜೀವನಕ್ಕೆ ಒಂದು ಅರ್ಥಪೂರ್ಣ ಉದ್ದೇಶವಿದೆ. ಆ ಉದ್ದೇಶವೇ ಆತ್ಮಸಾಕ್ಷಾತ್ಕಾರ. ಆತ್ಮಸಾಕ್ಷಾತ್ಕಾರ ಹೊಂದಲು ಅನೇಕ ಮಾರ್ಗಗಳಿವೆ. ಭಗವದ್ಗೀತೆಯು ಅದನ್ನು ನಾಲ್ಕು ಮಾರ್ಗಗಳಲ್ಲಿ ತಿಳಿಹೇಳಿದೆ. ಅವುಗಳು ಯಾವುವೆಂದರೆ, ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಹಾಗೂ ರಾಜಯೋಗ. ಜ್ಞಾನಯೋಗವು ಒಂದು ವಿಶಿಷ್ಟಮಾರ್ಗವೆನಿಸಿದೆ.

ಜ್ಞಾನಯೋಗವು ಮುಖ್ಯವಾಗಿ ವೈಚಾರಿಕತೆಯ ಮಾರ್ಗ. ಅಂದರೆ, ಸಾಧಕನು ವಿಚಾರದ ಮೂಲಕ ಬದುಕಿನ ವಿಷಯಾಸಕ್ತ ಸಂಕೋಲೆಯಿಂದ ಬಿಡಿಸಿಕೊಂಡು ಅಂತಿಮ ಸತ್ಯದೊಡನೆ 'ಐಕ್ಯತೆ'ಯನ್ನು ಪಡೆಯುವುದು. 'ಬ್ರಹ್ಮ'ವೊಂದೇ ಸತ್ಯ, ಉಳಿದೆಲ್ಲವೂ ಮಿಥ್ಯ ಎಂಬ ನೈಜ ಜ್ಞಾನವನ್ನು ವಿಚಾರದ ತಳಹದಿಯಲ್ಲಿ, ವಿವೇಕದ[1] ಮೂಲಕ ಅರಿತುಕೊಂಡು, ಸಾಧಕನು ಬ್ರಹ್ಮಸಾಕ್ಷಾತ್ಕಾರ ಹೊಂದುವುದೇ ಜ್ಞಾನಯೋಗದ ಗುರಿ.

ಬದುಕಿನ ಆಗುಹೋಗುಗಳಾಗಿರುವ ಸೃಷ್ಟಿ, ಸ್ಥಿತಿ, ಲಯಗಳು, ಸುಖ-ದುಃಖಗಳಿಗೆ ಮೂಲಕಾರಣವೇನು? ಇವುಗಳು ಹೊಂದಿರಬಹುದಾದ ಉದ್ದೇಶವೇನಿರಬಹುದು? ಪಂಚಭೂತಗಳಿಂದ ರಚನೆಗೊಂಡಿರುವ ಈ ಶರೀರದ ಅರ್ಥವಾದರೂ ಏನು? ಪ್ರತಿಯೊಂದು ವ್ಯವಹಾರದಲ್ಲಿ ಬಳಸುವ 'ನಾನು' ಎಂಬ ಭಾವದಲ್ಲಿ 'ನಾನು' ಎನ್ನುವುದು ಯಾರು ? ಕ್ಷಣಿಕವಾದ ಶರೀರವೇ ? ಅಥವಾ ಶರೀರವಲ್ಲವೇ? ಭಗವಂತ ಎನ್ನುವುದು ಯಾರನ್ನು ? ಆತನು ನಿಜವಾಗಿಯೂ ಸರ್ವಾಂತರ್ಯಾಮಿಯಾಗಿರುವನೇ? ಸರ್ವಶಕ್ತನೆನಿಸಿರುವನೇ? ಆತ ಸಗುಣನೋ ಅಥವಾ ನಿರ್ಗುಣನೋ? ಆತನ ಸೃಷ್ಟಿಯಲ್ಲಿ ಈ ಬಗೆಯ ವೈವಿಧ್ಯ, ವೈಚಿತ್ರ್ಯಗಳು ಸಾಧ್ಯವಾದದ್ದಾದರೂ ಹೇಗೆ? ಮತ್ತು ಏಕೆ? ಇತ್ಯಾದಿಯಾಗಿ ಅರ್ಥಪೂರ್ಣವಾಗಿ ವಿಚಾರಮಂಥನ ನಡೆಸಿ, ಪ್ರತಿಯೊಂದು ವಸ್ತು ವಿಷಯವನ್ನೂ ಪ್ರಶ್ನಿಸಿ, ವಿಮರ್ಶಿಸಿ, 'ಸತ್ಯ'ವನ್ನು ಕಂಡುಕೊಳ್ಳುವ ಬಗೆಯೇ

---

1. ಹೋಲಿಸಿ—"ವಿವೇಕಿಯೂ, ವಿರಕ್ತನೂ ಶಮದಮ ಮೊದಲಾದ ಗುಣಗಳಿಂದ ಕೂಡಿದ ಮುಮುಕ್ಷುವಿಗೆ ಮಾತ್ರ ಬ್ರಹ್ಮ ವಿಚಾರದ ಅರ್ಹತೆ"—ವಿವೇಕ ಚೂಡಾಮಣಿ, 17ನೆಯ ಶ್ಲೋಕ.

'ಜ್ಞಾನಯೋಗ' ಎನಿಸುತ್ತದೆ. ಜ್ಞಾನಯೋಗಿಯು ವಿವೇಕದ ಸಹಾಯದಿಂದ ಸ್ವತಃ ಅನುಭವ ಪಡೆದುಕೊಂಡೇ ಸತ್ಯವನ್ನು ಮನದಟ್ಟುಮಾಡಿಕೊಳ್ಳುತ್ತಾನೆ. ಜ್ಞಾನವೆಂದರೆ 'ಪುಸ್ತಕ ಜ್ಞಾನ'ವಲ್ಲ ಪುಸ್ತಕ ಜ್ಞಾನವೇ ನಿಜವಾದ ಜ್ಞಾನವಲ್ಲ ಪರಾ ಮತ್ತು ಅಪರಾ ಎಂದು ಎರಡು ರೀತಿಯ ಜ್ಞಾನವನ್ನು ನೋಡಬಹುದು. ಅಪರಾ ಜ್ಞಾನವೆಂದರೆ 'ಲೌಕಿಕಶಾಸ್ತ್ರ, ಗಣಿತ, ರಾಜಕೀಯ ವಿದ್ಯೆ, ಶಾಸ್ತ್ರ ವಿಚಾರಗಳು, ಚಿತ್ರಕಲೆ, ಶಿಲ್ಪ ಮುಂತಾದವು. ಪರಾ ಜ್ಞಾನವೆಂದರೆ ಶಾಶ್ವತವಾದ ಜ್ಞಾನ. ಅರ್ಥಾತ್ ಆಧ್ಯಾತ್ಮ ತತ್ತ್ವಗಳಾದ ಬ್ರಹ್ಮ, ಜೀವಗಳಿಗೆ ಸಂಬಂಧಿಸಿದ ಜ್ಞಾನ. ಜ್ಞಾನಯೋಗದ ಪರಮಗುರಿ 'ಪರಾ ಜ್ಞಾನವೇ' ಆಗಿದೆ. ಪ್ರತ್ಯಕ್ಷ ಆತ್ಮಾನುಭೂತಿ ಹೊಂದುವಿಕೆಯೇ ಇಲ್ಲಿನ ಸಾಧನಾಸಿದ್ಧಿ ಎನಿಸಿದೆ.

ಜ್ಞಾನಯೋಗದ ಸಾಧಕನು ಸದಾ ದೃಢಮನಸ್ಕನೂ, ಚುರುಕುಬುದ್ಧಿಯುಳ್ಳವನೂ, ಸೂಕ್ಷ್ಮಗ್ರಾಹಿಯೂ, ಅಚಲ ಶ್ರದ್ಧೆಯುಳ್ಳವನೂ, ಆತ್ಮವಿಶ್ವಾಸಿಯೂ ಆಗಿರುತ್ತಾನೆ. ಈ ಬಗೆಯ ಸಾಧಕನು ಬದುಕಿನ ಎಲ್ಲಾ ವಸ್ತು-ವಿಷಯಗಳನ್ನು ವೈಚಾರಿಕವಾಗಿ ವಿಮರ್ಶಿಸಿ, ಶಾಶ್ವತವಾದುದನ್ನು, ಮಾತ್ರ ಹೆಕ್ಕಿಕೊಳ್ಳುತ್ತಾ, ಅಶಾಶ್ವತವಾದವುಗಳನ್ನು ಪರಿತ್ಯಜಿಸುತ್ತಾ ತನ್ನ ಸಾಧನೆಯನ್ನು ಮುಂದುವರಿಸಬೇಕು.

ವೇದ-ಉಪನಿಷತ್‍ಗಳು ಪ್ರತಿಪಾದಿಸುವ ಆತ್ಮವಿದ್ಯೆಯ ವಿಚಾರಗಳನ್ನು ಸಾಧಕನು ಜ್ಞಾನಿಯಾದ ಗುರುವಿನ ಮೂಲಕ[1] ಕೇಳಿಕೊಂಡು, ನಂತರದಲ್ಲಿ ಕೇಳಿದ ವಿಷಯವನ್ನು ಸ್ವತಃ ಮನನ ಮಾಡಿಕೊಂಡು ಅವುಗಳ ಬಗ್ಗೆ ವಿಚಾರ ಮಂಥನ ಮಾಡುತ್ತಾ 'ಸತ್ಯ'ವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ತರ್ಕ, ನ್ಯಾಯ, ವಿಮರ್ಶೆಗಳಲ್ಲಿ ಒಳಗೊಳ್ಳುವ ಜ್ಞಾನಯೋಗಿಯು ಅಂತಿಮ ಸತ್ಯವು 'ಇದಲ್ಲ' 'ಇದಲ್ಲ' ಎನ್ನುತ್ತಾ ಶಾಶ್ವತವಾದ ಒಂದೇ ತತ್ತ್ವ 'ಬ್ರಹ್ಮ' ಸಾಕ್ಷಾತ್ಕಾರ ಪಡೆಯುವಲ್ಲಿ ಸಮರ್ಥನಾಗುತ್ತಾನೆ.

೨

ಯೋಗಗಳಲ್ಲೆಲ್ಲಾ ಜ್ಞಾನಯೋಗವು 'ಯುಕ್ತಿ'ಯನ್ನೇ ಪ್ರಧಾನವಾಗಿ ಹೊಂದಿ ತಾತ್ತ್ವಿಕತೆಯಿಂದ ಕೂಡಿರುವಂತಹುದು. ಇದು ತುಂಬಾ ಸಂಕೀರ್ಣವೂ ಆಗಿರುವಂತೆ ಕ್ಲಿಷ್ಟವೂ ಸಹ. ಜ್ಞಾನದ ಬಗೆಗೆ ಸ್ಥೂಲವಾಗಿ ಹೇಳುವುದಾದರೆ ಶಾಸ್ತ್ರಾಧ್ಯಯನಗಳಿಂದ ಲಭಿಸುವ ಶುಷ್ಕ ಜ್ಞಾನವು ಜ್ಞಾನವೆನಿಸಲಾರದು. ನಿರಾಕಾರ ಬ್ರಹ್ಮನನ್ನು ದೊರಕಿಸಿಕೊಳ್ಳುವ ಹಂಬಲವೇ ನೈಜಜ್ಞಾನದ ತಳಹದಿ ಅಲ್ಲದೆ, ಜ್ಞಾನವು ನೈಜ ಬದುಕಿಗೆ ಅಳವಡಿಸಲ್ಪಡಬೇಕು ಮತ್ತು ಅನುಷ್ಠಾನ ಪ್ರಾಧಾನ್ಯತೆ ಹೊಂದಿರಬೇಕು. ಧ್ಯಾನದಿಂದ ಸಿಗುವ ಜ್ಞಾನ ಬೇರೆ. ತರ್ಕದಿಂದ ದೊರಕಬಹುದಾದ ಜ್ಞಾನವೇ ಬೇರೆ. ಇವು ಅಲ್ಪ ಜ್ಞಾನವೇ ಹೌದು. ಇವುಗಳಿಗಿಂತಲೂ ಸಾಧಕನಿಗೆ

---

1. ರಾಘವೇಂದ್ರಚಾರ್ಯ ಎಚ್. ಎನ್.—ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ.

ಸತ್ಯದ ಸಾಕ್ಷಾತ್ಕಾರ ಆದ ನಂತರ ದೊರಕಬಹುದಾದ ಜ್ಞಾನವೇ ಪರಿಪೂರ್ಣವಾದುದು. ಜ್ಞಾನವು ಏಕತೆಯ ಕಡೆ ಕರೆದೊಯ್ದರೆ, ಅಜ್ಞಾನ ಭಿನ್ನತೆಗೆ ಎಳೆಯುತ್ತದೆ. ವಿಚಾರದಲ್ಲಿ ಎರಡು ಬಗೆ. ಒಂದು 'ಅನುಲೋಮ', ಎರಡನೆಯದು 'ವಿಲೋಮ'. ಅನುಲೋಮವೆಂದರೆ ಒಬ್ಬ ವ್ಯಕ್ತಿ ಸೃಷ್ಟಿಯ ಚಿಂತನೆಯಿಂದ ಸೃಷ್ಟಿಕರ್ತನತ್ತ ನಡೆಯುವುದೇ ಆಗಿದೆ. ಅರ್ಥಾತ್ ಆತ ಕಾರ್ಯದಿಂದ ಆದಿಕಾರಣಕ್ಕೆ ಹೋಗುತ್ತಾನೆ. ಅಂತಿಮವಾಗಿ ವಿಲೋಮ ವಿಚಾರ ಪ್ರಾರಂಭವಾಗುತ್ತದೆ. ದೇವರನ್ನು ಆತ ಕಂಡು ಕೊಂಡ ನಂತರ, ಸೃಷ್ಟಿಯ ಪ್ರತೀವಸ್ತು ಕ್ರಿಯೆಗಳಲ್ಲಿಯೂ ಆತ ಭಗವಂತನನ್ನೇ ಕಾಣ ತೊಡಗುತ್ತಾನೆ. ಒಂದು ವಿಭಜನಾರೂಪ ಪಡೆದುಕೊಂಡರೆ ಇನ್ನೊಂದು ಸಂಯೋಜನಾರೂಪ ಹೊಂದಿರುತ್ತದೆ.

ಗೀತೆಯು ಹೇಳುವಂತೆ ಕಾಮ ಕಾಂಚನಗಳ ವ್ಯಾಮೋಹ ತ್ಯಜಿಸಿದಷ್ಟೂ ಜ್ಞಾನ ವೃದ್ಧಿಯಾಗುತ್ತದೆ. 'ನಾನು ಎಂದು ಹೇಳುವಲ್ಲಿ ಅಹಂ ನೆಲೆಸಿರುತ್ತದೆ ಎಂದೇ ಹೇಳಬಹುದು. ಇದು ಮಾನವನ ಪುರೋಭಿವೃದ್ಧಿಗೆ ಮಾರಕವೇ ಹೌದು. ಅಷ್ಟೇ ಏಕೆ ಇದು ಮಾನವತ್ವದ ನಾಶಕ್ಕೆ ತಳಪಾಯ ಹಾಕುತ್ತದೆ. ಜ್ಞಾನ ಲಾಭಕ್ಕೆ ಎರಡು ಲಕ್ಷಣಗಳುಂಟು ಮೊದಲನೆಯ ಲಕ್ಷಣವೆಂದರೆ 'ಅನುರಾಗ', ಅರ್ಥಾತ್ ಭಗವಂತನನ್ನು ಪ್ರೀತಿಸುವುದು. ಭಗವಂತನ ಮೇಲೆ ಅನುರಾಗವಿಲ್ಲದಿದ್ದರೆ, ಪ್ರೀತಿಯಿಲ್ಲದಿದ್ದರೆ ಬರಿದೆ ಜ್ಞಾನವಿಚಾರ ವಿಫಲವಾಗುತ್ತದೆ. ಎರಡನೆಯ ಲಕ್ಷಣ ವೆಂದರೆ, 'ಕುಂಡಲಿನೀ ಶಕ್ತಿ' ಎಚ್ಚರಗೊಳ್ಳುವಿಕೆ. ಕುಂಡಲಿನೀಯ ಸುಪ್ತ ಸ್ಥಿತಿಯಲ್ಲೇ ಇದ್ದರೆ ಜ್ಞಾನ ದೊರಕದು. ಕಾಲದ ಪರಿವೆಯಿಲ್ಲದೆ ಮಾಡುವ ಗ್ರಂಥಗಳ ಅಧ್ಯಯನವೇ ಆಗಲಿ, ವಿಚಾರವೇ ಆಗಲಿ ಅಂತರ್ಯದ ಶ್ರದ್ಧಾಯುಕ್ತ ವ್ಯಾಕುಲತೆಯಿಂದ[1] ದೂರಾಗಿದ್ದರೆ ಜ್ಞಾನ ದೊರಕಲಾರದು.

ನೈಜ ಜ್ಞಾನವನ್ನು ಪಡೆದುಕೊಂಡ ಸಾಧಕನಿಗೆ ಯಾವ ಪಾಪವೂ[2] ಕಾಡದು. ಪಾಪ ವಿಮುಕ್ತನಾದ ಜ್ಞಾನಯೋಗಿಗೆ ಬದುಕಿನಲ್ಲಿ ಬ್ರಹ್ಮದ ಹೊರತು ಬೇರೇನೂ ಕಾಣಿಸದು. ಬದುಕಿನಲ್ಲಿ ಎದುರಾಗುವ ಯಾವ ಕಷ್ಟ-ನಷ್ಟಗಳೂ ಆತನನ್ನು ಬಂಧಿಸಲಾರವು. ಏಕಮೇವಾ ದ್ವಿತೀಯವೆನಿಸಿರುವ 'ಬ್ರಹ್ಮ'ದ ಅನುಭವ ಆನಂದದಲ್ಲಿ ಆತ ಸಂತುಷ್ಟನಾಗಿ, ತೃಪ್ತನಾಗಿ, ಸ್ಥಿತಪ್ರಜ್ಞನಾಗಿರುತ್ತಾನೆ. ಜ್ಞಾನಯೋಗಿಯು ವಿಚಾರ ವಿಮರ್ಶೆಗಳ ಹಂತದಿಂದ ಪ್ರಾರಂಭಿಸಿ, ಎಲ್ಲಾ ಬಗೆಯ ಸಂಶಯಗಳಿಂದ ಮುಕ್ತನಾದಾಗ 'ನಿತ್ಯಮುಕ್ತನೆನಿಸುತ್ತಾನೆ'. ಆತನು ಈ ಜೀವನದಲ್ಲಿಯೇ ಭೌತಿಕ

1. "ಶ್ರದ್ಧೆಯುಳ್ಳವನೂ, ಸೇವಾತತ್ಪರನೂ, ಜಿತೇಂದ್ರಿಯನೂ ಆದ ಮುಮುಕ್ಷುವು ಜ್ಞಾನವನ್ನು ಹೊಂದುವನು"—ಭಗವದ್ಗೀತೆ, ಅಧ್ಯಾಯ 4, ಶ್ಲೋಕ 39.

2. "ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ ಆ ಸಮಸ್ತ ಪಾಪವನ್ನೂ ಜ್ಞಾನವೆಂಬ ನಾವೆಯಿಂದ ದಾಟುವೆ"—ಭಗವದ್ಗೀತೆ, ಅಧ್ಯಾಯ 4, ಶ್ಲೋಕ 36.

ದೇಹವನ್ನು ಹೊಂದಿಯೂ ಮುಕ್ತಿ ಪಡೆದುಕೊಳ್ಳುವಿಕೆಗೆ ಜೀವನ್‌ಮುಕ್ತಿ[1] ಎಂದೂ, ಪಂಚಭೂತಗಳಿಂದಾದ ದೇಹವು ಮತ್ತೆ ತನ್ನ ಮೂಲವನ್ನೇ ಸೇರಿಕೊಂಡಾಗ ಅದು ವಿದೇಹ ಮುಕ್ತಿ ಎಂದೆನಿಸುತ್ತದೆ.

ಜ್ಞಾನಯೋಗದಲ್ಲಿ ಸಾಧಕನು ಗುರಿಯೆಡೆಗೆ ಸಾಗಲು ಅಳವಡಿಸಿಕೊಳ್ಳಬೇಕಾದ ಕೆಲವು ಗುಣಾಂಶಗಳನ್ನು ಹೇಳಿದೆ. ಅವುಗಳನ್ನು ಒಟ್ಟು ನಾಲ್ಕು ಎಂದು ನಿಶ್ಚಯಿಸಲಾಗಿದೆ. ಅವುಗಳನ್ನು ಹೀಗೆ ಹೇಳಬಹುದು :

(i) ನಿತ್ಯಾನಿತ್ಯ ವಸ್ತು ವಿವೇಕ (ವಿವೇಕ)
(ii) ಇಹಾಮುತ್ರಾರ್ಥ ಫಲಭೋಗ ವಿರಾಗ (ವೈರಾಗ್ಯ)
(iii) ಶಮಾದಿ ಷಟ್ಕ ಸಂಪತ್ತು
(iv) ಮುಮುಕ್ಷುತ್ವ

(i) ನಿತ್ಯಾನಿತ್ಯ ವಸ್ತು ವಿವೇಕ :

ನಿತ್ಯಾನಿತ್ಯವಸ್ತು ವಿವೇಕವೆಂದರೆ, ಈ ಜಗತ್ತಿನಲ್ಲಿ ನಿತ್ಯವಾದ, ಅನಿತ್ಯವಾದ ವಸ್ತುಗಳು ಯಾವುವು? ಈ ಜಗತ್ತಿನ ಘಟನೆಗಳ ಹಿನ್ನೆಲೆಯಲ್ಲಿರುವ ನಿಜವಾದ ಸತ್ಯವೇನು ? ಎಂದು ವಿಚಾರಮಂಥನ ನಡೆಸುವುದೇ ಆಗಿದೆ ಗೋಚರವಾಗುತ್ತಿರುವ ಈ ಭೌತಿಕ ವಿಶ್ವದ ಪ್ರತೀವಸ್ತು ವಿವರಗಳ ಬಗ್ಗೆಯೂ ನಿರಂತರವಾಗಿ ವಿಚಾರಮಂಥನ ಅರ್ಥಪೂರ್ಣವಾಗಿ ನಡೆಯಬೇಕು. ಆಗ ಸದಾ ಬದಲಾಗುತ್ತಿರುವ ಅನಿತ್ಯವೇ ಆಗಿರುವ ಜೀವನ-ಜಗತ್ತುಗಳ ಹಿನ್ನೆಲೆಯಲ್ಲಿ ಬದಲಾಗದ, ಶಾಶ್ವತವಾದ ಒಂದು ತತ್ತ್ವವಿದ್ದೇ ಇದೆ. ಅದೇ ಬ್ರಹ್ಮತತ್ತ್ವ ಎಂಬ ಬೋಧೆ ಬರುತ್ತದೆ. ಇದನ್ನೇ ನಿತ್ಯಾನಿತ್ಯ ವಸ್ತುವಿವೇಕ ಎಂದು ಕರೆದಿದ್ದಾರೆ. ಅಂದರೆ, ಕ್ಷಣಿಕವಾದ, ಶಾಶ್ವತವಲ್ಲದ ಬದುಕಿನ ಎಲ್ಲಾ ವಿಷಯ, ಘಟನೆಗಳ ಹಿಂದೆ ಶಾಶ್ವತವಾದ, ನಿತ್ಯವಾದ ತತ್ತ್ವವೊಂದನ್ನು ಕಂಡುಕೊಳ್ಳುವುದು. ಭೌತಿಕ ಪ್ರಪಂಚದ ವಸ್ತು-ವಿಷಯಗಳ ಆಕರ್ಷಣೆಗೆ ಜೋತು ಬೀಳದಿರಲು ಅವುಗಳೆಲ್ಲಾ ಅಶಾಶ್ವತ ಎಂಬ ಸತ್ಯ ಆವಿಷ್ಕಾರಗೊಳ್ಳಬೇಕು. ಬ್ರಹ್ಮವೊಂದೇ ಸತ್ಯ, ಶಾಶ್ವತ ವಸ್ತು ಎಂಬ ಭಾವ, ಬದುಕಿನ ಸರ್ವಮೋಹಗಳ ಬಗ್ಗೆ ವೈರಾಗ್ಯಭಾವ ಬೆಳೆಯ ಬಲ್ಲುದು. ಆದುದರಿಂದಲೇ, ವೈರಾಗ್ಯಕ್ಕೆ ಅಗತ್ಯವಾದ ವಿವೇಕ ಸಾಧಕನಿಗೆ ಅತ್ಯಗತ್ಯ.

(ii) ವೈರಾಗ್ಯ : (ಇಹಾಮುತ್ರಾರ್ಥ ಫಲ ಭೋಗವಿರಾಗ) :

ಜಗತ್ತಿನ ಸರ್ವವೂ ಕ್ಷಣಿಕ, ಅಶಾಶ್ವತವಾದದ್ದು, ಸತ್ಯವಾದುದಲ್ಲ ಎಂದು

---

1. "ಯಾರಿಗೆ ದೇಹೇಂದ್ರಿಯಗಳಲ್ಲಿ 'ನಾನು' ಎಂಬ ಭಾವವೂ ಅವುಗಳಿಗಿಂತ ವ್ಯತಿರಿಕ್ತವಾದ ವಸ್ತುಗಳಲ್ಲಿ ಇದು ಎಂಬ ಭಾವವೂ ಎಂದಿಗೂ ಉಂಟಾಗುವುದಿಲ್ಲವೋ ಅವನು ಜೀವನ್ಮುಕ್ತನು ಎನಿಸುವನು—ವಿವೇಕ ಚೂಡಾಮಣಿ 434.

ತಿಳಿಯುವುದರ ಜೊತೆಗೆ ಪ್ರಪಂಚಕ್ಕೆ[1] ಸಂಬಂಧಿಸಿದ ಯಾವುದೇ ವಸ್ತು–ವಿಶೇಷದಲ್ಲಿ ಆಸಕ್ತಿ ಉಳಿಸಿಕೊಳ್ಳಕೂಡದು. ಬ್ರಹ್ಮವೊಂದರ ಹೊರತು ಮಿಕ್ಕೆಲ್ಲವುಗಳ ಬಗೆಗೆ ಹೊಂದುವ ನಿರಾಸಕ್ತ ಭಾವವೇ 'ವೈರಾಗ್ಯ' ಎನಿಸಿಕೊಳ್ಳುತ್ತದೆ. ಈ ಬದುಕಿನಲ್ಲಿ ಸೆಳೆಯುವ ಸಂಪತ್ತು, ಅಧಿಕಾರ, ಕೀರ್ತಿ, ಇತ್ಯಾದಿ–ಪ್ರತಿಯೊಂದು ಮೋಹಗಳೂ ಹುಲ್ಲುಕಡ್ಡಿಗೆ ಸಮಾನವೆಂದು ಭಾವಿಸುವ ದೃಢಮನಸ್ಕಭಾವ ಇಲ್ಲಿ ಅತ್ಯಗತ್ಯ. ಈ ಬಗೆಯ ದೃಢ, ನಿಶ್ಚಿತ ಮನಸ್ಥಿತಿ ಉಳಿಸಿಕೊಳ್ಳಲು ಸಾಧಕನು ಶಮದಮಾದ ಆರು ಗುಣಗಳನ್ನು ರೂಢಿಸಿಕೊಳ್ಳಬೇಕು. ಅವುಗಳನ್ನು ಶಮದಮಾದಿ ಷಟ್ಕಸಂಪತ್ತುಗಳೆಂದು ಕರೆಯುವರು. ಅವುಗಳು ಯಾವುವೆಂದರೆ ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನ ಈ ಆರು ಗುಣಗಳೇ ಆಗಿದೆ. ಅವುಗಳನ್ನು ಹೀಗೆ ವಿವರಿಸಬಹುದು.

(ಅ) (ಶಮ) : ಮನಸ್ಸು ಇಂದ್ರಿಯಾಸಕ್ತ ವಿಷಯ ವಸ್ತುಗಳ ಕಡೆ ವಾಲುತ್ತದೆ ಇಂತಹ ಸೆಳೆತವನ್ನು ನಿಗ್ರಹಿಸುವುದಲ್ಲದೆ, ಅದು ಸುಖ–ಭೋಗಗಳ ಕಡೆ ಹೊರಳದಂತೆ ಮಾಡುವುದೇ 'ಶಮ'. ಶಮವೆಂದರೆ ವಿಷಯವಾಸನಾತ್ಯಾಗವೇ ಆಗಿದೆ.

(ಆ) ದಮ: ಮನಸ್ಸನ್ನು ನಿಗ್ರಹಿಸಿಬಿಟ್ಟರೆ ಸಾಲದು. ಭೋಗವಸ್ತುಗಳ ಕಡೆ ವಾಲದಿದ್ದರೂ ಅಂತರ್ಯದಲ್ಲಿ ವಿಷಯಾಸಕ್ತ ಆಸೆ ಸೂಕ್ಷ್ಮರೂಪದಲ್ಲಿ ಅಡಗಿರುತ್ತದೆ. ಇಂತಹ ಆಸೆಗಳನ್ನು ನಾಶಮಾಡಿ, ಇಂದ್ರಿಯಗಳು ಬಾಹ್ಯವಸ್ತುಗಳ ಕಡೆ ವಾಲದಂತೆ ಮಾಡುವುದು 'ದಮ', ಎಂದರೆ ಇಂದ್ರಿಯ ನಿಗ್ರಹವೆಂದರ್ಥ.

(ಇ) ಉಪರತಿ : ಜಗತ್ತಿನ ಸರ್ವ ಸುಖ-ಭೋಗಗಳಿಂದ ಹೊರನಡೆದು, ಅಂತರ್ಯದಲ್ಲಿ ಆತ್ಮತತ್ತ್ವದ ಪರಿಶೀಲನೆಯಲ್ಲಿ ಪರಿಪೂರ್ಣವಾಗಿ ತೊಡಗಿಕೊಳ್ಳುವುದೇ ಉಪರತಿ ಎನಿಸಿಕೊಳ್ಳುವುದು.

(ಈ) ತಿತಿಕ್ಷಾ : ಬದುಕಿನಲ್ಲಿ ಎದುರಾಗುವ ಅನೇಕ ರೀತಿಯ ಕಷ್ಟ, ನಷ್ಟ, ಸುಖ–ದುಃಖಗಳು ಪ್ರಭಾವಶಾಲಿಯಾಗಿರುತ್ತವೆ. ಇವುಗಳ ಪ್ರಭಾವಕ್ಕೆ ಸಾಧಕನು ಸಿಲುಕಿದ್ದೇ ಆದರೆ ಆತನ ಮನಸ್ಸಿನ ಸ್ಥಿರತೆಯನ್ನು ಕಳೆದುಕೊಳ್ಳುತ್ತಾನೆ. ತತ್‌ಪರಿಣಾಮವಾಗಿ ಸಾಧಕನು ಮತ್ತೆ ಕಾಮ, ಕ್ರೋಧ, ಇತ್ಯಾದಿ ಷಡ್ವೈರಿಗಳ. ಪಂಚೇಂದ್ರಿಯಗಳ ಸುಳಿಗೆ ಸಿಲುಕುತ್ತಾನೆ. ಆಗ ಆತ ಅಂತರ್ಮುಖಿಯಾಗಲು ಸಾಧ್ಯವಾಗದೆ ಮನಸ್ಸು ಬಾಹ್ಯದ ಕಡೆ ಲಕ್ಷ್ಯ

---

1. 'ಯಾರ ಮನಸ್ಸು ಸಾಮ್ಯದಲ್ಲಿ ನಿಂತಿರುವುದೋ ಅವರು ಇಲ್ಲಿಯೇ ಸಂಸಾರವನ್ನು ಜಯಿಸುವರು. ಏಕೆಂದರೆ ಬ್ರಹ್ಮವು ದೋಷರಹಿತವಾಗಿಯೂ ಸಮವಾಗಿಯೂ ಇರುವುದು. ಆದುದರಿಂದ ಅವರು ಬ್ರಹ್ಮದಲ್ಲಿಯೇ ಸ್ಥಿತರಾಗಿದ್ದಾರೆ"—ಭಗವದ್ಗೀತೆ—ಅಧ್ಯಾಯ 5, ಶ್ಲೋಕ 19.

ವಹಿಸುತ್ತದೆ. ಈ ಕಾರಣಗಳಿಂದಲೇ ಸಾಧಕನು ಶೀತ–ಉಷ್ಣ, ಮಾನ–ಅಪಮಾನ, ಸಿಹಿ–ಕಹಿ, ಕಷ್ಟ–ನಷ್ಟಗಳನ್ನೆಲ್ಲಾ ಸಹಿಸುವ ಸಹನಾಶಕ್ತಿ ಹೊಂದಿರಬೇಕು ಅಥವಾ ಬಳಸಿಕೊಳ್ಳಬೇಕಾದುದು ಅತ್ಯಗತ್ಯ. ಸಹನಾ ಶೀಲತೆಯೇ 'ತಿತಿಕ್ಷೆ' ಎನಿಸುತ್ತದೆ. ಅಂದರೆ, ಬದುಕಿನಲ್ಲಿ ಎದುರಾಗುವ ಯಾವುದೇ ಘಟನೆ ಅಥವಾ ಆಗುಹೋಗುಗಳಿಂದ ಪ್ರಭಾವಗೊಳ್ಳದೆ, ವಿಚಲಿತ ನಾಗದೆ, ತನ್ನ ಮನಸ್ಥೈರ್ಯ, ಇಂದ್ರಿಯನಿಗ್ರಹಗಳನ್ನು ನಿರಂತರವಾಗಿ ಕಾಪಾಡಿಕೊಳ್ಳುವುದು

(ಉ) ಶ್ರದ್ಧೆ: ಗುರುಸಂದೇಶ, ಎಲ್ಲರಿಗೂ ಒಳ್ಳೆಯದನ್ನು ಬಯಸುವ ಶಾಸ್ತ್ರ, ಇತ್ಯಾದಿಗಳಲ್ಲಿ ಅಚಲ ಶ್ರದ್ಧೆ ಇರಬೇಕು. ಗುರುವಾಕ್ಯ ವೇದಾದಿ ಶಾಸ್ತ್ರಗಳಲ್ಲಿ ಶ್ರದ್ಧೆ ಕಂಡುಬರದಿದ್ದರೆ ಸಾಧಕನು ತನ್ನದಾರಿಯಲ್ಲಿ ನಾನಾವಿಧವಾದ ಸಂದೇಹ ಗಳಿಂದ ತೊಳಲಬೇಕಾಗುವುದು ಸಂಶಯಗಳು ಮನಸ್ಸಿನ ಚಂಚಲವೃತ್ತಿಗೆ ಕಾರಣವಾಗಿ ಸಾಧಕನು ತನ್ನ ದೃಢತೆ, ಪರಿಶುದ್ಧತೆಗಳನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ. ನಿಶ್ಚಿತವಿವರಗಳನ್ನು ತಿಳಿಸುವ ಗುರುಗಳು, ಈಗಾಗಲೇ ಸತ್ಯದರ್ಶನ ಸಾಧ್ಯವನ್ನಾಗಿಸಿಕೊಂಡವರು ತಮ್ಮ ಅನುಭವದ ವಿವರಗಳನ್ನು ಶಾಸ್ತ್ರಗಳ ರೀತಿ ತಿಳಿಸಿರುವುದರಿಂದ ಜ್ಞಾನಯೋಗಿಗೆ ಸರಿಯಾದ ವಿವರಗಳು ಲಭ್ಯವಾಗಿವೆ. ಗುರುಗಳ ದಿವ್ಯ ಸಂದೇಶ ಹಾಗೂ ಅನುಭವದ ವಿವರಗಳು ಅವನಿಗೆ ಭರವಸೆ ನೀಡುವಲ್ಲಿ ಶಕ್ತವಾಗಿವೆ. ಇವುಗಳ ಬಗ್ಗೆ ಶ್ರದ್ಧೆಯಿರುವುದ ರಿಂದ ಸಾಧಕನಿಗೆ ಸ್ವೈಜ ಜ್ಞಾನ ಸಿಗುತ್ತದೆ. ಆದುದರಿಂದಲೇ ಜ್ಞಾನಯೋಗಿಯು ಶ್ರದ್ಧೆಯನ್ನು ಹೊಂದುವುದು ಅತ್ಯಗತ್ಯವಾಗುತ್ತದೆ. ಗುರು ಹಾಗೂ ಶಾಸ್ತ್ರ ವಾಕ್ಯಗಳಲ್ಲಿ ನಂಬಿಕೆ ಇರಿಸುವುದೇ 'ಶ್ರದ್ಧೆ' ಎನಿಸುತ್ತದೆ. ಇದರ ವ್ಯಾಪ್ತಿ ಯಲ್ಲಿ ಆತ್ಮವಿಶ್ವಾಸವೂ ಸಹ ಕಂಡುಬರುತ್ತವೆ.

(ಊ) ಸಮಾಧಾನ: ಸಮಾಧಾನವೆಂದರೆ, ಮನಸ್ಸಿನಲ್ಲಿರುವ ಎಲ್ಲಾ ಬಗೆಯ ಕೊಳಕು ಭಾವನೆಗಳಿಂದ ವಿಮುಕ್ತಿ ಪಡೆದು ಅಥವಾ ಅವುಗಳನ್ನೆಲ್ಲಾ ವರ್ಜಿಸುವುದಲ್ಲದೆ, ಯಾವುದೇ ರೀತಿಯ ಆಲಸ್ಯತೆಗೆ ಎಡೆಮಾಡಿಕೊಡದೆ ಇರುವುದು. ಜೊತೆಗೆ, ಚಿತ್ತಸ್ಥೈರ್ಯವನ್ನು ನಿರಂತರವಾಗಿ ಕಾಪಾಡಿಕೊಳ್ಳುತ್ತಾ, ಗುರು ಮತ್ತು ವೇದಾದಿ ಮಹಾವಾಕ್ಯಗಳನ್ನು ಶ್ರವಣ, ಮನನ ಮಾಡುತ್ತಾ ಆತ್ಮಚಿಂತನೆ ಯಲ್ಲಿಯೇ ಮನಸ್ಸನ್ನು ತೊಡಗಿಸಿಕೊಳ್ಳುವುದಕ್ಕೆ 'ಸಮಾಧಾನ' ಎಂದು ಕರೆಯುತ್ತಾರೆ. ಸರ್ವವೂ ಬ್ರಹ್ಮ, ಸರ್ವವೂ ಆತನ ಆವಿರ್ಭಾವ ಎಂಬ ಸತ್ಯದ ಸ್ಪಷ್ಟನೆಗಾಗಿ ಸಾಧಕ ಈ ಹಂತದಲ್ಲಿ ಹೆಣಗುತ್ತಾನೆ. ಯಾವುದೇ ರೀತಿಯ ಚಿತ್ತವಿಕಾರವಿಲ್ಲದೆ, ಸಮಾಧಾನ ಸಮನ್ವಯ ಚಿತ್ತದಿಂದ ಇರುವುದೇ ಈ ಹಂತದ ತತ್ತ್ವಾಂಶ.

ಮುಮುಕ್ಷುತ್ವ: ಈ ಹಿಂದೆ ಹೇಳಿದ ಮೂರೂ ಗುಣಗಳನ್ನು ಸಾಧಕನು ಅಳವಡಿಸಿಕೊಂಡು, ಮೋಕ್ಷ ಪ್ರಾಪ್ತಿಗಾಗಿ, ಅದನ್ನು ಬಿಟ್ಟು ಬೇರೇನೂ ಬೇಡ ಎಂಬ ಕಾತುರತೆಯೆ, 'ಮುಮುಕ್ಷುತ್ವ'. ಮುಮುಕ್ಷು ಎಂದರೆ 'ಮೋಕ್ಷವನ್ನು ಬಯಸುವವನು' ಎಂದರ್ಥ. ಭೌತಿಕ ಜಗತ್ತಿನಲ್ಲಿ ಎಲ್ಲವೂ ಅಶಾಶ್ವತ ಎಂದು ಅವುಗಳ ಬಗೆಗೆ ಇದ್ದ ವ್ಯಾಮೋಹಗಳನ್ನು ತ್ಯಜಿಸಿದ ತರುವಾಯ, ಸಾಧಕನಿಗೆ ಅತ್ಯಗತ್ಯವಾದುದು ಎಂದರೆ 'ಮೋಕ್ಷ'. ಸಾಧಕನು ತನ್ನ ಬದುಕಿನ ಉದ್ದೇಶವೇ 'ಮೋಕ್ಷ ಸಂಪಾದನೆ' ಎಂದು ಅಚಲವಾಗಿ ನಿರ್ಧರಿಸಿರುತ್ತಾನೆ, ಇದೇ 'ಮುಮುಕ್ಷುತ್ವ'. ಜ್ಞಾನಯೋಗವನ್ನು ಅವಲಂಬಿಸುವ ಸಾಧಕನು, ಸಾಧನ ಚತುಷ್ಟಯ ಎಂದು ಮೇಲೆಹೇಳಿದ ಗುಣಗಳನ್ನು ಅಳವಡಿಸಿಕೊಂಡಾಗ ಜ್ಞಾನಯೋಗದ ಸಾಧನೆಗೆ ಅರ್ಹನೆನಿಸುತ್ತಾನೆ.

೩

ಜ್ಞಾನಯೋಗದ ಸಾಧನೆಗೆ ಮೂರು ಹಂತಗಳನ್ನು ಹೇಳಿದ್ದಾರೆ ಅವುಗಳು ಕ್ರಮವಾಗಿ (i) ಶ್ರವಣ (ii) ಮನನ (iii) ನಿದಿಧ್ಯಾಸನ.

ಶ್ರವಣವೆಂದರೆ, ಗುರುವಿನ ಮೂಲಕ[1] ಆತ್ಮ ತತ್ವದ ವಿಚಾರವನ್ನು ಸಾಧಕನು ಕೇಳಿ ತಿಳಿದುಕೊಳ್ಳುವುದು. ಸಾಧಕನು ಸ್ವತಃ ಪುಸ್ತಕಗಳಿಂದ ಓದಿ ತಿಳಿಯುವುದಕ್ಕಿಂತ, ಬದುಕಿನಲ್ಲಿ ನಿಜವಾಗಿಯೂ ಅನುಷ್ಠಾನಗೊಳಿಸುತ್ತಿರುವುದರಿಂದ ಕೇಳಿ ತಿಳಿದುಕೊಳ್ಳುವುದು ಅತ್ಯಂತ ಅರ್ಥಪೂರ್ಣ, ಅಲ್ಲದೆ ಪರಿಣಾಮಕಾರಿಯೂ ಹೌದು. ಇಲ್ಲಿ ಅಪಾರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದಲೇ ಗುರುವಿನಿಂದ ಅರ್ಥಾತ್ ಬಲ್ಲವರಿಂದ ಅಂತಿಮ ಸತ್ಯದ ಬಗೆಗೆ ಕೇಳಿ ತಿಳಿಯುವುದು ಅತಿಮುಖ್ಯ. ಗುರುವು ಸಾಧಕನಿಗೆ ಶಾಸ್ತ್ರವಾಕ್ಯ ತತ್ತ್ವವಿಚಾರಗಳನ್ನು ಉಪದೇಶಗಳ ಮೂಲಕ ಮನದಟ್ಟು ಮಾಡಿಕೊಡುತ್ತಾನೆ. ಪ್ರಮುಖ ಉಪದೇಶ ಮಹಾವಾಕ್ಯಗಳೆಂದು ನಾಲ್ಕು ವಾಕ್ಯಗಳ ರೂಪದಲ್ಲಿ ಪ್ರಸಿದ್ಧವಾಗಿವೆ. ಅವು ಈ ಕೆಳಕಂಡಂತೆ ಇದೆ:

(i) ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮವಾಗಿರುವೆ)
(ii) ಸರ್ವಖಲ್ವಿದಂಬ್ರಹ್ಮ (ಎಲ್ಲವೂ ಬ್ರಹ್ಮ ಮಯವಾಗಿದೆ)
(iii) ಅಯಮಾತ್ಮಾ ಬ್ರಹ್ಮ (ಆತ್ಮವೇ ಬ್ರಹ್ಮವಾಗಿದೆ)
(iv) ತತ್ತ್ವಮಸಿ (ಅದು (ಬ್ರಹ್ಮ) ನೀನೇ ಆಗಿದ್ದೀಯೆ)

ಈ ಮೇಲೆ ಹೇಳಿದ ಊಹಾವಾಕ್ಯಗಳಲ್ಲಿ ಸಾಧಕನಿಗೆ ಅಗತ್ಯವೆನಿಸಿದ ಜ್ಞಾನದ ಎಲ್ಲಾ ಬಗೆಯೂ ಅಡಕಗೊಂಡಿದೆ. ಸಾಧಕನು ಗುರುವಿನ ಮೂಲಕ ಈ ನಾಲ್ಕು ಮಹಾ ವಾಕ್ಯಗಳನ್ನು ಕೇಳಿ ತಿಳಿದುಕೊಳ್ಳುವನು. ಆ ಸಂದರ್ಭದಲ್ಲಿ ಗುರುವು

1. ಜಿ. ಶ್ರೀನಿವಾಸನ್—ವೇದಾಂತ ಪರಿಚಯ–ಪುಟ 41.

ಶಿಷ್ಯನಿಗೆ ಉಪದೇಶ ನೀಡುತ್ತಾ ಕಾಲ, ದೇಶ, ಹುಟ್ಟು, ಸಾವುಗಳ ಕಟ್ಟಳೆಗೆ ಮೀರಿದ್ದು, ಸೃಷ್ಟಿ, ಸ್ಥಿತಿ, ಲಯಗಳ ಕಾರಣಕರ್ತವಾದುದೇ ಬ್ರಹ್ಮ. ಅದು ನಿತ್ಯ ಸತ್ಯವಾದುದಾಗಿದೆ, ಹಾಗೆಯೇ ಸನಾತನವಾಗಿದೆ. ನೀನು ಆ ಬಹ್ಮವೇ[1] ಆಗಿರುವೆ. ಇದೇ ನೀನು ಮನನಮಾಡಬೇಕಾದ ವಿಚಾರ ಎಂದು ಹೇಳುವನು. ಒಟ್ಟಾರೆ ಗುರುವಿನ ಬಾಯಿಂದ ಅಂತಿಮ ಸತ್ಯದ ವಿಚಾರವಾಗಿ ಉಪದೇಶ ಪಡೆದುಕೊಳ್ಳುವುದರ ಜೊತೆಗೆ, ಶಾಸ್ತ್ರವಾಕ್ಯಗಳ ವಿವರಗಳನ್ನು ಸಹ ಹೊಂದುವುದಕ್ಕೆ ಶ್ರವಣ ಎಂದು ಕರೆಯುತ್ತಾರೆ.

ಮನನವೆಂದರೆ, ಸಾಧಕನು ಗುರುವಿನಿಂದ ಕೇಳಿ ತಿಳಿದುಕೊಂಡ ವಿಚಾರಗಳನ್ನು ತನ್ನಲ್ಲೇ ವಿಮರ್ಶೆಗೊಳಪಡಿಸುವುದು. ಅದು ಹೇಗೆ? ಏಕೆ? ಎಂಬ ಪ್ರಶ್ನೆಗಳ ಮೂಲಕ ಚಿಂತನೆ ನಡೆಸಿ, ಪರಿಶೀಲಿಸಿ, ಮನವರಿಕೆ ಮಾಡಿಕೊಳ್ಳುವುದು. ಆಗ ಗುರುವಿನಿಂದ ಕೇಳಿದ ವಿಚಾರದ ಸತ್ಯಾಸತ್ಯಾಗಳ ಸ್ಪಷ್ಟ ಅರಿವು ಸಾಧಕನಿಗುಂಟಾಗುತ್ತದೆ. ಹೀಗೆ ಅರ್ಥಮಾಡಿಕೊಳ್ಳುವ ರೀತಿಯೇ 'ಮನನ' ಎನಿಸುತ್ತದೆ ನಿಧಿಧ್ಯಾಸನವೆಂದರೆ, ಮನನದಲ್ಲಿ ಮುಂದುವರೆಯುವ ಸಾಧಕನು ತತ್‌ಪರಿಣಾಮವಾಗಿ ಗಾಢ ಧ್ಯಾನದಲ್ಲಿ ಮುಳುಗುತ್ತಾನೆ. ಸಾಧಕನು ಕೇಳಿದ ಆತ್ಮ ತತ್ತ್ವದ ವಿಚಾರಗಳನ್ನು ಧ್ಯಾನದಲ್ಲಿ ಸ್ವತಃ ಅನುಭವಪೂರ್ವಕವಾಗಿ ಅರಿಯುತ್ತಾನೆ. ಸ್ವತಃ ಅನುಭವ ವೇದ್ಯವಾದ ಸತ್ಯ ಅವನಿಗೆ ಸಾಕ್ಷಾತ್ಕಾರವಾಗುತ್ತದೆ. ಬ್ರಹ್ಮವು ಏಕ, ಅದು ಸರ್ವವ್ಯಾಪಿಯಾಗಿದೆ. ಸರ್ವವೂ ಬ್ರಹ್ಮಮಯವೇ ಆಗಿದೆ ಎನ್ನುವ ಸತ್ಯದರ್ಶನ ಪಡೆದುಕೊಂಡ ಸಾಧಕನಿಗೆ ಈ ಬಗೆಯ ಸತ್‌ಚಿತ್ ಆನಂದದ ಅನುಭವದ ಪರಿಣಾಮವಾಗಿ, ಸಂಸಾರ ಜಗತ್ತಿನ ಎಲ್ಲಾ ಬಗೆಯ ಬಂಧನಗಳಿಂದ ಮುಕ್ತನಾಗುತ್ತಾನೆ. ಈ ತೆರನಾಗಿ ಜ್ಞಾನಯೋಗಿಯು ಪ್ರಖರ ವಿಚಾರದ ಹಾದಿಯಲ್ಲಿ ಹೊರಟು, ಶ್ರದ್ಧೆ, ಮನೋದೃಢತೆ, ಗುರುವಿನ ಉಪದೇಶಗಳ ಸಹಾಯದಿಂದ ಬ್ರಹ್ಮಸಾಕ್ಷಾತ್ಕಾರ ಪಡೆದುಕೊಳ್ಳುತ್ತಾನೆ. ಶಾಶ್ವತ ಆನಂದದ ಅನುಭವ ಹೊಂದುತ್ತಾನೆ. ಆ ಸಮಯದಲ್ಲಿ ಸಾಧಕ, ಸಾಧನ, ಚಿಂತನೆಯ ವಸ್ತು, ಶುದ್ಧ ಚಿತ್ತ—ಈ ಎಲ್ಲವೂ ಒಂದೇ ಆಗಿ ಅವ್ಯಕ್ತ ಆನಂದದಲ್ಲಿ ಜ್ಞಾನಯೋಗಿ ಮುಳುಗಿರುತ್ತಾನೆ. ಈ ಸ್ವಾನುಭವವನ್ನು ಪೂರ್ಣವಾಗಿ ಪ್ರಕಟಿಸುವುದು ಅಸಾಧ್ಯವೇ ಸರಿ.

ಬ್ರಹ್ಮಸಾಕ್ಷಾತ್ಕಾರ ಪಡೆದ ನಂತರ ದೇಹಸಹಿತವಾಗಿ ಜಗತ್ತಿನಲ್ಲಿ ಬದುಕಿರುವ ಜ್ಞಾನಯೋಗಿಯು ಜೀವನ್ ಮುಕ್ತನೆನಿಸುತ್ತಾನೆ. ಆದರೆ ಆತನ ಬದುಕು ನೀರೊಳಗಿನ ತಾವರೆಯ ಎಲೆಯಂತೆ, ನೀರಿನಲ್ಲಿದ್ದರೂ ಅದಕ್ಕೆ ನೀರು ತ್ಯಾಜ್ಯ.

---

1. ಹೋಲಿಸಿ : "ಯಾವುದು ಸೂಕ್ಷ್ಮತಮವಾದ ಈ ಜಗನ್ಮೂಲವೋ ಅದರಿಂದಲೇ ಈ ಜಗತ್ತೆಲ್ಲವೂ ಆತ್ಮವಂತವಾಗಿದೆ. ಅದು ಸತ್ಯವು, ಅದು ಆತ್ಮವು. ಓ...ಶ್ವೇತಕೇತು, ಅದು ನೀನಾಗಿರುವೆ".—ಛಾಂದೋಗ್ಯ ಉಪನಿಷತ್–6.8.7.

ಇವರಂತೆಯೇ ಜ್ಞಾನಯೋಗಿಯು ಜಗತ್ತಿನಲ್ಲಿದ್ದರೂ ಸಂಸಾರ ಬದುಕಿನ ಸುಖ, ದುಃಖ, ಬಂಧನಗಳಿಂದ ದೂರವಿರುತ್ತಾನೆ. ವಿಷಯಾಸಕ್ತ ಬದುಕಿನಿಂದ ಆತ ಸದಾ ಮುಕ್ತ. ಆತ ಇತರರಿಗೆ ಅಭಯ, ಪ್ರೇಮ, ಆನಂದಗಳ ಸಂದೇಶಗಳನ್ನು ನೀಡುತ್ತಿರುತ್ತಾನೆ. ಇತರರಿಗೆ ಮಾದರಿಯಾಗಿ ಬದುಕುತ್ತಾನೆ ಜಗತ್ತಿನಲ್ಲಿ ಎಲ್ಲೆಲ್ಲೂ ಬ್ರಹ್ಮವನ್ನೇ ಕಾಣುವ ಆತ ಸರ್ವಜೀವಿಗಳ ಕಲ್ಯಾಣಕ್ಕಾಗಿ ದುಡಿಯುತ್ತಾನೆ. ಸತ್ಯವಾದ, ಪರಿಪೂರ್ಣವಾದ, ಬ್ರಹ್ಮಾನಂದದ ಅನುಭವದಲ್ಲೇ ಜ್ಞಾನಯೋಗಿಯು ದೇಹ ತ್ಯಾಗಮಾಡುತ್ತಾನೆ. ಜೀವವು ಬ್ರಹ್ಮದಲ್ಲಿ ಐಕ್ಯಗೊಳ್ಳುತ್ತದೆ.

ಹೀಗೆ ಜ್ಞಾನಯೋಗವು ಬ್ರಹ್ಮ ಸಾಕ್ಷಾತ್ಕಾರಕ್ಕೆ ಒಂದು ಮಾರ್ಗವಾಗಿ, ಜೀವಾತ್ಮನು ಸ್ವ-ಪ್ರಯತ್ನ, ಅಚಲ ಶ್ರದ್ಧೆಗಳ ಮೂಲಕ 'ಪರಮಾತ್ಮ'ನನ್ನು ಸೇರಲು ಸಹಕಾರಿಯಾಗಿದೆ. ಸಾಧನೆಯ ಕೊನೆಯಲ್ಲಿ ಸರ್ವಬಗೆಯ ಭೇದಗಳಿಂದಲೇ ಮುಕ್ತಗೊಳ್ಳುವ ಸಾಧಕ 'ಸರ್ವವೂ ಬ್ರಹ್ಮ' ಎಂಬ ದಿವ್ಯಬೋಧೆಯ ಅದ್ವೈತಾನುಭವವನ್ನು ಹೊಂದುತ್ತಾನೆ

ಶಕ್ತಿರಹಿತವಾದ ಜ್ಞಾನ, ಜ್ಞಾನದ ಸಂಪರ್ಕವಿಲ್ಲದ ಶಕ್ತಿ ಬಹು ಮಟ್ಟಿಗೆ ಸಮಾಜಕ್ಕೆ ಅಪಾಯಕಾರಿ.

—ಸ್ವಾಮಿ ಅಭಯಾನಂದ

ಸತ್ಯದಿಂದ ಸಂಪಾದಿಸಿದ್ದನ್ನು ಸತ್ಯದಿಂದಲೇ ಉಳಿಸಿಕೊಳ್ಳಲು ಸಾಧ್ಯ.

—ಸಿ. ಎಫ್. ಆ್ಯಂಡ್ರೂಸ್

ಮೊದಲ ಕಾಸನ್ನು ಸಂಪಾದಿಸುವುದು ಎರಡನೇ ಲಕ್ಷ ಸಂಪಾದಿಸುವುದಕ್ಕಿಂತ ಕಷ್ಟ.

—ಜೆ. ಜೆ. ರೂಸೋ

ಕೇಳುವವರಿದ್ದಿಹರೆ ಹೇಳುವುದು
ಬುದ್ಧಿಯನು ಕೊಳದಲಿ ಬಿದ್ದ ನರಳಿಃವಗೆ
ಬುದ್ಧಿಯನು ಹೇಳಿ ಫಲವೇನು ಸರ್ವಜ್ಞ.

—ಸರ್ವಜ್ಞ

ಬಿ. ಎನ್. ಮಂಜುನಾಥಯ್ಯ

ಪಠ್ಯಕ್ರಮ ಯೋಜನೆ ಹಾಗೂ ವಿಕಾಸದ ತತ್ವಗಳು

ಯಾವುದೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಠ್ಯಕ್ರಮ ಕೇಂದ್ರ ಪಾತ್ರವಹಿಸುತ್ತದೆ ಶೈಕ್ಷಣಿಕ ವ್ಯವಸ್ಥೆಯ ಸಫಲತೆ ಅಥವಾ ವಿಫಲತೆ ಪಠ್ಯಕ್ರಮದ ಪ್ರಭಾವಶೀಲತೆ, ಯೋಜನೆ, ವಿಕಾಸ, ಜಾರಿಗೊಳಿಸುವಿಕೆ ಮತ್ತು ಮೌಲ್ಯಮಾಪನಗಳನ್ನು ಅವಲಂಬಿಸಿರುತ್ತದೆ.

ಐತಿಹಾಸಿಕವಾಗಿ ಪಠ್ಯಕ್ರಮದ ಪರಿಕಲ್ಪನೆ ತನ್ನ ಅರ್ಥ ಮತ್ತು ವ್ಯಾಪ್ತಿಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಹೊಂದಿದೆ. ಪಠ್ಯಕ್ರಮದ ಆಂಗ್ಲ ಪದವಾದ 'ಕರಿಕ್ಯುಲಂ' (Curriculum) ರೋಮನರ ಕಾಲದಲ್ಲಿ ನಡೆಯುತ್ತಿದ್ದ ರಥಗಳ ಪಂದ್ಯಕ್ಕೆ ಉಪಯೋಗಿಸುತ್ತಿದ್ದ ನಿರ್ದಿಷ್ಟ ಪಥಕ್ಕೆ ಅನ್ವಯಿಸುತ್ತಿತ್ತು. ಕಾಲಾಂತರದಲ್ಲಿ ಶಿಕ್ಷಣ ನೀಡುವಾಗ ಪರಿಗಣಿಸಬೇಕಾದ ನಿರ್ದಿಷ್ಟ ವಿಷಯವಸ್ತು ಮತ್ತು ಚಟುವಟಿಕೆಗಳನ್ನು ಸೂಚಿಸಲು ಈ ಪದವನ್ನು ಬಳಸಲು ಪ್ರಾರಂಭವಾಯಿತು. 'ಪಠ್ಯಕ್ರಮ' ಎನ್ನುವುದು ಅಧ್ಯಯನ ಮಾಡಬೇಕಾದ ವಿಷಯಗಳ, ಚಟುವಟಿಕೆಗಳ ವ್ಯಾಪ್ತಿಯನ್ನು, ವಿವರಣೆಯನ್ನು ಸೂಚಿಸುತ್ತದೆ. ಆದರೆ ಇತ್ತೀಚೆಗೆ ಶಿಕ್ಷಣ ತಜ್ಞರು ಪಠ್ಯಕ್ರಮದ ಪರಿಕಲ್ಪನೆಯನ್ನು ಬೇರೆ ಬೇರ ರೀತಿಯಲ್ಲಿ ಅರ್ಥೈಸಿದ್ದಾರೆ. ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಪಠ್ಯಕ್ರಮ ನಿರ್ದಿಷ್ಟ ಅಧ್ಯಯನ ಅವಧಿಯಲ್ಲಿ ಅಧ್ಯಯನ ಮಾಡಬೇಕಾದ ವಿಷಯಗಳನ್ನು ಸೂಚಿಸುತ್ತಿತ್ತು. ಆದರೆ ಆಧುನಿಕ ಯುಗದಲ್ಲಿ ಮನೋವಿಜ್ಞಾನದಲ್ಲಿ, ಶೈಕ್ಷಣಿಕ ತತ್ವಶಾಸ್ತ್ರದಲ್ಲಿ ಉಂಟಾಗಿರುವ ಬೆಳವಣಿಗೆ, ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಳು, ಜ್ಞಾನಕ್ಷೇತ್ರದಲ್ಲಿ ಉಂಟಾಗಿರುವ ಪ್ರಗತಿ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಆಗಿರುವ ಬೆಳವಣಿಗೆ—ಇವು ಪಠ್ಯಕ್ರಮ ಪರಿಕಲ್ಪನೆಯ ಅರ್ಥದಲ್ಲಿ ಅನೇಕ ಪರಿವರ್ತನೆಗಳನ್ನು ಉಂಟುಮಾಡಿವೆ. ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಅನೇಕ ರೀತಿಯ ಬದಲಾವಣೆಗಳು ಪಠ್ಯಕ್ರಮ ವಿಕಾಸ ಮಾಡುವವರಿಗೆ ಅನೇಕ ಸವಾಲುಗಳನ್ನೊಡ್ಡಿದುದರ ಪರಿಣಾಮವಾಗಿ ಪಠ್ಯಕ್ರಮದ ಅರ್ಥ ಮತ್ತು ವ್ಯಾಪ್ತಿಯಲ್ಲಿ ಬದಲಾವಣೆಗಳಾಗಬೇಕಾಯಿತು. ಹೊಸ ಹೊಸ

ರೀತಿಯ ಪಠ್ಯಕ್ರಮಗಳು ರೂಪಿತವಾದವು. ಪಠ್ಯಕ್ರಮ ವಿಕಾಸ ತತ್ವಗಳ ಮೌಲ್ಯ ಮಾಪನದ ಬಗ್ಗೆ ಸಂಶೋಧನೆಗಳಾದವು. ಈ ಸಂಶೋಧನೆಗಳ ಪರಿಣಾಮವಾಗಿ ಹತ್ತೊಂಬತ್ತನೇ ಶತಮಾನ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ತಿರುಳು ಪಠ್ಯಕ್ರಮ, ಅನುಭವ ಪಠ್ಯಕ್ರಮ, ಚಟುವಟಿಕೆ ಪಠ್ಯಕ್ರಮ ವಿಷಯ ಪಠ್ಯಕ್ರಮ, ವಿಶಾಲಕ್ಷೇತ್ರ ಪಠ್ಯಕ್ರಮ ಮುಂತಾದ ಅನೇಕ ಬಗೆಯ ಪಠ್ಯಕ್ರಮಗಳು ವಿಕಸಿತಗೊಂಡುದನ್ನು ಕಾಣುತ್ತೇವೆ. ಪಠ್ಯಕ್ರಮ ಯೋಜನೆ ಮತ್ತು ವಿಕಾಸ, ಬೋಧನೋದ್ದೇಶಗಳ ಆಯ್ಕೆ ಮತ್ತು ನಿರೂಪಣೆ, ಪಠ್ಯವಸ್ತುವಿನ ಆಯ್ಕೆ ಮತ್ತು ಕ್ರಮಾಗತಗೊಳಿಸುವಿಕೆ, ಬೋಧನ ವಿಧಾನಗಳ ಆಯ್ಕೆ, ಬೋಧನ ಸಾಮಗ್ರಿಗಳ ಆಯ್ಕೆ ಮತ್ತು ಪಠ್ಯಕ್ರಮ ಮೌಲ್ಯಮಾಪನ—ಈ ವಿಷಯಗಳ ಬಗ್ಗೆ ಸಾಕಷ್ಟು ಚಿಂತನೆ ನಡೆದಿದೆ

ಈ ಕೆಳಗೆ ಪಠ್ಯಕ್ರಮದ ಕೆಲವು ಪರಿಭಾಷೆಗಳನ್ನು ಕೊಡಲಾಗಿದೆ.

"ಉದ್ದೇಶಿತ ಕಲಿಕೆಯ ಫಲಿತಗಳನ್ನು ವಿದ್ಯಾರ್ಥಿಗಳು ಗರಿಷ್ಠ ಸಾಮರ್ಥ್ಯಗಳಿಗನುಗುಣವಾಗಿ ಸಾಧಿಸಲು ಸಹಾಯಮಾಡಲು ಶಾಲೆ/ಕಾಲೇಜು ಒದಗಿಸುವ ಎಲ್ಲ ರೀತಿಯ ಯೋಜಿತ ಅನುಭವಗಳೇ ಪಠ್ಯಕ್ರಮವೆನ್ನಿಸುತ್ತವೆ"

—ನೀಗಲ್ಸ್ ಮತ್ತು ಇವಾನ್ಸ್

"ಸ್ಥೂಲ ಉದ್ದೇಶಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಲು ಶಾಲಾ ಸಮುಚ್ಚಯದಿಂದ ನಿರ್ದಿಷ್ಟ ವಿದ್ಯಾರ್ಥಿ ಸಮೂಹವೊಂದಕ್ಕೆ ಒದಗಿಸುವ ಕಲಿಕಾ ಅವಕಾಶಗಳ ಸಮಷ್ಟಿಯ ಯೋಜನೆಯೇ ಪಠ್ಯಕ್ರಮ"

—ಸೇಲರ್ ಮತ್ತು ಅಲೆಗ್ಜಾಂಡರ್

"ಶಾಲೆ/ಕಾಲೇಜಿನ ಮಾರ್ಗದರ್ಶನ ಮತ್ತು ನಿರ್ದೇಶನದಲ್ಲಿ ಕಲಿಯುವ ವ್ಯಕ್ತಿಗೆ ಒದಗಿಸಲ್ಪಟ್ಟು ಮತ್ತು ಅದರ ಮೂಲಕ ತನ್ನ ಉದ್ದೇಶಗಳ ಸಾಧನೆಯನ್ನು ನಿರೀಕ್ಷಿಸಲಾಗುವ ಎಲ್ಲಾ ಕಲಿಕೆಯ ಅನುಭವಗಳ ವ್ಯವಸ್ಥೆಯೇ ಪಠ್ಯಕ್ರಮವೆನ್ನಿಸುತ್ತದೆ"

—ಫ್ರೆಯಂಸನ್, ಫ್ಲೋರಿನೋ ಮತ್ತು ನೋವಾಕ್

"ನಿರ್ದಿಷ್ಟ ಕಾಲ ಮತ್ತು ಸ್ಥಳದ ವ್ಯವಸ್ಥೆಯಲ್ಲಿ ಶಿಕ್ಷಿತರಾಗ ಬೇಕಾದ ವ್ಯಕ್ತಿಗಳಿಗೆ ಬೇರೆ ವ್ಯಕ್ತಿ ಮತ್ತು ವಸ್ತುಗಳೊಂದಿಗೆ (ಮಾಹಿತಿ ಪ್ರಕ್ರಿಯೆಗಳು, ತಂತ್ರಗಳು ಮತ್ತು ಮೌಲ್ಯಗಳಿಗೆ ಸಂಬಂಧಿಸಿದಂತೆ) ಸಂಪರ್ಕ ಒದಗಿಸಲು ಅವಕಾಶಗಳನ್ನು ಉಂಟುಮಾಡುವ ಇಚ್ಛೆ (ಆಕಾಂಕ್ಷೆ) ಗಳ ಸಮಷ್ಟಿಯೆ ಪಠ್ಯಕ್ರಮ.''

—ಲೂಯಿಸ್ ಮತ್ತು ಮಿಾಯಲ್

ಮೇಲಿನ ಕೆಲವು ಪರಿಭಾಷೆಗಳ ವಿಶ್ಲೇಷಣೆಯಿಂದ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

1. ಪಠ್ಯಕ್ರಮವನ್ನು ಅಧ್ಯಯನ ಮಾಡಬೇಕಾದ ವಿಷಯಗಳು ಮತ್ತು ವಿಷಯ ವಸ್ತುಗಳೆಂದು ಪರಿಗಣಿಸಬಹುದು. ಇದು ಪಠ್ಯಕ್ರಮದ ಅತ್ಯಂತ ಹಳೆಯ, ಆದರೆ ಸಂಕುಚಿತವಾದ ಪರಿಕಲ್ಪನೆಯಾಗಿದೆ.

2 ಪಠ್ಯಕ್ರಮವನ್ನು ಶಾಲೆ/ಕಾಲೇಜುಗಳ ಒದಗಿಸುವ ಅನುಭವಗಳೆಂದೂ ತಿಳಿಯಬಹುದು.

3. ಶಾಲಾ/ಕಾಲೇಜುಗಳು ಏರ್ಪಡಿಸುವ ಚಟುವಟಿಕೆಗಳ ಸಮಷ್ಟಿಯನ್ನು ಪಠ್ಯಕ್ರಮವೆನ್ನಬಹುದು.

4. ಸಾಧಿಸಬೇಕಾದ ಬೋಧನೋದ್ದೇಶಗಳ ಆಯ್ಕೆ ಮತ್ತು ನಿರೂಪಣೆಯೂ ಪಠ್ಯಕ್ರಮವಾಗುತ್ತದೆ. ಈ ಪರಿಕಲ್ಪನೆ ಉದ್ದೇಶಗಳ ಸಾಧನೆಗೆ ಸೂಕ್ತವಾದ ವಿಷಯ ವಸ್ತು, ಚಟುವಟಿಕೆಗಳು, ಬೋಧನ ವಿಧಾನಗಳು, ಮೌಲ್ಯಮಾಪನ ವಿಧಾನಗಳ ಆಯ್ಕೆಯನ್ನು ಸೂಚಿಸುತ್ತದೆ.

5. ಪಠ್ಯಕ್ರಮವನ್ನು ಒಂದು ವ್ಯವಸ್ಥೆ (system) ಯನ್ನಾಗಿಯೂ ಪರಿಗಣಿಸಬಹುದು. ಪಾರಸ್ಪರಿಕ ಅನ್ಯೋನ್ಯ ಕ್ರಿಯೆಯುಳ್ಳ ಘಟಕಾಂಶಗಳ ಸಂಕೀರ್ಣಕ್ಕೆ ವ್ಯವಸ್ಥೆಯೆನ್ನುತ್ತಾರೆ. ಪಠ್ಯಕ್ರಮದಲ್ಲಿ ಪರಸ್ಪರ ಸಂಬಂಧವುಳ್ಳ ಅನೇಕ ಘಟಕಗಳಿರುತ್ತವೆ.

6. ಅನೇಕ ಪರಿಣತರಿಂದ/ನಿಯೋಗಗಳ ಸಹಕಾರದಿಂದ ಬೇರೆ ಬೇರೆ ಸ್ತರಗಳಲ್ಲಿ ವಿನ್ಯಾಸಗೊಳಿಸಲ್ಪಟ್ಟ ವಿಕಾಸಗೊಳಿಸಲ್ಪಟ್ಟ ನಿರ್ವಹಿಸಲ್ಪಟ್ಟ ಮತ್ತು ಮೌಲ್ಯಮಾಪನ ಮಾಡಲ್ಪಡುವ ಯೋಜನೆಯೊಂದರ ರೂಪದಲ್ಲಿಯೂ ಪಠ್ಯಕ್ರಮವನ್ನು ನೋಡಬಹುದು.

ಪಠ್ಯಕ್ರಮದ ವಿಶಾಲ ಅಥವಾ ವ್ಯಾಪಕ ಪರಿಭಾಷೆ ಮೇಲಿನ ಈ ಎಲ್ಲ ರೀತಿಯ ಪರಿಕಲ್ಪನೆಗಳನ್ನು ಒಳಗೊಂಡಿರಬೇಕಾಗುತ್ತದೆ.

ಪಠ್ಯಕ್ರಮ ಬೆಳೆದುಬಂದ ಬಗೆಯನ್ನು ಗಮನಿಸಿದಾಗ ಹಲವು ಬಗೆಯ ಪಠ್ಯಕ್ರಮಗಳು ರೂಪಿತವಾದುದನ್ನು ಕಾಣುತ್ತೇವೆ. ಬೇರೆ ಬೇರೆ ಶಿಕ್ಷಣ ತಜ್ಞರು ಬೇರೆ ಬೇರೆ ತತ್ವಗಳ ಆಧಾರದ ಮೇಲೆ ಅನೇಕ ಬಗೆಯ ಪಠ್ಯಕ್ರಮಗಳನ್ನು ರೂಪಿಸಿದ್ದಾರೆ. ಆದರೆ ಇವುಗಳು ಸಂಪೂರ್ಣವಾಗಿ ಒಂದಕ್ಕಿಂತ ಒಂದು ತೀರ ಭಿನ್ನವಾದವುಗಳಲ್ಲ. ಇವುಗಳು ಬೇರೆ ಬೇರೆ ತತ್ವಗಳ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯುತ್ತವೆ ಅಥವಾ ಅವನ್ನು ರೂಪಿಸಿದ ಶಿಕ್ಷಣವೇತ್ತರ ನಿಲುವುಗಳನ್ನು ಪ್ರತಿಪಾದಿಸುತ್ತವೆ. ಈ ರೀತಿಯ ಪಠ್ಯಕ್ರಮಗಳಲ್ಲಿ ಕೆಲವನ್ನು ಈ ಮುಂದೆ ಸಂಕ್ಷೇಪವಾಗಿ ವಿವರಿಸಲಾಗಿದೆ.

1. ವಿಷಯ ಪಠ್ಯಕ್ರಮ (Subject Curriculum): ಇದು ಅತ್ಯಂತ ಹಳೆಯ ಪಠ್ಯಕ್ರಮವಿದು. ಗ್ರೀಕ್ ಮತ್ತು ರೋಮನರ ಕಾಲದಲ್ಲಿ, ಪ್ರಾಚೀನ ಭಾರತದಲ್ಲಿ ಮತ್ತು ಯೂರೋಪಿನಲ್ಲಿ ಮಧ್ಯಯುಗದವರೆಗೆ ಇದು ಪ್ರಚಲಿತವಿತ್ತು. ವಿದ್ಯಾರ್ಥಿ ಶಿಕ್ಷಣದ ಅವಧಿಯಲ್ಲಿ ಕಲಿಯಲೇ ಬೇಕಾದ ವಿಷಯಗಳನ್ನು (ಶಾಸ್ತ್ರಗಳನ್ನು) ಇದು ಒಳಗೊಳ್ಳುತ್ತಿತ್ತು. ಕಲಿಯಬೇಕಾದ ವಿಷಯಗಳ ವ್ಯಾಪ್ತಿ ಮತ್ತು ಆಳ ಶಿಕ್ಷಣದ ಮಟ್ಟವನ್ನು ಅವಲಂಬಿಸಿರುತ್ತಿತ್ತು. ಈ ಬಗೆಯ ಪಠ್ಯಕ್ರಮ ಹತ್ತೊಂಬತ್ತನೇ ಶತಮಾನದ ಅಂತ್ಯದವರೆಗೂ ಬಳಕೆಯಲ್ಲಿತ್ತು.

2. ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಅಮೇರಿಕಾದ ಜಾನ್ ಡ್ಯೂಯಿಯ ವ್ಯಾವಹಾರಿಕ ವಾದ (Pragmatism) ಪರಿಣಾಮವಾಗಿ ಪ್ರಗತಿಶೀಲ ಶಿಕ್ಷಣದ ಪರಿಕಲ್ಪನೆ (Progressive Education) ಪಠ್ಯಕ್ರಮ ವಿಕಾಸದ ಮೇಲೆ ಪ್ರಭಾವ ಬೀರಿತು. ಜಾನ್‌ಡ್ಯೂಯಿ ಮತ್ತು ಅವನ ಅನುಯಾಯಿಗಳು ವೈವಿಧ್ಯ ಪೂರ್ಣ ಅನುಭವಗಳಿಗೆ ಒತ್ತುಕೊಡುವ ಅನುಭವ ಪಠ್ಯಕ್ರಮ (Experience Curriculum) ವನ್ನು ಜನಪ್ರಿಯಗೊಳಿಸಿದರು.

3. ಜಾನ್‌ಡ್ಯೂಯಿ ಮತ್ತು ಕಿಲ್‌ಪ್ಯಾಟ್ರಿಕ್‌ರ 'ಮಾಡುವುದರಿಂದ ಕಲಿಕೆ'ಯ ಪರಿಕಲ್ಪನೆಯ ಆಧಾರದ ಮೇಲೆ ಚಟುವಟಿಕೆ (ಕ್ರಿಯಾ) ಪಠ್ಯಕ್ರಮ (Activity Curriculum) ಪ್ರಚಾರಕ್ಕೆ ಬಂತು. ಈ ರೀತಿಯ ಪಠ್ಯಕ್ರಮ ವಿದ್ಯಾರ್ಥಿ ಚಟುವಟಿಕೆಗಳ ಮೂಲಕ ಪೂರ್ಣಗೊಳಿಸಬೇಕಾದ ಜೀವನದ ಮುಖ್ಯ ಅನುಭವಗಳಿಗೆ ಸಂಬಂಧಿಸಿದ ಪ್ರಾಯೋಜನೆ (Projects) ಅಥವಾ ಅಧ್ಯಯನ ಘಟಕಗಳಿಂದ (Study units) ಕೂಡಿರುತ್ತದೆ ಕೆಲವು ಮುಖ್ಯ ಕುಶಲಕಲೆ (Crafts) ಅಥವಾ ವೃತ್ತಿಗಳನ್ನು ಆರಿಸಿಕೊಂಡು ಅವುಗಳ ಸುತ್ತ ಚಟುವಟಿಕೆಗಳನ್ನು ರೂಪಿಸಲಾಗುತ್ತದೆ. ಈ ಚಟುವಟಿಕೆಗಳ ಮೂಲಕ ವಿದ್ಯಾರ್ಥಿ ಕಲಿಯುತ್ತಾನೆ. ಗಾಂಧೀಜಿ ಪ್ರತಿಪಾದಿಸಿದ ಮೂಲ ಶಿಕ್ಷಣ ಅಥವಾ ನಯೀ ತಾಲೀಂ ವ್ಯವಸ್ಥೆಯಲ್ಲಿ ಚಟುವಟಿಕೆ ಪಠ್ಯಕ್ರಮದ ಪರಿಕಲ್ಪನೆಯನ್ನು ಕಾಣಬಹುದು.

4. ಜಾನ್‌ಡ್ಯೂಯಿಯ ಪ್ರಗತಿಶೀಲ ಶಿಕ್ಷಣದ ಪ್ರಭಾವದಿಂದ ರೂಪುಗೊಂಡ ಮತ್ತೊಂದು ಪಠ್ಯಕ್ರಮದ ಪರಿಕಲ್ಪನೆಯೇ ತಿರುಳು ಪಠ್ಯಕ್ರಮ (Core Curriculum) ಇದು ಪ್ರಾಥಮಿಕ ಮತ್ತು ಹೈಸ್ಕೂಲ್ ಮಟ್ಟದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಲಿಯಲೇಬೇಕಾದ ಕಲಿಕೆಯ ಅನುಭವಗಳನ್ನು ಒಳಗೊಳ್ಳುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೂ ಬೇಕಾದ ಕಲಿಕೆಯು ಮುಖ್ಯ ಅಂಶಗಳನ್ನು, ವಿಷಯಗಳನ್ನು ತಿರುಳು ಪಠ್ಯಕ್ರಮದಲ್ಲಿ ಸೇರಿಸಲಾಗುತ್ತದೆ. ಇತರ ವಿಷಯಗಳು ಐಚ್ಛಿಕ ವಿಷಯಗಳಾಗಿದ್ದು ವಿದ್ಯಾರ್ಥಿಗಳು ತಮ್ಮ ಅಭಿರುಚಿಗಳಿಗನುಗುಣವಾಗಿ ಬೇಕಾದವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು

5. ಮನೋವಿಜ್ಞಾನದಲ್ಲಿ ಬೆಳವಣಿಗೆಯಾದಂತೆ ಅದರ ಪ್ರಭಾವ ಶಿಕ್ಷಣದ ಮೇಲೂ ಬೀಳತೊಡಗಿತು. 19ನೇ ಶತಮಾನದಲ್ಲಿ ಪೆಸ್ಟಲಾಜಿ, ಫ್ರೋಬೆಲ್, ರೂಸೋ, ಮಾಂಟೆಸ್ಸೋರಿ, ಹರ್ಬಾರ್ಟ್ ಮುಂತಾದವರು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಶಿಶುವಿಗೆ ಪ್ರಾಧಾನ್ಯತೆಯನ್ನು ಕೊಟ್ಟು, ಪಠ್ಯಕ್ರಮದಲ್ಲಿ ಶಿಶು ಕೇಂದ್ರದಲ್ಲಿರಬೇಕೆಂದು ವಾದಿಸಿದರು. ಎಲ್ಲಾ ಶೈಕ್ಷಣಿಕ ಪ್ರಕ್ರಿಯೆಗಳೂ ಶಿಶುವಿಗೆ ಸಂಬಂಧಪಟ್ಟಂತೆ ಇರಬೇಕು. ಈ ಬಗೆಯ ಪಠ್ಯಕ್ರಮದ ಪರಿಕಲ್ಪನೆಯೇ "ಶಿಶುಕೇಂದ್ರಿತ ಪಠ್ಯಕ್ರಮ" (Child Centered Curriculum).

6. ಶಾಲಾ ಕಾಲೇಜುಗಳಲ್ಲಿ ಪ್ರಧಾನ ಗುರಿಗಳ ಸಾಧನೆಗೆ ರೂಪಿಸುವ ಪಠ್ಯಕ್ರಮದ (ವಿಷಯಗಳು, ಪ್ರಯೋಗಗಳು, ವ್ಯವಸ್ಥಿತ ಚಟುವಟಿಕೆಗಳು ಇತ್ಯಾದಿ) ಜೊತೆಗೆ ಅನೇಕ ರೀತಿಯ ಚಟುವಟಿಕೆಗಳಿಗೂ, ಅನುಭವಗಳಿಗೂ ಅವಕಾಶ ಕಲ್ಪಿಸಿರುತ್ತಾರೆ. ಇವುಗಳಲ್ಲಿ ಕೆಲವು ವ್ಯವಸ್ಥಿತವಾದುವುಗಳಾಗಿದ್ದರೆ ಮತ್ತೆ ಕೆಲವು ಅನೌಪಚಾರಿಕವಾಗಿ ಉಂಟಾಗುತ್ತವೆ. ಈ ರೀತಿಯ ಚಟುವಟಿಕೆಗಳಿಗೆ ಒಟ್ಟಾಗಿ ಸಹ-ಪಠ್ಯಕ್ರಮ (Co-curriculum) ಎಂದು ಕರೆಯಲಾಗಿದೆ.

7. ''ಸುಪ್ತ'' ಪಠ್ಯಕ್ರಮ—ಶಾಲಾ/ಕಾಲೇಜು ವ್ಯವಸ್ಥೆಯಲ್ಲಿ ಸ್ವೀಕೃತ ಪಠ್ಯಕ್ರಮ ಮತ್ತು ಸಹ-ಪಠ್ಯಕ್ರಮವಲ್ಲದೆ ಮತ್ತೊಂದು ಬಗೆಯ ಪಠ್ಯಕ್ರಮವಿರುತ್ತದೆಯೆಂದೂ, ಇದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ ಎಂದೂ ಇತ್ತೀಚೆಗೆ ಕೆಲವು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ ಈ ಪಠ್ಯಕ್ರಮವನ್ನು ''ಸುಪ್ತ ಪಠ್ಯಕ್ರಮ'' (Hidden Curriculum) ಎಂದು ಕರೆದಿದ್ದಾರೆ. ಸುಪ್ತ ಪಠ್ಯಕ್ರಮ ಉದ್ದೇಶಪೂರ್ವಕವಾಗಿ ರೂಪಿತವಾಗಿರುವುದಿಲ್ಲ. ಇದು ವಿದ್ಯಾರ್ಥಿಗಳ ಸ್ವಂತದ ಕಲಿಕೆಯ ಉದ್ದೇಶಗಳನ್ನು ಅವರ ಸಾಂಸ್ಕೃತಿಕ ಹಿನ್ನೆಲೆಯನ್ನು ತರಗತಿಯಲ್ಲಿರುವ ಸಾಮಾಜಿಕ–ಸಂವೇಗಾತ್ಮಕ ವಾತಾವರಣವನ್ನು (Social emotional climate), ವಿದ್ಯಾರ್ಥಿ–ವಿದ್ಯಾರ್ಥಿಗಳ, ವಿದ್ಯಾರ್ಥಿ–ಅಧ್ಯಾಪಕರ ನಡುವಣ ಸಂಬಂಧಗಳನ್ನು, ಅಧ್ಯಾಪಕರ ನಡುವಣ ಸಾಮಾಜಿಕ ಸಂಬಂಧಗಳನ್ನು ಒಳಗೊಂಡಿರುತ್ತದೆ. ಎಷ್ಟೋ ವೇಳೆ ವಿದ್ಯಾರ್ಥಿಗಳು ತಮ್ಮ ತಮ್ಮಲ್ಲೇ ಉಂಟಾಗುವ ಅನ್ಯೋನ್ಯ ಕ್ರಿಯೆಯಿಂದ ಉದ್ದೇಶಿತವಲ್ಲದ ಕಲಿಕೆಗಳನ್ನು ಕಲಿಯುತ್ತಾರೆ. ಇದು ಸುಪ್ತ ಪಠ್ಯಕ್ರಮದ ಪ್ರಭಾವದಿಂದ ಉಂಟಾಗಿರುತ್ತದೆ. ರಾಬರ್ಟ್ ಡೀಹಾನ್, ಕೋಹ್ಲಬರ್ಗ್ ಮತ್ತು ಇತರ ಶೈಕ್ಷಣಿಕ ಸಮಾಜಶಾಸ್ತ್ರಜ್ಞರು ಸುಪ್ತ ಪಠ್ಯಕ್ರಮದ ಮಹತ್ವದ ಬಗ್ಗೆ ವಿವರಿಸಿದ್ದಾರೆ. ಈ ಪಠ್ಯಕ್ರಮವನ್ನು ಅನಧಿಕೃತ ಪಠ್ಯಕ್ರಮ (Unofficial Curriculum) ಎಂದೂ ಕರೆದಿದ್ದಾರೆ.

ಪಠ್ಯಕ್ರಮ ವಿಕಾಸ

ಪಠ್ಯಕ್ರಮವನ್ನು ವಿಕಾಸಗೊಳಿಸುವ ಅಥವಾ ರೂಪಿಸುವ ಪ್ರಕ್ರಿಯೆ ಸಂಕೀರ್ಣ

ವಾಗುದು ಹಾಗೂ ದೀರ್ಘಕಾಲವನ್ನು ತೆಗೆದುಕೊಳ್ಳುವಂಥಹುದು. ಈ ಪ್ರಕ್ರಿಯೆ ಶೈಕ್ಷಣಿಕ ತಜ್ಞರ, ತರಗತಿಯ ಅಧ್ಯಾಪಕರ, ಶೈಕ್ಷಣಿಕ ಆಡಳಿತಗಾರರ, ಮೇಲ್ವಿಚಾರಕರ, ಪೋಷಕರ, ವಿಷಯ ತಜ್ಞರ ಮತ್ತು ಶಿಕ್ಷಣದ ಬಗ್ಗೆ ಆಸಕ್ತಿಯಿರುವ ಸಂಘ ಸಂಸ್ಥೆಗಳ ಪ್ರಯತ್ನಗಳನ್ನು ಒಳಗೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕಾಗುತ್ತದೆ. ಇದರ ಪ್ರತಿಯೊಂದು ಹಂತದಲ್ಲಿಯೂ ಸರ್ಕಾರ ನೆರವು ನೀಡಬೇಕಾಗುತ್ತದೆ.

ಪಠ್ಯಕ್ರಮ ವಿಕಾಸದಲ್ಲಿ ಅನೇಕ ಹಂತಗಳಿವೆ :

ಪಠ್ಯಕ್ರಮ ಯೋಜನೆ

ಇದು ಪಠ್ಯಕ್ರಮ ವಿಕಾಸದ ಪ್ರಥಮ ಮತ್ತು ಅತಿ ಮುಖ್ಯವಾದ ಹಂತ. ಒಂದು ಅರ್ಥದಲ್ಲಿ ಇದು ಪಠ್ಯಕ್ರಮ ವಿಕಾಸದ ಎಲ್ಲಾ ಹಂತಗಳಿಗೂ ವ್ಯಾಪಿಸುತ್ತದೆ. ಸೇಲರ್ ಮತ್ತು ಅಲೆಗ್ಸಾಂಡರರ ಅಭಿಪ್ರಾಯದಲ್ಲಿ, ''ಉದ್ದೇಶಿತ ಪಠ್ಯಕ್ರಮ ಕ್ಷೇತ್ರಕ್ಕೆ ಸಂಬಂಧಿಸಿದ ಸಾಮಾನ್ಯ ಉದ್ದೇಶಗಳನ್ನು ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಪಠ್ಯಕ್ರಮ ಸಂಬಂಧಿ ಆಂತರಿಕ ಅಂಶಗಳಾದ ಪಠ್ಯಕ್ರಮ ವಿನ್ಯಾಸಗಳು, ಬೋಧನೆಯ ಮಾರ್ಗಗಳು ಮತ್ತು ಮೌಲ್ಯಮಾಪನ ಕ್ರಮಗಳನ್ನು ಕ್ರಮಬದ್ಧವಾಗಿ ವ್ಯವಸ್ಥೆಗೊಳಿಸುವುದೇ ಪಠ್ಯಕ್ರಮ ಯೋಜನೆ''. ಸಂಸ್ಥೆಗಳು ಮತ್ತು ಅಧ್ಯಾಪಕರು ಉಪಯೋಗಿಸಲು ನೆರವಾಗುವಂತೆ ವ್ಯಾಪಕವಾದ ರೀತಿಯಲ್ಲಿ ಪಠ್ಯಕ್ರಮದ ವಿವರಗಳನ್ನು ಪೂರ್ವಭಾವಿಯಾಗಿ ಯೋಜಿಸುವ ಪ್ರಕ್ರಿಯೆಯೇ ಪಠ್ಯಕ್ರಮ ಯೋಜನೆಯೆನ್ನಿಸುತ್ತದೆ. ಪಠ್ಯಕ್ರಮ ಯೋಜನೆಯನ್ನು ರಾಷ್ಟ್ರೀಯ, ಸ್ಥಳೀಯ ಮತ್ತು ಸಂಸ್ಥೆಗಳ ಮಟ್ಟದಲ್ಲಿಯೂ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಪಠ್ಯಕ್ರಮ ಯೋಜನೆಯನ್ನು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಮಾಡಲಾಗುತ್ತಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಟ್ಟದಲ್ಲಿ ಪಠ್ಯಕ್ರಮ ಯೋಜನೆ ರಾಜ್ಯ ಮಟ್ಟದಲ್ಲಿ ಆಗುತ್ತಿದೆ. ಆಯಾ ರಾಜ್ಯಗಳ ಧ್ಯೇಯ ಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ರೂಪಿತವಾಗುತ್ತದೆ. ಆದರೆ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಅನ್ವಯಿಸುವಂತೆ ಕೆಲವು ಸ್ಥೂಲ ಶೈಕ್ಷಣಿಕ ಧ್ಯೇಯ ಧೋರಣೆಗಳನ್ನು ರೂಪಿಸುತ್ತದೆ. ಎಲ್ಲಾ ರಾಜ್ಯಗಳೂ ಇವುಗಳನ್ನು ತಮ್ಮ ಪಠ್ಯಕ್ರಮ ಯೋಜನೆಯಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು. ಕೇಂದ್ರೀಯ ಶಾಲೆಗಳ ಪಠ್ಯಕ್ರಮವನ್ನು ಇಡೀ ದೇಶಕ್ಕೆ ಅನ್ವಯಿಸುವಂತೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನ ಮತ್ತು ತರಬೇತಿ ಸಂಸ್ಥೆ (NCERT) ರೂಪಿಸುತ್ತದೆ ವಿಶ್ವವಿದ್ಯಾಲಯ ಮಟ್ಟದ ಪಠ್ಯಕ್ರಮವನ್ನು ಆಯಾ ವಿಶ್ವವಿದ್ಯಾಲಯವೇ ರೂಪಿಸಿಕೊಳ್ಳುತ್ತದೆ. ಆ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಕಾಲೇಜುಗಳು ಅದೇ ಪಠ್ಯಕ್ರಮವನ್ನು ಅನುಸರಿಸಬೇಕು. ಸಂಸ್ಥೆ (ಕಾಲೇಜು) ಸ್ವಾಯತ್ತತೆಯನ್ನು ಪಡೆದಿದ್ದರೆ ಮಾತ್ರ ಅದು ತನ್ನ ಪಠ್ಯಕ್ರಮವನ್ನು ರೂಪಿಸುವ

ಅಧಿಕಾರ ಪಡೆದಿರುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳವರೆಗೆ ಯಾವ ಸಂಸ್ಥೆಗೂ ತನ್ನ ಪಠ್ಯಕ್ರಮ ರೂಪಿಸಿಕೊಳ್ಳಲು ಸ್ವಾತಂತ್ರ್ಯವಿರುವುದಿಲ್ಲ ಇಡೀ ರಾಜ್ಯದಲ್ಲಿ ಎಲ್ಲಾ ಶಾಲೆ, ಕಾಲೇಜುಗಳು ಏಕರೂಪವಾದ ಪಠ್ಯಕ್ರಮವನ್ನು ಅನುಸರಿಸಬೇಕಾಗುತ್ತದೆ.

ಪಠ್ಯಕ್ರಮ ಯೋಜನೆಯ ಹಂತದಲ್ಲಿ ಇಡೀ ಪಠ್ಯಕ್ರಮದ ನೀಲ ನಕ್ಷೆಯನ್ನು ರೂಪಿಸಲಾಗುತ್ತದೆ. ಪಠ್ಯಕ್ರಮದ ವ್ಯಾಪ್ತಿ, ಉದ್ದೇಶಗಳು, ಪಠ್ಯಕ್ರಮದಲ್ಲಿ ಸೇರಿಸ ಬೇಕಾದ ವಿಷಯಗಳು ಮತ್ತು ಚಟುವಟಿಕೆಗಳು, ಪಠ್ಯಕ್ರಮವನ್ನು ಕಾರ್ಯಾನ್ವಿತ ಗೊಳಿಸಲು ಬೇಕಾದ ಸಂಪನ್ಮೂಲಗಳು, ಮತ್ತು ಮೌಲ್ಯಮಾಪನ ವಿಧಾನಗಳು— ಈ ಎಲ್ಲಾ ಅಂಶಗಳ ಬಗ್ಗೆ ಯೋಜಿಸಲಾಗುತ್ತದೆ.

ಪಠ್ಯಕ್ರಮವನ್ನು ವಿಕಾಸಗೊಳಿಸುವುದು

ಈ ಹಂತದಲ್ಲಿ ಪೂರ್ವಯೋಜಿತ ಪಠ್ಯಕ್ರಮದ ನೀಲ ನಕ್ಷೆಯ ಆಧಾರದ ಮೇಲೆ ಪಠ್ಯಕ್ರಮವನ್ನು ವಿಕಾಸಗೊಳಿಸಲಾಗುತ್ತದೆ. ಈ ಹಂತದಲ್ಲಿ ಯೋಜನೆಯ ವಿವಿಧ ಹಂತಗಳ ಹೆಚ್ಚಿನ ವಿವರಗಳನ್ನು ನಿರೂಪಿಸಬೇಕಾಗುತ್ತದೆ ಯೋಜನೆಯನ್ನು ವಿಸ್ತಾರಗೊಳಿಸುವುದರ ಮೂಲಕ, ಹೆಚ್ಚಿನ ವಿವರ ಕೊಡುವುದರ ಮೂಲಕ ಮತ್ತು ಬೇಕಾದ ಬೋಧನ ಸಾಮಗ್ರಿಗಳನ್ನು ತಯಾರಿಸುವುದರ ಮೂಲಕ ನಿರ್ದಿಷ್ಟ ಸಂದರ್ಭಗಳಲ್ಲಿ ಪಠ್ಯಕ್ರಮವನ್ನು ಕಾರ್ಯಗತಗೊಳಿಸಲು ಯೋಗ್ಯವನ್ನಾಗಿಸಲಾಗುತ್ತದೆ. ನೀಗ್ಲೆ ಮತ್ತು ಇವಾನ್ಸ್‌ರು ಪಠ್ಯಕ್ರಮ ವಿಕಾಸದಲ್ಲಿ ಈ ಕೆಳಗಿನ ಹಂತಗಳನ್ನು ಗುರ್ತಿಸುತ್ತಾರೆ.

1. ಪಠ್ಯಕ್ರಮ ಸಮಿತಿ ಅಥವಾ ಸಮಿತಿಗಳನ್ನು ನೇಮಿಸುವುದು. ಈ ಸಮಿತಿಗಳು ಪಠ್ಯಕ್ರಮದ ಉದ್ದೇಶಗಳನ್ನು ನಿರೂಪಿಸಲು, ಪಠ್ಯವಸ್ತುವನ್ನು ಆಯ್ಕೆ ಮಾಡಲು ನೆರವಾಗುತ್ತವೆ.

2. ಪಠ್ಯಕ್ರಮ ಉದ್ದೇಶಗಳ, ನಿರ್ದಿಷ್ಟ ಗುರಿಗಳ ಆಯ್ಕೆ ಮತ್ತು ನಿರೂಪಣೆ.

3. ಉದ್ದೇಶಗಳ ಸಾಧನೆಗೆ ಬೇಕಾದ ಪಠ್ಯವಸ್ತುವಿನ, ಕಲಿಕೆಯ ಅನುಭವಗಳ ಮತ್ತು ಬೋಧನೋಪಕರಣಗಳ ಆಯ್ಕೆ.

4. ಉತ್ತಮ ಬೋಧನ ವಿಧಾನಗಳ ಆಯ್ಕೆ.

5. ಸೂಚಿತ ಉದ್ದೇಶಗಳ ಮತ್ತು ಕಲಿಕೆಯ ಫಲಿತಗಳಿಗೆ ಅನುಗುಣವಾದ ಮೌಲ್ಯಮಾಪನ ವಿಧಾನಗಳ ಆಯ್ಕೆ.

6. ಸಿದ್ಧಪಡಿಸಿದ ಪಠ್ಯವಸ್ತು, ಕಲಿಕೆಯ ಅನುಭವಗಳು ಮತ್ತು ಮೌಲ್ಯ ಮಾಪನ ವಿಧಾನಗಳನ್ನು ಪ್ರಾಯೋಗಿಕವಾಗಿ ಅನ್ವಯಿಸಿ ಪರೀಕ್ಷಿಸಿ ಅವಶ್ಯಕತೆ ಬಿದ್ದಲ್ಲಿ ಅವುಗಳಲ್ಲಿ ಬದಲಾವಣೆಗಳನ್ನು ಮಾಡುವುದು.

7. ಅಧ್ಯಾಪಕರ ಉಪಯೋಗಕ್ಕಾಗಿ ಸೂಕ್ತವಾದ ಪಠ್ಯಕ್ರಮ ಕೈಪಿಡಿಗಳನ್ನು ತಯಾರು ಮಾಡುವುದು.

8. ಪಠ್ಯಕ್ರಮದ ನಿರಂತರ ಅಧ್ಯಯನಕ್ಕೆ ಮೌಲ್ಯಮಾಪನ ಮತ್ತು ನವೀಕರಣ ಅವಕಾಶಗಳನ್ನು ಕಲ್ಪಿಸುವುದು. ನಿರ್ದಿಷ್ಟ ಅವಧಿಯ ನಂತರ ಪಠ್ಯಕ್ರಮವನ್ನು ವ್ಯವಸ್ಥಿತವಾಗಿ ಮೌಲ್ಯಮಾಪನ ಮಾಡಿ ನವೀಕರಿಸುವ ಕಾರ್ಯವನ್ನು ಯೋಜಿಸಬೇಕು.

ಪಠ್ಯಕ್ರಮವನ್ನು ಕಾರ್ಯಾನ್ವಿತಗೊಳಿಸುವುದು
(Curriculum Transaction) :

ಪಠ್ಯಕ್ರಮದ ವಿವರಗಳನ್ನು ವಿಕಾಸಗೊಳಿಸಿದ ನಂತರ ಅದನ್ನು ಸಂಸ್ಥೆಯ (ಶಾಲೆ, ಕಾಲೇಜು) ಮಟ್ಟದಲ್ಲಿ ಕಾರ್ಯಾನ್ವಿತಗೊಳಿಸುವುದು ಪಠ್ಯಕ್ರಮ ವಿಕಾಸದ ಮುಂದಿನ ಹಂತ. ಈ ಹಂತದಲ್ಲಿ ಸಂಸ್ಥೆಯ ಮುಖ್ಯಸ್ಥ ಮತ್ತು ತರಗತಿಯ ಅಧ್ಯಾಪಕರು ಪಾತ್ರ ವಹಿಸುತ್ತಾರೆ. ಪಠ್ಯಕ್ರಮದಲ್ಲಿ ಸೂಚಿತವಾಗಿರುವ ಕಲಿಕೆಯ ಅನುಭವಗಳನ್ನು ಪ್ರಭಾವಯುತವಾಗಿ ಉಂಟುಮಾಡಲು ಬೇಕಾದ ಅವಶ್ಯಕ ಪರಿಸ್ಥಿತಿಗಳನ್ನೂ (ಶಾಲಾ, ಕಾಲೇಜು ಕಟ್ಟಡಗಳು, ತರಗತಿಗಳು, ಉಪಕರಣಗಳು, ಗ್ರಂಥಾಲಯ, ಕಟ್ಟಡ, ಪ್ರಯೋಗ ಶಾಲೆ, ಆಟದ ಮೈದಾನ ಮುಂತಾದವುಗಳ ವ್ಯವಸ್ಥೆ) ಗ್ರಂಥಾಲಯ ಸೇವೆ, ಆರೋಗ್ಯ ಸೇವೆ, ಮಾರ್ಗದರ್ಶನ ಸೇವೆಯ ವ್ಯವಸ್ಥೆಗಳು. ದೈಹಿಕ ಚಟುವಟಿಕೆಗಳು ಹಾಗೂ ಮನರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೇಕಾದ ವ್ಯವಸ್ಥೆಗಳನ್ನು ಏರ್ಪಡಿಸಬೇಕು. ಪ್ರಭಾವಯುತ ಬೋಧನೆಗೆ ಬೇಕಾದ ಉತ್ತಮ ಬೋಧನಾ ವಿಧಾನ/ತಂತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಬೋಧನೆಗೆ ಬೇಕಾದ ಭೂಪಟ, ಪ್ರಯೋಗಶಾಲಾ ಉಪಕರಣಗಳು ಮುಂತಾದ ಬೋಧನೋಪಕರಣಗಳನ್ನು ಒದಗಿಸಬೇಕು. ಕಲಿಕೆಯ ಮೌಲ್ಯಮಾಪನ ವಿಧಾನಗಳನ್ನು (ಅಲ್ಪಕಾಲಾವಧಿ ಪರೀಕ್ಷೆಗಳು, ಅಂತಿಮ ಪರೀಕ್ಷೆ) ರೂಪಿಸಿಕೊಳ್ಳಬೇಕು ; ಇವಲ್ಲದೆ ಇಡೀ ಸಂಸ್ಥೆಯ ಕಾರ್ಯದಲ್ಲಿ ನೆರವಾಗಲು ಬೇಕಾದ ಬೋಧನೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು. ಪಠ್ಯಕ್ರಮ ಎಷ್ಟೇ ಉತ್ತಮ ರೀತಿಯಲ್ಲಿ ವಿಕಸಿತವಾಗಿದ್ದರೂ ಅದರ ಸಫಲತೆ ಅಥವಾ ವಿಫಲತೆ ಆ ಪಠ್ಯಕ್ರಮವನ್ನು ಕಾರ್ಯಾನ್ವಿತಗೊಳಿಸುವುದನ್ನು ಅವಲಂಬಿಸಿರುತ್ತದೆ.

ಪಠ್ಯಕ್ರಮದ ಮೌಲ್ಯಮಾಪನ (Curriculum Evaluation) :

ಪಠ್ಯಕ್ರಮವನ್ನು ಕಾರ್ಯಾನ್ವಿತಗೊಳಿಸಿದ ನಂತರ ಅದರ ಪ್ರಭಾವಶೀಲತೆಯ ಮೌಲ್ಯಮಾಪನ ಮಾಡಲಾಗುತ್ತದೆ. ಪಠ್ಯಕ್ರಮವನ್ನು ವಿಕಾಸಗೊಳಿಸುವ ಹಂತದಲ್ಲಿ ನಿಯಂತ್ರಿತ ಸನ್ನಿವೇಶದಲ್ಲಿ ಅದರ ಮೌಲ್ಯಮಾಪನ ಮಾಡಲಾಗಿರುತ್ತದೆ

ಈ ಅಧ್ಯಯನದ ಫಲಿತಾಂಶ ಫಲಪ್ರದವೆನಿಸಿದ ನಂತರ ಪಠ್ಯಕ್ರಮವನ್ನು ಜಾರಿಗೆ ಕೊಡಲಾಗುತ್ತದೆ. ಆದಾಗ್ಯೂ ಪಠ್ಯಕ್ರಮವನ್ನು ವ್ಯಾಪಕ ರೀತಿಯಲ್ಲಿ ಜಾರಿಗೊಳಿಸಿದ ನಂತರವೂ ಅದರ ಮೌಲ್ಯಮಾಪನ ಮಾಡಬೇಕಾಗುತ್ತದೆ. ಏಕೆಂದರೆ ವಿವಿಧ ಪರಿಸ್ಥಿತಿಗಳಲ್ಲಿರುವ ಶಾಲೆ/ಕಾಲೇಜುಗಳಲ್ಲಿ ಪಠ್ಯಕ್ರಮವನ್ನು ವ್ಯಾಪಕ ರೀತಿಯಲ್ಲಿ ಕಾರ್ಯಾನ್ವಿತಗೊಳಿಸಿದಾಗ ಅದರ ಉಪಯುಕ್ತತೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಕೆಲವು ವೇಳೆ ಈ ಹಂತದಲ್ಲಿ ಪಠ್ಯಕ್ರಮದ ಕೆಲವು ದೋಷಗಳು ಅಥವಾ ಮಿತಿಗಳು ಗಮನಕ್ಕೆ ಬರಬಹುದು. ಆದುದರಿಂದ ಪಠ್ಯಕ್ರಮವನ್ನು ಜಾರಿಗೊಳಿಸಿದ ಸ್ವಲ್ಪ ಕಾಲಾನಂತರ ಅದರ ಮೌಲ್ಯಮಾಪನ ಅವಶ್ಯಕವೆನಿಸುತ್ತದೆ. ಖಚಿತವಾದ ನಿರ್ಧಾರಕಗಳ ಆಧಾರದ ಮೇಲೆ ಪಠ್ಯಕ್ರಮದ ಮೌಲ್ಯಮಾಪನ ಮಾಡಬೇಕು. ಮೌಲ್ಯಮಾಪನವನ್ನು ಪಠ್ಯಕ್ರಮದ ಕಾರ್ಯಾನ್ವಿತಿಯ ವಿವಿಧ ಹಂತಗಳಲ್ಲಿಯಾಗಲಿ ಅಥವಾ ನಿರ್ದಿಷ್ಟ ಕಾಲಾವಧಿಯ ನಂತರವಾಗಲಿ ಮಾಡಬಹುದು. ಉತ್ತಮ ರೀತಿಯಲ್ಲಿ ಮಾಡಿದ ಪಠ್ಯಕ್ರಮದ ಮೌಲ್ಯಮಾಪನ ಪಠ್ಯಕ್ರಮದ ದೋಷಗಳನ್ನು ಸರಿಪಡಿಸುವುದಕ್ಕೂ, ಪಠ್ಯಕ್ರಮದ ನವೀಕರಣಕ್ಕೂ ಆಧಾರವಾಗುತ್ತದೆ.

ಪಠ್ಯಕ್ರಮ ನವೀಕರಣ (Curriculum Renewal) :

ಯಾವುದೇ ಪಠ್ಯಕ್ರಮವೂ ಎಲ್ಲಾ ಕಾಲಕ್ಕೂ ಸ್ಥಿರವಾಗಿರಬಾರದು, ಅದು ಬದಲಾದ ಪರಿಸ್ಥಿತಿಗಳಿಗೆ, ಬದಲಾದ ಸಾಮಾಜಿಕ ಬೇಡಿಕೆಗಳಿಗೆ ಸ್ಪಂದಿಸಬೇಕು. ವಿಜ್ಞಾನ, ತಂತ್ರಜ್ಞಾನ ಮತ್ತು ಜ್ಞಾನ ಶಾಖೆಗಳಲ್ಲಿ ಉಂಟಾಗುವ ಪ್ರಗತಿಯನ್ನು ಒಳಗೊಳ್ಳಬೇಕು. ಆದ್ದರಿಂದ ಒಂದು ಉತ್ತಮ ಪಠ್ಯಕ್ರಮ ನಮ್ಯತೆ ಮತ್ತು ಗತಿಶೀಲತೆಯ ಲಕ್ಷಣಗಳನ್ನು ಹೊಂದಿರಬೇಕು. ಆದುದರಿಂದ ಪಠ್ಯಕ್ರಮವನ್ನು ಆಗಾಗ್ಗೆ ಪರಿಷ್ಕರಿಸಬೇಕು ಅಥವಾ ನವೀಕರಣಗೊಳಿಸಬೇಕು. ಇದೇ ಪಠ್ಯಕ್ರಮ ನವೀಕರಣ ಹಂತ. ಇದೂ ಸಹ ಪಠ್ಯಕ್ರಮ ವಿಕಾಸದ ಅವಿಭಾಜ್ಯ ಅಂಗವೆನಿಸಿದೆ. ಸಾಕಷ್ಟು ಕಾಲಾವಧಿಯ ನಂತರ ಪಠ್ಯಕ್ರಮದಲ್ಲಿರುವ ವಿಷಯ ವಸ್ತುಗಳ ಕೆಲವು ಅಂಶಗಳು ಹಳತಾಗುತ್ತವೆ, ನಿರುಪಯುಕ್ತವೆನಿಸುತ್ತವೆ. ಇಂಥ ಅಂಶಗಳನ್ನು ತೆಗೆದು ಹಾಕಿ, ಹೊಸ ಹೊಸ ಜ್ಞಾನಾಂಶಗಳನ್ನು ಸೇರಿಸಿಕೊಳ್ಳಲು, ಶಿಕ್ಷಣದ ಉದ್ದೇಶಗಳನ್ನು ಸಾಮಾಜಿಕ ಬದಲಾವಣೆಗೆ ಹೊಂದುವಂತೆ ಪುನರ್ನಿರೂಪಿಸಲು, ಹೊಸ ಹೊಸ ಬೋಧನ ವಿಧಾನಗಳನ್ನು ಅಳವಡಿಸಿಕೊಳ್ಳಲು ಮತ್ತು ಪಠ್ಯಕ್ರಮ ವಿಕಾಸದಲ್ಲಿ ದೋಷಗಳಿದ್ದರೆ ಅವುಗಳನ್ನು ತಿದ್ದಿಕೊಳ್ಳಲು ಪಠ್ಯಕ್ರಮ ನವೀಕರಣಬೇಕಾಗುತ್ತದೆ. ಪಠ್ಯಕ್ರಮ ನವೀಕರಣ ಕಾರ್ಯವನ್ನು ಸಾರ್ವಜನಿಕರಾಗಲೀ, ಶಿಕ್ಷಣದಲ್ಲಿ ಆಸ್ಥೆಯಿರುವ ಸಂಘ ಸಂಸ್ಥೆಗಳಾಗಲಿ ಸೂಚಿಸಬಹುದು ಅಥವಾ ಆ ದಿಶೆಯಲ್ಲಿ ಪ್ರಯತ್ನಿಸಬಹುದು. ಸರ್ಕಾರವೂ ಸಹ ಪಠ್ಯಕ್ರಮ ನವೀಕರಣವನ್ನು ಪ್ರಾರಂಭಿಸಬಹುದು. ನವೀಕರಣದ ಹೆಸರಿನಲ್ಲಿ ಪಠ್ಯಕ್ರಮದಲ್ಲಿ ಅಲ್ಲಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡುವುದಾಗಲಿ,

ಬೇರೆ ರಾಷ್ಟ್ರಗಳ ಶೈಕ್ಷಣಿಕ ಪದ್ಧತಿಗಳ ಅನುಕರಣೆ ಮಾಡಿ ಪಠ್ಯಕ್ರಮದಲ್ಲಿ ಬದಲಾವಣೆಗಳನ್ನು ಮಾಡುವುದಾಗಲೀ, ಸರಿಯಾದ ಪಠ್ಯಕ್ರಮ ನವೀಕರಣವೆನ್ನಿಸುವುದಿಲ್ಲ. ಪಠ್ಯಕ್ರಮ ನವೀಕರಣ ವ್ಯವಸ್ಥಿತವಾದ ಒಂದು ಪ್ರಕ್ರಿಯೆ. ಇದು ಪಠ್ಯಕ್ರಮದ ವ್ಯವಸ್ಥಿತ ಮೌಲ್ಯಮಾಪನದ ನಂತರ ನಿರ್ದಿಷ್ಟ ಉದ್ದೇಶಗಳ ಆಧಾರದ ಮೇಲೆ ಆಗಬೇಕಾದ ಪ್ರಕ್ರಿಯೆ. ಇದರಲ್ಲಿ ಪಠ್ಯಕ್ರಮಕ್ಕೆ ಸಂಬಂಧಿಸಿದವರೆಲ್ಲರೂ—ಅಂದರೆ ಪೋಷಕರು, ಅಧ್ಯಾಪಕರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು—ಸಕ್ರಿಯವಾಗಿ ಭಾಗವಹಿಸಬೇಕಾಗುತ್ತದೆ.

ಪಠ್ಯಕ್ರಮ ಯೋಜನೆ/ವಿಕಾಸದಲ್ಲಿ ಅನೇಕ ತತ್ವಗಳು ಅಡಕವಾಗಿದೆ. ಈ ತತ್ವಗಳನ್ನು ಈ ಮುಂದೆ ಸಂಕ್ಷೇಪವಾಗಿ ವಿವರಿಸಲಾಗಿದೆ.

1. ದಾರ್ಶನಿಕ ಆಧಾರಗಳು : ಪಠ್ಯಕ್ರಮ ನಿರ್ದಿಷ್ಟವಾದ ದಾರ್ಶನಿಕ, ಮನೋವೈಜ್ಞಾನಿಕ ಮತ್ತು ಸಾಮಾಜಿಕ ಆಧಾರಗಳ ಮೇಲೆ ರೂಪಿತವಾಗಬೇಕು. ಈ ಆಧಾರಗಳು ಪಠ್ಯಕ್ರಮಕ್ಕೆ ಸ್ಪಷ್ಟವಾದ ಉದ್ದೇಶಗಳನ್ನು ನಿರೂಪಿಸಲು ಸಹಾಯಕವಾಗುತ್ತವೆ. ಪಠ್ಯಕ್ರಮ ಯೋಜನೆ/ವಿಕಾಸದಲ್ಲಿ ಮಾರ್ಗದರ್ಶನ ನೀಡುತ್ತವೆ. ಪಠ್ಯಕ್ರಮ ರೂಪಿಸುವಾಗ ದೇಶದ ಐತಿಹಾಸಿಕ, ದಾರ್ಶನಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗೆ ಸೂಕ್ತವಾದ ಮೂಲಭೂತ ತಾತ್ವಿಕ ಆಧಾರವನ್ನು ಆರಿಸಿಕೊಳ್ಳಬೇಕು. ಹಿಂದಿನಿಂದ ಇಂದಿನವರೆಗೂ ಅನೇಕ ಶಿಕ್ಷಣ ತಜ್ಞರು ಶಿಕ್ಷಣದ ಅನೇಕ ತಾತ್ವಿಕ ನೆಲೆಗಳನ್ನು ರೂಪಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ—

ಆದರ್ಶವಾದ ಆತ್ಮಸಾಕ್ಷಾತ್ಕಾರವೇ ಶಿಕ್ಷಣದ ಮುಖ್ಯ ಗುರಿಯೆನ್ನುತ್ತದೆ. ಭೌತಿಕ ಅಂಶಗಳಿಗಿಂತ ವಿಚಾರಗಳಿಗೆ ಮಹತ್ವ ನೀಡುತ್ತದೆ. ಮೌಲ್ಯಗಳ ಸಾಧನೆ ಸಾರ್ವಕಾಲಿಕವಾದ ಉನ್ನತ ಮೌಲ್ಯಗಳ ಅನ್ವೇಷಣೆ ಮತ್ತು ಸ್ವೀಕಾರ ಶಿಕ್ಷಣದ ಧ್ಯೇಯವೆಂದು ವಾದಿಸುತ್ತದೆ. ಭಾರತೀಯ ದಾರ್ಶನಿಕ ಪರಂಪರೆ ಆದರ್ಶವಾದಕ್ಕೆ ಹೊಂದುತ್ತದೆ.

ಫ್ರಾನ್ಸ್ ದೇಶದ ಜೀನ್ ಜಾಕ್ವಿಯಸ್ ರೂಸೋ ಶಿಕ್ಷಣದಲ್ಲಿ ನೈಸರ್ಗಿಕ ವಾದವನ್ನು ಪ್ರತಿಪಾದಿಸಿದ್ದಾನೆ. ಈ ವಾದ ಮಾನವನ ಸ್ವಭಾವಕ್ಕೂ ಪ್ರಕೃತಿಗೂ ನಡುವೆ ಸಮನ್ವಯವನ್ನು ಸ್ಥಾಪಿಸುವುದೇ ಶಿಕ್ಷಣದ ಮುಖ್ಯ ಉದ್ದೇಶವೆಂದು ವಾದಿಸುತ್ತದೆ. ಮಗು ಪ್ರಕೃತಿಯ ವರದಾನ, ಅದರಲ್ಲಿ ಸ್ವಭಾವತಃ ಒಳ್ಳೆಯ ಗುಣಗಳೇ ಇರುತ್ತವೆ. ಕಲಿಯುವ ಅಪೇಕ್ಷೆ ಸ್ವಾಭಾವಿಕವಾಗಿರುತ್ತದೆ. ಆದ್ದರಿಂದ ಮಗುವಿನ ಶಿಕ್ಷಣ ಅದರ ಸ್ವಾಭಾವಿಕ ಪ್ರವೃತ್ತಿಗಳಿಗೆ, ಸಾಮರ್ಥ್ಯಗಳಿಗೆ ಹೊಂದಿಕೊಂಡು ಸಾಗಬೇಕು. ಮಗುವಿನ ಶಿಕ್ಷಣದಲ್ಲಿ ಕೃತಕವಾದ ರೀತಿಯಲ್ಲಿ ಹಸ್ತಕ್ಷೇಪ ಮಾಡದೆ, ಮಗು ಪ್ರಕೃತಿಯಲ್ಲಿ ತನಗೆ ಆಗುವ ಅನುಭವದ ಆಧಾರದ ಮೇಲೆ ತಾನೇ ಕಲಿಯಲು ಬಿಡಬೇಕು.

ಫ್ರೋಬೆಲ್ ಮತ್ತು ಪೆಸ್ಟಲಾಜಿಯ ಮಾನವತಾವಾದಿ ವಾಸ್ತವಿಕವಾದವು ಪ್ರಾಚೀನ ಶ್ರೇಷ್ಠ ಸಾಹಿತ್ಯ ಕೃತಿಗಳ (Classics) ಅಧ್ಯಯನಕ್ಕೆ ಮಹತ್ವ ನೀಡಿದ್ದರೆ, ಬೇಕನ್ ಮತ್ತು ಹರ್ಬರ್ಟ್ ಸ್ಪೆನ್ಸರನಿಂದ ಪ್ರತಿಪಾದಿತವಾದ ವೈಜ್ಞಾನಿಕ ವಾಸ್ತವಿಕ ವಾದವು ವಿಜ್ಞಾನಗಳ ಅಧ್ಯಯನಕ್ಕೆ ಒತ್ತು ಕೊಟ್ಟಿದೆ. ಅಗಸ್ಟ್ ಕಾಮ್ಟ್ ಮತ್ತು ಇತರ ಸಮಾಜಶಾಸ್ತ್ರಜ್ಞರ ಸಾಮಾಜಿಕ ವಾಸ್ತವಿಕ ವಾದವು ಉತ್ತಮ ಶಿಕ್ಷಣದಲ್ಲಿ ಪ್ರವಾಸ ಮತ್ತು ವೈವಿಧ್ಯಪೂರ್ಣ ಸಾಮಾಜಿಕ ಅನುಭವಗಳ ಪಾತ್ರದ ಮಹತ್ವವನ್ನು ತಿಳಿಸುತ್ತದೆ.

ಅಮೆರಿಕದ ಪ್ರಸಿದ್ಧ ಶಿಕ್ಷಣವೇತ್ತ ಜಾನ್ ಡ್ಯೂಯಿ ಮತ್ತು ಮನೋವಿಜ್ಞಾನಿ ಜೇಮ್ಸ್‌ನ ವ್ಯಾವಹಾರಿಕ ವಾದದ (Pragmatisn) ಪ್ರಕಾರ ಪಠ್ಯಕ್ರಮ ಯೋಜನೆ ಯಲ್ಲಿ ಸಾಮಾಜಿಕ ದಕ್ಷತೆ ಮತ್ತು ಸಮೃದ್ಧ ಜೀವನಾನುಭವಗಳನ್ನು ನೀಡುವ ಉದ್ದೇಶಪೂರ್ಣ ಪ್ರಾಯೋಜನೆ (Projects) ಗಳಿಗೆ, ಅನ್ವೇಷಣಾ ಚಟುವಟಿಕೆಗಳಿಗೆ ಪ್ರಮುಖ ಸ್ಥಾನ ನೀಡಬೇಕು.

ಸಾರ್ತ್ರೆಯ ಅಸ್ತಿತ್ವವಾದದ ನಿಲುವಿನ ಪ್ರಕಾರ ಪಠ್ಯಕ್ರಮ ವಯಸ್ಕ ಜೀವನದ ತಯಾರಿಗೆ, ಜೀವನದಲ್ಲಿ ಸ್ವಂತ ಜವಾಬ್ದಾರಿಯಿಂದ ಆಯ್ಕೆಗಳನ್ನು ಮಾಡಲು ಮತ್ತು ತನ್ನ ಆಯ್ಕೆಯ ಪರಿಣಾಮಗಳನ್ನು ಧೈರ್ಯದಿಂದ ಎದುರಿಸಲು ಬೇಕಾದ ವ್ಯಕ್ತಿತ್ವ ಲಕ್ಷಣಗಳನ್ನು ಬೆಳೆಸಲು ಪೂರಕವಾದ ಶೈಕ್ಷಣಿಕಾನುಭವಗಳನ್ನು ರೂಪಿಸಬೇಕು.

ಥಿಯೋಡೋರ್ ಬ್ರಮೆಲ್ಡನ ಪುನರ್ ರಚನಾ ವಾದದ ಪ್ರಕಾರ ಪಠ್ಯಕ್ರಮದ ಉದ್ದೇಶ ಮಹತ್ವಪೂರ್ಣ ಸಾಂಸ್ಕೃತಿಕ ಬದಲಾವಣೆಗಳನ್ನು ಉಂಟುಮಾಡಿ ಸಾಂಸ್ಕೃತಿಕ ಪುನರ್ ರಚನೆಯನ್ನು ಉಂಟುಮಾಡುವುದಾಗಬೇಕು.

ಅಸ್ತಿತ್ವವಾದಿ-ಮಾನವತಾವಾದಿಗಳಾದ ಆಲ್‌ಪೋರ್ಟ್, ಅಬ್ರಹಾಂ ಮಾಸ್ಲೋ ಮತ್ತು ಕಾರ್ಲ್ ರೋಜರ್ಸರು ಮಾನವ ಸ್ವಭಾವತಃ ಒಳ್ಳೆಯ ಪ್ರವೃತ್ತಿಗಳನ್ನು, ಸೃಜನಾತ್ಮಕ ಸಾಮರ್ಥ್ಯಗಳನ್ನು ಹೊಂದಿರುವನೆಂದೂ, ಪಠ್ಯಕ್ರಮದ ಉದ್ದೇಶ ಈ ಪ್ರವೃತ್ತಿಗಳನ್ನೂ, ಸೃಜನಾತ್ಮಕ ಸಾಮರ್ಥ್ಯಗಳನ್ನು ವ್ಯಕ್ತಿ ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸಿ "ಪರಿಪೂರ್ಣ ಕಾರ್ಯಶೀಲ ವ್ಯಕ್ತಿ" (Fully Functioning Individual)ಯನ್ನಾಗಿಸಲು ಪ್ರಯತ್ನಿಸುವುದಾಗಿದೆ.

2. ಸಾಮಾಜಿಕ ಆಧಾರಗಳು : ಪಠ್ಯಕ್ರಮ ಆಯಾ ದೇಶದ ಸಾಮಾಜಿಕ ಲಕ್ಷಣಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಸಾಮಾಜಿಕ ಸಂರಚನೆ (ಜಾತಿ ಪದ್ಧತಿ, ವರ್ಗ ಪದ್ಧತಿಯಂಥ ಸಾಮಾಜಿಕ ಸ್ತರೀಕರಣ ವಿಧಗಳು), ಸಾಮಾಜಿಕ ಜೀವನ ಶೈಲಿ, ಪದ್ಧತಿಗಳು, ರೀತಿ ನೀತಿಗಳು, ಸಾಮಾಜಿಕ ಮೌಲ್ಯಗಳು, ಸಾಂಸ್ಕೃತಿಕ ಪದ್ಧತಿಗಳು (ಜನಪದ ಸಾಹಿತ್ಯ, ಜಾನಪದ ಸಂಗೀತ, ಕಲಾ ಕೌಶಲಗಳು,

ಪೌರಾಣಿಕ ಕಲ್ಪನೆಗಳು, ಹಬ್ಬ ಹರಿದಿನಗಳು, ಆಹಾರ, ವಿಹಾರ, ಪೋಷಾಕಿನ ಶೈಲಿಗಳು ಇತ್ಯಾದಿ)—ಈ ಸಾಮಾಜಿಕ ಅಂಶಗಳೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಇವಲ್ಲದೆ ಸಾಮಾಜಿಕ ಬದಲಾವಣೆಗಳನ್ನು ತರುವ ವಿವಿಧ ಶಕ್ತಿಗಳನ್ನು ಮರೆಯ ಬಾರದು. ನಗರೀಕರಣ, ಔದ್ಯೋಗೀಕರಣ, ಪ್ರಜಾಸತ್ತಾತ್ಮಕ ಮತ್ತು ಸಮತಾ ಆದರ್ಶಗಳು, ಸ್ತ್ರೀ-ಪುರುಷರ ಸಮಾನತೆ, ವಿವಿಧ ಸಾಮಾಜಿಕ ವರ್ಗಗಳ ನಡುವೆ ಸಮಾನತೆ, ಪರಿಸರ ಪ್ರಜ್ಞೆ, ವೈಜ್ಞಾನಿಕ ಬೆಳವಣಿಗೆ, ಸಮಾಜದ ಮೇಲೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ ಈ ರೀತಿಯ ಶಕ್ತಿಗಳ ಪರಿಚಯಕ್ಕೂ ಪಠ್ಯಕ್ರಮ ಅವಕಾಶಗಳನ್ನು ಕಲ್ಪಿಸಬೇಕು.

3. **ಮನೋವೈಜ್ಞಾನಿಕ ಆಧಾರಗಳು** : ಪಠ್ಯಕ್ರಮ ಸೂಕ್ತ ಮನೋ ವೈಜ್ಞಾನಿಕ ಆಧಾರಗಳ ಮೇಲೆ ರೂಪಿತವಾಗಬೇಕು. ಪಠ್ಯವಸ್ತುವಿನ ಆಯ್ಕೆ ಬೇರೆ ಬೇರೆ ವಯೋಮಾನದ ಮಕ್ಕಳ ವಿಕಾಸ ಲಕ್ಷಣಗಳಿಗೆ, ಅವರ ಉದ್ದೇಶಗಳಿಗೆ ಅನುಗುಣವಾಗಿರಬೇಕಾಗುತ್ತದೆ. ಶೈಕ್ಷಣಿಕ ಮನೋವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆಗಳು, ಪ್ರತಿಪಾದಿತವಾಗಿರುವ ಸಿದ್ಧಾಂತಗಳು ಪಠ್ಯಕ್ರಮ ವಿಕಾಸಕ್ಕೆ ಸೂಕ್ತ ಮನೋ ವೈಜ್ಞಾನಿಕ ಆಧಾರಗಳನ್ನು ಒದಗಿಸುತ್ತವೆ. ಕಲಿಯುವ ವ್ಯಕ್ತಿಯ ಲಕ್ಷಣಗಳು, ಶಿಶು ವಿಕಾಸದ ದಿಶೆಗಳು, ಬುದ್ಧಿಶಕ್ತಿ, ಸೃಜನಶೀಲತೆ ಮುಂತಾದವುಗಳ ಸ್ವರೂಪ ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸುವಿಕೆ, ಮಕ್ಕಳ ಸಂಜ್ಞಾನಾತ್ಮಕ, ಸಂವೇಗಾತ್ಮಕ ಮತ್ತು ಮನೋಗತ್ಯಾತ್ಮಕ ಲಕ್ಷಣಗಳನ್ನು ಬೆಳೆಸುವಿಕೆ, ಮಕ್ಕಳ ವ್ಯಕ್ತಿತ್ವ ವಿಕಾಸ, ಪರಿಸರಕ್ಕೆ ಹೊಂದಿಕೊಳ್ಳುವಿಕೆ, ದ್ವಂದ್ವಗಳನ್ನು ಮತ್ತು ಭಗ್ನ ಮನೋರಥಗಳನ್ನು ನಿಭಾಯಿಸುವಿಕೆ, ಕಲಿಕೆಯ ಸ್ವರೂಪ ಮತ್ತು ವಿವಿಧ ರೀತಿಯ ಕಲಿಕೆಗಳು, ಮಕ್ಕಳಲ್ಲಿ ಮನೋಭಾವಗಳನ್ನು, ಅಭಿರುಚಿಗಳನ್ನು ಮತ್ತು ಮೌಲ್ಯ ಗಳನ್ನು ಬೆಳೆಸುವಿಕೆ—ಈ ಎಲ್ಲಾ ಅಂಶಗಳೂ ಮನೋವೈಜ್ಞಾನಿಕ ಆಧಾರಗಳಲ್ಲಿ ಸೇರುತ್ತವೆ.

4. **ಆರ್ಥಿಕ ಅಂಶಗಳು** : ಪಠ್ಯಕ್ರಮವನ್ನು ರೂಪಿಸುವಾಗ ಆರ್ಥಿಕ ಅಂಶಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಪಠ್ಯಕ್ರಮವನ್ನು ಅನ್ವಯ ಗೊಳಿಸಲು ಅನೇಕ ಆರ್ಥಿಕ ಸಂಪನ್ಮೂಲಗಳು ಬೇಕಾಗುತ್ತವೆ. ಪಠ್ಯಕ್ರಮ ವಿಕಾಸದ ಹಂತದಲ್ಲಿ ಅದನ್ನು ಜಾರಿಗೊಳಿಸಲು ಬೇಕಾದ ಆರ್ಥಿಕ ಸಂಪನ್ಮೂಲಗಳಾವುವು, ಅವು ಲಭ್ಯವಿದೆಯೆ, ಅವುಗಳನ್ನು ಫಲಪ್ರದವಾಗಿ ಉಪಯೋಗಿಸಿಕೊಳ್ಳುವುದು ಹೇಗೆ ಎನ್ನುವ ಪ್ರಶ್ನೆಗಳನ್ನು ಪರಿಗಣಿಸಬೇಕು. ಮಹತ್ವಾಕಾಂಕ್ಷೆಯಿಂದ ಕೂಡಿದ ಪಠ್ಯಕ್ರಮ ಆರ್ಥಿಕ ಸಂಪನ್ಮೂಲಗಳ ಅಭಾವದಿಂದ ವಿಫಲಗೊಳ್ಳುವ ಸಾಧ್ಯತೆಯಿದೆ.

5. **ಬೋಧನೋದ್ದೇಶಗಳು** : ಪಠ್ಯಕ್ರಮ ವಿಕಾಸದ ಪ್ರಾರಂಭದಲ್ಲಿಯೇ ಅದರ ಗೊತ್ತು-ಗುರಿಗಳನ್ನು ಸರಿಯಾಗಿ ಆಯ್ಕೆ ಮಾಡಿಕೊಂಡು, ಸ್ಪಷ್ಟವಾಗಿ

ನಿರೂಪಿಸಿಕೊಳ್ಳಬೇಕು. ಈ ಧ್ಯೇಯೋದ್ದೇಶಗಳ ಬಗ್ಗೆ ಅನೇಕ ಶಿಕ್ಷಣ ತಜ್ಞರು ಚರ್ಚಿಸಿದ್ದಾರೆ. ಈ ತತ್ವದಲ್ಲಿ ಎರಡು ಅಂಶಗಳಿವೆ. ಆಯ್ಕೆ ಮಾಡುವ ಧ್ಯೇಯೋದ್ದೇಶಗಳು ಆಯಾ ದೇಶದ ಸಾಮಾಜಿಕ ಸಂದರ್ಭಕ್ಕೆ ಹೊಂದುವಂತಿರಬೇಕು. ಶಿಕ್ಷಣದ ಬೇರೆ ಬೇರೆ ಮಟ್ಟದ ಮಕ್ಕಳ ಅವಶ್ಯಕತೆಗಳಿಗೆ ಅನುಗುಣವಾಗಿರಬೇಕು. ಎರಡನೆಯದಾಗಿ, ಆಯ್ಕೆ ಮಾಡಿದ ಧ್ಯೇಯೋದ್ದೇಶಗಳನ್ನು ಸ್ಪಷ್ಟವಾದ ರೀತಿಯಲ್ಲಿ, ಕಾರ್ಯಾನ್ವಯಗೊಳಿಸಬಹುದಾದ ರೀತಿಯಲ್ಲಿ ನಿರೂಪಿಸಬೇಕು. ಧ್ಯೇಯಗಳು (Aims) ವಿಶಾಲವಾದವುಗಳೂ, ಸ್ಥೂಲವಾದವುಗಳೂ ಆಗಿರುತ್ತವೆ. ಉದ್ದೇಶಗಳು (ಗುರಿ) ಕಡಿಮೆ ವ್ಯಾಪಕತೆಯುಳ್ಳವೂ, ನಿರ್ದಿಷ್ಟವಾದವುಗಳೂ ಆಗಿರುತ್ತವೆ. ಒಂದು ಸಾಮಾನ್ಯ ಧ್ಯೇಯದಲ್ಲಿ ಅನೇಕ ನಿರ್ದಿಷ್ಟ ಉದ್ದೇಶಗಳು ಅಡಕವಾಗಿರುತ್ತವೆ. ಇವುಗಳನ್ನು ಗುರುತಿಸಬಹುದಾದ ವರ್ತನೆಗಳ ರೂಪದಲ್ಲಿ ನಿರ್ದೇಶಿಸಬಹುದು. ಈ ರೀತಿಯ ವರ್ತನ ವಿನ್ಯಾಸಗಳು ಕಲಿಕೆಯ ನಂತರ ಕಂಡುಬರುತ್ತದೆ. ಇವುಗಳಿಗೆ ಕಲಿವಿನ ಫಲಿತಗಳು (Learning Out-come) ಎಂದು ಹೆಸರು. ಬೆಂಜಮಿನ್ ಬ್ಲೂಂ, ಗ್ಯಾನೆ, ಮ್ಯಾಗರ್ ಮುಂತಾದವರು ಶಿಕ್ಷಣೋದ್ದೇಶಗಳನ್ನು ನಿರೂಪಿಸುವ ವಿವಿಧ ವ್ಯವಸ್ಥೆಗಳನ್ನು ರೂಪಿಸಿದ್ದಾರೆ. ಬ್ಲೂಂನ ವ್ಯವಸ್ಥೆಯಲ್ಲಿ ಶಿಕ್ಷಣೋದ್ದೇಶಗಳನ್ನು ಸಂಜ್ಞಾನಾತ್ಮಕ, ಸಂವೇಗಾತ್ಮಕ ಮತ್ತು ಮನೋಗತ್ಯಾತ್ಮಕ ಕ್ಷೇತ್ರಗಳೆಂದು ವಿಭಾಗಿಸಲಾಗಿದೆ. ಈ ಪ್ರತಿಯೊಂದು ಕ್ಷೇತ್ರವನ್ನೂ ಪುನಃ ನಿರ್ದಿಷ್ಟ ಉದ್ದೇಶಗಳಾಗಿ ವಿಭಾಗಿಸಲಾಗಿದೆ. ಬ್ಲೂಮನ ವ್ಯವಸ್ಥೆ ಹೆಚ್ಚು ವಿಸ್ತೃತವೂ, ಜನಪ್ರಿಯವೂ ಆಗಿದೆ.

ಶಿಕ್ಷಣೋದ್ದೇಶಗಳನ್ನು ಆಯ್ಕೆ ಮಾಡುವಾಗ ಈ ಕೆಳಗಿನ ನಿರ್ಣಾಯಕಾಂಶಗಳನ್ನು ಗಮನಿಸಬೇಕು.

1. ಸಾಮಾಜಿಕ ಪರಿಸ್ಥಿತಿ ಮತ್ತು ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಆಯ್ಕೆ ಮಾಡಬೇಕು. (ಇದು ಸಾಮಾಜಿಕ ಪರ್ಯಾಪ್ತತೆ ಎನಿಸುತ್ತದೆ).
2. ಇವುಗಳು ಮಾನವನ (ಶಿಕ್ಷಣಾರ್ಥಿಗಳ) ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಪ್ರಯತ್ನಿಸಬೇಕು.
3. ಇವು ಪ್ರಜಾಸತ್ತಾತ್ಮಕ ಆದರ್ಶಗಳಿಗೆ ಅನುಗುಣವಾಗಿರಬೇಕು
4. ಉದ್ದೇಶಗಳ ನಡುವೆ ಹೊಂದಾಣಿಕೆ ಇರಬೇಕು. ಅವುಗಳ ನಡುವೆ ವಿರೋಧಾಭಾಸ ಇರಬಾರದು.
5. ಅವುಗಳನ್ನು ಗುರುತಿಸಬಹುದಾದ, ಅಳತೆ ಮಾಡಬಹುದಾದಂತಹ ವರ್ತನೆಗಳ ರೂಪದಲ್ಲಿ ನಿರೂಪಿಸುವಂತಿರಬೇಕು.

ಉದ್ದೇಶಗಳನ್ನು ಆಯ್ಕೆ ಮಾಡಿದ ನಂತರ ಅವುಗಳನ್ನು ಸ್ಪಷ್ಟವಾದ ಶಬ್ದಗಳಲ್ಲಿ ನಿರೂಪಿಸಬೇಕು. ಈ ನಿರೂಪಣೆಯನ್ನು ಬೇರೆ ಬೇರೆ ಮಟ್ಟಗಳ ಸಾಮಾನ್ಯತೆಯಲ್ಲಿ

ನಿರೂಪಿಸಬಹುದು. ಅಂತಿಮವಾಗಿ ಕಲಿಕೆಯ ಫಲಿತಗಳ (Learning Outcome) ರೂಪದಲ್ಲಿ ಅವುಗಳನ್ನು ನಿರೂಪಿಸಲಾಗುತ್ತದೆ ಇವುಗಳನ್ನು ಪ್ರತಿದಿನದ ಪಾಠಗಳಲ್ಲಿ ಸಾಮಾನ್ಯ ಉದ್ದೇಶಗಳು ನಿರ್ದಿಷ್ಟ ಉದ್ದೇಶಗಳಾಗಿ ನಿರೂಪಿಸಲಾಗುತ್ತದೆ. ಇದು ಬೋಧನೆಯ ಪ್ರಥಮ ಹಂತ ಇದರಿಂದ ಕಲಿಕೆಯ ಅನುಭವಗಳನ್ನು, ಪಠ್ಯ ಸಾಮಗ್ರಿಯನ್ನು ಆಯ್ಕೆ ಮಾಡಲು, ಅವುಗಳನ್ನು ವ್ಯವಸ್ಥೆಗೊಳಿಸಿಕೊಳ್ಳಲು ಮತ್ತು ಬೋಧನೆಯ ನಂತರ ಮೌಲ್ಯಮಾಪನ ಮಾಡಲು ಅನುಕೂಲವಾಗುತ್ತದೆ.

6. ಪಠ್ಯವಸ್ತುವಿನ ಆಯ್ಕೆ : ಪಠ್ಯಕ್ರಮದಲ್ಲಿರುವ ವಿವಿಧ ವಿಷಯಗಳಿಗೆ ವಿಷಯ ವಸ್ತು (ಪಠ್ಯವಸ್ತು) ವನ್ನು ಆಯ್ಕೆ ಮಾಡುವುದು ಮತ್ತೊಂದು ಮುಖ್ಯವಾದ ತತ್ವ. ಇದರಲ್ಲಿ ವಿಷಯ ವಸ್ತುವಲ್ಲದೆ, ಪಠ್ಯ ಚಟುವಟಿಕೆಗಳೂ ಸೇರುತ್ತವೆ. ಪಠ್ಯವಸ್ತು ಶಿಕ್ಷಣೋದ್ದೇಶಗಳನ್ನು ಸಾಧಿಸಲು ಸಹಾಯ ನೀಡುತ್ತದೆ. ಪಠ್ಯವಸ್ತುವಿನ ಸ್ವಲ್ಪಭಾಗ ಹೊಸ ಜ್ಞಾನಾಂಶಗಳನ್ನು ಕಲಿಸುವುದಕ್ಕಾಗಿ ಸೇರಿಸಲ್ಪಡುತ್ತದೆ. ಇನ್ನುಳಿದ ಭಾಗವನ್ನು ಅದರ ಮೂಲಕವಾಗಿ ಮಕ್ಕಳಲ್ಲಿ ಪರಿಕಲ್ಪನೆಗಳನ್ನು, ಕೌಶಲಗಳನ್ನು ಕಲಿಸಲು, ಮನೋಭಾವಗಳು, ಅಭಿರುಚಿಗಳು, ಮೌಲ್ಯಗಳನ್ನು ರೂಪಿಸುವ ಉದ್ದೇಶದಿಂದ ಸೇರಿಸಲ್ಪಟ್ಟಿರುತ್ತದೆ. ಯಾವುದೇ ಪಠ್ಯಕ್ರಮದಲ್ಲಿ ಸಮಾಜದ ಎಲ್ಲ ಸಾಂಸ್ಕೃತಿಕ ಜ್ಞಾನವನ್ನು ಮತ್ತು ಎಲ್ಲಾ ಜ್ಞಾನರಾಶಿಯನ್ನು ಸೇರಿಸಲು ಸಾಧ್ಯವಿಲ್ಲ. ಆದುದರಿಂದ ಪಠ್ಯವಸ್ತುವಿನ ಆಯ್ಕೆ ಅವಶ್ಯಕವೂ ಅನಿವಾರ್ಯವೂ ಆಗುತ್ತದೆ. ಪಠ್ಯವಸ್ತುವನ್ನು ಆಯ್ಕೆ ಮಾಡುವಾಗ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಬೇಕಾಗುತ್ತದೆ.

1. ಆಯ್ಕೆ ಮಾಡುವ ವಿಷಯವಸ್ತು ವ್ಯವಸ್ಥಿತ ಜ್ಞಾನ ಶಾಖೆಯಲ್ಲಿನ ಮಹತ್ವಪೂರ್ಣ ಅಂಶವಾಗಿದೆಯೆ ?
2. ವಿಷಯವಸ್ತು ಸಾಕಷ್ಟು ದೀರ್ಘಕಾಲ ಉಳಿಯುವ ಸಾಧ್ಯತೆಯಿದೆಯೆ?
3. ವಿಷಯವಸ್ತು ಉಪಯುಕ್ತವೆನಿಸುತ್ತದೆಯ ?
4. ಅದು ಕಲಿಯುವ ವ್ಯಕ್ತಿಗಳಲ್ಲಿ ಆಸಕ್ತಿಯನ್ನು ಉಂಟುಮಾಡುತ್ತದೆಯೆ?
5. ವಿಷಯವಸ್ತು ಪ್ರಜಾಸತ್ತಾತ್ಮಕ ಸಮಾಜದ ಬೆಳವಣಿಗೆಗೆ ಸಹಾಯಕವಾಗುತ್ತದೆಯೆ ?

ಪಠ್ಯವಸ್ತುವನ್ನು ಆಯ್ಕೆ ಮಾಡುವಾಗ ಅನೇಕ ವೇಳೆ ಪರಸ್ಪರ ವಿರೋಧದಿಂದ ಕೂಡಿದ ಬೇಡಿಕೆಗಳನ್ನು, ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ದೇಶದ ಸಾಂಸ್ಕೃತಿಕ ಪರಂಪರೆಯನ್ನು ಅದು ಇದ್ದಂತೆಯೆ ಮುಂದಿನ ಪೀಳಿಗೆಗೆ ರವಾನಿಸುವುದು ಈ ರೀತಿಯ ಸಮಸ್ಯೆಯನ್ನುಂಟುಮಾಡುತ್ತದೆ. ಸಾಂಸ್ಕೃತಿಕ ಪರಂಪರೆಯನ್ನು ಯಥಾವತ್ತಾಗಿ ಉಳಿಸಿಕೊಳ್ಳಲು ಪ್ರಯತ್ನಿಸುವುದು, ಇತ್ತೀಚಿನ ಮತ್ತು ಉಪಯುಕ್ತಕರವಾದ ವಿಷಯ ವಸ್ತುವನ್ನು ಪಠ್ಯಕ್ರಮದಲ್ಲಿ ಸೇರಿಸುವ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ. ಪಠ್ಯವಸ್ತುವನ್ನು ಆಯ್ಕೆ ಮಾಡುವಾಗ ಅದರ ಪ್ರಯೋಜನ ಮತ್ತು

ಸಾಮಾಜಿಕ ದಕ್ಷತೆಯನ್ನು ಬೆಳೆಸುವುದರಲ್ಲಿ ಅದರ ಮಹತ್ವಕ್ಕೆ ಗಮನಕ್ಕೆ ಕೊಡಬೇಕು. ಇದೇ ರೀತಿ ಪ್ರಜಾಸತ್ತಾತ್ಮಕ ಆದರ್ಶ ಮತ್ತು ಶಿಕ್ಷಣಾರ್ಥಿಗಳ ಅಭಿರುಚಿಯ ಪ್ರಶ್ನೆಯೂ ಸಮಸ್ಯೆಯನ್ನುಂಟುಮಾಡಬಹುದು.

ಪಠ್ಯವಸ್ತುವಿನ ಆಯ್ಕೆ ಮಾಡುವುದರಲ್ಲಿ ನಾಲ್ಕು ಕ್ರಮಗಳಿವೆ. ಅವೆಂದರೆ— ತೀರ್ಮಾನ ಕ್ರಮ, ಪ್ರಾಯೋಗಿಕ ಕ್ರಮ, ವಿಶ್ಲೇಷಣಾ ಕ್ರಮ ಮತ್ತು ಒಮ್ಮತದ ಕ್ರಮ. ತೀರ್ಮಾನ ಕ್ರಮದಲ್ಲಿ ವಿಷಯ ವಸ್ತುವನ್ನು ಆಯಾ ಜ್ಞಾನ ಶಾಖೆಯ ಪರಿಣತರ ತೀರ್ಮಾನದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ವಿಷಯ ತಜ್ಞರ, ಶಿಕ್ಷಣ ತಜ್ಞರ, ಸಮಾಜ ಸುಧಾರಕರು, ಅನುಭವಿ ಶಿಕ್ಷಕರು ಮತ್ತು ಸಮಾಜದ ಧುರೀಣರು ಯಾವ ವಿಷಯ ವಸ್ತುವನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ಅಧ್ಯಯನ ಯೋಗ್ಯವೆಂದು ತೀರ್ಮಾನಿಸುತ್ತಾರೆಯೋ ಅದನ್ನು ಪಠ್ಯ ಕ್ರಮದಲ್ಲಿ ಸೇರಿಸಲಾಗುತ್ತದೆ. ಪ್ರಾಯೋಗಿಕ ಕ್ರಮದಲ್ಲಿ ಆಯ್ಕೆಮಾಡಿದ ವಿಷಯವಸ್ತು ವನ್ನು ಪ್ರಾಯೋಗಿಕವಾಗಿ ಬೋಧನೆಮಾಡಿದ ನಂತರ ಅದರ ಉಪಯುಕ್ತತೆಯನ್ನು ಮೌಲ್ಯಮಾಪನ ಮಾಡಿದ ನಂತರ ಪಠ್ಯಕ್ರಮದಲ್ಲಿ ಸೇರಿಸಲಾಗುತ್ತದೆ. ಆಯ್ಕೆ ಮಾಡಿದ ಒಂದು ಪ್ರಾಯೋಗಿಕ ಸಮೂಹಕ್ಕೆ ಬೋಧನೆ ಮಾಡಿದ ನಂತರವೇ ವಿಷಯ ವಸ್ತುವನ್ನು ಆಯ್ಕೆಮಾಡಲಾಗುತ್ತದೆ. ಅವಶ್ಯಕತೆಯಿದ್ದಲ್ಲಿ ಪಠ್ಯವಸ್ತುವನ್ನು ಪುನರ್ ವಿಮರ್ಶಿಸಲಾಗುವುದು. ಇದು ದೀರ್ಘಕಾಲ ತೆಗೆದುಕೊಳ್ಳುವುದಾದರೂ, ವೈಜ್ಞಾನಿಕ ವಾದ ವಿಧಾನವಾಗಿದೆ. ಮೂರನೇ ಕ್ರಮವಾದ ವಿಶ್ಲೇಷಣಾಕ್ರಮ ಉಪಯುಕ್ತತೆಯ ತತ್ವಕ್ಕೆ ಸಂಬಂಧಿಸಿದೆ. ವಿದ್ಯಾರ್ಥಿಗಳಲ್ಲಿ ರೂಪಿಸಬೇಕಾದ ವರ್ತನೆಯನ್ನು ಅಂದರೆ ತಿಳಿದುಕೊಳ್ಳಬೇಕಾದ ಜ್ಞಾನಾಂಶಗಳು, ಪರಿಕಲ್ಪನೆಗಳು, ಬಳಸಿಕೊಳ್ಳ ಬೇಕಾದ ಕೌಶಲ್ಯಗಳು, ಮನೋಭಾವಗಳಾಗಿ ವಿಶ್ಲೇಷಿಸಿ, ನಂತರ ಇವುಗಳನ್ನು ಕಲಿಸಲು ಬೇಕಾದ ಜ್ಞಾನಾಂಶಗಳನ್ನೂ, ಚಟುವಟಿಕೆಗಳನ್ನೂ ಆಯ್ಕೆಮಾಡಿ ಪಠ್ಯ ಕ್ರಮದಲ್ಲಿ ಸೇರಿಸಲಾಗುತ್ತದೆ. ಶೈಕ್ಷಣಿಕ ಚಟುವಟಿಕೆಗಳ ವಿಶ್ಲೇಷಣೆ (activity analysis) ಮತ್ತು ಕಾರ್ಯ ವಿಶ್ಲೇಷಣೆ (job analysis) ಈ ಕ್ರಮದ ಉದಾಹರಣೆ ಗಳಾಗಿವೆ. ಕಡೆಯದಾದ ಒಮ್ಮತದ ಕ್ರಮದಲ್ಲಿ ವಿಷಯ ವಸ್ತುವನ್ನು ಸಾರ್ವಜನಿಕರ ಒಟ್ಟು ಅಭಿಪ್ರಾಯದ ಆಧಾರದ ಮೇಲೆ ಆಯ್ಕೆಮಾಡಲಾಗುತ್ತದೆ. ಸಮಾಜದಲ್ಲಿ ಹೆಚ್ಚಿನ ಪೋಷಕರು ಯಾವುದಾದರೂ ಒಂದು ಹೊಸ ವಿಷಯವನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಅಭಿಪ್ರಾಯಪಟ್ಟರೆ ಅದಕ್ಕೆ ಮನ್ನಣೆ ನೀಡಬೇಕಾಗುತ್ತದೆ.

7. **ಪಠ್ಯಕ್ರಮದ ತ್ರಿಲಕ್ಷಣಗಳು** : ಆಲ್‌ಬರ್ಟ್ ಆಲಿವರ್ ಯಾವುದೇ ಪಠ್ಯಕ್ರಮ ಮೂರು ಮುಖ್ಯ ಲಕ್ಷಣಗಳನ್ನು ಹೊಂದಿರಬೇಕೆಂದು ಅಭಿಪ್ರಾಯ ಪಡುತ್ತಾನೆ. ಇವುಗಳನ್ನು ಅವನು 'ಪಠ್ಯಕ್ರಮದ ಎ ಬಿ ಸಿ.' (ABC of curriculum) ಎಂದು ಕರೆದಿದ್ದಾನೆ. ಸುಸಂಬದ್ಧತೆ (Articulation), ಸಮತೋಲನ (Balance) ಮತ್ತು ನಿರಂತರತೆ (Continuity) ಇವೇ ಆ ಮೂರು ಲಕ್ಷಣಗಳು.

ಪಠ್ಯಕ್ರಮದ ವಿವಿಧ ಅಂಗಗಳ, ವಿಷಯಗಳ ನಡುವೆ ಮತ್ತು ಬೇರೆ ಬೇರೆ ಸ್ತರದ ಪಠ್ಯಕ್ರಮಗಳ ನಡುವೆ ಇರಬೇಕಾದ ಪಾರಸ್ಪರಿಕ ಸಂಬಂಧವನ್ನು ಸುಸಂಬದ್ಧತೆ ಎನ್ನುತ್ತಾರೆ. ಮೊದಲನೆಯದನ್ನು ಸಮಾಂತರ ಸುಸಂಬದ್ಧತೆಯೆಂದೂ (Horizontal Articulation) ಎರಡನೆಯದನ್ನು ಲಂಬೀಯ ಸುಸಂಬದ್ಧತೆ (Vertical Articulation) ಎಂದು ಕರೆಯುತ್ತಾರೆ ಸಮಾಂತರ ಸುಸಂಬದ್ಧತೆಯಲ್ಲಿ ವಿವಿಧ ವಿಷಯ (Subjects) ಗಳ ನಡುವೆ ಇರುವ ಸಂಬಂಧ ಅಥವಾ ಅಂತರಶಾಸ್ತ್ರೀಯ ಸಂಬಂಧ (Inter disciplinarity), ಸಿದ್ಧಾಂತ ಮತ್ತು ಪ್ರಯೋಗದ ನಡುವಣ ಸಂಬಂಧ, ಶಾಲೆಯಲ್ಲಿನ ಕಲಿಕೆಗೂ ಹೊರಗಣ ಕಲಿಕೆಗೂ ಇರಬೇಕಾದ ಸಂಬಂಧ, ವಿಜ್ಞಾನ ಮತ್ತು ಮಾನವಿಕಗಳ ನಡುವೆ ಸಂಬಂಧ ಮುಂತಾದ ಪ್ರಶ್ನೆಗಳು ಸೇರುತ್ತವೆ. ಲಂಬೀಯ ಸುಸಂಬದ್ಧತೆಯು ಮಕ್ಕಳ ಮಾನಸಿಕ ದೈಹಿಕ ವಿಕಾಸದ ದಿಶೆಯನ್ನು ವಯಸ್ಸು ಮುಂದುವರಿದಂತೆ ಅಧಿಕವಾಗುವ ಸಾಮಾಜಿಕ ನಿರೀಕ್ಷೆಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಶಿಕ್ಷಣದ ಒಂದು ಮಟ್ಟದಿಂದ ಮುಂದಿನ ಮಟ್ಟಕ್ಕೆ ಮುಂದುವರಿದಂತೆ ಪಠ್ಯಕ್ರಮವು ಆಯಾ ಮಟ್ಟದ ಶಿಕ್ಷಣಾರ್ಥಿಗಳ ಅವಶ್ಯಕತೆಗಳಿಗೆ ಸ್ಪಂದಿಸುವಂತಿರಬೇಕು. ಸಮತೋಲನ ಪಠ್ಯಕ್ರಮದ ರಚನಾತ್ಮಕ ವಿನ್ಯಾಸಕ್ಕೆ ಸಂಬಂಧಿಸಿದೆ. ಪಠ್ಯಕ್ರಮದ ವಿವಿಧ ಅಂಗಗಳ ನಡುವೆ, ಪಠ್ಯಕ್ರಮವು ಸಮಾಜದ ವಿವಿಧ ಬೇಡಿಕೆಗಳನ್ನು ಪೂರೈಸುವುದರಲ್ಲಿ ಹಿತಮಿತವಾದ ಸಮತೋಲನವಿರಬೇಕು. ಯಾವುದೇ ಪಠ್ಯಕ್ರಮ ಏಕಮುಖವಾಗಿರಬಾರದು. ಒಂದು ಉತ್ತಮ ಪಠ್ಯಕ್ರಮದಲ್ಲಿ ಪ್ರಧಾನ ಮತ್ತು ಗೌಣ ವಿಷಯಗಳ, ವಿವಿಧ ಭಾಷೆಗಳ (ರಾಜ್ಯಭಾಷೆ, ಮಾತೃಭಾಷೆ, ರಾಷ್ಟ್ರಭಾಷೆ, ಅಂತರ ರಾಷ್ಟ್ರೀಯಭಾಷೆ, ಪ್ರಾಚೀನಭಾಷೆ) ಅಧ್ಯಯನ. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಬೇಡಿಕೆಗಳು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಆವಶ್ಯಕತೆಗಳು, ಕಡ್ಡಾಯ ಮತ್ತು ಐಚ್ಛಿಕ ಅಧ್ಯಯನ ವಿಷಯಗಳು, ಸಾಮಾನ್ಯ ಶಿಕ್ಷಣ ಮತ್ತು ವಿಶೇಷಜ್ಞಾನ ಶಿಕ್ಷಣ—ಇವುಗಳ ನಡುವೆ ಸೂಕ್ತ ಸಮತೋಲನವಿರಬೇಕು. ಶಿಕ್ಷಣದ ಪ್ರತಿಯೊಂದು ಘಟ್ಟದಲ್ಲಿ ಮತ್ತು ವಿವಿಧ ಘಟ್ಟಗಳಲ್ಲಿ ಪಠ್ಯವಸ್ತುವನ್ನು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಕ್ರಮಾಗತಗೊಳಿಸುವುದೆ ಮೂರನೆಯ ಲಕ್ಷ್ಯವಾದ ನಿರಂತರತೆ, (Sequencing) ಇದರಿಂದ ಕಲಿಕೆ ಕ್ರಮಾಗತವಾಗಿ ಮುಂದುವರಿಯಲು ಸಾಧ್ಯವಾಗುತ್ತದೆ.

8. ಪಠ್ಯವಸ್ತುವಿನ ಸಂರಚನೆ ಮತ್ತು ಕ್ರಮಾಗತಗೊಳಿಸುವಿಕೆ: ಪಠ್ಯವಸ್ತುವನ್ನು ಆಯ್ಕೆಮಾಡಿದ ನಂತರ ಅದನ್ನು ಅರ್ಥಪೂರ್ಣವಾಗಿ ವಿನ್ಯಾಸಗೊಳಿಸಿ, ಕ್ರಮಾಗತವಾಗಿ ವ್ಯವಸ್ಥಿತಗೊಳಿಸಬೇಕು. ಪಠ್ಯಪುಸ್ತಕಗಳು, ಅಧ್ಯಾಪಕರ ಕೈಪಿಡಿಗಳು, ಸಂಪನ್ಮೂಲ ಗ್ರಂಥಗಳು ಈ ದಿಶೆಯಲ್ಲಿ ಅಧ್ಯಾಪಕನಿಗೆ ನೆರವು ನೀಡುತ್ತವೆ ಪಠ್ಯಕ್ರಮದ ವಿವರಗಳನ್ನು ಕ್ರಮಾಗತವಾಗಿ, ಅರ್ಥಪೂರ್ಣವಾಗಿ ಸಿದ್ಧಪಡಿಸಬೇಕು. ಇದೇ ಅಭ್ಯಾಸಕ್ರಮ ಅಥವಾ ಸಿಲಬಸ್ ಎನಿಸಿಕೊಳ್ಳುತ್ತದೆ.

ಅಧ್ಯಯನ ವಿಷಯದಲ್ಲಿರುವ ಪಾರಸ್ಪರಿಕ ಸಂಬಂಧಗಳು, ಪಾರಸ್ಪರಿಕ ಅವಲಂಬನೆ, ಬೇರೆ ವಿಷಯಗಳೊಡನೆ ಒಂದು ನಿರ್ದಿಷ್ಟ ವಿಷಯದ ಸಂಬಂಧ—ಈ ಅಂಶಗಳ ಅಧ್ಯಯನ ವಿಷಯದ ಸಂರಚನೆಗೆ ಸಂಬಂಧಿಸಿವೆ ಪ್ರತಿಯೊಂದು ಅಧ್ಯಯನ ವಿಷಯಕ್ಕೂ ವಿಶಿಷ್ಟವಾದ ಸಂರಚನೆ ಇರುತ್ತದೆ (ಉದಾಹರಣೆಗೆ ಗಣಿತಕ್ಕೂ, ಸಮಾಜ ಶಾಸ್ತ್ರಕ್ಕೂ ಅವುಗಳ ಸಂರಚನೆಯಲ್ಲಿ ವ್ಯತ್ಯಾಸವಿದೆ). ವಿಷಯ ವಸ್ತುವಿನ ಪರಿಕಲ್ಪನಾತ್ಮಕ ಸ್ವರೂಪ ಮತ್ತು ತಾರ್ಕಿಕ ಸ್ವರೂಪವು ಸಹ ಅದರ ಸಂರಚನೆಯನ್ನು ನಿರ್ಧರಿಸುತ್ತದೆ. ಜೆರೋಂಬ್ರೂನರ್, ಆಸುಬೆಲ್ ಮುಂತಾದ ಶೈಕ್ಷಣಿಕ ಮನೋವಿಜ್ಞಾನಿಗಳು ವಿವಿಧ ವಿಷಯ ವಸ್ತುಗಳ ಸಂರಚನಾತ್ಮಕ ಲಕ್ಷಣಗಳನ್ನು ಅಧ್ಯಯನ ಮಾಡಿ ಅವುಗಳನ್ನು ಬೋಧನೆ ಹೇಗೆ ವ್ಯವಸ್ಥಿತಗೊಳಿಸಬೇಕೆಂಬುದರ ತತ್ವಗಳನ್ನು ರೂಪಿಸಿದ್ದಾರೆ. ತರಗತಿಯ ಅಧ್ಯಾಪಕರು ತಾವು ಬೋಧಿಸುವ ವಿಷಯಗಳನ್ನು ಅರ್ಥಪೂರ್ಣವಾಗಿಯೂ, ಮನೋವೈಜ್ಞಾನಿಕ ತತ್ವಗಳ ಆಧಾರದ ಮೇಲೂ ಸಂರಚಿಸಿಕೊಳ್ಳಬೇಕು. ಕ್ರಮಾಗತಗೊಳಿಸಿಕೊಳ್ಳುವಿಕೆ ವಿಷಯ ವಸ್ತುವನ್ನು ಲಂಬೀಯವಾಗಿ (ಸರಳತೆಯಿಂದ ಕ್ಲಿಷ್ಟತೆಯ ಕಡೆಗೆ) ವ್ಯವಸ್ಥೆಗೊಳಿಸಿಕೊಳ್ಳುವುದಾಗಿದೆ. ಪಿಯಾಜೆ, ಬ್ರೂನರ್ ಮತ್ತು ಗ್ಯಾನೆ ಮಕ್ಕಳಲ್ಲಿ ಸಂಜ್ಞಾನಾತ್ಮಕ ಸಾಮರ್ಥ್ಯಗಳು ವಿವಿಧ ಹಂತಗಳಲ್ಲಿ ವಿಕಾಸವಾಗುತ್ತವೆಯೆಂಬುದನ್ನು ಪ್ರತಿಪಾದಿಸಿದ್ದಾರೆ. ವಿಷಯವಸ್ತು ಮತ್ತು ಕಲಿಕಾನುಭವಗಳು ಈ ವಿವಿಧ ಹಂತಗಳಿಗೆ ಸರಿಹೊಂದುವಂತಿರಬೇಕಾಗುತ್ತದೆ. ಪ್ರಾಥಮಿಕ ಹಂತದಲ್ಲಿಯೂ ಈ ತತ್ವ ಬಹಳ ಮಹತ್ವದ್ದಾಗುತ್ತದೆ. ಕಲಿಕಾನುಭವಗಳನ್ನು (ಅಧ್ಯಯನ ವಿಷಯಗಳು, ಚಟುವಟಿಕೆಗಳು) ಸರಿಯಾಗಿ ಕ್ರಮಾಗತಗೊಳಿಸಿ ವ್ಯವಸ್ಥೆಗೊಳಿಸುವುದರಿಂದ ಕಲಿಕೆ ಸುಗಮಗೊಳ್ಳುವುದಲ್ಲದೆ, ಕಲಿಕೆಯ ವೇಗವೂ ಹೆಚ್ಚುತ್ತದೆ. ಕಲಿತ ವಿಷಯದ ಸ್ಮರಣೆ ಹೆಚ್ಚುತ್ತದೆ ಮತ್ತು ಕಲಿಕೆಯ ಸಮಗ್ರತೆ ಉತ್ತಮಗೊಳ್ಳುತ್ತದೆ.

9. ಪಠ್ಯಕ್ರಮವನ್ನು ಅನ್ವಯಗೊಳಿಸುವುದು (ಜಾರಿಗೊಳಿಸುವುದು) ಪಠ್ಯಕ್ರಮವನ್ನು ಎಷ್ಟೇ ಪ್ರಭಾವಯುತವಾಗಿ ರೂಪಿಸಿದ್ದರೂ ಅದನ್ನು ಕಾರ್ಯಾನ್ವಯ ಮಾಡಲು ಸೂಕ್ತವಾದ ಪರಿಸರದ ಸಿದ್ಧತೆಯಿಲ್ಲದಿದ್ದರೆ, ಆವಶ್ಯಕ ಪರಿಕರಗಳಿಲ್ಲದಿದ್ದಲ್ಲಿ ಅದು ವಿಫಲಗೊಳ್ಳುತ್ತದೆ. ವಿಶಾಲವಾದ ಹಾಗೂ ಸುಸಜ್ಜಿತವಾದ, ಉತ್ತಮ ವಿನ್ಯಾಸದಿಂದ ಕೂಡಿದ ಶಾಲಾ ಕಟ್ಟಡಗಳು, ತರಗತಿಗಳು, ಪ್ರಯೋಗಶಾಲೆ ಕಟ್ಟಡ, ಗ್ರಂಥಾಲಯ ಕಟ್ಟಡ, ರಂಗಮಂದಿರ, ಉಪಹಾರ ಗೃಹ, ಆಟದ ಮೈದಾನ ಇವೆಲ್ಲವೂ ಪರಿಸರದ ಸಿದ್ಧತೆಯಲ್ಲಿ ಸೇರುತ್ತವೆ. ಉತ್ತಮವಾದ ಗ್ರಂಥಭಂಡಾರ, ಕುರ್ಚಿ, ಮೇಜು ಮತ್ತು ಇತರ ಪೀಠೋಪಕರಣಗಳ, ಪ್ರಯೋಗಶಾಲಾ ಸಾಮಗ್ರಿ, ದೃಶ್ಯ-ಶ್ರಾವ್ಯ ಉಪಕರಣಗಳು ಮತ್ತು ಇತರ ಬೋಧನೋಪಕರಣಗಳು, ಕ್ರೀಡಾ ಸಾಮಗ್ರಿ, ಗಣಕಯಂತ್ರ ಮತ್ತು ಪ್ರಕ್ಷೇಪಕ ಉಪಕರಣಗಳು (ಪ್ರೊಜೆಕ್ಟರ್, ಸ್ಲೈಡ್ ಪ್ರೊಜೆಕ್ಟರ್, ಓವರ್ ಹೆಡ್ ಪ್ರೊಜೆಕ್ಟರ್ ಇತ್ಯಾದಿ), ಟೆಲಿವಿಷನ್, ಟೇಪ್ ರೆಕಾರ್ಡರ್

ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳು ಇವೆಲ್ಲವೂ ಪರಿಕರ ಸಾಮಗ್ರಿಗಳಲ್ಲಿ ಸೇರುತ್ತವೆ. ಇವು ಪಠ್ಯಕ್ರಮದ ಪ್ರಭಾವಯುತ ಕಾರ್ಯಾನ್ವಯಕ್ಕೆ ಆವಶ್ಯಕವಾಗುತ್ತವೆ. ಈ ರೀತಿಯ ಭೌತಿಕ ಪರಿಸರವಲ್ಲದೆ, ಸೂಕ್ತವಾದ ಸಾಮಾಜಿಕ ಪರಿಸರವೂ ಪಠ್ಯಕ್ರಮದ ಸಫಲತೆಗೆ ಪೂರಕವಾಗುತ್ತದೆ. ವಿದ್ಯಾರ್ಥಿಗಳ ನಡುವೆ, ವಿದ್ಯಾರ್ಥಿ-ಅಧ್ಯಾಪಕರ ನಡುವೆ, ಅಧ್ಯಾಪಕರು-ಆಡಳಿತಗಾರರ ನಡುವೆ ಸೌಹಾರ್ದಪೂರ್ಣ ಸಂಬಂಧ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ. ಇದನ್ನು ಸಾಮಾಜಿಕ-ಸಂವೇಗಾತ್ಮಕ ವಾತಾವರಣ (Social-emotional climate) ಎಂದು ಕರೆಯಲಾಗಿದೆ.

10. **ಬೋಧನಾ ಮಾದರಿಗಳು ಮತ್ತು ವಿಧಾನಗಳು:** ಅಧ್ಯಾಪಕರು ತರಗತಿಯಲ್ಲಿನ ತಮ್ಮ ಬೋಧನೆಯ ಮೂಲಕ ಪಠ್ಯಕ್ರಮವನ್ನು ಕಾರ್ಯಾನ್ವಯಗೊಳಿಸಲು ಅನೇಕ ರೀತಿಯ ಬೋಧನಾ ವಿಧಾನಗಳನ್ನು ಉಪಯೋಗಿಸುತ್ತಾರೆ. ಈ ವಿಧಾನಗಳು ಪ್ರಭಾವಯುತವಾಗಿಯೂ, ಕ್ರಮಬದ್ಧವಾಗಿಯೂ ಇಲ್ಲದಿದ್ದಲ್ಲಿ ಪಠ್ಯಕ್ರಮ ವಿಫಲಗೊಳ್ಳುತ್ತದೆ. ಬೋಧನೆಗೆ ಒಂದು ತಾತ್ವಿಕ ಆಧಾರವನ್ನು ನೀಡುವ ಬೋಧನಾ ವ್ಯವಸ್ಥೆಗೆ ಬೋಧನಾ ಮಾದರಿ (model of teaching) ಎಂದು ಹೆಸರು. ಇಂದು ಅಧ್ಯಾಪಕರಿಗೆ ಇಂತಹ ಅನೇಕ ಬೋಧನಾ ಮಾದರಿಗಳು ಲಭ್ಯವಿವೆ. ಉಪನ್ಯಾಸ ವಿಧಾನ, ಪ್ರಯೋಗ ವಿಧಾನ, ಪ್ರಾತ್ಯಕ್ಷಿಕ ವಿಧಾನ, ಪ್ರಶ್ನೋತ್ತರ ವಿಧಾನ ಮುಂತಾದ ಪರಿಚಿತ ವಿಧಾನಗಳಲ್ಲದೆ, ಶೈಕ್ಷಣಿಕ ಮನೋವಿಜ್ಞಾನಗಳು ಅನ್ವೇಷಣ ವಿಧಾನ, ಪರಿಶೋಧನ ವಿಧಾನ, ಸಮೂಹ ಬೋಧನೆ, ಗಣಕ ಯಂತ್ರ ಸಹಾಯಕ ಬೋಧನೆ (Computer Assisted Instruction) ಮುಂತಾದ ಅನೇಕ ನೂತನ ಬೋಧನ ವಿಧಾನಗಳನ್ನು ರೂಪಿಸಿದ್ದಾರೆ. ಸಾಂಪ್ರದಾಯಿಕ ಬೋಧನ ವಿಧಾನಗಳನ್ನು ಪರಿಷ್ಕರಿಸಲಾಗಿದೆ. ಅಧ್ಯಾಪಕ ಇವುಗಳಲ್ಲಿ ತನಗೆ ಸೂಕ್ತವೆನಿಸುವ ವಿಧಾನಗಳನ್ನು ಆಯ್ಕೆಮಾಡಿಕೊಳ್ಳಬಹುದು. ಟ್ಯುಟೋರಿಯಲ್ ವಿಧಾನ, ಸೆಮಿನಾರ್‌ಗಳು, ಸಮೂಹ ಚರ್ಚೆ, ಮಾಡ್ಯೂಲ್ ಉಪಕ್ರಮ, ಯೋಜಿತ ಬೋಧನೆ, ಕಲಿಕೆಯ ಯಂತ್ರಗಳು, ಕಾರ್ಯಾಗಾರ ವಿಧಾನ, ದೂರದರ್ಶನ ಮತ್ತು ರೇಡಿಯೋ ಪಾಠಗಳು—ಇವೆಲ್ಲವೂ ಉತ್ಸಾಹೀ ಅಧ್ಯಾಪಕರಿಗೆ ಲಭ್ಯವಿವೆ. ತನ್ನ ಬೋಧನಾ ವಿಷಯಕ್ಕೆ ಅತ್ಯಂತ ಸೂಕ್ತವಾದ ಬೋಧನಾ ಮಾದರಿಯನ್ನು, ಬೋಧನಾ ವಿಧಾನಗಳನ್ನು ಅಧ್ಯಾಪಕರು ಆಯ್ಕೆಮಾಡಿಕೊಂಡು ಉತ್ತಮ ಬೋಧನೆಯ ಮೂಲಕ ಪಠ್ಯಕ್ರಮವನ್ನು ಸಫಲಗೊಳಿಸಬಹುದು.

11. **ಬೋಧನಾ ಕಾಲಾವಧಿಯ ವಿಭಜನೆ:** ಪಠ್ಯಕ್ರಮವನ್ನು ರೂಪಿಸುವಾಗ ಪ್ರತಿ ಮಟ್ಟದಲ್ಲಿಯೂ ಒಟ್ಟು ಬೋಧನಾ-ಕಲಿಕೆಯ ಕಾಲ ಎಷ್ಟಿರಬೇಕು, ಯಾವ ಯಾವ ವಿಷಯಗಳಿಗೆ ಎಷ್ಟೆಷ್ಟು ಬೋಧನಾಕಾಲವಿರಬೇಕು, ಒಂದು ವಿಷಯದ ಬೇರೆ ಬೇರೆ ಪ್ರಕರಣಗಳಿಗೆ ಅಥವಾ ಘಟಕಗಳಿಗೆ ಎಷ್ಟೆಷ್ಟು ಕಾಲವನ್ನು

ನಿಗದಿಪಡಿಸಬೇಕು ಎನ್ನುವುದನ್ನು ತೀರ್ಮಾನಿಸುತ್ತದೆ. ವಿಷಯವಸ್ತುವಿನ ಮಹತ್ವ, ಸಂಕೀರ್ಣತೆಯನ್ನು ಅವಲಂಬಿಸಿ ಬೋಧನಾ ಕಾಲವನ್ನು ನಿರ್ಣಯಿಸಲಾಗುತ್ತವೆ. ಭಾಷಾಬೋಧನೆ, ಮಾನವಿಕಗಳ ಬೋಧನೆ ವಿಜ್ಞಾನ ವಿಷಯಗಳ ಬೋಧನೆ. ಗಣಿತ ಬೋಧನೆ, ಕಲೆ ಮತ್ತು ಸಂಗೀತ ಚಟುವಟಿಕೆಗಳು, ಪ್ರಯೋಗಶಾಲೆಯ ಕೆಲಸ, ಸಮೂಹ ಕಾರ್ಯಗಳು, ಪಠ್ಯೇತರ ಚಟುವಟಿಕೆಗಳು, ಮೇಲ್ವಿಚಾರಿತ ಸ್ವ-ಅಧ್ಯಯನ, ನಿಯೋಜಿತ ಕಾರ್ಯಗಳು ಇವುಗಳಿಗಿರುವ ಮಹತ್ವದ ಅನುಪಾತವನ್ನು ಅನುಸರಿಸಿ ಕಾಲವನ್ನು ನಿಗದಿಪಡಿಸಲಾಗುತ್ತದೆ. ಶಾಲಾ–ಕಾಲೇಜು ಮಟ್ಟದಲ್ಲಿ ಕಾಲನಿಗದಿಯನ್ನು ವೇಳಾಪಟ್ಟಿಯ ಮೂಲಕ ಮಾಡುತ್ತಾರೆ. ವೇಳಾಪಟ್ಟಿಯನ್ನು ರಚಿಸುವಾಗ ಕೆಲವು ತತ್ವಗಳನ್ನು ಅನುಸರಿಸಬೇಕು. ತರಗತಿಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ ದಿನದಲ್ಲಿ ಲಭ್ಯವಿರುವ ಬೋಧನಾ ಅವಧಿ, ಇಡೀ ವರ್ಷದಲ್ಲಿ ಲಭ್ಯವಿರುವ ಬೋಧನಾ ಅವಧಿ, ಬೋಧಿಸಬೇಕಾದ ವಿಷಯಗಳು; ಬೋಧನಾವಧಿ (Period) ಯ ಗಾತ್ರ, ವಿವಿಧ ವಿಷಯಗಳ ಮಹತ್ವ, ಕಠಿಣತೆಯ ಮಟ್ಟ, ದಿನದ ಬೇರೆ ಬೇರೆ ಕಾಲದ ಪ್ರಭಾವ. ಈ ಎಲ್ಲಾ ಅಂಶಗಳನ್ನು ವೇಳಾಪಟ್ಟಿಯನ್ನು ರಚಿಸುವಾಗ ಗಮನಕ್ಕೆ ತೆಗೆದುಕೊಳ್ಳಬೇಕು. ಬೋಧನ ಅವಧಿಯ ಸೂಕ್ತ ವಿಭಜನೆ ಮತ್ತು ಉತ್ತಮವಾದ ವೇಳಾ ಪಟ್ಟಿಯೂ ಪಠ್ಯಕ್ರಮದ ಸಫಲತೆಯ ಮೇಲೆ ಪ್ರಭಾವ ಬೀರಬಲ್ಲುವು.

12. **ಪಠ್ಯಕ್ರಮ ಮೌಲ್ಯಮಾಪನ ಮತ್ತು ನವೀಕರಣ:** ಪಠ್ಯಕ್ರಮವನ್ನು ಕಾರ್ಯಾನ್ವಯಗೊಳಿಸಿದ ನಂತರ ಅದು ಎಷ್ಟರಮಟ್ಟಿಗೆ ಪ್ರಭಾವಯುತವಾಗಿದೆ, ಎಷ್ಟರಮಟ್ಟಿಗೆ ನಿರೂಪಿತ ಶಿಕ್ಷಣೋದ್ದೇಶಗಳ ಸಾಧನೆಗೆ ಸಹಾಯಕವಾಗಿದೆ ಎನ್ನುವುದನ್ನು ತಿಳಿಯಲು ಮತ್ತು ಅದರಲ್ಲಿರಬಹುದಾದ ನ್ಯೂನತೆಗಳನ್ನು ತಿಳಿದುಕೊಳ್ಳಲು ಅದರ ಮೌಲ್ಯಮಾಪನ ಮಾಡಬೇಕಾಗುತ್ತದೆ. ಪಠ್ಯಕ್ರಮ ಮೌಲ್ಯಮಾಪನ ಮಾಡಲು ಅನೇಕ ಮೌಲ್ಯಮಾಪನ ಮಾದರಿಗಳನ್ನು ರೂಪಿಸಲಾಗಿದೆ ಪಠ್ಯಕ್ರಮದ ಮೌಲ್ಯಮಾಪನವನ್ನು ಒಂದು ಸೂಕ್ತ ಕಾಲಾವಧಿ–ಐದು ವರ್ಷ ಅಥವಾ ಹತ್ತು ವರ್ಷಗಳ–ನಂತರ ಕೈಗೊಳ್ಳಬೇಕು. ನಿರ್ದಿಷ್ಟ ಕಾಲಾವಧಿಯ ನಂತರ ಮೌಲ್ಯಮಾಪನ ಮಾಡಿದರೆ ಸಂಕಲಿತ ಮೌಲ್ಯಮಾಪನ ಮಾದರಿ (Summative Evalluation Model) ಎನ್ನುತ್ತಾರೆ. ಪಠ್ಯಕ್ರಮವನ್ನು ರೂಪಿಸುವಾಗಲೇ ಅದರ ವಿವಿಧ ಹಂತಗಳಲ್ಲಿ ಅದರ ಮೌಲ್ಯಮಾಪನ ಮಾಡುತ್ತಾ ಹೋದರೆ ಅದನ್ನು ರೂಪಣ ಮೌಲ್ಯಮಾಪನ ಮಾದರಿ (Formativr Evaluation Model) ಎನ್ನುತ್ತಾರೆ. ಪಠ್ಯಕ್ರಮ ಮೌಲ್ಯಮಾಪನವನ್ನು ತರಗತಿ, ಶಾಲೆ–ಕಾಲೇಜು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ಕೈಗೊಳ್ಳಬೇಕು. ಪಠ್ಯಕ್ರಮದ ವಿವಿಧ ಅಂಶಗಳನ್ನು ಅಂದರೆ ಪಠ್ಯ ಚಟುವಟಿಕೆಗಳು ಪಠ್ಯೇತರ ಚಟುವಟಿಕೆಗಳು, ಬೋಧರ ವಿಧಾನ, ಮೌಲ್ಯಮಾಪನ ವಿಧಾನ ಇತ್ಯಾದಿ ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡಬೇಕು. ಮೌಲ್ಯಮಾಪನದ ನಿರ್ಧಾರಕಾಂಶಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಿ ಸ್ಪಷ್ಟವಾಗಿ ನಿರೂಪಿಸಿಕೊಳ್ಳ

ಬೇಕಾದುದು ಆವಶ್ಯಕ, ಮೌಲ್ಯಮಾಪನಕ್ಕೆ ಬೇಕಾದ ಮಾಹಿತಿಯನ್ನು ವಿದ್ಯಾರ್ಥಿಗಳ ಸಂಖ್ಯೆ, ವಿದ್ಯಾರ್ಥಿಗಳ ಸಾಧನೆಯ ಮಟ್ಟ, ಅವರು ತೆಗೆದುಕೊಂಡ ಪದವಿಗಳು, ಉತ್ಪಾದಿಸಿದ ಉತ್ಪನ್ನಗಳು, ಅಧ್ಯಾಪಕರು, ಪೋಷಕರು, ಪರಿಣತರು, ಸಮಾಜದ ಧುರೀಣರು ಮತ್ತು ವಿದ್ಯಾರ್ಥಿಗಳ ಅಭಿಪ್ರಾಯಗಳು, ಸಂಶೋಧನೆಗಳು ಮತ್ತು ಪ್ರಾಯೋಜನೆಗಳು ಇವುಗಳಿಂದ ಸಂಗ್ರಹಿಸಿಕೊಳ್ಳಬೇಕು. ಸಂಗ್ರಹಿತ ಮಾಹಿತಿಯನ್ನು ವಿಶ್ಲೇಷಿಸಿ ಪಠ್ಯಕ್ರಮದ ಪ್ರಭಾವಶೀಲತೆಯನ್ನು ನಿರ್ಧರಿಸಬೇಕು. ಇದಾದ ನಂತರ ಪಠ್ಯಕ್ರಮವನ್ನು ಪರಿಷ್ಕರಿಸುವ, ನವೀಕರಿಸುವ ಕಾರ್ಯ ಕೈಗೊಳ್ಳಬೇಕು. ಪಠ್ಯಕ್ರಮ ನವೀಕರಣದಲ್ಲಿ ಹಳತಾದ ಅಂಶಗಳನ್ನು ತೆಗೆದುಹಾಕಿ, ಹೊಸ ಹೊಸ ಅಂಶಗಳನ್ನು ಸೇರಿಸಿ, ಪಠ್ಯವಸ್ತುವನ್ನು ಪುನರ್ ವ್ಯವಸ್ಥೆಗೊಳಿಸಿ ಪಠ್ಯಕ್ರಮ ಪ್ರಸ್ತುತ ಪರಿಸ್ಥಿತಿಗೆ ಹೊಂದುವಂತೆ ಮಾಡಬೇಕು.

ಹೀಗೆ ಪಠ್ಯಕ್ರಮ ಯೋಜನೆ/ವಿಕಾಸ ಬಹಳ ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಸಾಕಷ್ಟು ದೀರ್ಘಕಾಲ ತೆಗೆದುಕೊಳ್ಳುವ ಈ ಪ್ರಕ್ರಿಯೆಗೆ ತರಗತಿಯ ಅಧ್ಯಾಪಕರ, ಆಡಳಿತಗಾರರ, ವಿಷಯತಜ್ಞರ, ಶಿಕ್ಷಣತಜ್ಞರ ಮತ್ತು ಪೋಷಕರ ಸಹಕಾರ ಅಗತ್ಯವಾಗುತ್ತದೆ. ಈ ಪ್ರಕ್ರಿಯೆಯ ಪ್ರತಿಯೊಂದು ಹಂತವೂ ಮಹತ್ವಪೂರ್ಣವಾದುದು, ಪ್ರತಿಯೊಂದು ಹಂತದಲ್ಲೂ ಕೆಲವು ನಿರ್ದಿಷ್ಟ ತತ್ವಗಳನ್ನು ಅನುಸರಿಸಬೇಕು.

ಆಧಾರ ಗ್ರಂಥಗಳು

1. Smith B Othanal. Stanley William O. and Shores J. Harlan—*Fundamentals of Curriculum Development*, Harcourt, Brace & World Inc. New York, Revised Edition, 1957.
2. Saylor J. Galen and Alexander William M.—*Planning Curriculum for Schools*, Holt, Renehart and Winston Inc. New York, 1974.
3. Oliver Albert. I.—*Curriculum Improvement*, Second Edition, Harper and Row, New York, 1977.
4. Gwywn J. Minor—*Curriculum and Social Trends*, Third Edition, The Macmillan Co., New York, 1960.
5. Neagley Ross L. and Evans N. Dean—*Handbook for Effective Curriculum Development*, Prentice Hall Inc., Englewood-Cliffs, New Jersey, 1967.
6. Fyerrison Kathryn V. Fiorino—A. John and Nowak Arlene—*Supervision and Curriculum Renewal—A Systems Approach*. Appleton-Century-Crofts, New York, 1970.
7. Dressel Paul L.—*The Under-graduate Curriculum in Higher Education*. The Centre for Applied Research in Education. Washington D C, 1963.
8. Harold Johnson J.—*Foundations of Curriculum*, Charles E. Merritt Publishing Company, Columbus, Ohio, 1968.

ಡಾ. ಟಿ. ಪದ್ಮಿನಿ

ಶಿಕ್ಷಣದಲ್ಲಿ ವ್ಯವಸ್ಥಾ ಉಪಕ್ರಮ

ಮಾನವನ ಬದುಕಿನಲ್ಲಿ ಶಿಕ್ಷಣದ ಪಾತ್ರ ವಿಶೇಷವಾದುದು. ವ್ಯಕ್ತಿಯ ನಡಾವಳಿಗಳ ಮಾರ್ಪಡಿಸುವಿಕೆಯೊಂದಿಗೆ ಅವನ ವ್ಯಕ್ತಿತ್ವಕ್ಕೊಂದು ಹೊಸ ಆಯಾಮ ದೊರಕಿಸಿಕೊಡುತ್ತದೆ. ಜಗತ್ತಿನ ಜಂಜಾಟಗಳಲ್ಲಿ ಜಯಪ್ರದನಾಗಬೇಕಾದರೆ ಮೂಲತಃ ಶಿಕ್ಷಣದ ಅಗತ್ಯ ತೀವ್ರವಾದುದು. ಅಂದರೆ ಶಿಕ್ಷಣವು ವ್ಯಕ್ತಿಯ ಔನ್ನತ್ಯದಲ್ಲಿ ಗುರುತರವಾದ ಹೊಣೆಯನ್ನು ಹೊರುತ್ತದೆ. ಈ ಮಟ್ಟಿನ ಪ್ರಾಮುಖ್ಯತೆ ಪಡೆದ ಶಿಕ್ಷಣವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನೀಡಿದಾಗ ಅದರ ಧ್ಯೇಯಗಳ ಈಡೇರಿಕೆಯಾಗುತ್ತದೆಂಬುದು ಸತ್ಯ. ಶಿಕ್ಷಣವನ್ನು ನಾವು ವ್ಯವಸ್ಥೆಯೆಂದು ಕರೆಯುತ್ತೇವೆಯೇ ವಿನಃ ವಾಸ್ತವಿಕವಾಗಿ ಅದನ್ನು ನೋಡುವ ದೃಷ್ಟಿಕೋನದಲ್ಲಿ ಅಂತಹ ಭಾವವನ್ನು ತೋರುತ್ತಿಲ್ಲ. ಅದೇ ಶಿಕ್ಷಣದ ಸೋಲಿಗೆ ಕಾರಣ ಎಂದು ಹೇಳಬಹುದು.

ಮೂಲಭೂತವಾಗಿ ಶಿಕ್ಷಣವು ಒಂದು ಪ್ರಕ್ರಿಯೆಯಾಗಿದೆ. ಅನೇಕ ಅಂಶಗಳನ್ನು ತನ್ನಲ್ಲಿ ಅಡಕವಾಗಿಸಿಕೊಂಡು ಅವುಗಳ ನಡುವೆ ಅನ್ಯೋನ್ಯತೆಯನ್ನು ಬೆಸೆಯುವುದರೊಂದಿಗೆ ಪ್ರಕ್ರಿಯೆಯ ಪಾತ್ರವನ್ನು ನಿರ್ವಹಿಸುತ್ತಿದೆ. ಶಿಕ್ಷಣ ಪ್ರಕ್ರಿಯೆಯ ಬಗೆಗಿನ ಸ್ಥೂಲವಾದ ಪರಿಚಯವನ್ನು ಚಿತ್ರ 1ರಲ್ಲಿ ನೋಡಬಹುದು.

ಈ ಆಕೃತಿಯು ಒಂದು ಶೈಕ್ಷಣಿಕ ವ್ಯವಸ್ಥೆಯ ಮುಖ್ಯ ಆಂತರಿಕ ಘಟಕಗಳ ನಡುವಿನ ಸಂಬಂಧವನ್ನು ತೋರಿಸುವ ಒಂದು 'ಸರಳವಾದ ಆಕೃತಿ'ಯಾಗಿದೆ. ಈ ಘಟಕಗಳ ಮಧ್ಯದ ಆಪ್ತತೆಗಳನ್ನು ಒಂದೆರಡು ಉದಾಹರಣೆಗಳಿಂದ ನೋಡಬಹುದು.

ಉದಾಹರಣೆ: 1. ಒಂದು ವ್ಯವಸ್ಥೆಯ ಗುರಿ ಹಾಗೂ ಆದ್ಯತೆಗಳನ್ನು ತರಲು ನಾವೊಂದು ನಿರ್ಣಯವನ್ನು ತೆಗೆದುಕೊಂಡರೆ ಅಥವ ನಿರ್ಣಯಗಳನ್ನು ಕಾರ್ಯಗತಗೊಳಿಸಬೇಕಾದರೆ ವ್ಯವಸ್ಥೆಯ ಆಡಳಿತಾತ್ಮಕ ರಚನೆ, ಪಠ್ಯಕ್ರಮದಲ್ಲಿ ಬೋಧನಾ ವಿಧಾನಗಳಲ್ಲಿ, ವಿಶೇಷ ಸವಲತ್ತು ಹಾಗು ಸಲಕರಣೆಗಳಲ್ಲಿ, ಶಿಕ್ಷಕರ ಹಂಚಿಕೆ ಮತ್ತು ವಿದ್ಯಾರ್ಥಿ ಸಂಖ್ಯೆಗಳಲ್ಲಿ ತೀವ್ರ ಬದಲಾವಣೆಗಳು ಘಟಿಸುತ್ತವೆ.

ಉದಾಹರಣೆ: 2. ಅದೇ ರೀತಿ ಮೂಲ ಗುರಿ ಹಾಗೂ ಆದ್ಯತೆಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಒಂದು ಪ್ರಮುಖ ಘಟಕದಲ್ಲಿ ನೂತನ ಆವಿಷ್ಕಾರ

ಸಂಪನ್ಮೂಲ ಭರಿತ →

ಶೈಕ್ಷಣಿಕ ಪ್ರಕ್ರಿಯೆ

1. ಧ್ಯೇಯಗಳು ಮತ್ತು ಆದ್ಯತೆಗಳು
2. ವಿದ್ಯಾರ್ಥಿಗಳು
3. ನಿರ್ವಹಣೆ :
   ವ್ಯವಸ್ಥೆಯನ್ನು ಸಂಯೋಜಿಸುವುದು
   ನಿರ್ದೇಶಿಸುವುದು
   ವಿಮರ್ಶಿಸುವುದು
   ಸುಧಾರಿಸುವುದು ಇತ್ಯಾದಿ
4. ರಚನೆ ಮತ್ತು ವೇಳಾಪಟ್ಟಿ :
   ವಿವಿಧ ಉದ್ದೇಶಗಳಿಗಾಗಿ
   ಕಾಲದ ನಿಯಮಿತ ಬಳಕೆಗಾಗಿ
5. ವಿಷಯ :
   ವಿದ್ಯಾರ್ಥಿಗಳು ಅರಿತುಕೊಳ್ಳಬೇಕಾದ ಸಾರ
6. ಅಧ್ಯಾಪಕರು :
   ಕಲಿಕೆಯ ಪ್ರಕ್ರಿಯೆಗೆ ಬೇಕಾದ ಸಾರ
   ಒದಗಿಸುವವರು
7. ಕಲಿಕಾ ಉಪಕರಣಗಳು :
   ಪುಸ್ತಕ, ಕರಿಹಲಗೆ, ಭೂಪಟ, ಪ್ರಯೋಗಶಾಲೆ
   ಇತ್ಯಾದಿ
8. ಸವಲತ್ತುಗಳು :
   ಪ್ರಕ್ರಿಯೆಗೆ ಬೇಕಾದ ಅನುಕೂಲಗಳು
9. ತಂತ್ರಜ್ಞಾನ :
   ವ್ಯವಸ್ಥಾಕಾರ್ಯದಲ್ಲಿ ಉಪಯೋಗಿಸುವ
   ತಂತ್ರಗಳು
10. ಗುಣನಿಯಂತ್ರಣ :
   ಪ್ರವೇಶಾತಿ ನಿಯಮ, ಅರ್ಹಪರೀಕ್ಷೆ ಇತ್ಯಾದಿ
11. ಸಂಶೋಧನೆ
12. ಮೌಲ್ಯ-ವ್ಯವಸ್ಥೆಯ ದಕ್ಷತೆಯನ್ನು ತೋರಿಸು
   ವಂತಹುದು

ಶೈಕ್ಷಣಿಕ ಫಲಿತ →

ಚಿತ್ರ 1–ಕಲಿಕೆ ಮತ್ತು ಶಿಕ್ಷಣದ ಪ್ರಕ್ರಿಯೆ

ಉಂಟು ಮಾಡಬಹುದು. ಒಂದು ವ್ಯವಸ್ಥೆಯಲ್ಲಿಯ ಭರಿತದ ನಿರ್ಧಾರ ಹಾಗೂ ಅಗತ್ಯಗಳು ಅಂತಿಮ ಗುಣಾತ್ಮಕ ಫಲಿತವನ್ನು ತರಲು ಪ್ರಯತ್ನಿಸುತ್ತವೆ.

ಶಿಕ್ಷಣದಲ್ಲಿ ಸಾಮಾಜಿಕತೆಯು ಅತೀ ಮುಖ್ಯವಾದುದು. ಅಂದರೆ ಶಿಕ್ಷಣ ವ್ಯವಸ್ಥೆಯಲ್ಲಿ ಸಮಾಜದ ಪಾತ್ರ ಗಣ್ಯವಾದುದು. ಶಿಕ್ಷಣಕ್ಕೆ ಸಮಾಜದಿಂದ ಕಾಣಿಕೆಗಳು ಬಂದೊಡನೆ ಅದರಿಂದ ನಿರೀಕ್ಷಿಸುವಂತಹುದೂ ಹೆಚ್ಚಾಗುತ್ತದೆ. ಅಂತೆಯೇ 'ಶಿಕ್ಷಣ ವ್ಯವಸ್ಥೆ'ಯು ತನ್ನಲ್ಲಿ ಮತ್ತಷ್ಟು ಅಂಶಗಳನ್ನು ಸೇರಿಸಿಕೊಳ್ಳಬೇಕು. ಶಿಕ್ಷಣದ ಭರಿತ ಹಾಗೂ ಫಲಿತಗಳು ಸಮಾಜದೊಂದಿಗಿನ ಬಾಹ್ಯ ಸಂಬಂಧಗಳನ್ನು ಪರೀಕ್ಷಿಸಿಕೊಳ್ಳಬೇಕು. ಘಟಕಗಳ ಆಂತರಿಕ ಸಂಬಂಧವು ಪರಿಸರದೊಂದಿಗೆ ತಾದಾತ್ಮ್ಯತೆ ಹೊಂದಿರಬೇಕು.

ಸಮಾಜದ 'ಭರಿತ'ದ ಅನೇಕ ಘಟಕಗಳು ಶಿಕ್ಷಣ ವ್ಯವಸ್ಥೆಗೆ ನೀಡಲ್ಪಟ್ಟು ಅದೇ ರೀತಿ ಶಿಕ್ಷಣ ವ್ಯವಸ್ಥೆಯಿಂದ 'ಫಲಿತ'ಗಳಾಗಿ ಮಾರ್ಪಟ್ಟು ಸಮಾಜಕ್ಕೆ ಕೂಡ ಮಾಡುತ್ತವೆ. ಅಂತಹ ಪ್ರಕ್ರಿಯೆಯಲ್ಲಿ ಅನೇಕ ಘಟಕಗಳು, ಘಟನೆಗಳು ಸೇರಿಕೊಂಡಿರುತ್ತವೆಯೆಂಬುದನ್ನು ಆಕೃತಿ 2ರಲ್ಲಿ ತೋರಿಸಲಾಗಿದೆ. ಅಂದರೆ ಮೂಲಭೂತವಾಗಿ ಶಿಕ್ಷಣ ಹಾಗೂ ಪರಿಸರದ ಅನ್ಯೋನ್ಯತೆಯನ್ನು ಬಿಂಬಿಸುವ ಪ್ರಯತ್ನ ಆದಾಗಿದೆ (ಆಕೃತಿ 2).

ಆಕೃತಿ–2 ಬಾಹ್ಯ ಸಂಬಂಧಗಳ ಕಡೆಗೆ ಅಂದರೆ ಘಟಕಗಳ ಹೊರಗಿನ ಸಂಪರ್ಕಗಳೆಡೆಗೆ ವಿಶೇಷ ಒತ್ತುಕೊಡುತ್ತದೆ.

ಆದರೆ ಮೊದಲಿನ ಆಕೃತಿಯು ಶಿಕ್ಷಣ ವ್ಯವಸ್ಥೆಯು ಕೇವಲ ಆಂತರಿಕತೆಯ ಕಡೆಗೆ ಗಮನ ನೀಡಿದೆ ಎಂಬುದನ್ನು ಆಕೃತಿ 1ರಲ್ಲಿ ನೋಡಬಹುದು.

ಅಂದರೆ ಶಿಕ್ಷಣವು ಮೂಲತಃ ಒಂದು ವ್ಯವಸ್ಥೆಯಾಗಿದೆ. ಅನೇಕ ಘಟಕಗಳನ್ನು ಒಳಗೊಂಡಿದೆ ಅವುಗಳಲ್ಲಿ ಅನೇಕ ಬಗೆಗಳೂ ಇರುವುದು ಗಮನಾರ್ಹ. ಶಿಕ್ಷಣದ ವ್ಯವಸ್ಥಾ ಉಪಕ್ರಮವನ್ನು ಕುರಿತಂತೆ ದೀರ್ಘವಾದ ಅಧ್ಯಯನಕ್ಕೆ ತೊಡಗುವ ಮುನ್ನ 'ವ್ಯವಸ್ಥೆ' ಕುರಿತ ಪರಿಭಾಷೆಗಳನ್ನು ನೋಡುವುದು ಔಚಿತ್ಯಪೂರ್ಣ.

ವ್ಯವಸ್ಥಾ ಪರಿಕಲ್ಪನೆ (Concept of System)

ಶಿಕ್ಷಣ ಪ್ರಕ್ರಿಯೆಯ ವಿಶ್ಲೇಷಣೆ ನಡೆಸಲು ಹಾಗೂ ಅದನ್ನು ಪರಿಣಾಮಕಾರಿಯಾಗಿಸಲು ವ್ಯವಸ್ಥಾ ಉಪಕ್ರಮವು ಅನುಭವಾತ್ಮಕ ಹಾಗೂ ಸಮಸ್ಯಾ ಪರಿಹಾರದ ವಿಧಾನವಾಗಿದೆ. ವ್ಯವಸ್ಥೆಯು ಒಂದು ಪ್ರಕ್ರಿಯೆಯಾಗಿದ್ದು ಅದು ಸಮಗ್ರತೆಯನ್ನು ಹೊಂದಿದೆ. ಅದರಲ್ಲಿ ವಿದ್ಯಾರ್ಥಿ, ಶಿಕ್ಷಕರು, ಪಠ್ಯಕ್ರಮ, ವಿಷಯ, ಬೋಧನಾ ಸಲಕರಣೆಗಳು, ಭೌತಿಕ ಪರಿಸರ, ಮೌಲ್ಯಮಾಪನ ಹಾಗೂ ಬೋಧನಾ ಧ್ಯೇಯಗಳು ಅಡಕವಾಗಿರುತ್ತವೆ.

ವೆಬ್ಸ್ಟರ್‌ನ ನಿಘಂಟಿನ ಪ್ರಕಾರ "ಯಾವಾಗಲೂ ಪರಸ್ಪರಾವಲಂಬಿಯಾಗಿರುವ ಅಥವ ಪರಸ್ಪರ ಅನ್ಯೋನ್ಯ ಕ್ರಿಯೆ ಹೊಂದಿರುವ ಸಂಗತಿ ವಸ್ತುಗಳ ಸಮುಗ್ರತೆಯೇ ವ್ಯವಸ್ಥೆ".

ವ್ಯವಸ್ಥಾ ಪರಿಕಲ್ಪನೆಯ ಇತರ ವ್ಯಾಖ್ಯಾನಗಳನ್ನು ಈ ಕೆಳಕಂಡಂತೆ ಪರಿಭಾಷಿಸಬಹುದು—

"ಒಂದು ವ್ಯವಸ್ಥೆಯು ವಸ್ತುಗಳ ಸಮೂಹವಾಗಿದ್ದು ಪರಸ್ಪರ ಸಂಬಂಧ ಅಥವ ಅನ್ಯೋನ್ಯತೆ ಹೊಂದಿದ್ದು ಏಕತೆಯನ್ನು ಸಾಧಿಸಿದ್ದಲ್ಲಿ ಹಾಗೆಂದು ಕರೆಯಲ್ಪಡುತ್ತದೆ".

"ವ್ಯವಸ್ಥೆಯು ವಿಸ್ತರಿತ ವಿಧಾನ ಅಥವ ವ್ಯವಸ್ಥಿತ ವಿಧಾನವಾಗಿದೆ."

ಕೆರ್‌ಶನರ್ ಪ್ರಕಾರ "ಒಂದು ಆದರ್ಶಾತ್ಮಕ ವ್ಯವಸ್ಥೆಯು ವಸ್ತು ಅಥವ ವಸ್ತುಭಾವಗಳ ಒಂದು ಸಂಗ್ರಹವಾಗಿದೆ. ಕೆಲವು ಭರಿತಗಳನ್ನು ಸ್ವೀಕರಿಸಿರುವುದಲ್ಲದೆ ಅವುಗಳು ನಿರ್ದಿಷ್ಟ ಫಲಿತವನ್ನುಂಟುಮಾಡುವಂತೆ ಸಹಾಯಕವಾಗುತ್ತದೆ. ಭರಿತ ಮತ್ತು ಫಲಿತಗಳ ಕಾರ್ಯಗಳ ಗರಿಷ್ಠಗೊಳಿಸುವಿಕೆಯ ಧ್ಯೇಯಗಳನ್ನು ಹೊಂದಿರುತ್ತದೆ".

ಗ್ರಿಫಿತ್‌ರ ಅಭಿಪ್ರಾಯಾನುಸಾರವಾಗಿ "ಪಾರಸ್ಪರಿಕ ಅನ್ಯೋನ್ಯ ಕ್ರಿಯೆಯೊಳಗಿನ ಸಂಕೀರ್ಣ ಮೂಲತತ್ವಗಳು". ಈ ವ್ಯಾಖ್ಯೆ ಕೆಲವು ಸ್ವಾಭಾವಿಕ ವ್ಯವಸ್ಥೆಗಳಿಗೆ ಅನ್ವಯಿಸುವುದಾದರೂ ಅದು ಒಂದು ವ್ಯವಸ್ಥೆಯ ಅನೇಕ ಮೂಲಾಂಶ ಅಥವ ಘಟಕಗಳನ್ನು ಒಳಗೊಂಡಿದ್ದು ಅವುಗಳು ಪರಸ್ಪರ ಅನ್ಯೋನ್ಯಕ್ರಿಯೆಯಿಂದ ಕೂಡಿದ್ದು ಪರಸ್ಪರ ಅವಲಂಬಿತವಾಗಿರುತ್ತವೆ.

ಸಾಮಾನ್ಯವಾಗಿ ಪ್ರತಿಯೊಂದು ವ್ಯವಸ್ಥೆಯೂ 'ಉಪವ್ಯವಸ್ಥೆ'ಗಳನ್ನು ಹೊಂದಿರುತ್ತವೆ. ಇದಕ್ಕೆ ಅತೀ ಚಿಕ್ಕ ವ್ಯವಸ್ಥೆಗಳು ಹೊರತಾಗಿರುತ್ತವೆ. ಅತೀ ದೊಡ್ಡದಾದ ವ್ಯವಸ್ಥೆಯನ್ನು ಬಿಟ್ಟು ಪ್ರತಿಯೊಂದು ವ್ಯವಸ್ಥೆಯೂ 'ಉನ್ನತ ವ್ಯವಸ್ಥೆ'ಯನ್ನು ಹೊಂದಿರುತ್ತದೆ. ಅಂದರೆ ಪ್ರತಿಯೊಂದು ವ್ಯವಸ್ಥೆಯೂ ಉಪವ್ಯವಸ್ಥೆಯನ್ನು ಹೊಂದಿರುತ್ತದೆ ಇಲ್ಲವೇ ಉನ್ನತ ವ್ಯವಸ್ಥೆಯ ಅಧೀನವಾಗಿರುತ್ತದೆ. ವ್ಯಕ್ತಿ ನಿರ್ಮಿತ ವ್ಯವಸ್ಥೆ, ಮಾನವ–ಮಾನವ ವ್ಯವಸ್ಥೆ, ಮಾನವ–ಯಂತ್ರ ವ್ಯವಸ್ಥೆ ಮತ್ತು ಯಂತ್ರ–ಯಂತ್ರ ವ್ಯವಸ್ಥೆ, ಈ ಮುಂತಾದ ಅನೇಕ ವ್ಯವಸ್ಥೆಯ ಬಗೆಗಳನ್ನು ನೋಡಬಹುದು.

ಒಂದು ಶಿಕ್ಷಣ ವ್ಯವಸ್ಥೆಯು ಬೇರೆಯ ವ್ಯವಸ್ಥೆಗಳಿಗಿಂತ ಭಿನ್ನವಾಗಿದ್ದು ಭರಿತಗಳ ಸಂಕರವಾಗಿದೆ. ಅವುಗಳು ಪ್ರಕ್ರಿಯೆಗೆ ವಸ್ತುಗಳಾಗಿವೆ. ನಿರ್ದಿಷ್ಟ ಫಲಿತಗಳನ್ನು ಪಡೆಯಲು ವಿನ್ಯಾಸಗೊಂಡಂತಹವಾಗಿವೆ. ವ್ಯವಸ್ಥೆಯ ಧ್ಯೇಯಗಳನ್ನು ಸಾಧಿಸಲು ಕಟಿಬದ್ಧವಾಗಿವೆ. ಅವುಗಳು ಚಲನಶೀಲವಾದವುಗಳಾಗಿವೆ. ಯಾವುದೇ ಒಂದು ಶೈಕ್ಷಣಿಕ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಬೇಕೆಂಬ, ಹಾಗೂ ಭವಿಷ್ಯದಲ್ಲಿ ಅದರ ಸ್ಥಿತಿಗತಿಗಳನ್ನು ಸುಧಾರಿಸಲು ಯೋಜನೆಗಳನ್ನು ರೂಪಿಸಬೇಕೆಂಬ ಉದ್ದೇಶದಿಂದ ಮೌಲ್ಯ ನಿರ್ಧಾರಮಾಡಲುಪಕ್ರಮಿಸಿದರೆ, ಅದರಲ್ಲಿಯ ವಿಮರ್ಶಾತ್ಮಕ

ಘಟಕಗಳ ನಡುವಿನ ಸಂಬಂಧವನ್ನು ಏಕೀಕೃತ ದೃಷ್ಟಿಯಿಂದ ಪರಿಶೀಲಿಸಿ ಪರೀಕ್ಷಿಸ ಬೇಕಾಗುತ್ತದೆ. ಈ ತೆರನಾದ ಶಿಕ್ಷಣ, ನಿಯಮಬದ್ಧತೆಯಿಂದ, ವ್ಯವಸ್ಥಿತ ರೂಪು ರೇಷೆಗಳಿಂದ ಯೋಜಿತ ಕಾರ್ಯವಿಧಾನಗಳಿಂದ ಕೂಡಿದ್ದಲ್ಲಿ ಅದು ಯಶವನ್ನು ಸಂಪಾದಿಸುತ್ತದೆ. ವ್ಯವಸ್ಥೆಯ ಅಂಶಗಳನ್ನು ಸಂಬಂಧಗೊಳಿಸಿಕೊಂಡಾಗ ಅದು ಪರಿಪೂರ್ಣವಾಗುತ್ತದೆ. ಅಂತೆಯೇ ಶಿಕ್ಷಣದಲ್ಲಿ 'ವ್ಯವಸ್ಥಾ ಉಪಕ್ರಮ' ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ.

ವ್ಯವಸ್ಥಾ ಉಪಕ್ರಮದಲ್ಲಿ ವ್ಯವಸ್ಥೆಯ ವಿಶ್ಲೇಷಣೆಯು ಪ್ರಮುಖವಾದುದಾಗಿದೆ. ವ್ಯವಸ್ಥೆಯ ಮಾದರಿಯ ನೀಡುವಿಕೆಯೊಂದಿಗೆ ಅದರ ವಿಶ್ಲೇಷಣೆಯ ಕಾರ್ಯವೂ ಜೊತೆ ಯಲ್ಲಿಯೇ ಕ್ರಮಿಸುವುದರಿಂದ ಉಪಕ್ರಮವು ಸ್ಪಷ್ಟತೆಯಿಂದ ಕೂಡುತ್ತದೆ.

ವ್ಯವಸ್ಥಾ ಉಪಕ್ರಮದ ಮಾದರಿಗಳನ್ನು ನೋಡುವ ಮುನ್ನ ವ್ಯವಸ್ಥಾ ವಿಶ್ಲೇಷಣೆಯ ಪರಿಕಲ್ಪನೆ, ಹಂತ ಹಾಗೂ ಕಾರ್ಯ, ಈ ಅಂಶಗಳನ್ನು ಒಂದೊಂದಾಗಿ ನೋಡೋಣ. ಇವುಗಳ ಆಧಾರದಲ್ಲೇ ಅದರ ಅಂಶಗಳಲ್ಲಿಯ ಸಾಮಾನ್ಯತೆಯು ಗೋಚರಿಸುವುದರಿಂದ ಅದನ್ನು ನೋಡುವ ನಮ್ಮ ದೃಷ್ಟಿ ಪ್ರತ್ಯೇಕತೆ ಹೊಂದಿದ್ದರೂ ಸಾಮಾನ್ಯೀಕರಣದ ನೆಲೆಯ ಮೇಲೆ ನಿಂತಿರಬೇಕು.

ವ್ಯವಸ್ಥಾ ವಿಶ್ಲೇಷಣೆಯ ಪರಿಕಲ್ಪನೆ (Concept of Systems Analysis)

ವ್ಯವಸ್ಥಾ ವಿಶ್ಲೇಷಣೆಯು ವ್ಯವಸ್ಥೆಯ ನಿರ್ಧರಿತ ಗುರಿಗಳನ್ನು ತಲುಪಲು ಸಹಾಯಕವಾಗಿದೆ. ಈ ವಿಶ್ಲೇಷಣೆಯನ್ನು ಕೈಗೊಳ್ಳುವ ಸಮಯದಲ್ಲಿ ವ್ಯವಸ್ಥೆ ಯಲ್ಲಿರಬಹುದಾದ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.

ವ್ಯವಸ್ಥೆಯ ಅಂಶಗಳು:

ವ್ಯವಸ್ಥೆಯ ಅಂಶಗಳನ್ನು 5 ಭಾಗಗಳಾಗಿ ಮಾಡಬಹುದು. ಅವುಗಳೆಂದರೆ,

1. ವ್ಯವಸ್ಥಾ ಮೇರೆಗಳು
2. ವ್ಯವಸ್ಥೆಯಲ್ಲಿ ಒತ್ತಡ ಮತ್ತು ಬಿಗಿತ
3. ವ್ಯವಸ್ಥಾ ಸ್ಥಿರತೆ
4. ಪ್ರತಿಪುಷ್ಟಿ
5. ಶೃಂಖಲತೆ

ಈ ಅಂಶಗಳನ್ನು ಈಗ ಒಂದೊಂದಾಗಿ ನೋಡೋಣ.

1. ವ್ಯವಸ್ಥಾ ಮೇರೆಗಳು—(Systems Boundaries)

ಯಾವುದೇ ವ್ಯವಸ್ಥೆಯನ್ನು ವಿಶ್ಲೇಷಿಸಬೇಕಾದರೆ ಅದರ ಮೇರೆಯನ್ನು ಗುರುತಿಸ ಬೇಕು. ಹೀಗೆ ಗುರುತಿಸುವುದು ಮೇಲ್ವಿಚಾರಕನ ಮೊತ್ತ ಮೊದಲನೆಯ ಕೆಲಸ, ಪ್ರತಿಯೊಂದು ಮೇರೆಯನ್ನು ಪ್ರತ್ಯೇಕವಾಗಿ ಅಧ್ಯಯನಿಸುವುದು ಒಳ್ಳೆಯದು.

ನಿರ್ದಿಷ್ಟವಾದ ಕುಂದುಕೊರತೆಗಳನ್ನು ಪ್ರತ್ಯೇಕಿಸಲು ಇದು ಸಹಾಯ ಮಾಡುತ್ತದೆ. ವ್ಯವಸ್ಥೆಯೊಳಗೆ ಆವೃತ್ತವಾಗಿರುವುದೂ, ಅನಾವೃತ್ತವಾಗಿರುವುದನ್ನು ವಿಶ್ಲೇಷಕ ನಿರ್ಧರಿಸಬೇಕು. ಒಂದು ನಿರ್ದಿಷ್ಟ ವ್ಯವಸ್ಥೆಯ ಮಿತಿಗಳನ್ನು ನಿರ್ಧರಿಸಬೇಕಾದರೆ ಅಂತಹ ಮೇರೆಗಳನ್ನು ನಿರ್ಧರಿಸುವ ಉದ್ದೇಶವನ್ನು ವಿನ್ಯಾಸಕಾರನು ಗಮನದಲ್ಲಿರಿಸಿ ಕೊಂಡಿರಬೇಕಾಗುತ್ತದೆ. ಅಂತೆಯೇ ವ್ಯವಸ್ಥಾ ವಿಶ್ಲೇಷಣೆಯನ್ನು ಸರಳೀಕೃತಗೊಳಿಸ ಲಾಗುತ್ತದೆ. ಮೇರೆಗಳು ಕೇವಲ ಭೌತಿಕವಾದುವಾಗದೆ ಅವು ಪರಿಕಲ್ಪನಾತ್ಮಕವೂ ಆಗುವುದು.

2. ವ್ಯವಸ್ಥೆಯಲ್ಲಿ ಒತ್ತಡ ಮತ್ತು ಬಿಗಿತ—(Stress and Tension)

ವ್ಯವಸ್ಥೆಯು ತನ್ನ ಅರ್ಹತೆಯನ್ನು ಮೀರಿ ಹೊಣೆಯನ್ನು ಹೊರಬೇಕಾದಾಗ ಅದು ಒತ್ತಡವಾಗಿ ಪರಿಣಮಿಸುತ್ತದೆ. ಈ ಒತ್ತಡದಿಂದ ಬಿಗಿತವುಂಟಾಗುತ್ತದೆ. ಪ್ರತಿಯೊಂದು ವ್ಯವಸ್ಥೆಯೂ, ಅದರಲ್ಲಿಯೂ ಸಾಮಾಜಿಕ ಹಾಗೂ ವರ್ತನಾತ್ಮಕ ವ್ಯವಸ್ಥೆಯು, ಒತ್ತಡ ಮತ್ತು ಬಿಗಿತವನ್ನು ಹೊಂದಿರುತ್ತವೆ. ಅಸ್ತಿತ್ವದಲ್ಲಿರುವ ಯಾವುದೇ ವ್ಯವಸ್ಥೆಯ ಸ್ವೀಕಾರಾರ್ಹ ಅಂಗಗಳಾಗಿ ಅವು ಕೆಲಸ ಮಾಡುತ್ತವೆ. ಅವುಗಳಿಲ್ಲದೆ ಯಾವುದೇ ವ್ಯವಸ್ಥೆಯೂ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ.

ಘಟಕಗಳ ವ್ಯತ್ಯಾಸ, ಸಂಪರ್ಕದ ಕೊರತೆ, ಪರಿಸರದ ಪ್ರಭಾವ—ಈ ಮೂರು ಅಂಶಗಳು ಒತ್ತಡ ಮತ್ತು ಬಿಗಿತಗಳ ಬೆಳವಣಿಗೆಗೆ ಪ್ರಧಾನ ಕಾರಕಗಳಾಗಿವೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವ್ಯಕ್ತಿತ್ವ, ಅಭಿವೃತ್ತಿ, ನಂಬಿಕೆ ಹಾಗು ಮೌಲ್ಯಗಳನ್ನು ಹೊಂದಿರುತ್ತಾನೆ. ಎಲ್ಲಿ ಈ ರೀತಿಯ ವಿಭಿನ್ನತೆಯು ಇರುತ್ತದೆಯೋ ಅಲ್ಲೆಲ್ಲಾ ಅನಿವಾರ್ಯವಾಗಿ ಒತ್ತಡ ಮತ್ತು ಬಿಗಿತವು ಕಂಡು ಬರುತ್ತದೆ. ಪ್ರತಿಯೊಬ್ಬರೂ ಪ್ರತಿಯೋರ್ವರಿಗಿಂತ ಬೇರೆಯದೇ ಆದ ವಿಚಾರ ಸರಣಿ ಹೊಂದಿರುವರು. ಸಂಪರ್ಕವೂ ಸಹ ಒತ್ತಡ ಮತ್ತು ಬಿಗಿತದಮೇಲೆ ಪ್ರಭಾವ ಬೀರುವ ಅಂಶವಾಗಿದೆ ಎಂದು ಮರೆಯುವಂತಿಲ್ಲ. ಸಂಪರ್ಕವು ಸಂಕೀರ್ಣತೆಯಿಂದ ಕೂಡಿದೆ. ಇದರಲ್ಲಿ ಯಾವ ವ್ಯತ್ಯಯವೂ ಉಂಟಾಗಬಾರದು. ವ್ಯವಸ್ಥೆಗಳ ನಡುವಿನ ಪರಸ್ಪರ ಸಂಬಂಧವು ಅರ್ಥಪೂರ್ಣವಾಗಿರಬೇಕಾದರೆ ಸಂಪರ್ಕವು ಬೇಕೇ ಬೇಕು.

ಪರಿಸರವೂ ಒತ್ತಡ ಮತ್ತು ಬಿಗಿತದ ಮೇಲೆ ಪ್ರಭಾವ ಬೀರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾದರೆ ಶಾಲಾ ವ್ಯವಸ್ಥೆಯ ಮೇಲೆ ತೀವ್ರ ಒತ್ತಡ ಉಂಟಾಗುತ್ತದೆ. ಅಧ್ಯಾಪಕರ ಕೊರತೆ, ಹಣಕಾಸು ವೈಫಲ್ಯತೆ, ಸಾರ್ವಜನಿಕರಿಂದ ದೂರವಿರುವಿಕೆ, ಈ ಅಂಶಗಳು ಒತ್ತಡ ಹಾಗೂ ಬಿಗಿತವನ್ನುಂಟುಮಾಡುತ್ತವೆ.

ಒತ್ತಡ ಮತ್ತು ಬಿಗಿತ ಯಾವುದೇ ವ್ಯವಸ್ಥೆಯ ಅಂಗಗಳು. ವ್ಯವಸ್ಥೆಯಮೇಲೆ ಒತ್ತಡ—ಬಿಗಿತಗಳು ಪ್ರಭಾವ ಹೇಗೆ ಬೀರುತ್ತವೆಯೆಂಬುದನ್ನು ಗುರುತಿಸಿ, ವಿಶ್ಲೇಷಿಸುವುದು ಬಹುಶಃ ವ್ಯವಸ್ಥಾ ವಿಶ್ಲೇಷಣೆಯ ಪ್ರಮುಖ ಕಾರ್ಯವಾಗಿದೆ.

ಈ ಒತ್ತಡ ಮತ್ತು ಬಿಗಿತವನ್ನು ಪಠ್ಯಕ್ರಮ ಹಾಗೂ ಅಧ್ಯಾಪನದಲ್ಲಿ ಉಂಟು ಮಾಡಿದರೆ ಅದು ಮೇಲ್ವಿಚಾರಣೆಯ ದಕ್ಷತೆಯನ್ನು ಸಂಕೇತಿಸುತ್ತದೆ.

3. ವ್ಯವಸ್ಥಾ ಸ್ಥಿರತೆ—(Systems Stability)

ತನ್ನಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವುದು ಪ್ರತಿಯೊಂದು ವ್ಯವಸ್ಥೆಯ ಸರ್ವ ಸಾಧಾರಣ ಲಕ್ಷಣವಾಗಿದೆ. ಸಮತೋಲನವೆಂದರೆ ಒಂದು ವ್ಯವಸ್ಥೆಯ ಸರ್ವ ಘಟಕಗಳೂ ಪರಸ್ಪರ ಜೀವಂತ ಸಂಬಂಧ ಹೊಂದಿರುವಂತಹುದು. ಸ್ಥಿರತೆಯಲ್ಲಿ ಎರಡು ವಿಧ,

1. ನಿಯೋಜಿತ ಸ್ಥಿರತೆ
2. ಮಾರ್ಪಾಡು ಮಾಡಲಿಕ್ಕೆ ಬರುವಂತಹುದು

ಬಿಗಿತ ಮತ್ತು ಒತ್ತಡವನ್ನು ಪರಿಶೀಲಿಸಿ ಅದನ್ನು ನಿಯೋಜಿಸಿ ಮತ್ತೆ ಸಮತೋಲನಕ್ಕೆ ತಂದರೆ ಅದು ನಿಯೋಜಿತ ಸ್ಥಿರತೆಯೆಂದು ಕರೆಸಿಕೊಳ್ಳುತ್ತದೆ.

ಒತ್ತಡ ಮತ್ತು ಬಿಗಿತವನ್ನು ಪೂರ್ಣ ಶೂನ್ಯಗೊಳಿಸಿ ನೂತನವಾದಂತಹ ವ್ಯವಸ್ಥೆಯನ್ನು ಆವಿಷ್ಕರಿಸಿದಲ್ಲಿ 'ಸಂತುಲಿತ ಸ್ಥಿತಿ'ಯುಂಟಾಗುತ್ತದೆ. ಅದು ಎರಡನೆಯ ವಿಧವೂ ಆಗಿದೆ.

ವ್ಯವಸ್ಥೆಯಲ್ಲಿ ಅಸ್ಥಿರತೆಯು ಕಡಿಮೆಯಾದಾಗ ಅಸಂತುಲತೆಯೂ ಕಡಿಮೆಯಾಗುತ್ತದೆ. ಅಂತೆಯೇ ಅಸ್ಥಿರತೆ ಹೆಚ್ಚಿದಾಗ ಅಸಂತುಲತೆ ಹೆಚ್ಚಾಗುತ್ತದೆ.

4. ಪ್ರತಿಪುಷ್ಟಿ—(Feedback)

ವ್ಯವಸ್ಥೆಯ ಆಂತರಿಕ ಸಂಕ್ರಿಯೆಯ ಒತ್ತಡ ಮತ್ತು ಬಿಗಿತ ಹಾಗೂ ಪರಿಣಾಮಾತ್ಮಕ ಪ್ರಭಾವಗಳು ಪ್ರತಿಪುಷ್ಟಿಗೆ 'ಭರಿತ'ಗಳಾಗಿ ಬಿಡುತ್ತವೆ. ಈ ಭರಿತವು ವಿಶ್ಲೇಷಣೆಗೆ ಒಳಪಡುವುದು.

ಬಹುಶೀಕ ವ್ಯವಸ್ಥಾ ವಿಶ್ಲೇಷಕರು ಪ್ರತಿಪುಷ್ಟಿಯು ಋಣಾತ್ಮಕವಾಗಿರುವಂತೆ ನೋಡಿಕೊಳ್ಳುತ್ತಾರೆ. ಇದರಿಂದ ಕೆಲವು ಅನುಕೂಲಗಳಾಗುತ್ತವೆ.

5. ಶೃಂಖಲತೆ—(Linking Process)

ಸಂಪರ್ಕ ಮಾರ್ಗಗಳಲ್ಲಿರುವ ಪರಸ್ಪರ ಹೊಂದಾಣಿಕೆಯೇ ಶೃಂಖಲತೆಯೆಂದು ಕರೆಸಿಕೊಳ್ಳುತ್ತದೆ. ಪ್ರತಿ ಸಿಬ್ಬಂದಿ ವರ್ಗಕ್ಕೂ ಹಾಗೂ ಬೇರೆ ಬೇರೆ ಉಪವರ್ಗಗಳಿಗೂ ಪರಸ್ಪರ ಬಾಂಧವ್ಯ ಪ್ರತಿಯೊಂದರಲ್ಲಿಯೂ ಇದ್ದರೆ ಅದು ಶೃಂಖಲತೆಯೆನಿಸುತ್ತದೆ. ಅವುಗಳ ನಡುವೆ ಅಂತರ ಸಂಬಂಧವನ್ನುಂಟುಮಾಡಬೇಕು. ಸಂಪರ್ಕ ಮಾಧ್ಯಮವು ನೇರವಾಗಿರದಿದ್ದರೆ, ಸಂಪರ್ಕ ಮಾಧ್ಯಮವೇ ಇರದಿದ್ದರೆ ಈ ಕಾರ್ಯವು ಕಠಿಣವಾಗುವುದು.

ನಮ್ಮ ಶೈಕ್ಷಣಿಕ ಸನ್ನಿವೇಶದಲ್ಲಿ 'ವ್ಯವಸ್ಥಾ ವಿಶ್ಲೇಷಣೆ'ಯು ಬಹಳ ಮುಖ್ಯವಾದುದು. ಆದರೆ ವಿಶ್ಲೇಷಣೆಯು ಬೇರೆ ಬೇರೆ ರೀತಿಯಲ್ಲಿರಬಹುದು.

ಕೆಟೆಜ್ ಪ್ರಕಾರ ಸಮಸ್ಯೆಗಳ ಗುರುತಿಸುವಿಕೆಯಲ್ಲಿ ಮತ್ತು ಪರಿಹರಿಸುವಲ್ಲಿ ಮೇಲ್ವಿಚಾರಕನಿಗೆ ಈ ವ್ಯವಸ್ಥಾ ವಿಶ್ಲೇಷಣೆಯು ಉಪಯೋಗಕಾರಿಯಾದುದು.

ವ್ಯವಸ್ಥೆಯಲ್ಲಿ ಕೇಂದ್ರೀಕರಣವಿದ್ದಾಗ ಮೇಲ್ವಿಚಾರಕ ಅಥವಾ ಆಡಳಿತಾಧಿಕಾರಿಗಳಿಗೆ ಈ ವ್ಯವಸ್ಥಾ ವಿಶ್ಲೇಷಣೆಯು ಕೆಲವು ಪ್ರೇರಣೆಗಳೊದಗಿಸುವುದನ್ನೂ ನೋಡಬಹುದು. ಒಂದು ಶಾಲಾ ವ್ಯವಸ್ಥೆಯು ಸಂಘಟನಾತ್ಮಕವಾಗಿದ್ದು ತನ್ನೊಳಗೆ ಅನೇಕ ಘಟಕ ಅಥವಾ ಭಾಗಗಳನ್ನು ಒಳಗೊಂಡಿದ್ದು ಅವು ಅನ್ಯೋನ್ಯಕ್ರಿಯೆ ಹಾಗೂ ಪರಸ್ಪರಾವಲಂಬನೆಯಿಂದ ಕೂಡಿರುವುದರೊಂದಿಗೆ ಸಮಗ್ರತೆ ಹೊಂದಿ ಧ್ಯೇಯಗಳ ಈಡೇರಿಕೆಗೆ ಪ್ರಯತ್ನಿಸಬೇಕು. ಸಂಘಟನೆಯ ದೃಷ್ಟಿಯಿಂದ ಘಟಕಗಳ ನಡುವಿನ ಅನ್ಯೋನ್ಯಕ್ರಿಯೆ, ಪರಸ್ಪರಾವಲಂಬನೆ ಹಾಗೂ ಏಕತೆಗಳು ಪ್ರಕ್ರಿಯೆಯ ಆಡಿಯಲ್ಲಿ ವಿಶ್ಲೇಷಿಸಲ್ಪಡುತ್ತವೆ. ಶಾಲಾ ವ್ಯವಸ್ಥೆಯ ದೃಷ್ಟಿಯಿಂದ ಅದರ ಉದ್ದೇಶವೆಂದರೆ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಯುವಕರನ್ನು ವಿದ್ಯಾವಂತರನ್ನಾಗಿಸುವುದು, ಆದರಿಂದ ಮೇಲ್ವಿಚಾರಕನು ವ್ಯವಸ್ಥಾ ಘಟಕಗಳು ಹೇಗೆ ಪ್ರಾಥಮಿಕ, ಸೆಕೆಂಡರಿ, ವಿದ್ಯಾರ್ಥಿ ಸಿಬ್ಬಂದಿ ಸೇವೆ, ವಿಶೇಷ ಶಿಕ್ಷಣ ಈ ಮುಂತಾದವುಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಮತ್ತು ಅದು ಹೇಗೆ ಯುವಕರನ್ನು ವಿದ್ಯಾವಂತರಾಗಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ತಿಳಿಯಲು 'ವ್ಯವಸ್ಥಾ ವಿಶ್ಲೇಷಣೆ'ಯನ್ನು ಬಳಸಬೇಕು.

ಡೇವಿಸ್ ಮತ್ತು ಗಾನ್ನಕೋನ್‌ರವರು ಕೆಲವು ಸೂತ್ರಗಳನ್ನು ನೀಡಿದ್ದಾರೆ. ಅವುಗಳೆಂದರೆ—

* ಸೂಕ್ಷ್ಮ ಉಪಕ್ರಮಕ್ಕಿಂತ ಸ್ಥೂಲ ಉಪಕ್ರಮದ ಕಡೆಗೆ ಹೆಚ್ಚು ಗಮನ ಕೊಡುವುದು.
* ಕಾರ್ಯಾತ್ಮಕ ಸಂಬಂಧಗಳ ಪರಸ್ಪರಾವಲಂಬನೆಗೆ ಹೆಚ್ಚು ಗಮನ ನೀಡುವುದು.
* ಸಂಘಟನಾ ಸನ್ನಿವೇಶಗಳಲ್ಲಿ ಮಹತ್ವಪೂರ್ಣವಾದ ಮೂಲಾಂಶಗಳನ್ನು ಪ್ರತ್ಯೇಕಿಸುವಿಕೆ.
* ಸಂಘಟನಾ ರಚನೆಯ ವ್ಯತ್ಯಾಸಗಳಿಂದ ಆಗುವ ವಿಷಯಗಳ ಸಂಗ್ರಹಣೆ.

ಅತ್ಯಂತ ಪರಿಣಾಮಕಾರಿಯಾಗಿ ಈ ಸೂತ್ರಗಳನ್ನು ಸಂಘಟನೆಯೊಂದರಲ್ಲಿ ಅಳವಡಿಸಿ, ಆ ಸಂಘಟನೆಯನ್ನು ನಾವು ಒಂದು ವ್ಯವಸ್ಥೆಯೆಂದು ಪರಿಗಣಿಸಬೇಕು. ಇದರ ವಿಶ್ಲೇಷಣೆಗೆ 'ವ್ಯವಸ್ಥೆ ವಿಶ್ಲೇಷಣೆ'ಯೆಂದು ಕರೆಯಬಹುದೆಂಬುದು ಅವರೀರ್ವರ ಅಭಿಮತ. ಬ್ಲಾಸೆಚ್‌ರ್ ಪ್ರಕಾರ "ವ್ಯವಸ್ಥಾ ವಿಶ್ಲೇಷಣೆಯ ಅಗತ್ಯವು ಶಿಕ್ಷಣಕ್ಕೆ ಇದೆ. ಮೊದಲು ಸಮಸ್ಯೆಯನ್ನು ವಿವರಿಸಬೇಕು. ಅದನ್ನು ಪರಿಹರಿಸಿಕೊಳ್ಳಲು ಪರ್ಯಾಯಗಳನ್ನು ಒದಗಿಸಿಕೊಳ್ಳಬೇಕು. ಕಡೆಯಲ್ಲಿ ಪರಿಣಾಮಾತ್ಮಕ ಪರ್ಯಾಯವನ್ನು ಆಯ್ಕೆ ಮಾಡಬೇಕು. ಪರಿಕಲ್ಪನಾತ್ಮಕ ಉಪಕ್ರಮಕ್ಕೆ ಅದು ಸಹಾಯಕ".

ವ್ಯವಸ್ಥಾ ವಿಶ್ಲೇಷಣೆಯು ಅತ್ಯುತ್ತಮ ವ್ಯಕ್ತಿಗಳಿಗೆ, ಅತ್ಯುತ್ತಮ ಕಾಲ ಹಾಗೂ ಮೌಲ್ಯಗಳಲ್ಲಿ, ಅತ್ಯುತ್ತಮ ಸ್ಥಳದಲ್ಲಿ ಅತ್ಯುತ್ತಮ ಸಾಧಕವಾಗಿದೆ.

ವ್ಯವಸ್ಥಾ ಉಪಕ್ರಮದ ಹಂತಗಳು ಅಥವಾ ವ್ಯವಸ್ಥಾ ವಿಶ್ಲೇಷಣೆಯ ಹಂತಗಳು—(Steps in Systems Analysis)

ಪ್ರತಿಯೊಂದು ಉಪಕ್ರಮವೂ ಅದರದೇ ಆದಂತಹ ಹಂತಗಳ ಮುಖೇನ ಸಾಗಿದಾಗಲೇ ಆದರ ಧ್ಯೇಯಗಳನ್ನು ಪೂರೈಸಿಕೊಳ್ಳಲು ಸಾಧ್ಯ. ಈ ಹಂತಗಳು ಬಹಃ ನಿರ್ದಿಷ್ಟವಾದ ರೀತಿಯಲ್ಲಿರಬೇಕು. ಹಾಗೂ ಸಮಾಯೋಜಕತೆಯನ್ನು ಹೊಂದಿರಬೇಕು. ಹಂತಗಳ ನಡುವೆ ಸರಿಯಾದ ಸಂಬಂಧ ಮತ್ತು ಹೊಂದಾಣಿಕೆ ಏರ್ಪಡದಿದ್ದಲ್ಲಿ ಮೂಲ ವ್ಯವಸ್ಥೆಯೇ ಕುಸಿದುಬೀಳುವ ಸಂಭವವಿರುತ್ತದೆ. ಅಂತೆಯೇ ಹಂತಗಳನ್ನು ತೀರ್ಮಾನಿಸುವಾಗ ತೀವ್ರವಾದ ಎಚ್ಚರದಿಂದ ಕೂಡಿರಬೇಕಾಗುತ್ತದೆ.

ಅದ್ಭುತವಾದಂತಹ ಧ್ಯೇಯ ಹಾಗೂ ದೂರದೃಷ್ಟಿ ಮತ್ತು ವಿಷಯವಿಟ್ಟುಕೊಂಡೂ ಅದರ ಕಾರ್ಯವಿಧಾನದಲ್ಲಿ. ನಿರೂಪಣೆಯಲ್ಲಿ ಅಳವಡಿಕೆಯಲ್ಲಿ ಸೋಲು ಅನುಭವಿಸುವುದು ಸಾಮಾನ್ಯವಾದ ವಿಚಾರ, ಅಂದರೆ ವ್ಯವಸ್ಥಿತ ಹಂತಗಳಿದ್ದಲ್ಲಿ ಈ ಬಗೆಯ ವೈಫಲ್ಯತೆಯ ವಿರುದ್ಧ ಸೆಣಸಾಟ ನಡೆಸಬಹುದು.

ಈಗ ವ್ಯವಸ್ಥಾ ಉಪಕ್ರಮದ ಹಂತಗಳನ್ನು ನೋಡೋಣ.

* ವಸ್ತುಸ್ಥಿತಿಯ ವಿಶ್ಲೇಷಣೆ ನಡೆಸುವುದು, ಅಂದರೆ ಸನ್ನಿವೇಶದ ಬಗ್ಗೆ ಸರಿಯಾದ ಅಧ್ಯಯನ, ಅವಲೋಕನ ನಡೆಸುವುದು.
* ನವೀಕೃತ ಸನ್ನಿವೇಶದ ಧ್ಯೇಯಗಳನ್ನು ನಿರೂಪಿಸಬಹುದು, ಅಂದರೆ ಅಪೇಕ್ಷಿತ ವ್ಯವಸ್ಥೆಯ ಗುರಿಗಳನ್ನು ನಿರ್ಧರಿಸುವುದು.
* ಆ ಧ್ಯೇಯ ಸಾಧನೆಗಳ ಮೌಲ್ಯಮಾಪನದ ಕೌಶಲ್ಯ ಕುರಿತಂತೆ ವ್ಯಾಖ್ಯಾನಿಸುವುದು.
* ಪರ್ಯಾಯ ಪರಿಹಾರಗಳ್ನು ಕಲೆಹಾಕುವುದು.
* ಅತ್ಯುತ್ತಮ ಪರಿಹಾರವನ್ನು ಆಯ್ಕೆ ಮಾಡುವುದು. ಇದರಲ್ಲಿ ಮೌಲ್ಯಮಾಪನವು ಪ್ರಮುಖ ಪಾತ್ರವಹಿಸಿದೆ. ಅದರಲ್ಲಿ ಎರಡು ವಿಧ.

ಗುಣಾತ್ಮಕ ಮೌಲ್ಯಮಾಪನ	ಪರಿಮಾಣಾತ್ಮಕ ಮೌಲ್ಯಮಾಪನ

ಈ ಮೌಲ್ಯಮಾಪನದ ನಂತರ ಸೂಕ್ತ ಪರಿಹಾರ ಆರಿಸಬೇಕು.

* ವ್ಯವಸ್ಥಾ ವಿನ್ಯಾಸದ ಅಥವಾ ಮಾದರಿಯನ್ನು ವಿವರಿಸುವುದು.
* ವ್ಯವಸ್ಥೆಗೆ ಬೇಕಾದ ತಂತ್ರಗಳ ರೂಪುರೇಷೆಯನ್ನು ಒದಗಿಸಿಕೊಳ್ಳುವುದು.

* ಪರಿಹಾರವನ್ನು ಪರಿಚಯಿಸುವುದು ಅಥವ ಕಾರ್ಯಾಚರಣೆಯನ್ನು ಪ್ರಾರಂಭ ಗೊಳಿಸುವುದು.

ವ್ಯವಸ್ಥಾ ಉಪಕ್ರಮದ ಕಾರ್ಯಗಳು
(Functions of Systems Approach)

ವ್ಯವಸ್ಥಾ ಉಪಕ್ರಮದ ಕಾರ್ಯಗಳು ಹಲವಾರು. ಅವುಗಳು ಆದರ ಮೂಲಾಂಶಗಳಿಂದೂ ತರೆಸಿಕೊಂಡಿವೆ. ಈಗ ಅವುಗಳನ್ನು ನೋಡೋಣ.

* ಅಧ್ಯಾಪನದ ಗುರಿಗಳನ್ನು ನಿರ್ಧರಿಸುವುದು. ವರ್ತನಾಧ್ಯೇಯಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಕ್ರಿಯೆಗೆ ಒಳಪಡಿಸುವುದು.
* ಶಾಲಾ ವಿದ್ಯಾರ್ಥಿಗಳಿಗೆ ಈ ಧ್ಯೇಯ ಹಾಗೂ ಗುರಿಗಳನ್ನು ತಿಳಿಸಿ ಅವರನ್ನು ಕಲಿಕೆಗೆ ಸಿದ್ಧಪಡಿಸುವುದು.
* ಕಲಿಯುವವನ ಅಗತ್ಯ ಹಾಗೂ ಗುಣಗಳನ್ನು ವಿವರಿಸುವುದು. ಧ್ಯೇಯ ಹಾಗೂ ಗುರಿಗಳ ದೃಷ್ಟಿಯಿಂದ ವಿದ್ಯಾರ್ಥಿಗಳ ಮಟ್ಟವನ್ನು ಮೌಲ್ಯೀಕರಿಸುವುದು.
* ಧ್ಯೇಯಗಳ ಈಡೇರಿಕೆಗೆ ನೂತನ ವಿಧಾನ ಹಾಗೂ ಉಪಕರಣಗಳನ್ನು ಬಳಸಿ ಕೊಳ್ಳುವುದು.
* ವಿದ್ಯಾರ್ಥಿಗಳ ಕಾರ್ಯ ಸಾಧನೆಯ ಮೌಲ್ಯ ಹಾಗೂ ಗುರಿಗಳ ನಡುವಣ ಅಂತರ ವನ್ನು ವಿವರಿಸುವುದರೊಂದಿಗೆ ಅಗತ್ಯಗಳನ್ನು ನಿರ್ಧರಿಸಿ ಆದ್ಯತೆಯ ಆಧಾರದ ಮೇಲೆ ಅವುಗಳನ್ನು ಶ್ರೇಣೀಕರಿಸಬೇಕು. ಅನಂತರ ಕಲಿಕೆಗೆ ಹೊಂದಿ ಕೊಳ್ಳುವಂತಹ ಪರಿಣಾಮಕಾರೀ ವಿಧಾನಗಳನ್ನು ಅಳವಡಿಸಿಕೊಳ್ಳಲು ಕಾರ್ಯ ಕ್ರಮವನ್ನು ನಿಯೋಜಿಸುವುದು.
* ಲಭ್ಯವಿರುವ ಅನೇಕ ಪರ್ಯಾಯಗಳಿಂದ ನಿರ್ದಿಷ್ಟವಾದ ಕಲಿಕೆಯ ಅನುಭವ ಗಳನ್ನು ಆಯ್ದುಕೊಳ್ಳುವುದು.
* ವಿದ್ಯಾರ್ಥಿಗಳಿಗೆ ಅನುಭವಗಳನ್ನು ದೊರಕಿಸುವುದಕ್ಕಾಗಿ ನಿರ್ದಿಷ್ಟವಾದ ವಸ್ತು ಗಳು, ಸವಲತ್ತುಗಳು, ಉಪಕರಣಗಳು, ಸಂಪನ್ಮೂಲಗಳು, ಪರಿಸರ, ಯಂತ್ರ ಈ ಅಗತ್ಯಗಳನ್ನು ಆಯ್ಕೆಮಾಡಿಕೊಳ್ಳುವುದು.
* ಶಿಕ್ಷಕವೃಂದ, ಅಧ್ಯಾಪಕೇತರ ಸಿಬ್ಬಂದಿ, ವಿದ್ಯಾರ್ಥಿ ಈ ವ್ಯಕ್ತಿಗಳ ಪಾತ್ರಗಳನ್ನು ಸರಿಯಾಗಿ ನಿರ್ಧರಿಸುವುದು.
* ಸೂಕ್ತವಾದ ಅನುಬಂಧದಲ್ಲಿ ವಿದ್ಯಾರ್ಥಿಗಳೊಂದಿಗೆ ಕಾರ್ಯವನ್ನು ಅಳವಡಿಸುವುದು.
* ವಿದ್ಯಾರ್ಥಿಗಳ ಕಾರ್ಯಸಾಧನೆಯ ಆಧಾರದ ಮೇಲೆ ಮೂಲ ಧ್ಯೇಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅವರ ಫಲಿತವನ್ನು ಪರೀಕ್ಷಿಸಿ ನಂತರ ಮೌಲ್ಯಮಾಪನ ಮಾಡಬೇಕು.


• ವಿದ್ಯಾರ್ಥಿಗಳ ಕಲಿಕೆಯಲ್ಲಿ ನಿರೀಕ್ಷಿತ ಬದಲಾವಣೆ ಹಾಗೂ ಪ್ರಗತಿಯುಂಟು ಮಾಡಬೇಕಾದರೆ ವ್ಯವಸ್ಥೆಯಲ್ಲಿ ಪರಿಷ್ಕರಣೆ ಉಂಟುಮಾಡುವುದು.

ವ್ಯವಸ್ಥಾ ಉಪಕ್ರಮದ ಮಾದರಿಗಳು
(Models of Systems Approach) :

ಸ್ವನಿಯಂತ್ರಿತ ವ್ಯವಸ್ಥಾ ಮಾದರಿಯನ್ನು ತಯಾರಿಸಬೇಕೆಂಬುದೇ ನಮ್ಮ ಉದ್ದೇಶ. ನಾವು ತಯಾರಿಸಬೇಕಾಗಿರುವ ವಿನ್ಯಾಸವು ಸಂಕುಚಿತ ಸ್ಥಿತಿಯನ್ನು ಕಾಯ್ದುಕೊಳ್ಳಬೇಕಲ್ಲದೆ ತನ್ನ ಆಂತರಿಕ ಒತ್ತಡ ಮತ್ತು ಬಿಗಿತಗಳನ್ನು ಸರಿಪಡಿಸಿ ಹೊಂದಿಸಿಕೊಂಡು ವ್ಯವಸ್ಥೆಯನ್ನು ಸಾಧಿಸಿಕೊಳ್ಳುವಂತಿರಬೇಕು. ಒಂದು ಪರಿಪೂರ್ಣ ಸ್ವನಿಯಂತ್ರಿತ ವ್ಯವಸ್ಥೆಯನ್ನು ತಲುಪುವ ಮೊದಲು ಸರಳ ಮಾದರಿಗಳನ್ನು ತೆಗೆದುಕೊಂಡು ಅದಕ್ಕೆ ಘಟಕಗಳನ್ನು ಸೇರ್ಪಡಿಸುವುದರೊಂದಿಗೆ ಉತ್ತಮ ವ್ಯವಸ್ಥೆಯ ಕಡೆಗೆ ತೆರಳಬಹುದು.

ಈ ನಮ್ಮ ಉದ್ದೇಶಗಳಿಗಾಗಿ ನಾವು ವಿದ್ಯಾರ್ಥಿಗಳು, ಸಿಬ್ಬಂದಿವರ್ಗ, ಕಾರ್ಯಕ್ರಮ, ಸಾಧನ ವ್ಯವಸ್ಥೆ ಈ ಮುಂತಾದವುಗಳನ್ನು ಗಮನಿಸಬೇಕಾಗುತ್ತದೆ. ಅಂದರೆ ವ್ಯವಸ್ಥೆಯು ಭರಿತ, ಪ್ರಕ್ರಿಯೆ ಹಾಗು ಫಲಿತಗಳನ್ನು ಒಳಗೊಂಡಿದೆ. ಭರಿತವು ಒಂದು ವ್ಯವಸ್ಥೆಗೆ ಪ್ರವೇಶಿಸಿ ಅದನ್ನು ಶಕ್ತಿಯುತಗೊಳಿಸುತ್ತದೆ. ಶಾಲೆ ಅಥವ ಕೆಲವು ಸಂಘಟನೆಗಳು ಭರಿತದ ಮೇಲೆ ಅಲ್ಪ ಸ್ವಲ್ಪ ಹಿಡಿತ ಹೊಂದಿರಬಹುದು ಅಥವ ಹೊಂದಿರದೇ ಇರಬಹುದು. ಭರಿತವನ್ನು ಳಿಸಿಕೊಂಡು ನಿರ್ದಿಷ್ಟ ಫಲಿತವುಂಟು ಮಾಡಲು ಪ್ರತಿಯೊಂದು ವ್ಯವಸ್ಥೆಯೂ ಪ್ರಯತ್ನಿಸುವುದು. ಶೈಕ್ಷಣಿಕ ಪ್ರಕ್ರಿಯೆಯ ಮೂಲಕ ಒಂದು ಭರಿತವು ಪ್ರಥಮವಾಗಿ ಫಲಿತವಾಗಿ ಮಾರ್ಪಡುತ್ತದೆ.

ಆಕೃತಿ 3. 'ಮೂಲ ವ್ಯವಸ್ಥೆ'.



ಈ ಮಾದರಿಯಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಕ್ರಿಯೆಯು ಅನೇಕ ಉಪಪ್ರಕ್ರಿಯೆ, ಉಪವ್ಯವಸ್ಥೆಗಳನ್ನು ಹೊಂದಿದ್ದು ಸಂಕೀರ್ಣವಾಗಿರುತ್ತದೆ.

ಸಮಗ್ರ ನಿರ್ವಹಣಾ ವ್ಯವಸ್ಥೆ (Total Management System) :

ಈ ಮಾದರಿಯನ್ನು (ಆಕೃತಿ-4) ಸಮಗ್ರ ನಿರ್ವಹಣಾ ವ್ಯವಸ್ಥೆ ಯೆಂದು ಕರೆಯಲಾಗಿದೆ. ಈ ಮಾದರಿಯು ಕೆಲವು ಉಪ ವ್ಯವಸ್ಥೆಗಳನ್ನು ವರ್ಣಿಸುತ್ತದೆ. ಅವುಗಳು ಮೂಲ ವ್ಯವಸ್ಥೆಗೆ ಸಂಬಂಧಿಸಿದವು (ಆಕೃತಿ 4).

ಆಡಳಿತಾತ್ಮಕ ಪ್ರಕ್ರಿಯೆ, ಮೇಲ್ವಿಚಾರಣೆ ಮತ್ತು ಪಠ್ಯಕ್ರಮ ಪ್ರಕ್ರಿಯೆ, ವಿದ್ಯಾರ್ಥಿ ಸಿಬ್ಬಂದಿ ಪ್ರಕ್ರಿಯೆ ಹಾಗೂ ವಾಣಿಜ್ಯ ವ್ಯವಹಾರ ಪ್ರಕ್ರಿಯೆ. ಈ ತೆರನಾದ ಪ್ರಕ್ರಿಯೆಗಳು ಇಲ್ಲಿ ಜರುಗುವವಲ್ಲದೇ ಪ್ರತಿಯೊಂದು ಪ್ರಕ್ರಿಯೆಯೂ,

ಪ್ರಕ್ರಿಯೆಗೆ ಸಂಬಂಧಿಸಿದ ಸಮಸ್ಯೆ ಹಾಗೂ ಪರಿಹಾರಗಳನ್ನು ಹೊಂದಿರುವುದನ್ನು ನಾವು ಕಾಣಬಹುದು.

ನಾವು ಸ್ವನಿಯಂತ್ರಿತ ವ್ಯವಸ್ಥೆಯನ್ನು ತಯಾರಿಸಬೇಕಾಗಿರುವುದರಿಂದ ಆ ನಿಟ್ಟಿನಲ್ಲಿ ಈ ಮಾದರಿಯು ಪರಿಪೂರ್ಣತೆ ಸಾಧಿಸಿಲ್ಲವಾದ್ದರಿಂದ ಇದಕ್ಕೆ ಕೆಲವು ಘಟಕಗಳ ಸೇರ್ಪಡೆಯು ಅಗತ್ಯವಿದೆ.

ಸರಳ ಪ್ರತಿಪುಷ್ಠಿಯ ಮೂಲ ವ್ಯವಸ್ಥಾ ಮಾದರಿ
(A Basic System with Simple Feedback)

ಪ್ರತಿಯೊಂದು ಉಪ ವ್ಯವಸ್ಥೆಯೂ ಅನೇಕ ಚಿಕ್ಕ ಚಿಕ್ಕ ಅಂಶಗಳಾಗಿ ಸತತವಾಗಿ ಮಾರ್ಪಟ್ಟಿರುತ್ತದೆ. ಆದರೆ ನಾವು ಸ್ವ-ನಿಯಂತ್ರಿತ ವ್ಯವಸ್ಥೆಯನ್ನು ತಯಾರಿಸಬೇಕಿರುವುದರಿಂದ ಕೆಲವು ಘಟಕಗಳನ್ನು ಸೇರಿಸಬೇಕಾಗುತ್ತದೆ. ಸ್ವನಿಯಂತ್ರಿತ ವ್ಯವಸ್ಥೆಯನ್ನು ತಯಾರಿಸಬೇಕಾದರೆ ನಾವು ಈ ಘಟಕಗಳನ್ನು ಪ್ರತಿಪುಷ್ಟಿ ಅಥವ ನಿಯಂತ್ರಣದ ಮೂಲಕ ಸೇರಿಸಬೇಕು. ಅದನ್ನು ಈ ಮಾದರಿಯಲ್ಲಿ ತೋರಿಸಲಾಗಿದೆ (ನೋಡಿ ಆಕೃತಿ 5).

ನಿಯಂತ್ರಣ ಮತ್ತು ನಿಯಮಗಳೆಂಬ ಎರಡು ಹೊಸ ಅಂಶಗಳು ಇಲ್ಲಿ ಸೇರಿಸಲ್ಪಟ್ಟಿವೆ. ನಿಯಂತ್ರಣವು ನಿರೀಕ್ಷಿತ ಉತ್ಪನ್ನ ಹಾಗೂ ನಿಜವಾದ ಉತ್ಪನ್ನಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವ ಕೆಲಸ ಮಾಡುತ್ತದೆ. ಇವೆರಡರಲ್ಲಿ ಅಗಾಧವಾದ ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಅದು 'ನಿರ್ಣಯ ನಿಯಮ'ಕ್ಕೆ ಋಣಾತ್ಮಕ ಪ್ರತಿಪುಷ್ಠಿಯಾಗಿ ಪರಿಣಮಿಸುತ್ತದೆ. ನಿರ್ಣಯ ನಿಯಮವು ನಿರೀಕ್ಷಿತ ಉತ್ಪನ್ನ ತರಲು ಬೇಕಾದಂತಹ ಹೊಸದಾದ ನಿಯಮಗಳನ್ನು ಪ್ರಮಾಣದ ಆಧಾರದ ಮೇಲೆ ನಿರ್ಧರಿಸುತ್ತದೆ. ಈ ವ್ಯವಸ್ಥಾ ಪ್ರಕ್ರಿಯೆಯಲ್ಲಿ ನಿರ್ಣಯವು ಅತಿ ಮುಖ್ಯವಾದ ಘಟಕವಾಗಿದೆ. ಈ ಘಟಕದಲ್ಲಿ ನಿರೀಕ್ಷಿತ ಉತ್ಪನ್ನ ಬರುವವರೆಗೂ ಅನೇಕ ಹೊಂದಾಣಿಕೆಗಳನ್ನು ಮಾಡಿಕೊಳ್ಳಲಾಗುತ್ತದೆ.

ನಿರ್ಣಯ ನಿಯಮವು ಸಮಸ್ಯಾ ಪರಿಹಾರ ಹಾಗೂ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದುದಾಗಿರುತ್ತದೆ. ಒಂದು ಶಾಲಾ ಸಂದರ್ಭದಲ್ಲಿ ಇದು ಆಡಳಿತಾಧಿಕಾರಿಗೆ ಸಂಬಂಧಿಸಿರುತ್ತದೆ.

ಆದರೂ ಈ ಮಾದರಿಯಿಂದ 'ಸ್ವ-ನಿಯಂತ್ರಣ ವ್ಯವಸ್ಥೆ'ಯನ್ನು ಸಾಧಿಸಿದಂತಾಗುವುದಿಲ್ಲ.

ನಾವು ನಿಯಂತ್ರಣ ಹಾಗೂ ನಿರ್ಣಯಗಳನ್ನು ಈಗಾಗಲೇ ಸೇರಿಸಿದ್ದಾಗ್ಯೂ ಸಂಪೂರ್ಣ ವ್ಯವಸ್ಥೆಯನ್ನು ಸಾಧಿಸಿದಂತಾಗುವುದಿಲ್ಲ. ಯಾಕೆಂದರೆ ನಾವು 'ನಿಯಂತ್ರಣ' ಅಂಶವನ್ನು ಕೇವಲ ಫಲಿತದ ಕಡೆ ಸೇರಿಸಿದ್ದೇವೆ. ಈಗ ಪೂರ್ಣ ನಿಯಂತ್ರಣವನ್ನು ಸೇರಿಸಬೇಕಾಗಿದೆ.

ಪೂರ್ಣ ಪ್ರತಿಪುಷ್ಠಿಯ ಮೂಲ ವ್ಯವಸ್ಥೆ
(A Basic System with Complete Feedback)

ಈ ಮಾದರಿಯಲ್ಲಿ ಅನೇಕ ಹೊಸದಾದಂತಹ ಘಟಕಗಳನ್ನು ಸೇರಿಸಲಾಗಿದೆ. ಅವುಗಳೆಂದರೆ ಬಾಹ್ಯ ಸಂವೇದಕ, ಅಭಿಜ್ಞಾನಕ, ಕಾರ್ಯಗತಕ, ಹಾಗೂ ನಿಯಂತ್ರಣ ಚಿನ್ಹೆ. ಪ್ರತಿಯೊಂದೂ ತಮ್ಮ ಕಾರ್ಯ ವಿಧಾನಗಳ ಮೂಲಕವೇ ಗುರುತಿಸಲ್ಪಡುತ್ತವೆ (ನೋಡಿ : ಆಕೃತಿ 6).

ಬಾಹ್ಯ ಸಂವೇದಕ—(External Sensor)

ಬಾಹ್ಯ ಸಂವೇದಕವು ವ್ಯವಸ್ಥೆಯ ವಾತಾವರಣವನ್ನು ಶೋಧಿಸುತ್ತದೆ. ವ್ಯವಸ್ಥೆಯನ್ನು ಸಂತುಲತೆಯ ಕಡೆಗೆ ಕರೆದೊಯ್ಯಲು ಇದು ಅನೇಕ ಪ್ರಭಾವಗಳನ್ನು ಉಂಟುಮಾಡಿ ಬದಲಾವಣೆ ತರುತ್ತದೆ. ಯಾವುದೇ ಸಾಮಾಜಿಕ, ರಾಜಕೀಯ, ಆರ್ಥಿಕ, ಮನೋ ವೈಜ್ಞಾನಿಕ, ತಾಂತ್ರಿಕ ಹಾಗೂ ಭಾವನಾತ್ಮಕ ಬದಲಾವಣೆಗಳನ್ನು ಇದು ಉಂಟುಮಾಡುತ್ತದೆ. ಅಲ್ಲದೆ ಬಾಹ್ಯ ಸಂವೇದಕವು ಭರಿತದ ಕಡೆಗೆ ಗಮನ ನೀಡಿ ಬದಲಾವಣೆ ಮಾಡುವುದರ ಸಾಧ್ಯಾಸಾಧ್ಯತೆಗಳನ್ನು ವಿವೇಚಿಸುತ್ತದೆ. ಇಲ್ಲಿ ನಾವು ಶಾಲೆಗೆ ಪ್ರವೇಶಿಸುವ ಮಗುವಿನ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಈ ಹಿಂದಿನ ವಿದ್ಯಾರ್ಥಿಗಿಂತ ಹೆಚ್ಚಿನ ಜ್ಞಾನವನ್ನು ಹೊಂದಿದ್ದಾನೆಯೇ ? ಹಾಗಾದರೆ ಅವು ಯಾವುವು ? ಅತೀ ವಿಶೇಷವಾದ ಯಾವುದಾದರೂ ಕೌಶಲ್ಯ ಹೊಂದಿರುವನೇ ? ಹಾಗಿದ್ದರೆ ಅದರ ಪ್ರಮಾಣವೇನು ? ಪ್ರತಿಯೊಂದೂ ಸಹ ಬಾಹ್ಯ ಸಂವೇದಕದಿಂದ ಗಮನಿಸಲ್ಪಟ್ಟು ನಂತರ ಭರಿತ ವಿಶ್ಲೇಷಕದ ಕಡೆಗೆ ಕಳಿಸಲ್ಪಡುತ್ತದೆ.

ಭರಿತ ವಿಶ್ಲೇಷಕ—(Input Analysis)

ಭರಿತ ವಿಶ್ಲೇಷಕವು ಬಾಹ್ಯ ಸಂವೇದಕದಿಂದ ಕೊಡಮಾಡುವ ಅಂಶಗಳನ್ನೆಲ್ಲ ವಿಂಗಡಿಸಿ ಅದನ್ನು ನಿರ್ಣಯ ನಿಯಮದ ಕಡೆಗೆ ರವಾನಿಸುತ್ತದೆ. ಭರಿತ ವಿಶ್ಲೇಷಕದ ಪ್ರಧಾನಕಾರ್ಯವೆಂದರೆ 'ವಿಶ್ಲೇಷಣೆ ಮತ್ತು ಭರಿತದ ವ್ಯವಸ್ಥೆ' (Analysis and Organisation of Input). ಯೋಜನಾ ತಿಳುವಳಿಕೆಗೆ ಇದರಿಂದ ಅನುಕೂಲ. ಅನೇಕ ಅಂಶಗಳು ಈ ಭರಿತ ವಿಶ್ಲೇಷಕದಿಂದ ಕೊಡಲ್ಪಡುತ್ತವೆ. ಅವುಗಳು ವ್ಯವಸ್ಥೆಯ ತಿರುವಿಗೆ ಅವಧಿ ವಿಸ್ತರಣೆಗೆ ಸಹಾಯಕ. ಜನಸಂಖ್ಯಾ ಬೆಳವಣಿಗೆ ಪ್ರಮಾಣ, ಕೆಲಸದ ನಿರ್ದಿಷ್ಟತೆಯ ಬದಲಾವಣೆ, ಈ ಮುಂತಾದವು ಭರಿತ ವಿಶ್ಲೇಷಕದಿಂದ ಫಲಿತವಾಗಿದೆ. ಈ ಬಾಹ್ಯ ಸಂವೇದಕ ಹಾಗೂ ಭರಿತ ವಿಶ್ಲೇಷಕಗಳು 'ಏಕ ಘಟಕ' (Single Unit) ಎಂದು ಕರೆಯಲ್ಪಟ್ಟು ಅವು ಶಾಲೆಗಳಲ್ಲಿ ಅನುಕೂಲಕರ.

ಅಭಿಜ್ಞಾನಕ (Identifier)

ಅಭಿಜ್ಞಾನಕವು ಒಂದು ರೀತಿಯಲ್ಲಿ 'ಆಂತರಿಕ ಸಂವೇದಕ' ಇದ್ದ ಹಾಗೆ,

ಅದು ವ್ಯವಸ್ಥೆಯ ಆಂತರಿಕ ಸ್ಥಿತಿಗತಿಯ ಬಗ್ಗೆ ಹಾಗೂ ಫಲಿತದ ಪ್ರಮಾಣದ ಬಗ್ಗೆ ವಿಶ್ಲೇಷಣೆ ನಡೆಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹೊಸದಾದ ನಿಯಮಾವಳಿಗಳನ್ನು ರೂಪಿಸಲು 'ನಿರ್ಣಯ ನಿಯಮ' ಘಟಕಕ್ಕೆ ವ್ಯವಸ್ಥೆಯ ಆಂತರಿಕ ಸ್ಥಿತಿಗಳ ಬಗ್ಗೆ ಒಂದು ಸ್ಪಷ್ಟ ಚಿತ್ರ ನೀಡುತ್ತದೆ. ಇದು ನೈಜ ಹಾಗೂ ನಿರೀಕ್ಷಿತ ಉತ್ಪನ್ನಗಳ ನಡುವೆ ಹೋಲಿಕೆಯನ್ನು ಮಾಡುತ್ತದೆ. ನಂತರ ಅದನ್ನು, ಸಂಶ್ಲೇಷಿಸಿ ಅದನ್ನು ನಿರ್ಣಯ ನಿಯಮದ ಕಡೆಗೆ ಕಳಿಸುತ್ತದೆ.

ಕಾರ್ಯಗತಕ (Implimenter)

ಭರಿತ ವಿಶ್ಲೇಷಕ ಹಾಗೂ ಅಭಿಜ್ಞಾನಕಗಳ ಫಲಿತವು ನಿರ್ಣಯ ನಿಯಮಕ್ಕೆ ಭರಿತವಾಗಿ ಪರಿಣಮಿಸಿ ನಿರ್ಣಯ, ಕಾಯಿದೆ ಅಥವ ನಿಯಮಗಳನ್ನು ರೂಪಿಸಲು ಸಹಾಯಕ. ಇವುಗಳೂ ಸಂಕೇತಗಳ ಮೂಲಕ ಕಾರ್ಯಗತಕಕ್ಕೆ ಕಳಿಸಲ್ಪಡುತ್ತವೆ.

ಪ್ರಕ್ರಿಯೆಯಲ್ಲಿನ ನಿಜವಾದ ಬದಲಾವಣೆಯು ಈ ಕಾರ್ಯಗತಕದಿಂದ ಸಾಧಿಸಲ್ಪಡುತ್ತದೆ. ಈ ಕಾರ್ಯಗತಕವು ಬಲವತ್ತರವಾದ ಕಾರಣವನ್ನು ಹೊಂದಿದ್ದಲ್ಲಿ ಮಾತ್ರ ಪ್ರಕ್ರಿಯೆಯಲ್ಲಿ ಬದಲಾವಣೆ ತರಲು ಪ್ರಯತ್ನ ಮಾಡುತ್ತದೆ. ಯಾವುದೇ ಬದಲಾವಣೆ ತಂದರೂ ಅಭಿಜ್ಞಾನಕದೊಡನೆ ಕಾರ್ಯಗತಕವು ಸಂಪರ್ಕ ಹೊಂದಿರುತ್ತದೆ. ಅದ್ದರಿಂದ ಇಲ್ಲಿ ತಿಳಿದುಬರುವ ಅಂಶವೆಂದರೆ ಅಭಿಜ್ಞಾನಕವು ಬಾಹ್ಯ ವ್ಯವಸ್ಥೆಯಲ್ಲಿ ಆಗುವ ಯಾವುದೇ ಬದಲಾವಣೆಗಳನ್ನು ಗಮನಿಸುತ್ತಿರುತ್ತದೆ.

ಸಂಪೂರ್ಣ ಸ್ವನಿಯಂತ್ರಣ ಮತ್ತು ಸಮನ್ವಯಾತ್ಮಕ ವ್ಯವಸ್ಥೆ (A Complete Self-regulating and adaptive System)

ಈ ಮಾದರಿ (ನೋಡಿ ಆಕೃತಿ-7) ಯಲ್ಲಿ ಸೇರಿರುವ ನೂತನ ಘಟಕವೆಂದರೆ 'ವ್ಯವಸ್ಥಾ ವಿನ್ಯಾಸ' (System Design). ಈ ಅಂಶದ ಸೇರ್ಪಡೆಯೊಂದಿಗೆ ಸಂಪೂರ್ಣ ಸ್ವನಿಯಂತ್ರಣ ಹಾಗೂ ಸಮನ್ವಯಾತ್ಮಕ ವ್ಯವಸ್ಥೆಯನ್ನು ಸಾಧಿಸದಂತಾಗುತ್ತದೆ. ಈ ವ್ಯವಸ್ಥಾ ವಿನ್ಯಾಸವು ವ್ಯವಸ್ಥೆಯ ಪೂರ್ಣಸ್ಥಿತಿಯ ಬಗ್ಗೆ ಅರಿವು ಹೊಂದಿರುತ್ತದಲ್ಲದೆ ಅಭಿಜ್ಞಾನಕದ ದಿಸೆಯಿಂದ ಈ ಯಾವುದೇ ಕಾರ್ಯವೂ ಸಮರ್ಪಕವಾಗಿ ಸಾಧಿಸಲ್ಪಡುತ್ತದೆಂದು ತಿಳಿದಿರುತ್ತದೆ.

ನಿರೀಕ್ಷಿತ ಉತ್ಪನ್ನವು ಬಾರದಿದ್ದಲ್ಲಿ ವ್ಯವಸ್ಥೆಯು ದೋಷಪೂರ್ಣವಾಗಿದೆ ಎಂದರ್ಥ. ಅಂತೆಯೇ ಈ ಮಾದರಿಯಲ್ಲಿ ವ್ಯವಸ್ಥಾವಿನ್ಯಾಸವೆಂಬ ಘಟಕವನ್ನು ಸೇರಿಸಲಾಗಿದೆ. ಆದರೂ ಈ ಮಾದರಿಯು ಅರೆಕೊರೆಗಳಿಂದ ಮುಕ್ತವಾಗಿಲ್ಲ. ಈ ಮಾದರಿಯನ್ನು ಆಕೃತಿಯ ರೂಪದಲ್ಲಿ ನೋಡಿದಾಗ ಈ ವಿವರಣೆಯು ಮತ್ತಷ್ಟು ಅರ್ಥಪೂರ್ಣತೆ ಹೊಂದುವುದು.

ಉಪವ್ಯವಸ್ಥೆಗಳೊಂದಿಗೆ ಸಂಪೂರ್ಣ-ಸಮನ್ವಯಾತ್ಮಕ ಸ್ವನಿಯಂತ್ರಣ ವ್ಯವಸ್ಥೆ—(A Total School System with Sub-systems)

ಇಲ್ಲಿ ಇಡೀ ವ್ಯವಸ್ಥೆಯು 'ನಾಲ್ಕು' ಉಪವ್ಯವಸ್ಥೆಗಳಾಗಿ ವಿಭಾಗಿಸಲ್ಪಟ್ಟಿದೆ (ಆಕೃತಿ 8). ಅವುಗಳೆಂದರೆ ವಿದ್ಯಾರ್ಥಿ ಸಿಬ್ಬಂದಿ ವ್ಯವಹಾರ ಹಾಗೂ ಲೆಕ್ಕಾಚಾರ, ಕಟ್ಟಡ ಮತ್ತು ಮೈದಾನ ಹಾಗೂ ಪಠ್ಯಕ್ರಮ ಮತ್ತು ಅಧ್ಯಾಪನ. ಈ ವ್ಯವಸ್ಥೆಯು 'ಪಠ್ಯಕ್ರಮ ಹಾಗೂ ಬೋಧನೆ'ಯೆಂಬ 'ಮೂಲಪ್ರಕ್ರಿಯೆ'ಯ ಮೇಲೆ ಆಧಾರಿತವಾಗಿ ರಚಿಸಲ್ಪಟ್ಟಿದ್ದು ಉಳಿದ ಎಲ್ಲಾ ಉಪವ್ಯವಸ್ಥೆಗಳೂ ಇದಕ್ಕೆ ಬೆಂಬಲ ನೀಡುವಂತಿರುತ್ತವೆ. ಆದ್ದರಿಂದ ಪ್ರತಿಯೊಂದು ಉಪವ್ಯವಸ್ಥೆಯ ಭರಿತಗಳು ಪಠ್ಯಕ್ರಮ ಹಾಗೂ ಬೋಧನೆಯ ಫಲಿತಗಳಾಗಿ ಪರಿಣಮಿಸುತ್ತವೆ

ಯಾವುದೇ ಸಂದರ್ಭದಲ್ಲಿ ಈ ಒಂದೇ ವ್ಯವಸ್ಥೆಯ ವಿನ್ಯಾಸವೇ ಅನ್ವಯಿಕವಾಗುವುದಿಲ್ಲ. ಶಾಲೆಯ ಗಾತ್ರ ಹಾಗೂ ಅಗತ್ಯಗಳ ಆಧಾರದ ಮೇಲೆ ವಿನ್ಯಾಸವು ಬೇರೆಯದೇ ಆದ ರೂಪ ಪಡೆದುಕೊಳ್ಳಬಹುದು. ಆದರೆ ಮೂಲ ಘಟಕಗಳು ಹಾಗೂ ಪ್ರಕ್ರಿಯೆಯು ಪರಸ್ಪರ ಸರಿಯಾದ ಸಂಪರ್ಕ ಹೊಂದಿರಬೇಕು ಇದು ಪ್ರತಿಯೊಂದು ಮಾದರಿಗೂ ಅನ್ವಯಿಸುವುದು.

ಈ ಮಾದರಿಯನ್ನು ವೀಕ್ಷಿಸಿದರೆ ಪ್ರತಿಯೊಂದು ಉಪಪ್ರಕ್ರಿಯೆಗಳೂ ತಮ್ಮವೇ ಆದ ನಿಯಂತ್ರಣ ಘಟಕಗಳನ್ನು ಹೊಂದಿರುವುದನ್ನು ಕಾಣಬಹುದು. ಅವು ಭರಿತ ವಿಶ್ಲೇಷಕ, ನಿರ್ಣಯ ನಿಯಮ, ಅಭಿಜ್ಞಾನಕ, ಕಾರ್ಯಗತಕ ಮತ್ತು ವ್ಯವಸ್ಥೆ ವಿನ್ಯಾಸಿ ಘಟಕಗಳೊಂದಿಗೆ ಸಂಬಂಧವಿರಿಸಿಕೊಂಡಿರುತ್ತವೆ. ಆದ್ದರಿಂದ ಸಂಪೂರ್ಣ ಸ್ವನಿಯಂತ್ರಣ ಹಾಗೂ ಸಮನ್ವಯಾತ್ಮಕ ವ್ಯವಸ್ಥೆಯಾಗಿರುತ್ತದೆ. ಒಟ್ಟಾರೆ ವ್ಯವಸ್ಥಾವಿನ್ಯಾಸಕಾರನು ವ್ಯವಸ್ಥಾ ನಿರ್ಣಯ ನಿಯಮ, ವ್ಯವಸ್ಥಾಭರಿತ ವಿಶ್ಲೇಷಕ, ಹಾಗೂ ವ್ಯವಸ್ಥಾಅಭಿಜ್ಞಾನಕ, ಈ ಅಂಶಗಳನ್ನು ಸೇರಿಸಲೇಬೇಕು.

ವ್ಯವಸ್ಥಾ ನಿರ್ಣಯ ನಿಯಮವು ಸಂಯೋಜಕ ಕಾರ್ಯವನ್ನು ಹೊಂದಿದ್ದು ಅದು ಪ್ರತಿಯೊಂದು ಉಪವ್ಯವಸ್ಥೆಯೊಂದಿಗೆ ಉತ್ತಮ ಹೊಂದಾಣಿಕೆ ಮಾಡಿಸುವುದಾಗುತ್ತದೆ. ಅಂತೆಯೇ ನಿಯಂತ್ರಣ ವ್ಯವಸ್ಥೆಗೂ ಸೂಕ್ತ ಪ್ರಾಧಾನ್ಯತೆಯನ್ನು ನೀಡಬೇಕಾಗುತ್ತದೆ.

ಬೋಧನೆ ಮತ್ತು ವ್ಯವಸ್ಥಾ ಉಪಕ್ರಮ–
(Teaching and System Approach)

ನಿರ್ದಿಷ್ಟ ಧ್ಯೇಯಗಳಿಗೆ ಸಂಬಂಧಿಸಿದಂತೆ ಸಕಲ ಸಮಸ್ಯೆಗಳನ್ನು ಸಂಯೋಜಿಸುವ ಕೆಲಸ ವ್ಯವಸ್ಥಾ ಉಪಕ್ರಮವಾಗುತ್ತದೆ ಶಿಕ್ಷಣದಲ್ಲಿ ಇದು ಯೋಜಿತ, ವ್ಯವಸ್ಥಿತ ಕಲಿಕೆಯ ಸಂಪನ್ಮೂಲಗಳಿಗೆ ಉಪಯುಕ್ತವಾದುದಾಗಿದೆ. ಅನೇಕ ಪರಿಣಾಮಕಾರಿ, ವಿಧಾನಗಳ ಮೂಲಕ ಕಲಿಕೆಯ ಧ್ಯೇಯಗಳನ್ನು ಸಾಧಿಸುವುದು

ಇದರ ಉದ್ದೇಶವಾಗಿದೆ. ವ್ಯವಸ್ಥೆಯು ಬೋಧನೆಯ ಸಮಗ್ರ ಮೂಲಾಂಶಗಳನ್ನು ಒಳಗೊಂಡಿದೆ. ಈ ಪ್ರತಿಯೊಂದು ಘಟಕಾಂಶಗಳನ್ನು ಒದಗಿಸಿ ನಿರ್ದಿಷ್ಟ ಸಂದರ್ಭಗಳಲ್ಲಿ ಅವುಗಳ ಸಮೂಹ ಕ್ರಿಯೆಗಳಿಂದ ಧ್ಯೇಯಗಳನ್ನು ಈಡೇರಿಸುವ ಕಾರ್ಯ ಮಾಡುತ್ತದೆ.

ಒಂದು ಬೋಧನಾ ವ್ಯವಸ್ಥೆಯಲ್ಲಿ ಬೋಧಕ ಅಥವ ಸಲಹೆಗಾರನು ಆ ವ್ಯವಸ್ಥೆಯ ಒಂದು ಅಂಗವಾಗಿ ಪರಿಗಣಿಸಲ್ಪಟ್ಟಿರುವನು. ಅಲ್ಲಿ ವಿವರಿಸಲ್ಪಟ್ಟಿರುವಂತಹ ಧ್ಯೇಯಗಳನ್ನು ತಿಳಿಯಲು, ಅವುಗಳ ಸರಿಯಾದ ಕಲ್ಪನೆಯನ್ನು ಹೊಂದಲು, ಹಾಗೂ ಸ್ವಪರೀಕ್ಷಣೆ, ಸ್ವತಿದ್ದುಪಡಿ, ನಿರಂತರ ಮೌಲ್ಯಮಾಪನಕ್ಕೆ ಅವಕಾಶವಿರುತ್ತದೆ. 'ವ್ಯವಸ್ಥ ಉಪಕ್ರಮ'ದಲ್ಲಿ ಬೋಧಕನು ತರಗತಿ ಚಟುವಟಿಕೆ ಹಾಗೂ ಕೆಲವು ಮೂಲವಸ್ತುಗಳನ್ನು ತನ್ನ ಕಾರ್ಯದ ಸಮರ್ಪಕತೆಗಾಗಿ ಬಳಸಬಹುದು. ಬೋಧಕನು ವಿಷಯದ ಬಗ್ಗೆ ಪರಿಪೂರ್ಣವಾದಂತಹ ತಿಳಿವಳಿಕೆಯನ್ನು ಹೊಂದಿರಬೇಕು. ತನ್ನದಾದ ಮಿತಿಗಳನ್ನು, ವಿದ್ಯಾರ್ಥಿ-ವಿದ್ಯಾರ್ಥಿನಿಯರ ವ್ಯಕ್ತಿಗತ ಭಿನ್ನತೆಗಳನ್ನು, ಅವರ ಕಲಿಕೆಯ ಸಾಮರ್ಥ್ಯಗಳನ್ನು ತಿಳಿದಿರಲೇಬೇಕು. ನಿರ್ದೇಶಿತ ಗುರಿಗಳ ಈಡೇರಿಕೆಗೆ ವ್ಯವಸ್ಥಾ ಉಪಕ್ರಮವು ಕಲಿಕೆಯ ಫಲಿತಗಳ ನಿರಂತರ ಮೌಲ್ಯಮಾಪನಕ್ಕೆ ಅವಕಾಶವನ್ನು ಮಾಡಿಕೊಡುತ್ತದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಒಂದು ಶೈಕ್ಷಣಿಕ ಸನ್ನಿವೇಶಕ್ಕೆ ಈ ಮುಂದಿನ ಪರಸ್ಪರ ಸಂಬಂಧಿತ, ಅವಲಂಬಿತ ಹಂತಗಳನ್ನು ಅನ್ವಯಿಸುತ್ತದೆ. ಅವುಗಳೆಂದರೆ—

* ಫಲಿತದ ಮಟ್ಟವನ್ನು ಸ್ಪಷ್ಟಪಡಿಸುವಿಕೆ-ಇದು ಪೂರ್ವೋತ್ತರ ಪರೀಕ್ಷೆ ಹಾಗೂ ವರ್ತನಾಧ್ಯೇಯಗಳನ್ನು ಒಳಗೊಂಡಿರುತ್ತದೆ.
* ನಿರ್ದಿಷ್ಟ ಕಲಿಕೆಯ ಗುಂಪಿನ ಅಗತ್ಯಗಳಿಗೆ ಸಂಬಂಧಿಸಿದ ಕಲಿಕಾ ಸ್ವರೂಪದ ವಸ್ತು ಹಾಗೂ ವಿಧಾನಗಳನ್ನು ಕಲಿಕೆಯ ಯೋಜಿತ ಭರಿತ ಹಾಗೂ ಪ್ರಕ್ರಿಯೆಯಲ್ಲಿ ಅಳವಡಿಸುವುದು.
* ಬೋಧನಾ ವ್ಯವಸ್ಥೆಯನ್ನು ಸುಧಾರಿಸಲು, ಉತ್ತಮಪಡಿಸಲು ಮೌಲ್ಯಮಾಪನ ಮಾಡಲು, ಉಪದೇಶಾತ್ಮಕ ಫಲಿತವನ್ನು ಬಳಸಿಕೊಂಡು ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಪ್ರತಿಪುಷ್ಠಿಯನ್ನು ನೀಡುವುದು.
* ಸ್ಥಿತಿಸ್ಥಾಪಕತೆಯನ್ನು ಬಳಸುವುದು.

ಬೋಧನಾ ವ್ಯವಸ್ಥೆಯ ವಿವಿಧ ಅಂಗಗಳನ್ನು ಆಕೃತಿ 9ರಲ್ಲಿ ತೋರಿಸಲಾಗಿದೆ.

ಗರಿಷ್ಠ ಪರಿಣಾಮಕತೆಗಾಗಿ ವ್ಯವಸ್ಥೆಯಲ್ಲಿಯ ಪ್ರತಿಯೊಂದು ಘಟಕಗಳ ಮಧ್ಯೆ ಅನ್ಯೋನ್ಯತೆ, ಪರಸ್ಪರಾವಲಂಬನೆ ಈ ಮುಂತಾದವು ಇರಬೇಕು. ಹಾಗೂ ಈ ಸಂಬಂಧ, ಪರಸ್ಪರಕತೆಯ ಬಗ್ಗೆ ನಿರ್ದಿಷ್ಟವಾದ ವಿವರಣೆಯು ಒದಗಿಸಲ್ಪಡಬೇಕು. ಶಿಕ್ಷಣದ ವ್ಯವಸ್ಥಾ ಉಪಕ್ರಮವು ಸಂಸ್ಥಾಯೋಜನೆ ಹಾಗೂ ಬೆಳವಣಿಗೆಗೆ ಅನ್ವಯಿಸುತ್ತದೆ.

ವಿದ್ಯಾರ್ಥಿಗಳ ವರ್ತನೆಯಲ್ಲಿ ಪ್ರಗತಿಪರ ಬದಲಾವಣೆಯನ್ನು ತರಬೇಕೆಂಬುದೇ ಪಠ್ಯಕ್ರಮದ ಗುರಿಯಾಗಿದೆ. ಬೋಧನಾ ಘಟಕದಿಂದಾಗುವ ವಿವಿಧ ಪರಿಣಾಮ ಗಳನ್ನು ಶಿಕ್ಷಕ ವಿದ್ಯಾರ್ಥಿಗಳು ತಿಳಿದುಕೊಂಡಿರಬೇಕು. ಬೋಧನೆಯಿಂದ ವಿದ್ಯಾರ್ಥಿಗಳ ಜ್ಞಾನ, ಕೌಶಲ್ಯ, ಪರಿಕಲ್ಪನೆ ಈ ಮುಂತಾದವುಗಳಲ್ಲಿ ಬದಲಾವಣೆಯಾಗಿದೆಯೇ ಎಂದು ನೋಡಬೇಕು. ಮೌಲ್ಯಮಾಪನದ ಸಮಯದಲ್ಲಿ ಈ ಕಾರ್ಯಗಳು ನಡೆಯ ಬೇಕು.

ಇದರ ಆಧಾರದ ಮೇಲೆ ಕೆಲವು ಅಪೇಕ್ಷಿತ ಬದಲಾವಣೆಗಳನ್ನು ತರಬಹುದು.

ವ್ಯವಸ್ಥಾ ವಿನ್ಯಾಸಕ್ಕಾಗಿ ಸಂಚರಿತ ರೇಖಾಚಿತ್ರ
(Flow Diagram for Designing a System)

ಯಾವುದೇ ವ್ಯವಸ್ಥೆಗೆ ಯೋಜನೆಯು ತಳಹದಿಯಿದ್ದಂತೆ ವ್ಯವಸ್ಥೆಯನ್ನು ಆಕೃತಿಯಿಂದ ಸುಲಭವಾಗಿ ತೋರಿಸಬಹುದು. ಭರಿತ (ವಿದ್ಯಾರ್ಥಿ) ಬೋಧನಾ ಸ್ಥಿರತೆ (ಪ್ರಕ್ರಿಯೆ) ಹಾಗೂ ಫಲಿತಗಳ ನಡುವಿನ ಸಂಬಂಧಗಳನ್ನು ಈ ಮುಂದಿನ ಆಕೃತಿಯಲ್ಲಿ ನೋಡಬಹುದು (ನೋಡಿ ಆಕೃತಿ–10).

ವ್ಯವಸ್ಥಾ ಪರಿಕಲ್ಪನೆಯ ಪ್ರಕಾರ ನಾವು ಹೊಸದಾದ ಬೋಧನಾ ಅಂಶವನ್ನು ಬೆಳೆಸಬೇಕಾದರೆ ನಾವು ವಿದ್ಯಾರ್ಥಿಗಳಿಂದ, ಕೌಶಲ್ಯಗಳನ್ನು ಕಲಿಯಲು ಇರಬಹುದಾದ ಗುಣಲಕ್ಷಣ ಹಾಗೂ ಕೌಶಲ್ಯಗಳನ್ನು ಸಮೀಕ್ಷಿಸಿ ನಂತರ ಅವುಗಳ ವಿಶ್ಲೇಷಣೆಯ ಕಾರ್ಯವನ್ನು ಕೈಗೊಳ್ಳಬೇಕು. ನಿರ್ದಿಷ್ಟ ಧ್ಯೇಯಗಳು, ಕಲಿಕೆಯ ಫಲಿತಗಳು, ಕಾರ್ಯಸಾಧನೆ ನಿಕಷ ಈ ಅಂಶಗಳು ರಚಿತವಾಗಬೇಕು. ಮಾನವಿಕ, ತಾಂತ್ರಿಕ, ಹಾಗೂ ಹಣಕಾಸು ಸ್ಥಿತಿಗಳ ಪಟ್ಟಿಯನ್ನು ತಯಾರಿಸಬೇಕು. ಇದು ಮಾಧ್ಯಮ ಮತ್ತು ಇತರ ವಸ್ತುಗಳಿಗೆ ಸಂಬಂಧಿಸಿದ ಹಂತವಾಗಿದೆ. ವಿಷಯ ಮಾಧ್ಯಮ, ವಿಧಾನಗಳ ಸ್ಥಿರತೆಯೊಂದಿಗೆ ಅಧ್ಯಯನವು ಪರಿಪೂರ್ಣವಾಗುತ್ತದೆ. ಎಲ್ಲಿ ಸರಿಯಾದ ವಸ್ತುಗಳು ಲಭ್ಯವಾಗುವುದಿಲ್ಲವೋ ಅಲ್ಲಿ ಬದಲೀ ವ್ಯವಸ್ಥೆ ಮಾಡಿಕೊಳ್ಳಬೇಕು. ಆರಿಸಿದ ನಮೂನೆಯ ಮೇಲೆ ಪ್ರಯೋಗಿಸಿದ ಪರೀಕ್ಷೆಯ ಫಲಿತ ಹಾಗೂ ಸಿಂಧುತ್ವದ ಆಧಾರದಿಂದ ಅದನ್ನು ಅಳವಡಿಸಲು ಸಹಾಯಕವಾಗುವುದು. ಅಳವಡಿಕೆಯು ಕಡೆಯ ದಾದ ಹಂತವಾಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ 'ಪೂರ್ಣ ಪ್ರತಿಪುಷ್ಟಿ' ಯನ್ನು ಕಲಿಯುವವರಿಗೆ ನೀಡಬೇಕು. ಈ ಅಂಶಗಳನ್ನು ಆಕೃತಿ–11ರಲ್ಲಿ ಸ್ಪಷ್ಟವಾಗಿ ನೋಡಬಹುದು.

ಅದೇ ರೀತಿ ಬೋಧನಾ ಹಂತದಲ್ಲಿ ಶಿಕ್ಷಕ ಅನುಸರಿಸುವ ಹಾದಿಯನ್ನು ಆಕೃತಿ–12ರಲ್ಲಿ ತೋರಿಸಲಾಗಿದೆ.

ವ್ಯವಸ್ಥಾ ಪ್ರಕ್ರಿಯೆಯ ಘಟಕಗಳನ್ನು ಒಳಗೊಂಡಂತೆ ಶಿಕ್ಷಕನು ಅನುಸರಿಸುವ ಮಾರ್ಗವನ್ನು ತೋರಿಸುವುದರಿಂದ ಪ್ರಕ್ರಿಯೆಯ ಪ್ರತಿಯೊಂದು ಹಂತಕ್ಕೆ ವಿವರಣೆ ನೀಡಿದಂತೆ ಆಗುತ್ತದೆ. ವ್ಯಕ್ತಿ, ಮಾಧ್ಯಮಗಳೊಡನೆ ಅವನ ಸಂಬಂಧವನ್ನು

ತಿಳಿಸುತ್ತದೆ. ಇದೊಂದು ಪ್ರಕ್ರಿಯೆಯ ಅಮೂರ್ತ ಆಲೇಖ ಮಾದರಿ ಯೋಜನೆಯನ್ನು ವಿನ್ಯಾಸಗೊಳಿಸುವ ಕಾಲದಲ್ಲಿ ಸಹಾಯಕ.

ವ್ಯವಸ್ಥಾ ಉಪಕ್ರಮದ ಉಪಯುಕ್ತತೆ

* ಸಮಸ್ಯೆಗಳ ಗುರುತಿಸುವಿಕೆ

ಇದು ವ್ಯವಸ್ಥಾ ಉಪಕ್ರಮದ ಮೊಟ್ಟಮೊದಲನೆಯ ಉಪಯೋಗವಾಗಿದೆ. ಭರಿತ ವಿಶ್ಲೇಷಕವು ಕೇವಲ ವಿದ್ಯಾರ್ಥಿಗಳಷ್ಟೇ ಅನ್ವಯಿಸದೆ ಯಾವುದೇ ಸಮಸ್ಯೆಗಳೂ ಅದರ ವ್ಯಾಪ್ತಿಯಲ್ಲಿ ಬರುತ್ತವೆ. ಯಾವ ಘಟಕದಲ್ಲಿ ಸಮಸ್ಯೆಯು ಬರುತ್ತದೆಂದು ತಿಳಿಯಬಹುದು. 'ಪ್ರತಿಪುಷ್ಠಿ'ಯ ಸಾಧ್ಯತೆಯಿರುವುದರಿಂದ ಈ ಕಾರ್ಯವು ಸುಲಭವಾಗಿ ಸಾಗುತ್ತದೆ. ಜತೆಗೆ ವಿಶ್ಲೇಷಣೆಯ ಕಾರ್ಯವೂ ನಡೆಯುತ್ತದೆ. ಅಂದರೆ ಸಮಸ್ಯೆಯ ಮೂಲವನ್ನೇ ಶೋಧಿಸಬಹುದು.

ಉದಾ: 'ಶಾಲಾ ಸಿಬ್ಬಂದಿಯ ತಜ್ಞತೆ'ಯೆಂದರೆ ಶಿಕ್ಷಕರ ವಯಸ್ಸು, ಪರಿಪಕ್ವತೆ, ಸೇವೆ, ಅನುಭವ, ಪ್ರಭುತ್ವ, ವಿದ್ಯೆ ಈ ಮುಂತಾದವು ಗಮನಾರ್ಹ. ಉಪವ್ಯವಸ್ಥೆಗಳನ್ನು ವಿಶ್ಲೇಷಿಸಿ ನಂತರ ಸಮಸ್ಯೆಯ ಮೂಲವನ್ನು ತಿಳಿದುಕೊಳ್ಳಬಹುದು.

* ವ್ಯವಸ್ಥೆಯಲ್ಲಿ ಸಿಬ್ಬಂದೀಕರಣ (Staffing a System)

ವ್ಯವಸ್ಥೆಯು ಅನೇಕ ವ್ಯವಸ್ಥೆಯ ಉಪವ್ಯವಸ್ಥೆಗಳನ್ನು ಪ್ರಕ್ರಿಯೆಗಳನ್ನು ಹೊಂದಿದ್ದು ಅದು ಸಿಬ್ಬಂದಿಯ ಅಗತ್ಯಗಳನ್ನು ಪೂರೈಸಬೇಕಾಗುತ್ತದೆ.

ಒಂದು ವ್ಯವಸ್ಥೆಯನ್ನು ಸಿಬ್ಬಂದೀಕರಿಸುವಾಗ ಕೆಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ (ನೋಡಿ : ಆಕೃತಿ–13).

(ಅ) ಮೊದಲು ಅನೇಕ ಪ್ರಕ್ರಿಯೆಗಳ ವಿಶ್ಲೇಷಣೆ, ಅದು ವ್ಯವಸ್ಥೆಯ ಸಂಕ್ರಿಯಯನ್ನೊಳಗೊಂಡಿರುತ್ತದೆ.

(ಆ) ವ್ಯವಸ್ಥೆಯ ಹಾಗೂ ಉಪವ್ಯವಸ್ಥೆಯ ಭರಿತವನ್ನು ನಿರ್ಧರಿಸಬೇಕು.

(ಇ) ವ್ಯವಸ್ಥೆಯ ಹಾಗೂ ಉಪವ್ಯವಸ್ಥೆಯ ಭರಿತವು ಕೇವಲ ವಿದ್ಯಾರ್ಥಿಯೊಬ್ಬನನ್ನೇ ಹೊಂದಿರದೆ, ನಿರ್ವಹಣೆ ಮುಂತಾದವನ್ನು ಒಳಗೊಂಡಿರಬೇಕು. ಆದರೂ ಅದರಲ್ಲಿ ಅನೇಕ ಸಮಸ್ಯೆಗಳೂ ಉಂಟಾಗುತ್ತವೆ.

ಉದಾಹರಣೆಗೆ: ಒಂದು ಶಾಲಾ ವ್ಯವಸ್ಥೆ ಉನ್ನತ ವೇತನ ಸೌಲಭ್ಯ ದೊರಕಿಸಿದ್ದು, ಅತ್ಯುನ್ನತ ಪಠ್ಯಕ್ರಮ ಹೊಂದಿದ್ದರೆ ಅಷ್ಟು ಗಣನೀಯವಲ್ಲದೆ ಭರಿತದ ಸಮಸ್ಯೆಯನ್ನು ಕನಿಷ್ಠ ವೇತನ ವಿತರಣೆಯ ಶಾಲೆಗಳಿಗಿಂತಲೂ ಹೊಂದಿರುತ್ತದೆ.

ಯಾವುದೇ ವ್ಯವಸ್ಥೆಯ ನಿರ್ಧಾರದಲ್ಲಿ ಅದರ ಸಿಬ್ಬಂದಿಯ ಗಾತ್ರವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

* ಶಿಕ್ಷಣದಲ್ಲಾಗಬೇಕಾದ ಅನೇಕ ಬದಲಾವಣೆಗಳಿಗೆ, ಯೋಜನೆಗಳಿಗೆ ಒಂದು ಪರಿಕಲ್ಪನಾತ್ಮಕ ಚೌಕಟ್ಟನ್ನು ಒದಗಿಸುತ್ತದೆ.

* ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಸಂಪನ್ಮೂಲ ವಸ್ತುಗಳನ್ನೂ ಹುಡುಕಲು ಸಹಾಯಕವಾದುದು.
* ಸಂಪನ್ಮೂಲದ ಅಗತ್ಯತೆಗಳನ್ನು ನಿರ್ಧರಿಸಲು ಉಪಯುಕ್ತವಾದುದು.
* ಕಾಲ, ಅವಧಿ, ಪರಸ್ಪರ ಸಂಬಂಧ್ಧತೆ, ಸವಲತ್ತುಗಳನ್ನು ಮೌಲಿಸಲು ಸಹಾಯಕ.
* ಗುರಿಗಳನ್ನು ಈಡೇರಿಸಲು ಮತ್ತು ಸಮಗ್ರತೆಯನ್ನು ಉಂಟುಮಾಡಲು ಅನುಕೂಲಕಾರಿ.
* ಕಲಿಕೆಯಲ್ಲಿ ವ್ಯವಸ್ಥೆಯು ಯಶಸ್ವಿಯಾಗಲು ಬೇಕಾದ ಅನೇಕ ಹೊಸ ಅಂಶಗಳ ಸೇರಿಕೆಗೆ ಅಗತ್ಯವಾಗಿದೆ.
* ಸತತ ಮೌಲ್ಯಮಾಪನವಿರುವುದರಿಂದ ಸಾಂಪ್ರದಾಯಿಕ ಅನುಪಯೋಗಕ ಯೋಜನೆಗೆ ಅವಕಾಶವಿಲ್ಲ.
* ವ್ಯವಸ್ಥಾ ಘಟಕಗಳ ಪ್ರಭಾವಗಳನ್ನು ಪರೀಕ್ಷಿಸಲು ಸಹಾಯಕ.
* ಆದ್ಯತೆಯ ಆಧಾರದ ಮೇಲೆ ಅಗತ್ಯಗಳನ್ನು ಶ್ರೇಣೀಕರಿಸಲೂ, ಅಗತ್ಯಗಳನ್ನು ಆರಿಸಿ ನಂತರ ಕಾರ್ಯಕ್ರಮದ ಬೆಳವಣಿಗೆ ಮಾಡಲೂ ಬೇಕಾಗುತ್ತದೆ.
* ವ್ಯಕ್ತಿಗಳ ನಡುವೆ, ವಿಭಾಗಗಳ ನಡುವೆ, ಹಾಗೂ ಶಾಲೆಗಳ ನಡುವೆ ವಿಶಾಲವಾದ ಸಹಕಾರವನ್ನು ಬೆಳೆಸುವ ಅಗತ್ಯವನ್ನು ವೃದ್ಧಿಸುತ್ತದೆ.
* ವ್ಯವಸ್ಥಾ ಉಪಕ್ರಮವು ತರ್ಕಬದ್ಧವೂ, ಪ್ರಮಾಣಯುಕ್ತವೂ, ವಿವೇಕಯುತವಾದುವೂ ಆಗಿರುವುದರಿಂದ ಶಿಕ್ಷಣದ ಸಂದರ್ಭದಲ್ಲಿ ಅಳವಡಿಸಲು ಫಲಕಾರಿಯಾದುದು.
* ಪಠ್ಯಕ್ರಮ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
* ಸ್ಪಷ್ಟ ನಿರ್ಣಯ ಕೈಗೊಳ್ಳುವಿಕೆಯ ವಿಧಾನಗಳಲ್ಲಿ ಶಿಕ್ಷಕರು, ನಾಗರೀಕರು, ಸಮೂಹ, ವಿದ್ಯಾರ್ಥಿಗಳು, ಪಾಲ್ಗೊಳ್ಳಬೇಕೆಂದಿರುವುದರಿಂದ ವ್ಯವಸ್ಥಾ ಉಪಕ್ರಮವು ಅದಕ್ಕೆ ಸಾಧಕವಾಗುತ್ತದೆ.

ಈ ರೀತಿ ಅನೇಕ ಉಪಯೋಗಗಳನ್ನು ಹೊಂದಿದೆ.

ವ್ಯವಸ್ಥಾ ಉಪಕ್ರಮವು ಶೈಕ್ಷಣಿಕ ಸನ್ನಿವೇಶದಲ್ಲಿ ಅತೀ ಮುಖ್ಯವಾದುದು. ವ್ಯವಸ್ಥೆಯೆಂದು ಕರೆಯಲ್ಪಡುವ ಶಿಕ್ಷಣಕ್ಕೆ ಈ ವ್ಯವಸ್ಥಾ ಉಪಕ್ರಮವೂ ಭದ್ರವಾದ ಪಾತಳಿಯಿದ್ದಂತೆ.


ಆಧಾರ ಗ್ರಂಥಗಳು

1. "Systems Analysis a framework for diagnasis and strategy" by Philip H. Coombs (Ed.) Richard Hooper, *The Curriculum Context, Design and Development*, Oliver and Edinburgh, The Open University Press 1971, pp 128-133.


2. Kethryes V. Feyerisen-A. John Fiorno-Arlene T. Nowak, *Supervison and Curriculum Renewal—A System Approach*, Appleton Century Crafts (Education) Division, Meredity Corporation, New York, 1970. pp 37-55.

3. George G. Tankerel (Jr.), *Curriculum Improvement—An Administrator's Guide*, Parker Publishing Company INC, West Nelack New York 1974, pp 141-155.


4. K. Sampath—A Pannirselvens-S. Santhanan, *Introduction to Educational Technology*, Sterling Publishers Private Ltd., New Delhi, Bangalore, Jhllender, 1981, pp 76-88.




ಆಕೃತಿ ೨. ಶಿಕ್ಷಣವ್ಯವಸ್ಥೆ ಹಾಗೂ ಸಮಾಜದೊಂದಿಗಿನ ಅಂತರ ಸಂಬಂಧ




ಆಕೃತಿ 4 : ಸಮಗ್ರ ನಿರ್ವಹಣಾ ವ್ಯವಸ್ಥೆ (Total Management System)




ಆಕೃತಿ ೫. ಸರಳ ಪ್ರತಿಪುಷ್ಟಿಯ ಮೂಲ ವ್ಯವಸ್ಥಾಮಾದರಿ
(A Basic System with Simple Feed back)




ಆಕೃತಿ ೬. ಪೂರ್ಣ ಪ್ರತಿಪುಷ್ಟಿಯ ಮೂಲವ್ಯವಸ್ಥೆ (A Basic Systems with complete Feed back)




ಆಕೃತಿ ೭. ಸಂಪೂರ್ಣ ಸ್ವನಿಯಂತ್ರಣ ಮತ್ತು ಸಮನ್ವಯಾತ್ಮಕ ವ್ಯವಸ್ಥೆ A complete self-regulating and adaptative system




ಆಕೃತಿ ೮. ಉಪವ್ಯವಸ್ಥೆಗಳೊಂದಿಗೆ ಸಂಪೂರ್ಣ ಸಮನ್ವಯಾತ್ಮಕ ಸ್ವನಿಯಂತ್ರಣ ವ್ಯವಸ್ಥೆ




ಆಕೃತಿ ೯ ಬೋಧನಾ ಅಂಗಗಳು


ದತ್ತಾಂಶ ಭರಿತ
ದತ್ತಾಂಶ ಭರಿತ
ಭರಿತ
ವಿದಾರ್ಥಿಗಳು
ನಿಗದಿತ ಅರ್ಹತೆ
ಕೌಶಲ್ಯ
ಜ್ಞಾನ
ವರ್ತನಾಮಟ್ಟ
ಮನೋಭಾವ
ಅವನಿಂದ ನಿರೀಕ್ಷೆ
ಮಾಡುವಂತಹುದು
ಪ್ರಕ್ರಿಯೆ
ಅನುಪದೇಶಾತ್ಮಕ ಸ್ಥಿತಿ (ಮಾಧ್ಯಮ-ವಿಧಾನಗಳಲ್ಲಿ)
ಸಂಸ್ಥೆಯ ಭೌತಿಕ ಪರಿಸರ
ಅನುಕೂಲಗಳು
ಮಾರ್ಗದರ್ಶಕರು
ಅಧ್ಯಾಪಕರು
ಪಠ್ಯಕ್ರಮ
ಅಧ್ಯಯನಕ್ರಮಸೂಚಿ
ಪ್ರತಿಪುಷ್ಟಿ
ಮೌಲ್ಯಮಾಪನ
ಧ್ಯೇಯಗಳ
ಈಡೇರಿಕೆ
ಆಗಿದೆಯೇ ?
ಫಲಿತ
ಅಗತ್ಯಗಳು
ಪ್ರತಿಪುಷ್ಟಿ


ಆಕೃತಿ ೧೦


ವಿಷಯ ವಸ್ತುವಿನ ವಿಶ್ಲೇಷಣೆ ಸಮಸ್ಯೆ
ಕಲಿಯುವವರ ಗುಣಲಕ್ಷಣಗಳ ಅಧ್ಯಯನ
ನಿರ್ದಿಷ್ಟ ಸಂಪರ್ಕ ಕ್ರಿಯೆಯ ಸಮಸ್ಯೆಗಳ ವಿವರಣೆ
ಧ್ಯೇಯಗಳ ಅರಸುವಿಕೆ
ಲಭ್ಯ ಸಂಪನ್ಮೂಲಗಳ ಪರಿಶೋಧನೆ
(ಮಾನವೀಯ, ತಾಂತ್ರಿಕ, ಭೌತಿಕ, ಆರ್ಥಿಕ)
ವಿಧಾನಗಳ ನಿರ್ದಿಷ್ಟಗೊಳಿಸುವಿಕೆ
(ವಿಧಾನ ಮಾಧ್ಯಮಗಳ ಆಯ್ಕೆ ಮಾಡುವಿಕೆ)
ಕಾರ್ಯಕ್ರಮಗಳ ರೂಪಿಸುವಿಕೆ
ವಿಶ್ಲೇಷಣೆಯ ಫಲಿತಾಂಶ

ಆಕೃತಿ ೧೧


ಶೈಕ್ಷಣಿಕ ಧ್ಯೇಯಗಳು
ವಿಷಯದ ಸೂಚಿಸುವಿಕೆ ವಿಷಯ ವಿಶ್ಲೇಷಣೆ
ಪರೀಕ್ಷಾ ಪ್ರಶ್ನೆ
ಬೋಧನಾ ಧ್ಯೇಯಗಳ ನಮೂದಿಸುವಿಕೆ
ಸಮಸ್ಯಾ ವಿಶ್ಲೇಷಣೆ
ಬೋಧನಾ ಟಿಪ್ಪಣಿ ತಯಾರಿಕೆ
ಮಾಧ್ಯಮ ವಸ್ತುಗಳು
ವಿಧಾನಗಳು
ಕಲಿಕಾ ಅನುಬಂಧಗಳು
ಬೋಧಿಸುವಿಕೆ
ಮೌಲ್ಯಮಾಪನ

ಆಕೃತಿ ೧೩



ಆಕೃತಿ ೧೩ ವ್ಯವಸ್ಥೆಯಲ್ಲಿ ಸಿಬ್ಬಂದಿಕರಣ Staffing a System

ವೈ. ಸಿ. ಭಾನುಮತಿ

ಹಾಸನಜಿಲ್ಲೆಯ ಮಲೆನಾಡು ಗೌಡರ ಜನನ ಸಂಸ್ಕಾರಗಳು

ಜೀವವಿಕಾಸದಲ್ಲಿ ವಂಶವಾಹಿನಿ ಸಂತಾನೋತ್ಪತ್ತಿ ಇವುಗಳಿಗೆ ಅತ್ಯಂತ ಮಹತ್ವವಿದೆ. ಇದು ವಿವಾಹದ ಮೂಲ ಉದ್ದೇಶವೂ ಹೌದು. ಅನುವಂಶಿಕ ರೋಗಗಳಿಲ್ಲದ ಆರೋಗ್ಯಕರ ಸಂತಾನವನ್ನು ಎಲ್ಲರೂ ಬಯಸುವುದು ಸಹಜ. ಅದಕ್ಕಾಗಿ ಮಲೆನಾಡ ಒಕ್ಕಲಿಗರು ವಿವಾಹ ಕಾಲದಲ್ಲಿಯೇ ಸಾಕಷ್ಟು ಆಲೋಚಿಸಿ ತಿಳಿದು ಆರೋಗ್ಯಕರವಾದ ಕುಟುಂಬದೊಡನೆ ವೈವಾಹಿಕ ಸಂಬಂಧ ನಡೆಸುತ್ತಿದ್ದರು. ಇತ್ತೀಚೆಗೆ ಸಿರಿವಂತ ಕುಟುಂಬದೊಡನೆ ಸಂಬಂಧ ಬೆಳೆಸುವಾಗ ಈ ಅಂಶಗಳೆಲ್ಲ ಗೌಣವಾಗಿ ಹೋಗಿವೆ.

ಅಳುತ್ತ ಈ ಲೋಕಕ್ಕೆ ಬರುವ ಶಿಶುವನ್ನು ನಗುತ್ತ ಸ್ವಾಗತಿಸುವ ಸನ್ನಿವೇಶ ಅತ್ಯಂತ ಸಂತಸದಾಯಕವಾದುದು. ವಂಶವಾಹಿನಿಯ ಕುಡಿಯಾಗಿ ಆಗಮಿಸುವ ಮಗುವನ್ನು ಜತನದಿಂದ ಕಾಪಾಡುವ ಸಲುವಾಗಿ ಜನಪದ ಸಮಾಜ ತನ್ನದೇ ಆದ ಸಂಸ್ಕಾರಗಳನ್ನು ಹೊಂದಿದೆ. ಜನನವನ್ನು ಕುರಿತಂತೆ ಪ್ರತಿಯೊಂದು ಧರ್ಮವೂ ತನ್ನದೇ ಆದ ಕಲ್ಪನೆಗಳನ್ನು ನಿರೂಪಿಸಿದೆ. ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಸುಧರ್ಮಿಗಳು ದೇವಲೋಕದ ಭೋಗಗಳನ್ನು, ಕರ್ಮಿಗಳು ನರಕ ಲೋಕದ ಸಂಕಟವನ್ನು ಅನುಭವಿಸುವುದನ್ನು ವರ್ಣಿಸುತ್ತ ನರಕಲೋಕದ ಭೋಗಿಗಳು ಆಕಾಶ, ಗಾಳಿ, ನೀರು, ಭೂಮಿ ಈ ನಾಲ್ಕು ದ್ವಾರಗಳ ಮೂಲಕ ಭೂಲೋಕದಲ್ಲಿ ಜನಿಸುವುದನ್ನು ತಿಳಿಸಲಾಗಿದೆ (೫೮-೨). ಈ ಕಾವ್ಯದಲ್ಲಿ ಪಿಂಡೋತ್ಪತ್ತಿಯನ್ನು ವಿವರಿಸಲೆಂದು ಒಂದು ಸಂಧಿಯೇ ಮೀಸಲಾಗಿದೆ. ಇಂಥ ಕಾವ್ಯಗಳಿಂದ, ಜನವಶ್ಯ ಮದನತಿಲಕ ಮೊದಲಾದ ಕಾಮಶಾಸ್ತ್ರ ಗ್ರಂಥಗಳಿಂದ ಜನನ ಶಾಸ್ತ್ರದ ಬಗೆಗೆ ಪ್ರಾಚೀನರಿಗಿದ್ದ ತಿಳಿವಳಿಕೆಯನ್ನು ಸ್ವಲ್ಪಮಟ್ಟಿಗಾದರೂ ಅರಿಯಬಹುದು. ಚೆನ್ನಬಸವ ಪುರಾಣದಲ್ಲಿ

ಮಾತೆಯ ರಜಸ್ಸು ಪಿತೃವೀರ್ಯಗಳೊಂದಾಗಿ
ಸಾತಿಶಯದಿಂ ಪ್ರಥಮ ದಿನದಲ್ಲಿ ಕಲಲಮಹು
ದಾ ತೆರದೊಳೈದುರಾತ್ರಿಗೆ ಬೊಬ್ಬುಳಿಕೆಯಾಗಿ ಹತ್ತನೆಯ ದಿವಸದೊಳಗೆ
ಖ್ಯಾತಿಯಿಂ ರಕ್ತಬಲಿದಾ ಚತುರ್ದಶದಿನ
ವ್ರಾತದೊಳ್ ಮಾಂಸಮೆಂದೆನಿಸಿ ವಿಂಶತಿದಿನ
ಕ್ಕ್ಯೋತು ತನ್ಮಾಂಸವೇ ಘಟ್ಟಿಗೊಂಬುದು ಸಿದ್ಧರಾಮ ಕೇಳಚ್ಚರಿಯನು   ೫೮-೫

ಎಂದು ತಾಯಿಯ ರಜಸ್ಸು ತಂದೆಯ ವೀರ್ಯ ಒಂದಾಗಿ ಮೊದಲನೆಯ ದಿನ ಪಿಂಡ, ಐದು ರಾತ್ರಿಗೆ ಗುಳ್ಳೆಯ ಆಕಾರವಾಗಿ, ಹತ್ತು ದಿನದಲ್ಲಿ ರಕ್ತ ಬಲಿತು, ಹದಿನಾಲ್ಕು ದಿನಕ್ಕೆ ಮಾಂಸವಾಗಿ, ಇಪ್ಪತ್ತನೆಯ ದಿನಕ್ಕೆ ಆ ಮಾಂಸವೆ ಗಟ್ಟಿಯಾಗುತ್ತದೆ ಎಂದು ಪ್ರತಿಯೊಂದು ಕ್ರಿಯೆಯನ್ನೂ ಸೂಕ್ಷ್ಮವಾಗಿ ವಿವರಿಸಲಾಗಿದೆ. 'ಅಪ್ರಮಾಣ ಕೂಡಲಸಂಗಮದೇವ' ಎಂಬ ಅಂಕಿತದ ಕೆಲವೊಂದು ವಚನಗಳಲ್ಲಿ ತಾಯಗರ್ಭದಲ್ಲಿ ಶಿಶು ರೂಪುತಳೆಯುವ ಹಲವು ಘಟ್ಟಗಳನ್ನು ಗುರುತಿಸಿರುವುದು ಕಂಡುಬರುತ್ತದೆ

ಹದಿನೈದು ದಿನಕ್ಕೆ ಬುದ್ಬುದಾಕಾರವಾಗಿಹುದು
ಏಕಮಾಸಕ್ಕೆ ಕುಕ್ಕುಟಾಂಡ ಸ್ವರೂಪವಾಗಿ ಶಿರಸವಹುದು
ದ್ವಿಮಾಸಕ್ಕೆ ಬಾಹು ಹುಟ್ಟುವದು
ತ್ರಿಮಾಸಕ್ಕೆ ಉದರ ಹುಟ್ಟುವದು
ಚತುರ್ಮಾಸಕ್ಕೆ ಸರ್ವಾಂಗ ಹುಟ್ಟುವದು ನೋಡಾ
ಅಪ್ರಮಾಣ ಕೂಡಲಸಂಗಮದೇವ

ಬಾಲಸಂಗಯ್ಯನ ವಚನಗಳು ೧೧

ಪಂಚಮಾಸಕ್ಕೆ ರೋಮಂಗಳು ಹುಟ್ಟುವವು
ಷಟ್‌ಮಾಸಕ್ಕೆ ಅಸ್ಥಿಗಳು ಹುಟ್ಟುವವು
ಸಪ್ತಮಾಸಕ್ಕೆ ಜೀವಕಳೆ ಸಂಪೂರ್ಣವಹುದು
ಅಷ್ಟಮಾಸಕ್ಕೆ ಪೂರ್ವಜನ್ಮನರಿವನು   ಅದೇ ೧೨

ಈ ತೆರನ ವಿವರಗಳು ಚನ್ನಬಸವಪುರಾಣದಲ್ಲಿ ಮತ್ತಷ್ಟು ದೀರ್ಘವಾಗಿ ಬಂದಿವೆ ಇವುಗಳಲ್ಲಿ ಎಷ್ಟೋ ಅಂಶಗಳನ್ನು ವೈಜ್ಞಾನಿಕ ಶಿಸ್ತಿನಲ್ಲಿ ನಿರೂಪಿಸಿರುವುದು ಗಮನಾರ್ಹ. ಚನ್ನಬಸವಪುರಾಣಕಾರ ಈ ವಿಚಾರವನ್ನು ಮುಂದುವರೆಸುತ್ತ ಹೆಣ್ಣು ಋತುಸ್ನಾತೆಯಾದ ಮೊದಲದಿನ ಗರ್ಭ ನಿಂತರೆ ಕುಲಗೇಡಿ ಶಿಶು ಜನಿಸುವುದೆಂದು ಆರಂಭಿಸಿ ಹದಿನೈದು ದಿನದವರೆಗೆ ಒಂದೊಂದು ದಿನದ ಫಲಾಫಲಗಳನ್ನು ಹೇಳುತ್ತ ಹದಿನಾರನೆಯ ದಿನ ಶಿವಯೋಗಿಯಾದಂಥ ಶಿಶು ಜನಿಸುವುದೆಂದು ತನ್ನ ಧರ್ಮದ ಚೌಕಟ್ಟಿಗೆ ಅಳವಡಿಸಿದ್ದಾನೆ. ಇಂಥ ಕೆಲವು ಸಂಗತಿಗಳು ವೈಜ್ಞಾನಿಕವಾಗಿ ವಿಚಾರಾರ್ಹವಾಗಿವೆ ಒಕ್ಕಲಿಗ ಜನಾಂಗದಲ್ಲಿ ಅನುಸರಿಸುವ ಧರ್ಮ ಹಾಗೂ ವಾಸಿಸುವ ಪ್ರದೇಶಕ್ಕೆ ಅನುಗುಣವಾಗಿ ಜನನ ಸಂಸ್ಕಾರಗಳು ಭಿನ್ನವಾಗಿವೆ. ಶಿವಾರಾಧಕ ಒಕ್ಕಲಿಗರಲ್ಲಿ ಶೈವ ಸಂಪ್ರದಾಯದ ಪ್ರಭಾವವನ್ನು ಗುರುತಿಸಬಹುದು.

ವಿಷ್ಣು ಆರಾಧಕರಲ್ಲಿ ವೈಷ್ಣವ ಸಂಪ್ರದಾಯದ ಎಳೆಗಳನ್ನು ಕಾಣಬಹುದು. ಪ್ರಸ್ತುತ ಶೈವಾರಾಧಕರಾದ ಹಾಸನ ಜಿಲ್ಲೆಯ ಮಲೆನಾಡು ಒಕ್ಕಲಿಗರ ಜನನ ಸಂಸ್ಕಾರಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

ಎಲ್ಲ ಜನಾಂಗದಂತೆ ಈ ಜನಾಂಗವೂ ಮದುವೆಯಾದ ಹೆಣ್ಣು, ವರ್ಷದೊಳಗೆ ಗರ್ಭಿಣಿಯಾಗಲೆಂದು ಆಶಿಸುತ್ತದೆ. ಮಕ್ಕಳಾಗುವುದು ತಡವಾದರೆ ಹೆಣ್ಣನ್ನು ಬಂಜೆಯೆಂದು ದೂಷಿಸುವುದಕ್ಕೆ ಪ್ರಸ್ತುತ ಜನಾಂಗ ಕೂಡ ಅಪವಾದವೇನಲ್ಲ. ಅಂಥವರಿಗೆ ಹಸಿರು ಔಷಧಿ ಕೊಡಿಸುವ ಪ್ರಯತ್ನಗಳು ನಡೆಯುತ್ತವೆ. ಗರ್ಭಿಣಿ ಸ್ತ್ರೀಯನ್ನು ಬೇಲೂರು ತಾಲ್ಲೂಕಿನ ಮಲೆನಾಡು ಭಾಗದಲ್ಲಿ 'ಬಿಮ್ಮನಸಿ' ಎಂದು ಕರೆದರೆ ಸಕಲೇಶಪುರ ತಾಲ್ಲೂಕಿನಲ್ಲಿ ಬಸುರಿ, ಗರ್ಭಿಣಿ ಎಂಬ ಶಬ್ದಗಳು ವ್ಯಾಪಕವಾಗಿ ರೂಢಿಯಲ್ಲಿವೆ ಸಾಮಾನ್ಯವಾಗಿ ಚೊಚ್ಚಲು ಬಸುರಿಯನ್ನು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳಲಾಗುವುದು. 'ಬಸುರಿಯಲ್ಲಿ ಗೇದು ಉಣ್ಣು ಬಾಣಂತಿಯಲ್ಲಿ ಕೂತು ಉಣ್ಣು' ಎಂಬ ಗಾದೆಯಂತೆ ಗರ್ಭಿಣಿ ಸ್ತ್ರೀಯನ್ನು ಕೆಲಸದಲ್ಲಿ ತೊಡಗಿಸಿದರೂ ಕಠಿಣಕರವಾದ ಕೆಲಸಗಳನ್ನು ಮಾಡಿಸುವುದಿಲ್ಲ. ಮೊದಲ ಹೆರಿಗೆ ತಾಯಿಯ ಮನೆಯಲ್ಲಿಯೆ ಆಗಬೇಕೆಂಬುದು ಪದ್ಧತಿ. ಸೃಷ್ಟಿಕ್ರಿಯೆಗೆ ಸಿದ್ಧಳಾಗುವ ಈ ಅವಧಿ ಹೆಣ್ಣಿನ ಬದುಕಿನಲ್ಲಿ ಮಹತ್ವಪೂರ್ಣ. ಅಷ್ಟೇ ಸೂಕ್ಷ್ಮವೂ ಹೌದು. ಇಂಥ ಮಹತ್ತರ ಸನ್ನಿವೇಶವನ್ನು ಎದುರಿಸುವಾಗ ಹೆಣ್ಣು ತನ್ನ ತವರಿನ ಪರಿಸರದಲ್ಲಿ ಇರಬೇಕೆಂದು ಆಶಿಸುವುದು ಸಹಜ.

ಹಾಸನ ಜಿಲ್ಲೆಯ ಮಲೆನಾಡಗೌಡರಲ್ಲಿ 'ಸೀಮಂತ' 'ಅಟ್ಟಿಕಕ್ಕುವುದು' 'ಬವಕೆ' 'ಬಸಿರಿ ಹಬ್ಬ' ಇಂಥ ಯಾವುದೆ ಸಂಪ್ರದಾಯಗಳಿಲ್ಲ. ಗರ್ಭಿಣಿ ಹೆಣ್ಣುಮಗಳನ್ನು ಅನುಕೂಲ ಇರುವವರು ಏಳನೆಯ ತಿಂಗಳಿಗೆ ಕರೆಸಿಕೊಳ್ಳುವರು. ಇಲ್ಲದವರು ಒಂಬತ್ತನೆಯ ತಿಂಗಳಿಗೆ ಬರಮಾಡಿಕೊಳ್ಳುವರು. ಸಮತಿಂಗಳುಗಳಾದ ಆರು, ಎಂಟನೆಯ ತಿಂಗಳಿನಲ್ಲಿ ತವರಿಗೆ ಕರೆತರುವ ಪದ್ಧತಿಯಿಲ್ಲ. ಗರ್ಭಿಣಿಯನ್ನು ಆಮಂತ್ರಿಸಲು ಹೋಗುವ ಮುನ್ನ ಜೋಯಿಸರಿಂದ ಶುಭದಿನವನ್ನು ತಿಳಿಯಲಾಗುವುದು. ಆ ಪ್ರಕಾರವೆ ಗಳಿಗೆ ನೋಡಿ ಮನೆಯಿಂದ ಹೊರಡುತ್ತಾರೆ. ಮಗಳನ್ನು ಮನೆಗೆ ಹೊಗಿಸುವ ಮುನ್ನವೂ ಗಳಿಗೆಯನ್ನು ಪರಿಗಣಿಸಲಾಗುವುದು. ಪ್ರಶಸ್ತವಾದ ದಿನ ಗರ್ಭಿಣಿಯ ತಾಯಿ ತಂದೆ ಇಲ್ಲವೆ ಹಿರಿಯ ಅಣ್ಣ ಅತ್ತಿಗೆಯರು ಹೋಗಿ ಕರೆದುಕೊಂಡು ಬರುತ್ತಾರೆ. ಇತ್ತೀಚೆಗೆ ಇವರ ಜೊತೆ ಇನ್ನೂ ನಾಲ್ಕಾರು ಮಂದಿ ಒಟ್ಟಾಗಿ ಹೋಗಿ ಕರೆಯುವುದು ರೂಢಿಗತವಾಗಿದೆ. ಬೀಗರ ಮನೆಗೆ ಇಂಥ ದಿನ ಬರುತ್ತೇವೆಂದು ಮುಂಚಿತವಾಗಿ ತಿಳಿಸಬೇಕು. ಅವರು ಮಾಂಸದ ಅಡಿಗೆ ಮಾಡಿಕೊಂಡು ಬಂಧುಗಳ ನಿರೀಕ್ಷೆಯಲ್ಲಿರುತ್ತಾರೆ. ಹೆಣ್ಣಿನ ಕಡೆಯವರು ಆಗಮಿಸಿದ ಕೂಡಲೆ ವಿಶೇಷ ಅಡಿಗೆಯ ಆತಿಥ್ಯ ನೀಡಿ ಸೊಸೆಗೆ ಮಡಿಲಕ್ಕಿ ತುಂಬಿ ಆಶೀರ್ವದಿಸಿ ಅದೇ ದಿನ ಗರ್ಭಿಣಿಯನ್ನು ಕಳಿಸಿಕೊಡುವರು.

ಇತ್ತ ತವರಿಗೆ ಬಂದ ಹೆಣ್ಣುಮಗಳನ್ನು ನೋಡಿಕೊಂಡುಹೋಗಲು ದಾಯಾದಿಗಳು, ಬಂಧುಮಿತ್ರರು ಬರುತ್ತಾರೆ. ಆಕೆಯ ಶಾರೀರಿಕ ಲಕ್ಷಣವನ್ನು ಗಮನಿಸಿ ಅನುಭವಿ ಸ್ತ್ರೀಯರು ಎಂಥ ಮಗು ಹುಟ್ಟಬಹುದೆಂದು ಲೆಕ್ಕಹಾಕುತ್ತಾರೆ. ಹೆರಿಗೆಗೆ ಮುನ್ನ ಗರ್ಭಿಣಿಯನ್ನು ನೆರೆಹೊರೆಯವರು, ದಾಯಾದಿಗಳು ಊಟಕ್ಕೆ ಆಹ್ವಾನಿಸಿ ಮಾಂಸದ ಅಡಿಗೆ ಮಾಡಿಹಾಕುವುದು ವಾಡಿಕೆ. ಹೆರಿಗೆಯ ದಿನ ಸಮೀಪಿಸಿದಂತೆಲ್ಲ ಹೆತ್ತವರ ಆತಂಕ ಹೆಚ್ಚುತ್ತದೆ. ಹೆರಿಗೆ ಸುಸೂತ್ರವಾಗಿ ಆಗುವಂತೆ ಕುಲದೈವಕ್ಕೆ ಹರಕೆ ಕಟ್ಟಿಕೊಳ್ಳುವರು. ಆಸ್ಪತ್ರೆಗಳಿಲ್ಲದಂಥ ಕಾಲದಲ್ಲಿ ಮನೆಯಲ್ಲಿಯೆ ಪ್ರಸೂತಿ. ಇತ್ತೀಚೆಗೆ ಊರಿನಲ್ಲಿ ಆಸ್ಪತ್ರೆ ಇದ್ದರೆ ಆ ಸೌಲಭ್ಯ ಪಡೆಯುವುದುಂಟು. ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ಕೂಡ ಬಹಳಷ್ಟು ಮಂದಿ ಆಸ್ಪತ್ರೆಗಳನ್ನು ಆಶ್ರಯಿಸದೆ ಮನೆಯಲ್ಲಿಯೇ ಹೆರಿಗೆ ಮಾಡಿಸುವುದನ್ನು ಕಾಣಬಹುದು.

ಗರ್ಭಿಣಿಗೆ ನೋವು, ಸ್ರಾವ ಇತ್ಯಾದಿ ಸೂಚನೆಗಳು ಕಾಣಿಸಿದ ಕೂಡಲೆ ಊರಿನಲ್ಲಿ ಇಂಥ ಕೆಲಸದಲ್ಲಿ ನುರಿತವಳೆಂದು ಹೆಸರುವಾಸಿಯಾದ ಸೂಲಗಿತ್ತಿಯನ್ನು ಕರೆಸಲಾಗುವುದು. ನೆರೆಹೊರೆಯ ಹೆಂಗಸರೆಲ್ಲ ಆಕೆಗೆ ಸಹಾಯಕರಾಗಿ ನಿಲ್ಲುವರು. ಮನೆಯಲ್ಲಿ ತಾಯಿ ಮತ್ತಿತರರು ಹೆರಿಗೆ ಮಾಡಿಸುವ ಸ್ಥಳವನ್ನು ಶುಚಿಗೊಳಿಸಿ ಗರ್ಭಿಣಿಯನ್ನು ಅಲ್ಲಿ ಮಲಗಿಸುವರು. ಸೂಲಗಿತ್ತಿ ಸುಗಮವಾಗಿ ಹೆರಿಗೆ ಮಾಡಿಸಿ ಹೊಕ್ಕುಳು ಬಳ್ಳಿ ಕತ್ತರಿಸಿ ತಾಯಿ ಮಗುವನ್ನು ಬೇರ್ಪಡಿಸುವಳು. ಮಾಸನ್ನು ಗುಂಡಿ ತೆಗೆದು ಹೂಳುವರು. ಹೊಕ್ಕುಳು ಬಳ್ಳಿಯನ್ನು ಒಣಗಿಸಿ ತಾಶಿ ಮಾಡಿ ಹಾಕುವಂಥ ವಿಶಿಷ್ಟ ಸಂಪ್ರದಾಯ ಕೆಲವೆಡೆ ಪ್ರಚಲಿತವಿದೆ. ಮತ್ತೆ ಕೆಲವರು ಹಾಲು ಬರುವ ಮರಕ್ಕೆ ಕಟ್ಟಿ ಬರುವರು. ವಿರಳವಾಗಿ ಮಕ್ಕಳು ಹೊಕ್ಕಳು ಬಳ್ಳಿ ಕೊರಳಿಗೆ ಸುತ್ತಿಕೊಂಡು ತಾಯ ಗರ್ಭದಿಂದ ಹೊರಬರುವುದುಂಟು. ಅಂಥ ಮಕ್ಕಳನ್ನು ನೋಡಿದರೆ ಎದುರಿಗಿದ್ದವರಿಗೆ ಕೇಡುಂಟಾಗುವುದೆಂಬ ನಂಬಿಕೆಯಿದೆ. ಶಿಶು ಹೊರಬಂದ ಕೂಡಲೆ ಹುಟ್ಟಿದ ಸಮಯವನ್ನು ಗುರುತುಹಾಕಿ ಊರಿನಲ್ಲಿ ಜೋಯಿಸರಿದ್ದರೆ ಆ ದಿನವೆ ಮಗುವಿನ ಜನನದ ಗಳಿಗೆಯನ್ನೂ ಒಳಿತುಕೆಡುಕುಗಳನ್ನೂ ಕೇಳಲಾಗುವುದು.

ಹಾಸನ ಜಿಲ್ಲೆಯ ಮಲೆನಾಡ ಒಕ್ಕಲಿಗರು ಶೈವಾರಾಧಕರಾದರೂ ಜನನ ಮರಣ ಸೂತಕವನ್ನು ಉಳಿಸಿಕೊಂಡಿದ್ದಾರೆ. ಹೆರಿಗೆಯಾದ ಕ್ಷಣದಿಂದ ಒಂಬತ್ತು ದಿನಗಳವರೆಗೆ ಸೂತಕವನ್ನು ಆಚರಿಸಲಾಗುವುದು. ಜನನದಿಂದ ಒದಗುವ ಸೂತಕಕ್ಕೆ ವೈದಿಕರು 'ಪುರುಡು' ಎನ್ನುತ್ತಾರೆ. ಈ ಅವಧಿಯಲ್ಲಿ ಕುಟುಂಬದಲ್ಲಿ ಸಾಮಾನ್ಯವಾಗಿ ಶುಭಕಾರ್ಯಗಳು ಜರುಗುವುದಿಲ್ಲ. ಸೂತಕವಿರುವವರು ದೇವಾಲಯವನ್ನು ಹೊಗುವುದಿಲ್ಲ. ಹೆರಿಗೆಯಾದ ಕೂಡಲೆ ಬಾಣಂತಿ ಮತ್ತು ಮಗುವಿಗೆ ಬಿಸಿನೀರಿನ ಮಜ್ಜನವಾಗುವುದು. ಅನಂತರ ಶೀತವಾಗದಿರಲೆಂದು ತಾಯಿಗೆ ಬ್ರಾಂಡಿಯನ್ನು ಕುಡಿಸುವರು. ಇದನ್ನು ಪಾನಮಾಡದವರು ಕಾಫಿ ಸೇವಿಸುವರು. ಮಲೆನಾಡು ಪ್ರದೇಶದಲ್ಲಿ ಬೇರೆಡೆಗಿಂತ ಅಧಿಕ ಶೀತಾಂಶವಿರುವುದರಿಂದ ಈ ದಿಸೆಯಲ್ಲಿ ಅತ್ಯಂತ

ಕಾಳಜಿವಹಿಸಬೇಕಾಗುತ್ತದೆ. ಬಾಣಂತಿಯನ್ನು ಸೂತಕ ಕಳೆಯುವವರೆಗೆ ನೆಲದ ಮೇಲೆ ಹುಲ್ಲು ಹರಡಿ ಅದರ ಮೇಲೆ ಚಾಪೆ ಹಾಸಿ ಗೋಣಿ ಚೀಲದ ಮೇಲೆ ಮಲಗಿಸುವರು. ಶಿಶುವನ್ನು ಹನ್ನೆರಡನೆಯ ದಿನದವರೆಗೆ ತೊಟ್ಟಿಲಿಗೆ ಹಾಕುವಂತಿಲ್ಲ. ಹೆಣ್ಣು ಶಿಶುವಾದರೆ ಮೊರದಲ್ಲಿ, ಗಂಡಾದರೆ ಕೊಂಗದಲ್ಲಿ ಮಲಗಿಸುವರು.[1] ಒಂಬತ್ತನೆಯ ದಿನ ಮನೆಯನ್ನು ಗುಡಿಸಿ ಸಾರಿಸುವರು ಜೋಯಿಸರು ಬಂದು ಪುಣ್ಯಾಹ ವಾಚನ ಮಾಡಿ ಮನೆಗೆಲ್ಲ ತೀರ್ಥ ಸಿಂಪಡಿಸಿ ಸಾಂಕೇತಿಕವಾಗಿ ಸೂತಕ ತೆಗೆಯುವರು.

ಹಾಸನ ಜಿಲ್ಲೆಯ ಮಲೆನಾಡಗೌಡರಲ್ಲಿ ನಾಮಕರಣ ಸಮಾರಂಭಕ್ಕೆ ಬಂಧುಗಳನ್ನು ಆಮಂತ್ರಿಸುವ, ಮಾಂಸದೂಟ ನೀಡುವ ಸಂಪ್ರದಾಯವಿಲ್ಲ ಹನ್ನೆರಡನೆಯ ದಿನ ತೀರ ಸರಳವಾಗಿ ನಾಮಕರಣ ಮಾಡುವರು. ಅಂದು ಮುಂಜಾನೆ ಮನೆಯನ್ನು ಗುಡಿಸಿ ಸಾರಿಸಿ ಶುಚಿಗೊಳಿಸಲಾಗುವುದು. ಪ್ರತಿನಿತ್ಯ ಬಾಣಂತಿಯ ಬಟ್ಟೆಗಳನ್ನು ಮನೆಯವರೆ ಒಗೆದರೂ ಆ ದಿನ ಮಾತ್ರ ಅಗಸಗಿತ್ತಿಯನ್ನು ಕರೆಸಿ ಬಟ್ಟೆಗಳನ್ನು ಒಗೆಸಿ ಶಾಸ್ತ್ರೋಕ್ತವಾಗಿ ಮೈಲಿಗೆ ಕಳೆಮಕೊಳ್ಳುವರು. ಅದಕ್ಕಾಗಿ ಅವಳಿಗೆ ಮೂರು ಕೊಳಗ ಬತ್ತ, ಒಂದು ಕೊಳಗ ಅಕ್ಕಿ, ಹನ್ನೆರಡು ಅಚ್ಚು ಬೆಲ್ಲ, ಒಂದು ತೆಂಗಿನಕಾಯಿ, ಒಂದು ಚಿಪ್ಪು ಬಾಳೆಹಣ್ಣು, ವೀಳೆಯದೆಲೆ ಅಡಿಕೆ ಹಾಗೂ ಐದು ರೂ ಹಣವನ್ನು ಇನಾಮಾಗಿ ನೀಡಲಾಗುವುದು. ಜೋಯಿಸರ ಸಮ್ಮುಖದಲ್ಲಿ ನಾಮಕರಣ ಹಾಗೂ ತೊಟ್ಟಿಲಿಗೆ ಹಾಕುವ ಪದ್ಧತಿಗಳು ನಡೆಯುತ್ತವೆ. ಜೋಯಿಸರು ಪಡಸಾಲೆಯಲ್ಲಿ ಆಯಕಟ್ಟಿನ ಸ್ಥಳವನ್ನು ನೋಡಿ ಬೆನಕನನ್ನು ಇಟ್ಟು ಪೂಜಿಸಿ ಮಂಗಳ ಕಾರ್ಯಕ್ಕೆ ನಾಂದಿ ಹಾಕುವರು. ಮಗು ದುಷ್ಟ ನಕ್ಷತ್ರದಲ್ಲಿ ಜನಿಸಿದ್ದರೆ ಸೂಚಿಸುವರು. ದಾನ ಕೊಡುವ ಅಗತ್ಯವಿದ್ದರೆ ನಾಮಕರಣದ ದಿನವೆ ದಾನ ಕೊಡುವ ಕಾರ್ಯವನ್ನು ಇಟ್ಟುಕೊಳ್ಳಲಾಗುವುದು. ಜೋಯಿಸರು ತೊಟ್ಟಿಲನ್ನು ಪೂಜಿಸಿದ ಬಳಿಕ ಮುತ್ತೈದೆಯರು ಶಿಶುವನ್ನು ಮೊರದಿಂದ ತೊಟ್ಟಿಲಿಗೆ ಹಾಕುವರು. ಸೂತಕ ತೆಗೆದ ಮೇಲೆ ಬಾಣಂತಿ ಹಾಸಿಗೆಯಲ್ಲಿ ಮಲಗುವಳು. ಜೋಯಿಸರು ಶಿಶು ಜನಿಸಿದ ತಾರೆಯನ್ನು ಪರಾಮರ್ಶಿಸಿ ಯಾವ ಅಕ್ಷರದಿಂದ ಹೆಸರಿಡಬೇಕೆಂಬುದನ್ನು ಸೂಚಿಸುವರು. ಶಿಶು ಬೆಳ್ಳಗಿದ್ದರೆ ಬಿಳಗಿ, ಬೆಳ್ಳಿಯಪ್ಪ ಕಪ್ಪಾಗಿದ್ದರೆ ಕರೀಗೌಡ ಎಂದು ಕರೆಯುವುದು ವಾಡಿಕೆ ಉಳಿದಂತೆ ಸುಬ್ಬೇಗೌಡ, ಮಲ್ಲೇಗೌಡ, ಭೈರೇಗೌಡ, ರಾಮೇಗೌಡ, ಸಣ್ಣೇಗೌಡ, ಪುಟ್ಟೇಗೌಡ, ಬೆಳ್ಳಿಯಪ್ಪ, ಕುಶಾಲಪ್ಪ, ಕೊಮಾರೇಗೌಡ, ದೊಡ್ಡೇಗೌಡ ಗೌರಮ್ಮ, ಕಾವೇರಮ್ಮ, ಚನ್ನಮ್ಮ ಸುಬ್ಬಮ್ಮ, ಪುಟ್ಟಮ್ಮ. ಮಲ್ಲಮ್ಮ, ಮಗಮ್ಮ, ಚಿನ್ನಮ್ಮ ಇವೇ ಮೊದಲಾದ ಸಾಮಾನ್ಯ ಹೆಸರುಗಳಲ್ಲಿ ಯಾವುದಾದರೂ ಒಂದು ಹೆಸರನ್ನು ಜೋಯಿಸರೆ ಹೇಳುವರು. ಇತ್ತೀಚೆಗೆ ಆಧುನಿಕ ಹೆಸರುಗಳನ್ನು ಇಡುವುದು ಕಂಡುಬರುತ್ತದೆ.

---

1. ಕೊಂಗ = ಒಂದು ಮೂಲೆ ಇರುವ ಮೊರ

ಮಲೆನಾಡುಗೌಡರು ಬಾಣಂತಿಗೆ ಮಾಡುವ ಆರೈಕೆಗಳಲ್ಲಿ ಸ್ನಾನ ಬಹುಮುಖ್ಯವಾದುದು. ಒಂದು ತಿಂಗಳು ತುಂಬುವವರೆಗೆ ಬೆಳಗ್ಗೆ ಸಾಯಂಕಾಲ ಎರಡು ಬಾರಿ 'ನೀರು ಹುಯ್ಯುತ್ತಾರೆ'. ಹೊಟ್ಟೆ, ಕೈ, ಕಾಲು, ಕೆನ್ನೆಗಳಿಗೆ ದೂರದಿಂದ ಬಿಸಿಬಿಸಿ ನೀರನ್ನು ಅಟ್ಟುವರು. ಹೀಗೆ ಮಾಡುವುದರಿಂದ ಹೆಚ್ಚಿನ ಬೆಳವಣಿಗೆಗಳು ಕಡಿಮೆಯಾಗುತ್ತವೆಂದು ನಂಬಿಕೆ. ಸ್ನಾನವಾದ ಕೂಡಲೆ ½ ಔನ್ಸಿನಷ್ಟು ಬ್ರ್ಯಾಂಡಿ ಕುಡಿಯಲು ಕೊಟ್ಟು ಕಂಬಳಿ ಮುಚ್ಚಿ ಬೆವರು ಸುರಿಯುವವರೆಗೆ ಮಲಗಿಸುವರು. ಚೆನ್ನಾಗಿ ಬೆವರಿದರೆ ಆರೋಗ್ಯಕರವೆಂದು ತಿಳಿಯುವರು. ಅನಂತರ ಸಾಂಬ್ರಾಣಿ ಅಥವಾ ಗಂಧದ ಚಕ್ಕೆ ಹಾಕಿದ ಕೆಂಡದಲ್ಲಿ ಕೂದಲು ಒಣಗಿಸುವರು.

ಶಿಶುವಿಗೆ ಶೀತವಾಗದಿರಲೆಂದು ಅಗಲ ಬಾಯಿಯ ಮಣ್ಣಿನ ಮಡಕೆಗೆ (ಚಟ್ಟಿ) ಹಳಿ ಹಳಿ ಕೆಂಡವನ್ನು ಹಾಕಿ ಮಗುವನ್ನು ದೂರದಿಂದ ಈ ಶಾಖಕ್ಕೆ ಹಿಡಿಯುತ್ತಾರೆ. ಇದನ್ನು 'ಹೊಟ್ಟೆ ಕಾಯಿಸುವುದು' ಎಂದು ಕರೆಯಲಾಗುವುದು. ಹೀಗೆ ಶಾಖ ಕೊಡುವುದು ಹೊಕ್ಕುಳಿನ ಜಾಗದ ಆರ್ದ್ರತೆಯನ್ನು ಕಡಿಮೆಮಾಡಿ ಬೇಗ ಒಣಗಲು ಸಹಾಯಕಾರಿ. ಒಂದು ತಿಂಗಳವರೆಗೆ ದಿನಕ್ಕೆ ಮೂರು ಬಾರಿ ಹೊಟ್ಟೆ ಕಾಯಿಸಿ ಎಣ್ಣೆ ಹಚ್ಚುವರು. ಆದರೆ ಸ್ನಾನ ಬೆಳಗಿನ ಹೊತ್ತು ಮಾತ್ರ ಮಾಡಿಸುವರು. ಸಾಮಾನ್ಯವಾಗಿ ಮಗುವನ್ನು ಹೆಸರುಕಾಳಿನ ಹಿಟ್ಟು ಅಥವಾ ಕಡಲೆ ಹಿಟ್ಟಿನಲ್ಲಿ ತೊಳೆಯುವರು. ಅನುಕೂಲವಿಲ್ಲದವರು ಸೀಗೆಪುಡಿ ಬಳಸುವುದುಂಟು. ಮಗುವಿನ ನಾಲಿಗೆಯ ಅಗ್ರ ತೆಗೆಯಲು ಕಾಳು ಮೆಣಸಿನ ಪುಡಿಯನ್ನು ನಾಲಿಗೆಗೆ ಹಚ್ಚುವರು. ಇದು ಅಗ್ರದ ಜೊತೆಗೆ ಗಂಟಲಲ್ಲಿ ಕಟ್ಟುವ ಕಫವನ್ನು ಕರಗಿಸುತ್ತದೆ. ಸ್ನಾನ ಮಾಡಿಸಿದ ಬಳಿಕ ಕೆಂಡಕ್ಕೆ ಸಾಂಬ್ರಾಣಿ ಪುಡಿ ಹಾಕಿ ತಲೆಯನ್ನು ಒಣಗಿಸುವರು. ಮಗುವಿಗೆ ದೃಷ್ಟಿಬೊಟ್ಟು ಇಡುವರು. ಈ ಬೊಟ್ಟು ಇಡುವ ಸಂಪ್ರದಾಯ ಎಲ್ಲ ಜನಾಂಗದಲ್ಲಿಯೂ ಕಂಡುಬರುತ್ತದೆ. ಇದು ಅತ್ಯಂತ ಪ್ರಾಚೀನ ಕೂಡ. ಹೇರಂಬ ಕವಿಯು ಸಿದ್ಧಲಿಂಗೇಶ್ವರ ಸಾಂಗತ್ಯದಲ್ಲಿ ಶಿಶು ಸಿದ್ಧಲಿಂಗನಿಗೆ ಈ ಬಗೆಯ ಆರೈಕೆ ಮಾಡಿದುದರ ಚಿತ್ರವಿದೆ—

ನೀರನೆರೆದು ನೆತ್ತಿಗೆಲೆಗಾಸಿ ಹಾಕುತಾ
ಕಾರುವಣ್ಣದ ದಿಟ್ಟಿಯಿಕ್ಕಿ
ಆರಗೊಡದ ಮೈಯಿಗೆಣ್ಣೆಯ ತಡಹಿ ಕು
ಮಾರನ ಬೆಳಸುವಳೊಲಿದು

ಬಾಣಂತಿಗೆ ನೀಡುವ ಆಹಾರ ವಿಚಾರದಲ್ಲಿ ಮನೆಯ ಹಿರಿಯರು ಅತ್ಯಂತ ಜಾಗ್ರತೆ ವಹಿಸುವರು. ಅಧಿಕ ಪ್ರಮಾಣದಲ್ಲಿ ಆಹಾರ ಸೇವಿಸಿದರೆ ಶೂಕ ಹೆಚ್ಚುತ್ತದೆ. ಹಾಗೆ ಬಾಣಂತಿಯಲ್ಲಿ ಬಂದ ಮೈ ಕರಗುವುದಿಲ್ಲ ಎಂಬ ನಂಬಿಕೆಯಿದೆ. ಆದುದರಿಂದ ಪ್ರಸವವಾದ ಬಳಿಕ ಐದು ದಿನಗಳ ವರೆಗೆ ಬಾಣಂತಿಗೆ ಬರಕಾಫಿ

ನೀಡುವರು.[1] ಬೆಳಗಿನ ಉಪಾಹಾರ ಕೊಡುವುದಿಲ್ಲ. ನೀರು ಕುಡಿಯುವಂತಿಲ್ಲ. ಮಧ್ಯಾಹ್ನ ಮತ್ತು ಸಾಯಂಕಾಲ ಬಿಸಿಬಿಸಿ ಅನ್ನ ಹಾಗೂ ಹೇಳೆಕಾಯಿಯ ಉಪ್ಪಿನ ಕಾಯಿ ಮಾತ್ರ ಉಣಬಡಿಸುತ್ತಾರೆ. ಬೇಲೂರು ತಾಲ್ಲೂಕಿನ ಯಮಸಂಧಿ ಭಾಗ ದಲ್ಲಿ ಬಿಸಿ ಅನ್ನಕ್ಕೆ ಬೆಲ್ಲ ಹಾಗೂ ಬೆಳ್ಳುಳ್ಳಿಯನ್ನು ವ್ಯಂಜನವಾಗಿ ನೀಡುತ್ತಾರೆ. ಬೆಳ್ಳುಳ್ಳಿ ಜೀರ್ಣಕಾರಕ. ಬೆಲ್ಲದಲ್ಲಿ ಕಬ್ಬಿಣಾಂಶವಿರುವುದರಿಂದ ರಕ್ತವೃದ್ಧಿಯಾಗು ವಂತೆ ಮಾಡುತ್ತದೆ. ಮಗುವನ್ನು ತೊಟ್ಟಿಲಿಗೆ ಹಾಕಿದ ಮೇಲೆ ಬಾಣಂತಿಯ ಆಹಾರದಲ್ಲಿ ತಕ್ಕಮಟ್ಟಿನ ಸುಧಾರಣೆಯಾಗುವುದು. ಬೆಳಿಗ್ಗೆ ಲಘು ಉಪಾಹಾರ ನೀಡಲು ಪ್ರಾರಂಭಿಸುವರು. ಅದು ಸಾಮಾನ್ಯವಾಗಿ ಅಕ್ಕಿರೊಟ್ಟಿಯೆ ಆಗಿರುತ್ತದೆ. ಕೆಂಡದಲ್ಲಿ ಸುಟ್ಟು ಉಬ್ಬಿಸಿದ ರೊಟ್ಟಿಗೆ ಜೇನುಹಾಕಿ ತಿನ್ನಲು ಕೊಡುವರು. ಮಧ್ಯಾಹ್ನ ಮತ್ತು ರಾತ್ರಿಯ ಊಟಗಳಿಗೆ ಅನ್ನ, ಮೆಣಸಿನಸಾರು, ಸೆಂಚಲು ಸೀಗಡಿಮೀನಿನ ಒಣಚಟ್ನಿ ಬಡಿಸುವರು. ಊಟವಾದ ಬಳಿಕ ಬಾಣಂತಿಗೆ ಮೆಲ್ಲಲು ಕಾಚುಬೆರಸಿದ ತಾಂಬೂಲವನ್ನು ಕೊಡಲಾಗುವುದು. ಶಿಶುವಿಗೆ ಒಂದು ತಿಂಗಳು ತುಂಬುವವರೆಗೆ ತಾಯಿಯ ಹಾಲು ಮಾತ್ರ ಆಹಾರವಾಗಿರುತ್ತದೆ. ತಿಂದ ಆಹಾರ ಸುಲಭವಾಗಿ ಪಚನವಾಗಲೆಂದು ಮಗುವಿಗೆ ಹದಿನೈದು ದಿನಗಳಿಗೊಮ್ಮೆ ಜಾಯಿ ಕಾಯಿ ತೇಯಿದು ಒಂದು ಚಮಚ ಹಾಲಿನಲ್ಲಿ ಕುಡಿಸುವರು.

ಈ ನಡುವೆ ಬಾಣಂತಿ ಮತ್ತು ಮಗುವನ್ನು ನೋಡಲೆಂದು ಸಮೀಪದ ಬಂಧು ಮಿತ್ರರು ಬಂದು ಹೋಗುವುದುಂಟು. ಮಗು ಜನಿಸಿದ ಸುದ್ದಿ ತಿಳಿದೊಡನೆಯೆ ಗಂಡನ ಮನೆಯವರು ಐದು ಕೊಬ್ಬರಿ ಗಿಟಕು, ಐದು ಸೇರು ತುಪ್ಪ, ಮೂರು ಸೇರು ಮೆಂತ್ಯ, ಎರಡು ಸೇರು ಗೋಧಿ, ಎಲೆ ಅಡಿಕೆ ಒಂದು ಬ್ರ್ಯಾಂಡಿ ಸೀಸೆ ತೆಗೆದುಕೊಂಡು ಹೆಣ್ಣಿನ ಮನೆಗೆ ಬರುವರು. ಬಾಣಂತಿ ಕೈಗೆ ತಮಗೆ ಸಾಧ್ಯವಿರುವಷ್ಟು ಹಣ ಮಗುವಿಗೆ ಹೊಸ ಬಟ್ಟೆ ಮತ್ತು ಉಂಗುರವನ್ನು ಕೊಡುವರು. ಸೂತಕ ಪರಿಹಾರ ವಾಗುವವರೆಗೆ ಮಗುವಿಗೆ ಹೊಸಬಟ್ಟೆ ಹಾಕುವುದಿಲ್ಲ. ಸಾಮಾನ್ಯವಾಗಿ ಮನೆಯ ಮಕ್ಕಳು ಉಪಯೋಗಿಸಿದ ಹಳೆಯ ಬಟ್ಟೆಯನ್ನೆ ಧರಿಸಲಾಗುವುದು. ಹೀಗೆ ಮಾಡುವುದರಿಂದ ಸೋಂಕು ರೋಗಗಳು ತಗಲುವುದಿಲ್ಲವೆಂಬ ಭಾವನೆ. ಹಾಗೂ ಹಿಂದೆ ಆ ಬಟ್ಟೆ ಹಾಕಿದ ಮಗು ಚೆನ್ನಾಗಿ ಬೆಳೆದಿರುವಂತೆ ಈ ಮಗವೂ ಬೆಳೆಯಲೆಂಬ ಆಶಯ ಅಡಗಿದೆ. ಆರೇಳು ತಿಂಗಳು ತುಂಬುವವರೆಗೆ ಮಗುವಿನ ಬಟ್ಟೆಯನ್ನು ಒಗೆದು ಜಾಲಿಸಿದ ಬಳಿಕ ಹಾಗೆಯೆ ಹರಡಬೇಕು. ಬಟ್ಟೆ ಹಿಂಡಿದರೆ ಮಗು ಮೈಮುರಿಯುತ್ತಿರುತ್ತದೆಂದು ನಂಬಿಕೆಯಿದೆ.

ಇತರ ಯಾವುದೇ ಜನಾಂಗದಂತೆ ಈ ಜನಾಂಗದಲ್ಲಿ ಕೂಡ ನವಜಾತಶಿಶುವನ್ನು ನೋಡಲು ಬರುವಂಥವರು ಬರಿಗೈಯಲ್ಲಿ ಬರುವುದಿಲ್ಲ. ಸಮೀಪದ ಬಂಧುಗಳು ಹೊಸಬಟ್ಟೆ ಮತ್ತು ಹಣವನ್ನು ಉಡುಗೊರೆಯಾಗಿ ಸಲ್ಲಿಸುವರು. ದೂರದ

1. ಬರಗಾಫಿ—ಹಾಲು ಬೆರಸದ ಕಾಫಿ, ಗೊಡ್ಡುಕಾಫಿ

ನೆಂಟರಿಷ್ಟರು ಮಗುವಿನ ಕೈಗೆ ಹಣ ಮಾತ್ರ ನೀಡುವರು. ಇದು 100ರಿಂದ 5ರೂ ವರೆಗೆ ದಾತೃವಿನ ಹಾಗೂ ಶಿಶುವಿನ ಮನೆಯ ಸಂಬಂಧವನ್ನೂ ಆರ್ಥಿಕ ಸ್ಥಿತಿಯನ್ನೂ ಅವಲಂಬಿಸಿರುತ್ತದೆ. ಕೊಡುವವರು ಬಡವರಾದರೂ ಮಗು ಸಿರಿವಂತ ಕುಟುಂಬಕ್ಕೆ ಸೇರಿದ್ದರೆ ಶಕ್ತಿಮೀರಿ ಹೆಚ್ಚಾಗಿಯೆ ಹಣ ಕೊಡುವುದುಂಟು. ಇಂಥ ಅತಿಥಿಗಳಿಗೆ ಬಂದಕೂಡಲೆ ಮೆಂತ್ಯದ ಹಿಟ್ಟುಮಾಡಿ ತಿನ್ನಲು ಕೊಟ್ಟು, ಸಾವಕಾಶವಾಗಿ ಮಾಂಸದ ಸಾರು ಮತ್ತು ಬ್ರಾಂಡಿಯ ಔತಣ ಹಾಕುವರು.[1]

ಮೂರುತಿಂಗಳು ತುಂಬುವವರೆಗೆ ಗಾಳಿ ಬೆಳಕು ಕಡಿಮೆ ಇರುವಂಥ ಕತ್ತಲ ಕೋಣೆಯಲ್ಲಿ ಬಾಣಂತಿಯು ಮಲಗಿರಬೇಕು. ತಾಯಿ ಮತ್ತು ನವಜಾತಶಿಶುವಿನ ಮೇಲೆ ಗಾಳಿ ಸೋಂಕು ಪಿಶಾಚಿ ದೆವ್ವ ಮೊದಲಾದ ಕ್ರೂರದೃಷ್ಟಿಗಳು ಬೀಳದಿರಲೆಂದು ಬಾಣಂತಿ ಹಾಸಿಗೆಯ ಕಾಲುಕಡೆಗೆ ಕುಡ್ಲು, ಕಸಪೊರಕೆಯನ್ನು ಮಗುವಿನ ತೊಟ್ಟಿಲ ಹಾಸಿಗೆಗೆ ಚಿಕ್ಕದೊಂದು ಕತ್ತಿಯನ್ನು ಇಡುವರು. ತೊಟ್ಟಿಲಿಗೆ ಪುಣುಗಿನ ಬೆಕ್ಕಿನ 'ಚಟ್ಟು' ಕಟ್ಟುವರು. ಮಗು ದಿನದಿಂದ ದಿನಕ್ಕೆ ಪೂರ್ಣಚಂದ್ರನಂತೆ ವೃದ್ಧಿಯಾಗಿ ಬೆಳೆಯುತ್ತ ಮನೆಮಂದಿಯನ್ನೆಲ್ಲ ತನ್ನತ್ತ ಸೆಳೆಯುತ್ತದೆ. ಅದು ನಿದ್ರೆಯಲ್ಲಿ ನಕ್ಕರೆ ಶಿವನೊಡನೆ ಸಂಭಾಷಿಸುತ್ತಿದೆಯೆಂದು ಹಿರಿಯರು ವ್ಯಾಖ್ಯಾನಿಸುವರು. ಎರಡು ಕೈಗಳನ್ನು ತಲೆಯ ಹತ್ತಿರಕ್ಕೆ ಚಾಚಿ ಮಲಗಿದ್ದರೆ ಶಿವನಿಗೆ ಮಣ್ಣು ಹೊರುತ್ತಿದೆ ಯೆಂದೂ ನಿದ್ರೆಯಲ್ಲಿ ಅತ್ತರೆ ದೇವರು ಚಡಿ ಏಟು ಕೊಡುತ್ತಿರುವನೆಂದೂ ಅರ್ಥೈಸ ಲಾಗುವುದು. ಮಗು ರಚ್ಚೆ ಮಾಡಿದರೆ 'ಕಣ್ಣು ಆಸರ'ವೆಂದು ಬಗೆದು ರಚ್ಚೆ ತಾಳಿ ಮಾಡಿಸಿ ಶಿಶುವಿನ ಕೊರಳಿಗೆ ಹಾಕುವರು. ಉಪ್ಪು ಮೆಣಸಿನಕಾಯಿಯನ್ನು ಮಗುವಿಗೆ ನಿವಾಳಿಸಿ ಒಲೆಗೆ ಹಾಕುವುದು, ಉಪ್ಪು ನಿವಾಳಿಸಿ ಬಾವಿಗೆ ಹಾಕುವುದು, ವೀಳೆಯದೆಲೆಗೆ ಕಣ್ಣು ಮಾಡಿ ಎಣ್ಣೆ ಸವರಿ ನಿವಾಳಿಸಿ ಒಲೆಗೆ ಹಾಕುವುದು ಇವೇ ಮುಂತಾದ ವಿವಿಧ ಬಗೆಯ ದೃಷ್ಟಿನಿವಾರಕಗಳ ಮೊರೆಹೋಗುವರು. ನಿವಾಳಿಸುವಾಗ ವಸ್ತುವನ್ನು ಎಡಗೈಯಲ್ಲಿ ಹಿಡಿದು "ಹಾದಿಕಣ್ ಬೀದಿಕಣ್ ನಾಯಿಕಣ್ ನರಿಕಣ್ ಕಾಗೆಕಣ್ ಗೂಬೆಕಣ್ ತಂದೆಕಣ್ ತಾಯಿಕಣ್ ಅಕ್ಕಪಕ್ಕದವರ ಕಣ್ ರಂಡೆ ಮುಂಡೇರ ಕಣ್ಣೆಲ್ಲ ಸುಳಿದು ಹೋಗಲಿ'' ಎಂದು ಹೇಳುವರು. ಉಪ್ಪು ವೀಳೆಯದೆಲೆ ಮುಂತಾದವು ಒಲೆಗೆ ಹಾಕಿದಾಗ ಚಟಪಟಗುಟ್ಟಿದರೆ ಅಷ್ಟರಮಟ್ಟಿಗೆ ದೃಷ್ಟಿಯಾಗಿದೆ ಎಂಬ ಭಾವನೆ ಬೇರೂರಿದೆ. ಸುಟ್ಟ ವೀಳೆಯದೆಲೆ ಕಪ್ಪನ್ನು ಮಗುವಿನ ಹಣೆಗೆ ಬೊಟ್ಟಿಡುವರು. ಗಂಡುಮಗುವಾದರೆ ಬಲಕೆನ್ನೆಗೆ ಹೆಣ್ಣಾದರೆ ಎಡಕೆನ್ನೆಗೆ ಬೊಟ್ಟು. ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಮಕ್ಕಳು ಹೆಚ್ಚು ರಚ್ಚು ಮಾಡುತ್ತವೆಂಬ ನಂಬಿಕೆ ಯಿದೆ. ಆದಕ್ಕಾಗಿ ಕೆಲವರು ಮೊದಲೇ ಕಸ್ತೂರಿ ಮಾತ್ರೆ ಹಾಕುವುದುಂಟು. ಮಗುವಿಗೆ ಅನಾರೋಗ್ಯವಾದರೆ ಹಾಗೂ ಅಳು ತಾರಕಕ್ಕೆ ಏರಿದರೆ ಕೆಂಪುನೀರು ಮಾಡಿ

1. ಮೆಂತ್ಯದಹಿಟ್ಟು—ಮೆಂತ್ಯ, ಗೋಧಿ, ಅಕ್ಕಿ ಹುರಿದು ಮಾಡಿದ ಹಿಟ್ಟು. ಇದನ್ನು ಬೆಲ್ಲದ ನೀರಿನಲ್ಲಿ ಬೇಯಿಸಿ ಮುದ್ದೆ ಕಟ್ಟಿ ತುಪ್ಪ ಹಾಕಿ ತಿನ್ನಲು ನೀಡುವರು.

ಅದಕ್ಕೆ ವಿವಿಧ ಬಗೆಯ ಹೂವು, ಮಸಿಯ ಕೆಂಡ, ಒಂದು ಹಿಡಿ ಅನ್ನ ಹಾಕಿ ನಿವಾಳಿಸಿ ಆ ನೀರನ್ನು ಮೂರು ದಾರಿ ಕೂಡಿದ ಜಾಗದಲ್ಲಿ ಚೆಲ್ಲುವರು. ಇದಕ್ಕೆ 'ಕೆಂಪು ನೀರು ಚೆಲ್ಲುವುದು' ಎಂದು ಕರೆಯುವರು. ದೃಷ್ಟಿ ನಿವಾರಣೆಗೆಂದು ಮಗುವಿನ ಕೈಗೆ ಬಿಳಿಯ ಹಾಲುಮಣಿ ಮತ್ತು ಕರಿಮಣಿಯನ್ನು ಒಂದಾದ ಬಳಿಕ ಒಂದರಂತೆ ಪೋಣಿಸಿ ಕಟ್ಟುವರು. ಮಗುವಿಗೆ ಹೊಟ್ಟೆನೋವು ಅಥವಾ ಬೇಧಿಯಾಗುತ್ತಿದ್ದರೆ ರಂಚು ಹಾಕುವರು. ನೆತ್ತಿಯ ನರ ದೂರವಿದ್ದಂತೆ ಕಂಡುಬಂದರೆ ನೆತ್ತಿ ಬಿರುಕುಬಿಟ್ಟಿತೆಂದು ಹೇಳಿ ಸೂಡುಹಾಕುವರು.

ಶಿಶುವಿಗೆ ತಿಂಗಳು ತುಂಬಿದೊಡನೆಯೆ ತಾಯಿಯ ಹಾಲಿನ ಜೊತೆಗೆ ಹೆಚ್ಚಿನ ಆಹಾರವನ್ನು ಕೊಡಲಾಗುವುದು. ಸ್ವಚ್ಛಗೊಳಿಸಿದ ಅಕ್ಕಿ ಗೋಧಿ ಮೆಂತ್ಯವನ್ನು ನಿರ್ದಿಷ್ಟ ಅಳತೆಯಲ್ಲಿ ತೆಗೆದುಕೊಂಡು ಎಲ್ಲವನ್ನೂ ಹುರಿಯುವರು. ಈ ಮಿಶ್ರಣಕ್ಕೆ ಜಾಯಿಕಾಯಿ ಲವಂಗ ಬಜೆ ಇವುಗಳನ್ನು ಕಿರುಪ್ರಮಾಣದಲ್ಲಿ ಬೆರೆಸಿ ನುಣ್ಣಗೆ ಬೀಸಿ ಪುಡಿಮಾಡಿ ಶಿಶುವಿನ ಆಹಾರ ಸಿದ್ಧಪಡಿಸುವರು. ಇದನ್ನು ಒಂದು ಚಮಚದಷ್ಟು ತೆಗೆದುಕೊಂಡು ಹಾಲಿನಲ್ಲಿ ಬೇಯಿಸಿ ಸ್ವಲ್ಪ ತುಪ್ಪ ಹಾಕಿ ಇಳಿಸುವರು. ತಣ್ಣಗಾದ ಮೇಲೆ ಮಗುವಿಗೆ ತಿನ್ನಿಸುವರು. ಹಾಲಿನಲ್ಲಿ ಬೆಂದ ಈ ಆಹಾರ ಸ್ವಾದಿಷ್ಟವಾಗಿರುತ್ತದೆ. ಮಗು ಇಚ್ಛೆಪಟ್ಟು ತಿನ್ನುತ್ತದೆ. ಮೊದಲ ತಿಂಗಳು ಈ ಆಹಾರವನ್ನು ಒಂದು ಹೊತ್ತು ಕೊಡುವರು. ಎರಡನೆಯ ತಿಂಗಳಿಂದ ಎರಡುಹೊತ್ತು. ಹೀಗೆ ತಿಂಗಳಿಂದ ತಿಂಗಳಿಗೆ ಆಹಾರದ ಪ್ರಮಾಣವನ್ನು ಹೆಚ್ಚಿಸುತ್ತ ಒಂದು ವರ್ಷದವರೆಗೆ 'ಹಿಟ್ಟು ಉಣಿಸುವರು' ಆರನೆಯ ತಿಂಗಳಿಗೆ ಅನ್ನಪ್ರಾಶನ. ವೈದಿಕರಂತೆ ಇದಕ್ಕಾಗಿ ವಿಶೇಷ ಸಮಾರಂಭವೇನೂ ಇರುವುದಿಲ್ಲ.

ಒಂದು ತಿಂಗಳಾದ ಬಳಿಕ ಬಾಣಂತಿ ಆಹಾರದಲ್ಲಿ ಬದಲಾವಣೆಗಳಾಗುತ್ತವೆ. ಎಣ್ಣೆನೀರಿನಿಂದ ಬಾಣಂತಿಯನ್ನು ಬಾಹ್ಯವಾಗಿ ತಂಪು ಮಾಡಿದರೂ ಒಂದು ತಿಂಗಳು ತುಂಬವವರೆಗೆ ಉಷ್ಣಪ್ರಧಾನ ಆಹಾರವನ್ನೇ ಕೊಡಲಾಗುವುದು. ನಿತ್ಯಸ್ನಾನದಿಂದ ಬಾಣಂತಿ ನವಕಾಂತಿಯಿಂದ ಕಂಗೊಳಿಸುವಳು. ಆಕೆಗೆ ಕಾಡಿಗೆ ಹಚ್ಚುವ ವಿಶೇಷತೆಯೇನೂ ಈ ಜನಾಂಗದಲ್ಲಿಲ್ಲ. ಇತರ ಜನಾಂಗದಲ್ಲಿ ಬಾಣಂತಿಗೆ ಕಾಡಿಗೆ ಹಚ್ಚುವುದು ಕಡ್ಡಾಯ. ಅಂಥದೊಂದು ಬಾಣಂತಿ ಚಿತ್ರವನ್ನು ಹೇರಂಬ ಕವಿಯ ಸಿದ್ಧಲಿಂಗೇಶ್ವರ ಸಾಂಗತ್ಯದಲ್ಲಿ ಕಾಣಬಹುದು—

ಎಣ್ಣೆ ಸೋಂಕಿನ ಸೀರೆಯುಡುಗೆಯು ನಡುಸುತ್ತು
ಸಣ್ಣ ಸೆರಗು ತಲೆಕಟ್ಟು
ಕಣ್ಣಕಾಡಿಗೆಯುರಿಸಿನದ ಲೇಪನದಿಂದೆ
ಚೆನ್ನಾದಳಾಗ ಬಾಣಂತಿ (೬–೮)

ಎರಡನೆಯ ತಿಂಗಳಿಂದ ಬಾಣಂತಿಗೆ ಶರೀರವನ್ನು ತಂಪು ಮಾಡುವಂಥ ಆಹಾರವನ್ನು ಕೊಡಲು ಪ್ರಾರಂಭಿಸುವರು. ಬೆಳಗ್ಗೆ ಉಪಾಹಾರ ರೂಪದಲ್ಲಿ ಮೆಂತ್ಯದ

ಹಿಟ್ಟು ಕೊಡುವರು. ಪಥ್ಯೆ ಒಂದೊಂದು ದಿನ ಕಡಬು ಅಥವಾ ಇಡ್ಲಿಯನ್ನು ತಿನ್ನಿಸುವರು. ಮಧ್ಯಾಹ್ನದ ಊಟಕ್ಕೆ ಕುರಿಯಕಾಲಿನ ಸಾರು ಮಾಡಿ ಬಡಿಸುವರು. ಇದು ಬೇಸರವಾದರೆ ಇಲಿಯನ್ನು ಹುರಿದು ಊಟಕ್ಕೆ ನೀಡುವರು. ಹೀಗೆ ಮೂರು ತಿಂಗಳವರೆಗೆ ನಿರಂತರವಾಗಿ ಕುರಿಯಕಾಲು ಇಲಿಯನ್ನು ಕೊಟ್ಟ ಬಳಿಕ ಬಾಣಂತಿ ಮೈಕೈ ತುಂಬಿಕೊಂಡು ಪುಷ್ಟಿಯಾಗುತ್ತಾಳೆ. ಆಕೆಯ ಅಂಗಾಂಗಗಳಲ್ಲಿ ಶಕ್ತಿ ವರ್ಧಿಸುತ್ತದೆ ಅನಂತರ ಮಿತವಾಗಿ ಹಂದಿ ಹುರಿತುಂಡು, ಮಿಾನುಸಾರು ಸೇವಿಸ ಬಹುದು. ನಾಲ್ಕನೆಯ ತಿಂಗಳ ಹೊತ್ತಿಗೆ ನಂಜಾಗದ ತರಕಾರಿಗಳಾದ ಪಡವಲ ಕಾಯಿ, ಹೀರೆಕಾಯಿ, ಹಾಗಲಕಾಯಿ ಇವೇ ಮೊದಲಾದ ಕಾಯಿಪಲ್ಲೆಗಳನ್ನು ಎಣ್ಣೆ ತೆಂಗಿನಕಾಯಿ ಹಾಕದೆ ಬೇಯಿಸಿ ಕೊಡುವರು. ಸೊಪ್ಪುಗಳಲ್ಲಿ ಸಬ್ಬಸಿಗೆಸೊಪ್ಪಿನ ಪಲ್ಯವನ್ನು ಬಾಣಂತಿ ಉಪಯೋಗಿಸಬಹುದು. ಈ ಸೊಪ್ಪಿನಲ್ಲಿ ಎದೆಯ ಹಾಲನ್ನು ವೃದ್ಧಿಸುವ ಗುಣವಿದೆಯೆಂದು ಅನುಭವಿಗಳು ಹೇಳುವರು ಬಯಲುಸೀಮೆಯ ಗೌಡರು ಬಾಣಂತಿಗೆ ಆರಂಭದಿಂದಲೂ ಕೋಳಿಮಾಂಸ ನೀಡುವರು. ಕೋಳಿ ಸಿಕ್ಕಿದ್ದನ್ನೆಲ್ಲ ತಿನ್ನುತ್ತದೆಂಬ ಕಾರಣದಿಂದಲೊ ಏನೊ ಈ ಜನಾಂಗ ಆರು ತಿಂಗಳ ವರೆಗೆ ಕೋಳಿಮಾಂಸವನ್ನು ದೂರವಿಟ್ಟಿರುತ್ತದೆ.

ಬಾಣಂತಿಯ ಅವಧಿ ಹೆಣ್ಣಿನ ಜೀವನದಲ್ಲಿ ವಿಶ್ರಾಂತಿಯ ಕಾಲ. ಮೂರು ತಿಂಗಳವರೆಗೆ ಆಕೆಯನ್ನು ಕೆಲಸ ಮಾಡಲು ಬಿಡುವದಿಲ್ಲ. ಮನೆಯಿಂದ ಹೊರಗೆ ಹೋಗುವಂತೆಯೂ ಇಲ್ಲ ಮೂರುತಿಂಗಳ ಒಳಗೆ ಒಂದು ಪ್ರಶಸ್ತ ದಿನವನ್ನು ನೋಡಿ ಗಂಗೆ ಪೂಜಿಸಿಕೊಂಡು ಬರುವ ಸಂಪ್ರದಾಯವಿದೆ. ಸಕಲೇಶಪುರ ತಾಲ್ಲೂಕಿನ ಹೆತ್ತೂರು ಭಾಗದಲ್ಲಿ ತಿಂಗಳಿಗೆ ಮೂರುದಿನ ಕಡಿಮೆಯಾಗಿ ಈ ಶಾಸ್ತ್ರ ವನ್ನು ಮಾಡಿಸುವುದುಂಟು. ಇದಕ್ಕೆ 'ಹೊಳೆಮೆಟ್ಟುವ ಶಾಸ್ತ್ರ' ಎಂಬ ಪರ್ಯಾಯ ಪದ ಕೆಲವೆಡೆ ರೂಢಿಯಲ್ಲಿದೆ. ಗಂಗೆ ಪೂಜಿಸುವ ದಿನ ಮಿಂದು ಮಡಿಯುಟ್ಟು ಮೂವರು ಮುತ್ತೈದೆಯರು ಕಳಸ ಸಮೇತರಾಗಿ ಬಾಣಂತಿಯನ್ನು ಹತ್ತಿರದ ಬಾವಿ ಅಥವಾ ಹೊಳೆಯ ಬಳಿ ಕರೆದುಕೊಂಡು ಹೋಗುವರು. ಮಗುವಿನ ಪ್ರತಿನಿಧಿಯಾಗಿ ಅದರ ಬಟ್ಟೆಯನ್ನು ಜೊತೆಯಲ್ಲಿ ಒಯ್ಯುವರು. ಮೂರು ಕಳಸಕ್ಕೆ ನೀರುಹಾಕಿ ಬಾವಿಯ ಕಟ್ಟೆಯ ಮೇಲೆ ಅಥವಾ ಹೊಳೆ ಬದಿಯಲ್ಲಿ ಸ್ಥಾಪಿಸಿ ಗಂಗೆಯನ್ನು ಆಹ್ವಾನಿಸುವರು. ಒಂದೆಡೆ ಮಗುವಿನ ಬಟ್ಟೆಯನ್ನು ನೆನಸಿಡುವರು. ಕಳಸಗಳ ಮುಂದೆ ಒಂದೊಂದು ಚಿಕ್ಕ ಮಣ್ಣಿನಉಂಡೆ ಎಲೆಅಡಿಕೆ ಬಾಳೆಹಣ್ಣು ಇಟ್ಟು ಪೂಜಿಸುವರು. ಮನೆಯಿಂದ ತಂದಿದ್ದ ನೆನೆಅಕ್ಕಿ ನೆನೆಗಡಲೆಯನ್ನು ಕಳಸಕ್ಕೆ ಸಮರ್ಪಿಸುವರು. ಈ ಸಂದರ್ಭದಲ್ಲಿ ಮುತ್ತೈಯರು ಹಾಡುವರು—

ಮುಕ್ಕಣ್ಣಹರನ ವರಪುತ್ರಗಭಿವಂದಿಸಿ
ರಕ್ಕಸಾಂತಕನ ಮಡದಿಯು
ರಕ್ಕಸಾಂತಕನ ಮಡದಿ ಮಹಾಲಕ್ಷ್ಮಿಯು
ಹೊಳೆಮೆಟ್ಟಿದ ಪದನ ರಚಿಸುವೆ

ಮಾಸ ಎರಡಾದವು ಮಹೇಶ್ವರಿಯ ಉದರದಲಿ
ಸೂತಕವ ಕಳೆದು ಹೊಳೆಮೆಟ್ಟಿ ಬರುತಾಳೆ
ಭಾಸ್ಕರನ ತೇಜ ಹೊಳೆದಂತೆ

ತಿಂಗಳ್ಹೆಚ್ಚೆಂದು ದೇವಾಂಗನೆಯರ ಕರಸೀದೊ
ರಂಗನರಸಿಗೆ ಹರಸುತ್ತ
ರಂಗನರಸಿಗೆ ಹರಸುತ್ತೆಣ್ಣೆ ಒತ್ತಿ
ಎಣ್ಣೆಮಜ್ಜನಕೆ ಕರೆದರು

ನಿಂಬೆಯ ವನದಲ್ಲಿ ರಂಗನ ಸನ್ನಿಧಿಯಲ್ಲಿ
ರಂಭೆ ಮಹಾಲಕ್ಷ್ಮಿ ಹೊಳೆಮೆಟ್ಟಿ ಬಂದಲ್ಲಿ
ಬಂಧುಗಳಕ್ಕಿದಾರೆ ಮಡುಲಕ್ಕಿ

ಬಾಳೆಯ ವನದಲ್ಲಿ ರಾಮನ ಸನ್ನಿಧಿಯಲ್ಲಿ
ಭಾಮೆ ಮಹಾಲಕ್ಷ್ಮಿ ಹೊಳೆಮೆಟ್ಟಿ
ಭಾಮೆ ಮಹಾಲಕ್ಷ್ಮಿ ಹೊಳೆಮೆಟ್ಟಿ ಬಂದಲ್ಲಿ
ಕೋಗಿಲೆಗಳಕ್ಕಿದಾವೆ ಮಡುಲಕ್ಕಿ

ಹೀಗೆ ಪೂಜಿಸಿದ ಬಳಿಕ ಒಂದು ಕಳಸವನ್ನು ಬಾಣಂತಿಯ ಕೈಗೆ ನೀಡುವರು. ಉಳಿದೆರಡನ್ನು ಇಬ್ಬರು ಮುತ್ತೈದೆಯರು ಹಿಡಿದು ಮನೆಗೆ ಗಂಗೆತರುವರು. ಈ ನೀರನ್ನು ಮಗುವಿಗೆ ಸ್ನಾನಮಾಡಿಸುವ ನೀರಿನಲ್ಲಿ ಬೆರಸಲಾಗುವುದು. ಪ್ರಕೃತಿಯನ್ನೆ ದೈವವೆಂದು ಆರಾಧಿಸಿದ್ದುದರ ಪಳೆಯುಳಿಕೆಯಾಗಿ ಗಂಗೆ ಪೂಜಿಸುವ ಸಂಪ್ರದಾಯ ಇಂದಿಗೂ ಅಸ್ತಿತ್ವದಲ್ಲಿರುವುದನ್ನು ಗಮನಿಸಬಹುದು. ಬಾಣಂತಿ ಗಂಗೆಪೂಜೆ ಮಾಡಿಕೊಂಡು ಬರುವವರೆಗೆ ಆಕೆ ಕಸಪೊರಕೆ ಹಿಡಿಯಬಾರದು, ಒಲೆ ದೂಡಬಾರದು, ತಣ್ಣೀರು ಮುಟ್ಟಬಾರದೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು. ಈ ಕಾರಣಕ್ಕಾಗಿ ಹೊರಗೆಹೋಗಿ ಬಂದ ಬಾಣಂತಿಯನ್ನು ಪುನಃ ಹೊಸ್ತಿಲು ದಾಟಿಸುವುದು ಮೂರುತಿಂಗಳಾದ ನಂತರವೆ. ಮಗುವಿಗೆ ಮೂರು ತಿಂಗಳು ತುಂಬಿದ ಮೇಲೆ ತಾಯಿ ಮಗುವನ್ನು ಊರಿನ ದೇವಾಲಯಕ್ಕೆ ಕರೆದುಕೊಂಡು ಹೋಗಿ ಹಣ್ಣುಕಾಯಿ ಮಾಡಿಸಿಕೊಂಡು ಬರುತ್ತಾರೆ. ಅನಂತರ ಒಬ್ಬೊಬ್ಬರಾಗಿ ಹಿತೈಷಿಗಳು, ಬಂಧುಗಳು ಬಾಣಂತಿಯನ್ನು ಊಟಕ್ಕೆ ಆಹ್ವಾನಿಸಿ ಮಾಂಸದ ಔತಣ ನೀಡುವರು. ಹೀಗೆ ಸಮೀಪದ ಮನೆಗಳಿಗೆ ಬಾಣಂತಿ ಓಡಾಡಬಹುದಾದರೂ ಮಗುವಿಗೆ ಆರು ತಿಂಗಳು ತುಂಬುವ ತನಕ ಆಕೆ ಹೂವು ಮುಡಿಯಬಾರದೆಂಬ ನಂಬಿಕೆಯಿದೆ. ಮಗುವಿಗೆ ಮೂರುತಿಂಗಳಾದ ಕೂಡಲೆ ಶುಭದಿನವನ್ನು ನೋಡಿ ಕಿವಿಚುಚ್ಚಿಸುವ ಕಾರ್ಯ ಇಟ್ಟುಕೊಳ್ಳುವರು. ಅದಕ್ಕಾಗಿ ಆಚಾರಿಯನ್ನು ಕರೆಸುವರು. ಆತ ಕಿವಿ ಚುಚ್ಚಿ ಮುರ ತೊಡಿಸಿ ತೆಂಗಿನಕಾಯಿ ಮತ್ತು ಐದು ರೂಪಾಯನ್ನು ಸಂಭಾವನೆಯಾಗಿ ಪಡೆಯುವನು.

ತಾಯಿ ಮಗು ತವರಿನಲ್ಲಿ ಐದುತಿಂಗಳ ಕಾಲ ಆನಂದದಿಂದ ಆರೈಕೆ ಮಾಡಿಸಿಕೊಂಡ ಬಳಿಕ ಗಂಡನ ಮನೆಗೆ ಕಳಿಸುವ ಪ್ರಸ್ತಾಪ ನಡೆಯುತ್ತದೆ. ಜೋಯಿಸರನ್ನು ಕೇಳಿ ಶುಭದಿನವನ್ನು ಗೊತ್ತುಪಡಿಸುವರು. ತವರಿನಲ್ಲಿ ಬಾಣಂತಿ ಯೊಡನೆ ಬಳುವಳಿಯಾಗಿ ಕಳಿಸಿಕೊಡಲು ಹೊಸತೊಟ್ಟಿಲು, ಎಣ್ಣೆಕುಡಿಕೆ, ಹಿಟ್ಟಿನ ಕುಡಿಕೆ, ಹೊಸಸೀರೆ, ರವಿಕೆ ಮುಂತಾದುವನ್ನು ಜೋಡಿಸುವರು. ಮಗುವಿಗೆ ಕೊರಳಿಗೆ ಸರ, ಉಂಗುರ ಮೊದಲಾದ ಚಿನ್ನದ ಆಭರಣಗಳ ಜೊತೆಗೆ ಉಡಿದಾರ ಅಥವಾ ಕಾಲ್ಗೆಜ್ಜೆ, ಬೆಳ್ಳಿವಳಲೆ, ಬೆಳ್ಳಿತಟ್ಟೆ, ಬೆಳ್ಳಿಲೋಟಗಳನ್ನು ಉಡುಗೊರೆಯಾಗಿ ನೀಡುವರು.

ಬಾಣಂತಿ ಮತ್ತು ಮಗುವನ್ನು ಗಂಡನಮನೆಗೆ ಕಳಿಸಿಕೊಡುವುದಕ್ಕೆ 'ತೊಟ್ಟಿಲು ಕಳಿಸುವುದು' ಎಂದು ಕರೆಯುವರು. ಬಾಣಂತಿಯ ತಾಯಿ ಅತ್ತಿಗೆ ಅಕ್ಕ ತಂಗಿ ಬಂಧುಗಳು ಸೇರಿದಂತೆ ತೊಟ್ಟಿಲು ಕಳಿಸಲು ಒಂಬತ್ತು ಅಥವಾ ಹನ್ನೆರಡುಮಂದಿ ಹೋಗುವುದು ರೂಢಿ. ಹಿಂದೆಲ್ಲ ವೈವಾಹಿಕ ಸಂಬಂಧಗಳು ಅಕ್ಕಪಕ್ಕದ ಊರುಗಳಲ್ಲಿಯೆ ನಡೆಯುತ್ತಿದ್ದುದರಿಂದ ಕಾಲ್ನಡಿಗೆಯಲ್ಲಿಯೆ ಹೋಗು ತ್ತಿದ್ದರು. ಊರಿನ ನಿಯಮದಂತೆ ಸಾಮಾನು ಸರಂಜಾಮುಗಳನ್ನು ಹೊರಲು ಕುಳುವಾಡಿ, ತೊಟ್ಟಿಲು ಹೊತ್ತುಕೊಳ್ಳಲು ಮಡಿವಾಳ ಸಕಾಲಕ್ಕೆ ಆಗಮಿಸುವರು. ಇಬ್ಬರು ಮುತ್ತೈದೆಯರು ಎರಡು ಗೂಡೆಯನ್ನು ಹೊತ್ತುಕೊಳ್ಳುವರು. ಇವುಗಳಲ್ಲಿ ಒಂದು ಗೂಡೆಯಲ್ಲಿ ಗಂಗಳದ ಹಿಟ್ಟು, ಕೊಬ್ಬರಿ, ತುಪ್ಪದ ಕುಡಿಕೆಯನ್ನೂ ಮತ್ತೊಂದು ಗೂಡೆಯಲ್ಲಿ ಹರಳೆಣ್ಣೆ, ಮಗುವಿನ ಹಿಟ್ಟು, ಮೆಂತ್ಯದ ಪುಡಿಗಳನ್ನು ತುಂಬಿಡಲಾಗುವುದು. ಬಾಣಂತಿಯು ತಾಯಿಯ ಮನೆಯಿಂದ ಹೊರಡುವಾಗ ದೇವರಿಗೂ ಹಿರಿಯರಿಗೆ ನಮಸ್ಕರಿಸುವಳು. ಹೊಸತೊಟ್ಟಿಲಿಗೆ ಮಗುವನ್ನು ಮಲಗಿಸಿ ಬಿಸಿಲು ಬೀಳದಂತೆ ಕಮಾನು ಕಟ್ಟುವರು. ಕುಳವಾಡಿಯು ಪೆಟ್ಟಿಗೆ ಇತ್ಯಾದಿ ಹೊತ್ತುಕೊಂಡು ತವರಿನಿಂದ ಮಗಳಿಗೆಂದು ಹೊಡೆದುಕೊಟ್ಟ ಕರುವಿನ ಎಮ್ಮೆ ಅಥವಾ ಹಸುವನ್ನು ಅಟ್ಟುತ್ತ ಸಾಗುವನು. ತುಂಬಿದ ತೊಟ್ಟಿಲನ್ನು ಮಡಿವಾಳ ಹೊರುವನು. ಹೀಗೆ ಒಟ್ಟಾಗಿ ನಡೆದು ಗಂಡನ ಮನೆ ತಲುಪುವರು. ಗಂಡನ ಮನೆಯವರು ತಾಯಿ ಮಗುವಿಗೆ ಆರತಿಯೆತ್ತಿ ಬರಮಾಡಿಕೊಳ್ಳುವರು. ಬಾಣಂತಿಯೊಡನೆ ಹೋದ ಬಂಧು ಗಳಿಗೆ ಮಾಂಸದ ಅಡಿಗೆಮಾಡಿ ಸತ್ಕರಿಸುವರು. ಆ ಬಳಿಕ ಅವರೆಲ್ಲರಿಗೂ ಐವತ್ತು ರೂಪಾಯಿ ವೀಳೆಯದೆಲೆ ಅಡಿಕೆ ನೀಡಿ ಗೌರವಿಸುವರು. ಬಾಣಂತಿಯ ತಾಯಿಗೆ ಹೊಸಸೀರೆ ರವಿಕೆಕಣ ಕೊಟ್ಟು ಮರ್ಯಾದೆ ಮಾಡಿ ಕಳಿಸುವರು. ಕುಳವಾಡಿ ಮತ್ತು ಮಡಿವಾಳನಿಗೆ ಸೂಕ್ತ ಸಂಭಾವನೆ ದೊರೆಯುತ್ತದೆ. ಗಂಡನ ಮನೆಯಲ್ಲಿ ಹೆಣ್ಣು ತನ್ನ ದೈನಂದಿನ ಚಟುವಟಿಕೆಯಲ್ಲಿ ನಿರತಳಾಗುವಳು.

ವೈ. ಎಸ್. ಸಿದ್ದೇಗೌಡ

ಬ್ರಿಟಿಷರ ಆಳ್ವಿಕೆಯಲ್ಲಿ ಸಮಾಜಕಾರ್ಯ

ಕ್ರಿ.ಶ. 1498ರಲ್ಲಿ ವಾಸ್ಕೊಡಿಗಾಮನು ಪೋರ್ಚುಗಲ್‌ನಿಂದ ಆಫ್ರಿಕಾ ಖಂಡದ ಗುಡ್‌ಹೋಪ್ ಭೂಶಿರವನ್ನು ಬಳಸಿಕೊಂಡು ಬಂದು ಭಾರತಕ್ಕೆ ಜಲ ಮಾರ್ಗವನ್ನು ಕಂಡುಹಿಡಿದನು. ತದನಂತರ ಅದೇ ಮಾರ್ಗದ ಮೂಲಕ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಮತ್ತು ಫ್ರೆಂಚರು ಭಾರತಕ್ಕೆ ಬಂದರು

ಬ್ರಿಟಿಷರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು ಕ್ರಿ.ಶ. 1600ರಲ್ಲಿ 'ಈಸ್ಟ್ ಇಂಡಿಯಾ ಕಂಪೆನಿ' ಎಂಬ ವ್ಯಾಪಾರ ಸಂಸ್ಥೆಯನ್ನು ಸ್ಥಾಪಿಸಿದರು. ಅಂದು ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮೊಗಲ್ ಅರಸ ಜಹಾಂಗೀರನು ಸೂರತ್ ಪ್ರದೇಶದಲ್ಲಿ ಬ್ರಿಟಿಷರು ತಮ್ಮ ವ್ಯಾಪಾರ ಕೋಟೆಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ನೀಡಿದನು. ಕ್ರಿ.ಶ. 1707ರಲ್ಲಿ ಔರಂಗಜೇಬನು ಮರಣಹೊಂದಿದ ಅನಂತರ ಅಧಿಕಾರಕ್ಕೆ ಬಂದ ಮೊಗಲ್ ಅರಸರು ರಾಜ್ಯಾಡಳಿತ ನಿರ್ವಹಣೆಯಲ್ಲಿ ಅಸಮರ್ಥರಾದರು. ಆ ವೇಳೆಗಾಗಲೇ ಭಾರತದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದ ಬ್ರಿಟಿಷರಿಗೆ ಇಂತಹ ಪರಿಸ್ಥಿತಿ ಅನುಕೂಲಕರವಾಗಿ ಪರಿಣಮಿಸಿತು ಮತ್ತು ತಮ್ಮ ಒಡೆದು ಆಳುವ ನೀತಿಯನ್ನು ಅನುಸರಿಸಿ ಒಬ್ಬ ಅರಸರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಿ ಕೊನೆಗೆ ಇಡೀ ರಾಷ್ಟ್ರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಹೀಗೆ ಭಾರತದಲ್ಲಿ ತಮ್ಮ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಿಕೊಂಡ ಬ್ರಿಟಿಷರು ಭಾರತದ ಮೇಲೆ ಅನೇಕ ರೀತಿಯ ಪ್ರಭಾವವನ್ನು ಬೀರಿದರು.

ಸ್ವತಂತ್ರ ವಿಚಾರವೈಖರಿ, ಸಮತಾಭಾವನೆ ಮತ್ತು ತಾರ್ಕಿಕತೆಗಳನ್ನೊಳಗೊಂಡ ಪಾಶ್ಚಿಮಾತ್ಯ ಶಿಕ್ಷಣವು ಭಾರತೀಯರ ಮೇಲೆ ವಿಶಿಷ್ಟ ಪರಿಣಾಮವನ್ನುಂಟು ಮಾಡಿತು. ಇದರಿಂದಾಗಿ ಭಾರತೀಯರಲ್ಲಿ ಬೇರೂರಿದ್ದ ಕಟ್ಟುಪಾಡುಗಳು ಮತ್ತು ಸಾಂಪ್ರದಾಯಿಕ ಮೌಲ್ಯಗಳಲ್ಲಿ ಹೇರಳ ಬದಲಾವಣೆಯುಂಟಾಯಿತು. ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದ ದಾನ, ಧರ್ಮ, ದಯೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲಾರಂಭಿಸಿದವು. ಕೈಗಾರಿಕಾ ಕ್ರಾಂತಿ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ನವೀನ ರೀತಿಯ ಸಮಾಜಕಾರ್ಯಕ್ಕೆ ಬುನಾದಿಯಾಯಿತೆಂದು

ಹೇಳಬಹುದು. ಕ್ರಿ.ಶ. 1780ರಲ್ಲಿ ಬಂಗಾಳದಲ್ಲಿ ಸ್ಥಾಪಿಸಿದ ಸೇರಾಂಪುರ ಮಿಷನರಿಯು ಹೊಸ ಮಾದರಿಯ ಆಚಾರ ವಿಚಾರಗಳನ್ನು ಹಾಗೂ ವೈಜ್ಞಾನಿಕ ದೃಷ್ಟಿಕೋನಗಳನ್ನು ಅಳವಡಿಸಿಕೊಳ್ಳುವಂತೆ ಜನರಿಗೆ ಪ್ರೇರೇಪಣೆ ನೀಡಿತು. ಹಿಂದೂ ಸಮಾಜದ ರಚನೆಯಲ್ಲಿ ಪರಿವರ್ತನೆಗಳು ಅವಶ್ಯವೆಂದು ಈ ಸಂಸ್ಥೆಯು ಜನರಿಗೆ ಮನದಟ್ಟು ಮಾಡಿಕೊಟ್ಟಿತು. ಪುರಾತನ ಕಾಲದಿಂದಲೂ ಜಾರಿಯಲ್ಲಿದ್ದ ಬಾಲ್ಯವಿವಾಹ, ಬಹುಪತ್ನಿತ್ವ, ಸತಿಸಹಗಮನ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕಲು ಸೇರಾಂಪುರ ಮಿಷನರಿ ಜನರಿಗೆ ಕರೆ ನೀಡಿತು.

ಅಂದಿನ ಕಾಲದಲ್ಲಿದ್ದ ಅತಿ ಜಟಿಲವಾದ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕುವುದಕ್ಕಾಗಿ ಅನೇಕ ಮಹಾಪುರುಷರು ಕಂಕಣಬದ್ಧವಾಗಿ ದುಡಿದರು. ಅವರಲ್ಲಿ ರಾಜಾರಾಂ ಮೋಹನ್ ರಾಯ್ ಅವರ ಹೆಸರು ಪ್ರಮುಖವಾದುದು. ಧರ್ಮ ಪ್ರವರ್ತಕರಾಗಿ, ವಿದ್ವಾಂಸರಾಗಿ, ಸಮಾಜ ಸೇವಕರಾಗಿ ರಾಷ್ಟ್ರಕ್ಕೆ ಸಲ್ಲಿಸಿದ ಸೇವೆ ಅನೋಘವಾದುದು. ಇವರು ಸ್ಥಾಪಿಸಿದ 'ಬ್ರಹ್ಮ ಸಮಾಜ' ಎಂಬ ಸಂಸ್ಥೆಯು ಸತಿಸಹಗಮನ ಪದ್ಧತಿಯ ನಿರ್ಮೂಲನೆಗಾಗಿ ಅವಿಶ್ರಾಂತವಾಗಿ ಶ್ರಮಿಸಿತು ಮತ್ತು ಆ ದಿಕ್ಕಿನಲ್ಲಿ ಯಶಸ್ಸು ಸಾಧಿಸಿತು. ಅಂದಿನ ಭಾರತದ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್ ಕ್ರಿ.ಶ. 1829ರಲ್ಲಿ ಸತಿಸಹಗಮನ ಪದ್ಧತಿಯು ಕಾನೂನು ಬಾಹಿರವೆಂದು ಘೋಷಿಸಿದರು. ಅದಲ್ಲದೆ ಸ್ತ್ರೀಯರ ಸ್ಥಾನಮಾನವನ್ನು ಉತ್ತಮಗೊಳಿಸುವ ದಿಕ್ಕಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ರಾಜಾರಾಂ ಮೋಹನ್‌ರಾಯರು ಆಂಗ್ಲ ಶಿಕ್ಷಣದ ಮಹತ್ವವನ್ನರಿತು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಬರಗಾಲ ಪರಿಹಾರ ಕಾರ್ಯಕ್ರಮಗಳನ್ನು, ಹೆಣ್ಣು ಮಕ್ಕಳಿಗಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ವಿಧವೆಯರ ಸ್ಥಿತಿ ಸುಧಾರಣಾ ಯೋಜನೆಗಳನ್ನು ಬ್ರಹ್ಮಸಮಾಜವು ಕೈಗೆತ್ತಿಕೊಂಡಿತು.

ಧಾರ್ಮಿಕ ಜಾಗೃತಿ ಹಾಗೂ ಸಾಮಾಜಿಕ ಏಳಿಗೆಯನ್ನು ಆದರ್ಶವನ್ನಾಗಿಟ್ಟು ಕೊಂಡು ಅವಿರತವಾಗಿ ದುಡಿದವರಲ್ಲಿ ದೇವೇಂದ್ರನಾಥ ಠಾಕೂರ್, ಈಶ್ವರ ಚಂದ್ರ ವಿದ್ಯಾಸಾಗರ, ಕೇಶವ ಚಂದ್ರಸೇನ, ಹಾಗೂ ದ್ವಾರಕಾನಾಥ ಠಾಕೂರ್ ಪ್ರಮುಖರು. ಕೇಶವ ಚಂದ್ರಸೇನರು ಕ್ರಿ.ಶ. 1843ರಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಅನೇಕ ಕೆಲಸಗಳನ್ನು ಆರಂಭಿಸಿದರು. ಅವುಗಳಲ್ಲಿ ಪ್ರಮುಖವಾದುವು ಕ್ರಿ.ಶ. 1849ರಲ್ಲಿ ಸ್ಥಾಪಿಸಿದ ಹೆಣ್ಣುಮಕ್ಕಳ ಶಾಲೆ. ಕ್ರಿ.ಶ. 1856ರಲ್ಲಿ ಈಶ್ವರ ಚಂದ್ರ ವಿದ್ಯಾಸಾಗರರ ಪರಿಶ್ರಮದಿಂದಾಗಿ ವಿಧವಾ ಪುನರ್ವಿವಾಹ ಕಾಯಿದೆ ಜಾರಿಗೆ ಬಂದಿತು.

ಕ್ರಿ.ಶ. 1849ರಲ್ಲಿ ಸ್ಥಾಪಿಸಲ್ಪಟ್ಟ ಪರಮಹಂಸ ಸಭೆಯು ನಂತರದ ದಿನಗಳಲ್ಲಿ ಪ್ರಾರ್ಥನಾ ಸಮಾಜವಾಗಿ (1861) ಮಹದೇವ ಗೋವಿಂದ ರಾನಡೆಯವರಿಂದ ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟಿತು. ಹಿಂದೂ ಸಮಾಜದಲ್ಲಿ ಅಂದಿನ ಕಾಲದ

ತಾಂಡವವಾಡುತ್ತಿದ್ದ ಬಾಲ್ಯವಿವಾಹ, ಮೂಢನಂಬಿಕೆ, ಜಾತೀಯತೆ, ಅಂಧಶ್ರದ್ಧೆ ಮೊದಲಾದ ಸಮಸ್ಯೆಗಳನ್ನು ಇದು ವಿರೋಧಿಸಿತು. ತಮ್ಮದೇ ಆದ ಮಾಧ್ಯಮದ ಮೂಲಕ ಎಲ್ಲಾ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನರನ್ನು ಎಚ್ಚರಗೊಳಿಸಿತು.

ಲಾರ್ಡ್ ವಿಲಿಯಂ ಬೆಂಟಿಂಕನು 1835ರ ಮಾರ್ಚ್ 7ರಂದು ಒಂದು ನಿರ್ಣಯವನ್ನು ಪಾಸುಮಾಡಿ ಭಾರತೀಯ ಶಿಕ್ಷಣ ಮಾಧ್ಯಮ ಹಾಗೂ ಆಡಳಿತ ಭಾಷೆ ಇಂಗ್ಲಿಷ್ ಎಂಬುದಾಗಿ ಘೋಷಿಸಿದನು. ಪಾಶ್ಚಿಮಾತ್ಯ ವಿಜ್ಞಾನ, ಕಲೆ ಮತ್ತು ಇಂಗ್ಲಿಷ್ ಭಾಷೆ ಭಾರತೀಯ ಶಿಕ್ಷಣ ಪದ್ಧತಿಯ ಮುಖ್ಯ ವಿಷಯಗಳಾದವು. ಭಾರತದಲ್ಲಿ ಪ್ರಪ್ರಥಮವಾಗಿ 1853ರಲ್ಲಿ ಬೊಂಬಾಯಿ ಮತ್ತು ಥಾಣಾ ನಡುವೆ ರೈಲ್ವೆ ಸಂಚಾರ ಪ್ರಾರಂಭವಾಯಿತು.

1854ರಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಪಾಡಿಗೆ ಶಿಫಾರಸ್ಸು ಮಾಡಲು ಚಾರ್ಲ್ಸ್‌ವುಡ್‌ನ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಿ ಅದರ ಶಿಫಾರಸ್ಸಿನ ಮೇರೆಗೆ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಯಿತು.

ಕ್ರಿ.ಶ. 1861ರಲ್ಲಿ ನ್ಯಾಯಮೂರ್ತಿ ಮಹದೇವ ಗೋವಿಂದ ರಾನಡೆಯವರಿಂದ ಸ್ಥಾಪಿಸಲ್ಪಟ್ಟ 'ವಿಧವಾ ವಿವಾಹ ಸಂಸ್ಥೆ' ಹಾಗೂ 1877ರಲ್ಲಿ ಪುಣೆ ನಗರದಲ್ಲಿ ಸ್ಥಾಪಿಸಿದ 'ಸಾರ್ವಜನಿಕ ಸಭೆ' ಮೂಲಕ ಜ್ವಲಂತ ಸಮಸ್ಯೆಗಳಾದ ಬಾಲ ವಿವಾಹ, ವರದಕ್ಷಿಣೆ, ವಿಧವಾ ಸಮಸ್ಯೆ ಮತ್ತು ಜಾತಿ ಸಮಸ್ಯೆ ಮುಂತಾದವುಗಳನ್ನು ಚರ್ಚಿಸಿ ಅಂದಿನ ಸರ್ಕಾರಕ್ಕೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಲಾಯಿತು. ವಿಚಾರ ವಿನಿಮಯ, ಚರ್ಚಾಗೋಷ್ಠಿ, ಕಾರ್ಯಾಗಾರಗಳ ಮೂಲಕ ಜನರ ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ನಿವಾರಿಸಲು 'ಸಾರ್ವಜನಿಕ ಸಭೆ' ಅವಿಶ್ರಾಂತವಾಗಿ ದುಡಿಯಿತು.

ಕ್ರಿ.ಶ. 1875ರಲ್ಲಿ ದಯಾನಂದ ಸರಸ್ವತಿಯವರು 'ಆರ್ಯ ಸಮಾಜ' ಎಂಬ ಸಂಸ್ಥೆಯನ್ನು ಮುಂಬೈನಲ್ಲಿ ಸ್ಥಾಪಿಸಿದರು. ಇದರ ಮುಖಾಂತರ ಜಾತಿ ನಿರ್ಮೂಲನೆ, ಬಾಲ್ಯ ವಿವಾಹ ನಿಷೇಧ, ವಿಧವಾ ಮರುವಿವಾಹಕ್ಕೆ ಶ್ರಮಿಸಿದರು. ಸ್ವಾಮಿ ವಿವೇಕಾನಂದರು ಕ್ರಿ.ಶ. 1877ರಲ್ಲಿ "ರಾಮಕೃಷ್ಣ ಮಿಷನ್ನನ್ನು" ಸ್ಥಾಪಿಸಿದರು. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ರಾಷ್ಟ್ರಾದ್ಯಂತ ಹಾಗೂ ಪಾಶ್ಚಿಮಾತ್ಯ ಸಮಾಜಗಳಲ್ಲಿ ಪ್ರಸಾರ ಮಾಡುವುದು ಈ ಸಂಸ್ಥೆಯು ಹಮ್ಮಿಕೊಂಡಿದ್ದ ಕಾರ್ಯಕ್ರಮವಾಗಿತ್ತು.

ಅಂದಿನ ಸಾಮಾಜಿಕ ಸಮಸ್ಯೆಗಳ ನಿರ್ಮೂಲನೆಗೆ ಡಾ॥ ಅನಿಬೆಸೆಂಟರ ಸೇವೆ ಗಮನಾರ್ಹವಾದುದು., ಸರ್ ಸೈಯದ್ ಅಹಮದ್ ಖಾನರು 'ಶೈಕ್ಷಣಿಕ ಪರಿಷತ್ತನ್ನು' ಕ್ರಿ.ಶ. 1875ರಲ್ಲಿ ಸ್ಥಾಪಿಸಿ, ಅದರ ಮೂಲಕ ಇಸ್ಲಾಂ ಧರ್ಮಾಚರಣೆಯಲ್ಲಿ ಸುಧಾರಣೆಯನ್ನು ತಂದರು. ಇದೇ ಶೈಕ್ಷಣಿಕ ಪರಿಷತ್ತು ಮುಂದೆ 'ಆಲಿಘಡ್ ವಿಶ್ವವಿದ್ಯಾಲಯ' ಎಂದು ವಿಶ್ವವಿಖ್ಯಾತಿ ಪಡೆಯಿತು.

ನವೀನ ರೀತಿಯ ಶಿಕ್ಷಣ ಹಾಗೂ ದಾರ್ಶನಿಕರ ಸಲಹೆ ಸೂಚನೆಗಳು ಅನೇಕ ಬದಲಾವಣೆಗಳಿಗೆ ಕಾರಣವಾದವು. ಸಾಮಾಜಿಕ ಮೌಲ್ಯಗಳು ಕಾಲ ಕ್ರಮೇಣ ಬದಲಾಗುತ್ತಾ ನಡೆದವು. ವಿವೇಕಪೂರ್ಣವಾದ, ತಾರ್ಕಿಕವಾದ ಹಾಗೂ ವೈಯಕ್ತಿಕವಾದ ವಿಚಾರಸರಣಿಗೆ ಪ್ರಾಧಾನ್ಯತೆ ದೊರಕಿತು. ಪ್ರಜಾಪ್ರಭುತ್ವ ಮತ್ತು ಸ್ವತಂತ್ರವಾದಕ್ಕೆ ವಿಶೇಷವಾದ ಮನ್ನಣೆ ದೊರಕಿತು. ಈ ರೀತಿಯಾದ ವೈಶಿಷ್ಟಪೂರ್ಣ ಬದಲಾವಣೆಗಳು ಸಾಂಪ್ರದಾಯಿಕ ಸಂಸ್ಥೆಗಳಾದ ಜಾತಿಪದ್ಧತಿ ಹಾಗೂ ಅವಿಭಕ್ತ ಕುಟುಂಬ ಪದ್ಧತಿಗೆ ದೊಡ್ಡ ಪೆಟ್ಟು ಬಿದ್ದಿತು. ಕೈಗಾರಿಕೀಕರಣದಿಂದ ಗ್ರಾಮಗಳ ಸ್ವಯಂ ಪರಿಪೂರ್ಣತೆಗೆ ದಕ್ಕೆಯುಂಟಾಯಿತು. ಲಕ್ಷೋಪಲಕ್ಷ ಜನರು ಹಳ್ಳಿಗಳನ್ನು ತೊರೆದು ನಗರಕ್ಕೆ ವಲಸೆ ಬಂದರು. ಈ ರೀತಿಯ ಬದಲಾವಣೆಯಿಂದಾಗಿ ಆ ಕಾಲದಲ್ಲಿ ರೂಢಿಯಲ್ಲಿದ್ದ, ಲೋಕಾರೂಢಿಗಳು, ಸಂಪ್ರದಾಯಗಳು, ಕಟ್ಟಳೆಗಳು, ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳಲಾರಂಭಿಸಿದವು. ಪ್ರಾಥಮಿಕ ಸಂಬಂಧ ತನ್ನ ಮಹತ್ವ ಕಳೆದುಕೊಂಡು ಮಾಧ್ಯಮಿಕ ಸಂಬಂಧಕ್ಕೆ ಹೆಚ್ಚು ಒತ್ತು ಕೊಟ್ಟಿತು. ಜನ ಸಂಖ್ಯೆ ಹೆಚ್ಚಳ, ಕೈಗಾರಿಕೀಕರಣ, ವಸ್ತುಗಳ ಅಮದು ಮುಂತಾದವುಗಳಿಂದ ಅನೇಕ ಕಷ್ಟವುಂಟಾಯಿತು. ಇದರಿಂದ ಸಮಾಜದಲ್ಲಿ ಸಮಸ್ಯೆಗಳು ಹೆಚ್ಚತೊಡಗಿದವು ಹಾಗೂ ಜಟಿಲವಾದವು. ಮಕ್ಕಳ ಶೋಷಣೆ, ಸ್ತ್ರೀಯರ ಶೋಷಣೆ, ಕೊಳಚೆ ಪ್ರದೇಶ ನಿರ್ಮಾಣ ಇವೇ ಮುಂತಾದ ಸಮಸ್ಯೆಗಳು ಮತ್ತಷ್ಟು ಗಂಭೀರ ಸ್ವರೂಪ ಪಡೆದವು.

ಅಂದಿನ ಕಾಲದಲ್ಲಿ ಭಾರತದಲ್ಲಿದ್ದ ವೈಸ್‌ರಾಯ್‌ಗಳ ಕುಟುಂಬದವರ ಇಚ್ಛೆಯ ಮೇರೆಗೆ ಅನೇಕ ಕಲ್ಯಾಣ ಸಂಸ್ಥೆಗಳು ಪಾಶ್ಚಾತ್ಯ ಶೈಲಿಯಲ್ಲಿ ಜನ್ಮ ತಳೆದು ಅನೇಕ ರೀತಿಯ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವುಗಳ ನಿರ್ಮೂಲನೆಗೆ ಶ್ರಮಿಸಿದವು. ಅದಲ್ಲದೆ ನಮ್ಮವರೇ ಆದ ಬಂಡಾರ್ಕ್ರ್, ಕರ್ವೆ, ಚಂದ್ರಾವರ್ಕರ್, ವೀರೇಶಲಿಂಗಂ ಪಂತುಲು, ಸುಬ್ರಮಣ್ಯ ಅಯ್ಯರ್, ಲಾಲಾ ವೈಜನಾಥ್, ನಟರಾಜನ್ ಹಾಗೂ ರಘುನಾಥರಾವ್ ಮುಂತಾದವರು ಜನರಲ್ಲಿ ವೈಜ್ಞಾನಿಕ ಹಾಗೂ ವಿಮರ್ಶಾತ್ಮಕ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಹಾಯಮಾಡಿದರು.

1882ರಲ್ಲಿ ಪಂಡಿತ್ ರಮಾಬಾಯಿಯವರು ಮಹಿಳೆಯರ ಸ್ಥಿತಿಗತಿಗಳ ಸುಧಾರಣೆಗಾಗಿ ' ಆರ್ಯ ಮಹಿಳಾ ಸಮಾಜ ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಪುಣೆಯಲ್ಲಿ ಸ್ಥಾಪಿತವಾದ ಈ ಸಂಸ್ಥೆ ಸ್ತ್ರೀಯರ ಶಿಕ್ಷಣ ಮತ್ತು ಸ್ಥಾನಮಾನ ಸುಧಾರಣೆಗಾಗಿ ಶ್ರಮಿಸಿತು.

1885ರಲ್ಲಿ ಎ. ಓ. ಹ್ಯೂಮ್‌ರವರಿಂದ ಸ್ಥಾಪಿಸಲ್ಪಟ್ಟ ' ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ' ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯಿತು ಮತ್ತು ಇದರ ಅಡಿಯಲ್ಲಿ ಮತ್ತೊಂದು ಸಂಸ್ಥೆಯನ್ನು ಸ್ಥಾಪಿಸಿ ಅದರ ಮುಖಾಂತರ ಸಾಮಾಜಿಕ ಸಮಸ್ಯೆಗಳಾದ ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ, ಬಡತನ, ಮೊದಲಾದವುಗಳ

ವಿರುದ್ಧ ಸಮರ ಹೂಡಿತು. ಅದಲ್ಲದೆ ಸ್ತ್ರೀ ಶಿಕ್ಷಣ ಮತ್ತು ಅಂತರ್ಜಾತಿಯ ವಿವಾಹಕ್ಕೆ ಉತ್ತೇಜನ ನೀಡಿತು.

1887ರಲ್ಲಿ ಶಶಿಪಾದ ಬ್ಯಾನರ್ಜಿಯವರು ಬಂಗಾಳದಲ್ಲಿ 'ಹಿಂದೂ ವಿಧವಾ ಗೃಹ'ವನ್ನು ಸ್ಥಾಪಿಸಿದರು ಮತ್ತು 1896ರಲ್ಲಿ ಇದೇ ರೀತಿಯ ಕಾರ್ಯಗಳಲ್ಲಿ ಕರ್ವೆಯವರು ಪುಣೆಯಲ್ಲಿ ತೊಡಗಿದರು. ಅದಲ್ಲದೆ ಬೊಂಬಾಯಿ ಮತ್ತು ಮದ್ರಾಸ್ ನಗರಗಳಲ್ಲಿಯೂ ಇಂತಹ ಸಂಸ್ಥೆಗಳು ಕಾರ್ಯರೂಪಕ್ಕೆ ಬಂದವು. ನಂತರ 1901ರ ಸುಮಾರಿಗೆ ಈ ಕಾರ್ಯವು ಇನ್ನಷ್ಟು ಪ್ರಾಮುಖ್ಯತೆ ಹಾಗೂ ವ್ಯಾಪಕತೆಯನ್ನು ಪಡೆದುಕೊಂಡಿತು. ಹಲವು ಸಮಾಜ ಸುಧಾರಕರು ಅಖಿಲ ಭಾರತ ಮಟ್ಟದಲ್ಲಿ ಭಾರತೀಯ ಸಮಾಜದ ಪುನರುತ್ಥಾನಕ್ಕಾಗಿ ಸಮಗ್ರವಾದ ಮತ್ತು ಏಕರೂಪವಾದ ಯೋಜನೆಗಳನ್ನು ತಯಾರು ಮಾಡಿದರು. ಇದರ ಫಲವಾಗಿ 1902ರಲ್ಲಿ 'ಕೇಂದ್ರೀಯ ಸಮಾಜ ಸುಧಾರಣಾ ಸಂಘವು' ಹುಟ್ಟಿ ಈ ದೆಸೆಯಲ್ಲಿ ನಡೆಯುವ ಕಾರ್ಯಕ್ರಮಗಳ ಸಾಮರಸ್ಯಕ್ಕೆ, ಕ್ರೋಢೀಕರಣಕ್ಕೆ ಮತ್ತು ಪ್ರಚಾರ ಸಾಹಿತ್ಯ ನಿರ್ಮಾಣಕ್ಕೆ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಸ್ಥಾಪಿತವಾದ ಇಂತಹ ಕೇಂದ್ರಗಳಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಅಸ್ತಿತ್ವಕ್ಕೆ ಬಂದಿತು.

1904ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ರಾಜಕೀಯ ಪ್ರವೇಶ ಮಾಡುವುದರ ಮೂಲಕ ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ದುಡಿದರು. 1905ರಲ್ಲಿ ಇವರಿಂದ ಸ್ಥಾಪಿಸಲ್ಪಟ್ಟ 'ಭಾರತೀಯ ಸೇವಕ ಸಮಾಜವು' ರಾಜಕೀಯ ಧೋರಣೆಗಳ ಜೊತೆಗೆ ನಿಮ್ನವರ್ಗ ಹಾಗೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಗಳನ್ನು ಸುಧಾರಿಸುವ ಉದ್ದೇಶಗಳನ್ನು ಹೊಂದಿತ್ತು.

1908ರಲ್ಲಿ ಪಂಡಿತ ರಮಾಬಾಯಿ ರಾನಡೆಯವರ ಅಧ್ಯಕ್ಷತೆಯಲ್ಲಿ 'ಸೇವಾ ಸದನ' ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದು ಮಹಿಳೆಯರಿಗೆ ವೈದ್ಯಕೀಯ, ಶೈಕ್ಷಣಿಕ ಹಾಗೂ ಸ್ವಯಂಸೇವಕಿಯರ ತರಬೇತಿಯನ್ನು ನೀಡಿತು.

1911ರಲ್ಲಿ 'ಸಮಾಜ ಸೇವಾ ಸಂಘ'ವು ಸ್ಥಾಪಿಸಲ್ಪಟ್ಟಿತು. ಅದು ಬೊಂಬಾಯಿ ನಗರದ ಸಾಮಾಜಿಕ ಪರಿಸರದ ಸುಧಾರಣೆಗಾಗಿ ಶ್ರಮಿಸಿತು. ಆ ಸಂಸ್ಥೆಯ ಅಡಿಯಲ್ಲಿ ಸಂಚಾರಿ ವಾಚನಾಲಯ ಹಾಗೂ ಕಾರ್ಮಿಕರಿಗಾಗಿ ರಾತ್ರಿ ಶಿಕ್ಷಣವನ್ನು ನಡೆಸಲಾಗುತ್ತಿತ್ತು.

1906 ರಿಂದ 1912ರ ವರೆಗಿನ ಅವಧಿಯಲ್ಲಿ ಹಲವಾರು 'ಹಿಂದೂ ವಿಧವಾ ಗೃಹ'ಗಳು ರಾಷ್ಟ್ರದ ತುಂಬೆಲ್ಲಾ ಸ್ಥಾಪಿಸಲ್ಪಟ್ಟವು. ಈ ವರೆಗಿನ ಸಮಾಜಕಾರ್ಯ ಚಟುವಟಿಕೆಗಳು ಸುಧಾರಣಾ ಸ್ವರೂಪದ್ದಾಗಿದ್ದವು. ಅಂದರೆ ಬಡವರ, ಕಿವುಡರ, ಮೂಕರ ಉದ್ಧಾರಕ್ಕಾಗಿ ಕೈಗೊಂಡ ಸಾಮಾಜಿಕ ಕಾರ್ಯ ಚಟುವಟಿಕೆಗಳಾಗಿದ್ದವು. 1920ರ ನಂತರ ಸಾಮಾಜಿಕ ಅನಿಷ್ಟಗಳು ತ್ವರಿತ ರೂಪದಲ್ಲಿ ಬೆಳೆಯುದಂತೆ ನೋಡಿ

ಕೊಳ್ಳಲಾಯಿತು. ಆ ವೇಳೆಗಾಗಲೇ ಅವಿಭಕ್ತ ಕುಟುಂಬ, ಜಾತಿ ಪದ್ಧತಿ, ದಾನ ಧರ್ಮಗಳು ಬಹಳಷ್ಟು ಕ್ಷೀಣವಾಗಿದ್ದವು.

ಮಹಾತ್ಮ ಗಾಂಧಿಯವರು ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮವನ್ನು ರಚನಾತ್ಮಕ ಕಾರ್ಯಗಳಿಂದ ಪೂರ್ತಿಗೊಳಿಸಲು ಹೆಣಗಿದರು. ಹರಿಜನರ ಕ್ಷೇಮಾಭಿವೃದ್ಧಿಗಾಗಿ 'ಹರಿಜನ ಸೇವಕ ಸಂಘ' ಮುಂತಾದವುಗಳು ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯವನ್ನಾರಂಭಿಸಿದವು. ಆದರೆ ಆ ಕಾಲದಲ್ಲಿ ಪ್ರಚಲಿತವಿದ್ದ ರಾಷ್ಟ್ರೀಯ ಮಟ್ಟದ ರಾಜಕೀಯ ಗೊಂದಲ ಪರಿಸ್ಥಿತಿಯಿಂದಾಗಿ ಈ ಕಾರ್ಯವು ಬಹಳಷ್ಟು ಮಟ್ಟಿಗೆ ಕುಂಠಿತವಾಯಿತು. ಸಾಮಾಜಿಕ ದುರ್ದೆಸೆಯನ್ನು ನಿವಾರಿಸಲು ಹಲವಾರು ಕಾಯಿದೆಗಳು ಜಾರಿಗೆ ಬಂದವು. ಮಕ್ಕಳ ಶೋಷಣೆ ತಪ್ಪಿಸುವುದಕ್ಕಾಗಿ ಮಕ್ಕಳ ಕಾಯಿದೆ ಪಾಸಾಯಿತು. ಸ್ತ್ರೀಯರನ್ನು ಅನೈತಿಕ ಸಂಬಂಧಗಳಿಗೆ ಬಳಸುವುದನ್ನು ನಿಯಂತ್ರಿಸಲು ಮುಂಬೈ ಸರ್ಕಾರವು 1923ರಲ್ಲಿ, ಮದ್ರಾಸ್ ಸರ್ಕಾರವು 1930ರಲ್ಲಿ ವೇಶ್ಯಾ ಪ್ರತಿಬಂಧಕ ಕಾಯಿದೆಯನ್ನು ಜಾರಿಗೆ ತಂದವು.

1923ರಲ್ಲಿ ಮಹಿಳಾ ಕಲ್ಯಾಣಕ್ಕಾಗಿ 'ಭಾರತೀಯ ಮಹಿಳಾ ಸಂಘವು' ಸ್ಥಾಪಿಸಲ್ಪಟ್ಟಿತು. ಈ ಸಂಘವು ಸ್ತ್ರೀಯರ ವಿವಾಹ ಮತ್ತು ಆಸ್ತಿ ಹಕ್ಕು ಒಡೆತನ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿತು.

ಕಾರ್ಮಿಕ ಕಲ್ಯಾಣಕ್ಕಾಗಿ ಸಂಬಂಧಿಸಿದಂತೆ ಹಲವಾರು ಕಾಯಿದೆಗಳು ಜಾರಿಗೆ ಬಂದವು. ಅವುಗಳೆಂದರೆ : 1923ರ ಕಾರ್ಮಿಕರ ಪರಿಹಾರ ಕಾಯಿದೆ, 1926ರ ಕಾರ್ಮಿಕ ಸಂಘಗಳ ಕಾಯಿದೆ, 1929ರ ವ್ಯಾಪಾರ ವಿವಾದಗಳ ಕಾಯಿದೆ. ಇದಲ್ಲದೆ ಅಂದಿನ ಔದ್ಯೋಗಿಕ ಕಾರ್ಮಿಕರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಅವರ ಕಲ್ಯಾಣಕ್ಕಾಗಿ ಸಲಹೆಗಳನ್ನು ಶಿಫಾರಸ್ಸು ಮಾಡಲು 1929ರಲ್ಲಿ 'ರಾಯಲ್ ಕಮಿಷನ್' ಅನ್ನು ಜೆ. ಎಚ್. ವೈಟ್‌ಲೆ ಅವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಈ ಸಮಿತಿಯು ದೀರ್ಘ ಅಧ್ಯಯನದ ನಂತರ ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಕಾರ್ಮಿಕರ ಕಲ್ಯಾಣಕ್ಕಾಗಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳ ಪಟ್ಟಿಯನ್ನು ಸಲ್ಲಿಸಿತು. ಅದರಂತೆ ಅನೇಕ ಕಲ್ಯಾಣಕಾರ್ಯಕ್ರಮಗಳು ಕೈಗಾರಿಕಾ ಕಾರ್ಮಿಕರಿಗೆ ಲಭ್ಯವಾದವು.

ರೆಡ್‌ಕ್ರಾಸ್ ಸಂಸ್ಥೆಯು ಪಶ್ಚಿಮ ಭಾರತದಲ್ಲಿ ಬಾಲಾಪರಾಧದಿಂದ ಮಕ್ಕಳನ್ನು ರಕ್ಷಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿತು. ಗ್ರಾಮೀಣ ಪುನರ್ನಿರ್ಮಾಣಕ್ಕಾಗಿ ಮಾರ್ತಾಂಡಂನಲ್ಲಿ ವೈ.ಎಮ್.ಸಿ.ಎ. ಕೇಂದ್ರವನ್ನು ಸ್ಥಾಪಿಸಲಾಯಿತು.

1937ರಲ್ಲಿ ಪ್ರಾಂತೀಯ ಸ್ವಾಯುತ್ತತೆಯಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಗ್ರಾಮೀಣ ಅಭಿವೃದ್ಧಿ ವಿಭಾಗಗಳನ್ನು ಆರಂಭಿಸಿತು. ಊಟದ ಮನೆ, ಹೋಟೆಲ್, ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಜಾತಿ, ಮತ, ಲಿಂಗ ಮುಂತಾದ ವಿಷಯಗಳ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ಶಿಕ್ಷಾರ್ಹವನ್ನಾಗಿ ಮಾಡಲಾಯಿತು

ಹರಿಜನರ, ಆದಿವಾಸಿಗಳ ಮತ್ತು ಇನ್ನಿತರ ಹಿಂದುಳಿದ ವರ್ಗಗಳ ಏಳಿಗೆಗಾಗಿ ವಿಶೇಷ ಲಕ್ಷ್ಯವಹಿಸಲಾಯಿತು. ಏಕಪತ್ನಿತ್ವ, ಸ್ತ್ರೀ ಒಡೆತನ ಮುಂತಾದವುಗಳಿಗೆ ಸಂಬಂಧಿಸಿದ ಕಾಯಿದೆಗಳನ್ನು ಪಾಸುಮಾಡಿ ಹಿಂದೂ ಕುಟುಂಬ ಹಾಗೂ ಸಮಾಜವನ್ನು ಸುಧಾರಿಸಲಾಯಿತು.

ಭಾರತ ಸರ್ಕಾರವು ಹಿಂದೂ ವಾರಸ್ ಕಾಯಿದೆ ಜಾರಿಗೆ ತಂದಿತು ಹಾಗೂ ಹಿಂದೂ ಮಹಿಳೆಯ ಆಸ್ತಿಯ ಹಕ್ಕುಬಾಧ್ಯತೆಸಮಸ್ಯೆಗಳನ್ನು ಪರಿಹರಿಸಲು 1940ರಲ್ಲಿ ಬಿ. ಎನ್. ರಾವ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು ಮತ್ತು ಅದರ ಶಿಫಾರಸ್ಸಿನಂತೆ ಅದನ್ನು ಕಾರ್ಯಗತಗೊಳಿಸಲಾಯಿತು.

ಗಣಿ ಕಾರ್ಮಿಕರಿಗಾಗಿ 1944ರಲ್ಲಿ ಗಣಿ ಕಾರ್ಮಿಕರ ಕಲ್ಯಾಣನಿಧಿ ಕಾಯಿದೆ ಯನ್ನು ಪಾಸುಮಾಡಲಾಯಿತು. ಹೀಗೆ ಬ್ರಿಟಿಷರ ಕಾಲದ ಭಾರತದಲ್ಲಿ ಸಮಾಜ ಕಾರ್ಯ ನೆರವೇರಿತು.

ಉಪಸಂಹಾರ :

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಸಮಾಜಕಾರ್ಯವು ಅಪೇಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧಿಸಿಲ್ಲವೆಂದು ಹೇಳಬಹುದು. ಬ್ರಿಟಿಷ್ ಸರ್ಕಾರವು ಕೇವಲ ಕಾಯಿದೆ ಗಳನ್ನು ಪಾಸುಮಾಡಿತು ಮತ್ತು ಗ್ರಾಮೀಣ ಪುನರ್ನಿರ್ಮಾಣ, ಶಿಕ್ಷಣ, ಆರೋಗ್ಯ ಮತ್ತು ಅನಾಥರ ಪುನರ್ವಸತಿಗಾಗಿ ಅತಿ ಕಡಿಮೆ ಹಣವನ್ನು ಒದಗಿಸಿತು. ಸರ್ಕಾರವು ಅಂಗವಿಕಲರಿಗಾಗಿ, ಮಾನಸಿಕ ರೋಗಿಗಳಿಗಾಗಿ ಮತ್ತು ಹಿಂದುಳಿದ ವರ್ಗದ ಜನರಿ ಗಾಗಿ ಯಾವ ವಿಶೇಷ ಕಾರ್ಯಗಳನ್ನು ಮಾಡಲಿಲ್ಲ. ಕಡಿಮೆ ಹಣ ಒದಗಿಸುವುದು ಮತ್ತು ಕೇವಲ ಕಾನೂನುಗಳನ್ನು ಪಾಸು ಮಾಡುವುದರಲ್ಲಿಯೇ ತೃಪ್ತಿಪಟ್ಟುಕೊಂಡ ಬ್ರಿಟಿಷ್ ಸರ್ಕಾರವು ಸಮಸ್ಯೆಗಳ ಪರಿಪೂರ್ಣ ನಿರ್ಮೂಲನೆಯಲ್ಲಿ ವಿಶೇಷ ಆಸಕ್ತಿ ತೋರಿಸಲಿಲ್ಲ. ಕೆಲವೊಂದು ಐಚ್ಛಿಕ ಸಂಘಸಂಸ್ಥೆಗಳು ಆ ಕಾಲದಲ್ಲಿ ಸಮಾಜ ಕಾರ್ಯದಲ್ಲಿ ತೊಡಗಿದ್ದರೂ ಸರಕಾರದ ಬೆಂಬಲ ಇಲ್ಲವಾದುದರಿಂದಲೋ ಅಥವಾ ಆರ್ಥಿಕ ಮುಗ್ಗಟ್ಟಿನಿಂದಲೋ ಅವು ಶೀಘ್ರದಲ್ಲಿಯೇ ಕಣ್ಮರೆಯಾಗಿ ಹೋದವು.

ಆದರೂ ಬ್ರಿಟಿಷರ ಕಾಲದಲ್ಲಿನ ಸಮಾಜಕಾರ್ಯವನ್ನು ಕಡೆಗಣಿಸುವಂತಿಲ್ಲ. ಸತಿ ಸಹಗಮನ ಪದ್ಧತಿ ವಿರುದ್ಧ ಜಾರಿಗೆ ತಂದ 1829ರ ಕಾಯಿದೆ, 1856ರ ಹಿಂದೂ ವಿಧವಾ ಪುನರ್ವಿವಾಹ ಕಾಯಿದೆಗಳು ಮತ್ತು 1854ರ ಶೈಕ್ಷಣಿಕ ಕಾಯಿದೆ ಅಂದಿನ ಸಮಾಜದಲ್ಲಿ ಮಹತ್ತರವಾದ ಮಾರ್ಪಾಡನ್ನು ತಂದವು.

ಒಟ್ಟಿನಲ್ಲಿ ಬ್ರಿಟಿಷರ ಕಾಲದಲ್ಲಿ ಸಮಾಜಕಾರ್ಯ ಅಷ್ಟೇನೂ ಹೇಳಿಕೊಳ್ಳುವ ಮಟ್ಟದಲ್ಲಿ ನಡೆಯದಿದ್ದರೂ ಆ ಅವಧಿಯಲ್ಲಿ ನವೀನ ರೀತಿಯ ಕಲ್ಯಾಣ ಕಾರ್ಯ ಕ್ರಮಗಳಿಗೆ ನಾಂದಿಯಾಯಿತು. ಹಾಗೂ ಔಪಚಾರಿಕ ಶಿಕ್ಷಣಕ್ಕೆ 1936ರಲ್ಲಿ

ಸ್ಥಾಪಿತವಾದ ಸರ್ ದೊರಾಬ್ಜಿ ಟಾಟಾ ಗ್ರಾಜುಯೇಟ್ ಸ್ಕೂಲ್ ಆಫ್ ಸೋಸಿಯಲ್ ವರ್ಕ್—ಸಂಸ್ಥೆ ಬುನಾದಿಯಾಗಿ, ರಾಷ್ಟ್ರದ ಎಲ್ಲೆಡೆ ಔಪಚಾರಿಕ ಸಮಾಜಕಾರ್ಯ ಶಿಕ್ಷಣ ದೊರೆಯಿತು. ವ್ಯಕ್ತಿಯ ಹಾಗೂ ಸಮಾಜದ ಸಮಸ್ಯೆಗಳನ್ನು ವೈಜ್ಞಾನಿಕ ತಳಹದಿ ಆಧರಿತ ವಿಧಾನ, ತಂತ್ರ ಮತ್ತು ಕೌಶಲ್ಯಗಳ ಮುಖಾಂತರ ನಿವಾರಿಸಿ ವ್ಯಕ್ತಿಯನ್ನು ತನ್ನ ಸ್ವಶಕ್ತಿಯ ಮೇಲೆ ನಿಲ್ಲುವಂತೆ ಮಾಡುವ ಒಂದು ವಿಶಿಷ್ಟ ಕಲೆಗೆ ರೂಪುಕೊಟ್ಟಿತು.

1. A. R. WADIA — History, Philosophy and Fields of Social work. 1968
2. G. R. MADAN — Indian Social Problems: Vol. II 1987
3. ಪಾಲಾಕ್ಷ — ಭಾರತದ ಇತಿಹಾಸ
4. ಬಿ ಮೋಹನ್‌ರಾವ್ — ಸಮಾಜ ಕಾರ್ಯ ನೀತಿ ಮತ್ತು ಸಮಾಜ ಕಲ್ಯಾಣ
5. ಎಸ್.ಜಿ. ಹಿರೇಮಠ್ — ಸಮಾಜ ಕಲ್ಯಾಣ

ಕೆ. ಚಂದ್ರಶೇಖರ್

ಹೆರಾಲ್ಡ್ ಜೆ ಲಾಸ್ಕಿಯವರ ಚಿಂತನೆಯಲ್ಲಿ ಹಕ್ಕುಗಳು ಮತ್ತು ಸ್ವಾತಂತ್ರ್ಯ

(ಒಂದು ವ್ಯಾಖ್ಯಾನ)

ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಚಿಂತನಕಾರರಲ್ಲಿ ಹೆಚ್. ಜೆ. ಲಾಸ್ಕಿಯವರು ಒಬ್ಬ ಗಣ್ಯವ್ಯಕ್ತಿ. ಸುಮಾರು ಮೂರುವರೆ ದಶಕಗಳವರೆಗೆ ಅವರ ಖ್ಯಾತಿಯು ಉಚ್ಛ್ರಾಯಸ್ಥಿತಿಯಲ್ಲಿತ್ತು. ಇವರು ರಾಜಕೀಯ ಚಿಂತನಕಾರರು ಮಾತ್ರವಲ್ಲ, ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸಿ ಅನುದಿನದ ರಾಜಕಾರಣದ ಆಗುಹೋಗುಗಳನ್ನು ತಿಳಿದಿದ್ದರು. ಇಷ್ಟಲ್ಲದೆ ಇವರು ಲಂಡನ್ನಿನ ವಿಶ್ವವಿದ್ಯಾನಿಲಯಕ್ಕೆ ಸೇರಿದ "ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್" ನಲ್ಲಿ ಪ್ರಾಧ್ಯಾಪಕರಾಗಿದ್ದರು. ಲಾಸ್ಕಿಯವರ ಪ್ರಸಿದ್ಧಿಯು 1910–1945ರ ವೇಳೆಯಲ್ಲಿ ಅತ್ಯುನ್ನತಮಟ್ಟವನ್ನು ಏರಿತ್ತು. ಈ ಕಾಲವನ್ನು ಮ್ಯಾಕ್ಸ್ ಬಿಲಾಫ್‌ರವರು ಲಾಸ್ಕಿಯುಗವೆಂದು ಹೇಳುತ್ತಾರೆ[1]. ಆ ಕಾಲದಲ್ಲಿ ಪ್ರತಿಯೊಂದು ರಾಜಕೀಯ ಬದಲಾವಣೆ ಹಾಗೂ ರಾಜಕೀಯ ವೃದ್ಧಿಗಳ ಬಗ್ಗೆ ಇವರ ಲೇಖನಗಳಲ್ಲಿ ಅನೇಕ ವಿಷಯಗಳು ಪ್ರತಿಬಿಂಬಿತವಾಗುತ್ತದೆ. ಫ್ರಾಂಕ್ ಥಾಕೂರ್‌ದಾಸ್‌ರವರ ಪ್ರಕಾರ ಪ್ರತಿಯೊಂದು ಮುಖ್ಯವಾದ ರಾಜಕೀಯ ಘಟನೆಗಳ ಬದಲಾವಣೆಗಳಿಗೆ ಹೊಂದಾಣಿಕೆ ಮಾಡುವ ಪ್ರಯತ್ನವನ್ನು ಇವರು ಮಾಡಿದ್ದಾರೆ[2] ಆದರೆ ಅನೇಕ ಟೀಕಾಕಾರರ ಪ್ರಕಾರ ಲಾಸ್ಕಿಯವರ ವಿಚಾರಧಾರೆಯಲ್ಲಿ ಪರಸ್ಪರ ವಿರೋಧಭಾಸಗಳು ಕಂಡುಬರುವುದೆಂದು ; ತಮ್ಮ ನಿಲುವಿನಲ್ಲಿ ಆಗಾಗ್ಗೆ ಬದಲಾವಣೆ ಮಾಡುತ್ತಿದ್ದರೆಂದೂ ; ತಮ್ಮ ಅಭಿಪ್ರಾಯ ಗಳನ್ನು ತಿಳಿಸುವಾಗ ಅದಕ್ಕೆ ಸೂಕ್ತ ಸಮರ್ಥನೆಯನ್ನು ಕೊಡುವುದಿಲ್ಲವೆಂದೂ; ಅಷ್ಟೇ ಅಲ್ಲದೆ ತಮ್ಮದೇ ಆದ ವಿಶಿಷ್ಟ ಸಮಾನ ಸಿದ್ಧಾಂತವನ್ನು ಮಂಡಿಸಲ್ಲವೆಂದೂ ಆಕ್ಷೇಪಿಸಿದ್ದಾರೆ. ಆದರೂ ಅವರ ವಿಮರ್ಶಕರು ಇವರ ಜಾಣ್ಮೆಯನ್ನು ಮೆಚ್ಚುತ್ತಾರೆ ಲಾಸ್ಕಿಯವರ ಮುಖ್ಯ ಕೊಡುಗೆ ಎಂದರೆ ಅನೇಕ ಸಿದ್ಧಾಂತಗಳನ್ನು ಸಮನ್ವಯಗೊಳಿಸಿ ಅವುಗಳನ್ನು ಸುಸಂಘಟಿತವಾಗಿ ಹಾಗೂ ಅರ್ಥಪೂರ್ಣವಾಗಿ ತಿಳಿಸಿ ಕೊಡುವುದೇ ಆಗಿದೆ.[3]

ಇವರ ಬರವಣಿಗೆಗಳಲ್ಲಿ ಅನೇಕ ವಿರೋಧಾಭಾಸಗಳು ಕಂಡುಬಂದರೂ ಇವರ ಅಂತಿಮ ಗುರಿಯೂ ಒಂದೇ ಆಗಿದ್ದಿತು. ಅಂದರೆ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದೇ ಇವರ ಮುಖ್ಯ ಧ್ಯೇಯ ಹಾಗೂ ಆದರ್ಶವಾಗಿದ್ದಿತು ಅದೇ ರೀತಿಯಲ್ಲಿ ಬಂಡವಾಳಶಾಹಿಯನ್ನು ಬೇರೆ ಮಾಡುವುದರಲ್ಲಿ ಇವರು ಯಾವ ವಿರೋಧಾಭಾಸವನ್ನು ಹೊಂದಿಲ್ಲ. ಇವರ ಪ್ರಕಾರ ಬಂಡವಾಳಶಾಹಿ ಪದ್ಧತಿಯು ಸಮಾಜದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಳ ನಿಷೇಧಾತ್ಮಕ ತಳಹದಿಯ ಮೇಲೆ ನಿಂತಿವೆ. ಇಂತಹ ಸಮಾಜ ದಲ್ಲಿ ರಾಜಕೀಯ ಸ್ವಾತಂತ್ರ್ಯ ಎಂಬುದು ಅರ್ಥವಿಲ್ಲದ ಮಾತು. ಆರ್ಥಿಕ ಭದ್ರತೆಯಿಲ್ಲದೆ ವ್ಯಕ್ತಿಯು ಇಂತಹ ಸಮಾಜದಲ್ಲಿ ಸ್ವಾತಂತ್ರ್ಯವನ್ನು ಅನುಭವಿಸಲಾರನು. ಇವರ ಅನೇಕ ಗ್ರಂಥಗಳನ್ನು, ಲೇಖನಗಳನ್ನು ಅಧ್ಯಯನ ಮಾಡಿದವರಿಗೆ ಒಂದು ವಿಷಯ ಮನದಟ್ಟಾಗುವುದು. ಮನುಷ್ಯನ ಸ್ವಾತಂತ್ರ್ಯ ಹಾಗೂ ಸುಭದ್ರ ಜೀವನದ ಬಗ್ಗೆ ಅವರಿಗಿದ್ದ ಅಪಾರ ಆಸಕ್ತಿ. ಲಾಸ್ಕಿಯವರ ಟೀಕಾಕಾರರು ತಿಳಿಸಿರುವಂತೆ ಅವರು ವ್ಯಕ್ತಿಯ ತೊಂದರೆ, ಅಜ್ಞಾನ, ಬಡತನವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ತೊಡಗಿದ್ದರು. ಈ ಕಾರಣದಿಂದ ಅವರು ಪ್ರಚಲಿತ ರಾಜಕೀಯ ಸಿದ್ಧಾಂತಗಳನ್ನು ಅವುಗಳ ಕಾರ್ಯಾಚರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಅವರ ಜೀವನದ ಅಂತಿಮ ಗುರಿಯಾದರೂ ಜಗತ್ತನ್ನು ಸಭ್ಯವ್ಯವಸ್ಥೆಯನ್ನಾಗಿ ಮಾಡುವುದು ಉತ್ತಮ ಮಾನವನ ವ್ಯಕ್ತಿತ್ವದ ಮರ್ಯಾದೆಯನ್ನು, ಘನತೆಯನ್ನು ಉತ್ತಮಗೊಳಿಸಿ ಜಗತ್ತಿ ನಲ್ಲಿ ಉತ್ತಮ ವ್ಯವಸ್ಥೆಯನ್ನಾಗಿ ಮಾಡಿದಾಗ ಮಾತ್ರ ಈಗಿನ ಅಶಾಂತಿ ವಾತಾವರಣವು ತೊಲಗಿ ಸ್ವಾತಂತ್ರ್ಯಕ್ಕೆ ಅರ್ಥವು ದೊರಕುತ್ತದೆ. ಈ ಕಾರಣದಿಂದಾಗಿ ಅವರ ರಾಜಕೀಯ ಚಿಂತನೆಯಲ್ಲಿ ವಿಶೇಷ ಬದಲಾವಣೆಯನ್ನು ನೋಡಬಹುದು. ಪರಿಸ್ಥಿತಿ ಯೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಇಷ್ಟಪಡಲಿಲ್ಲ ಇವರು ರಾಜಕೀಯ ಘಟನೆಗಳು ಮತ್ತು ಪರಿಸ್ಥಿತಿಗಳ ವಿರುದ್ಧವಾಗಿ ಹೋರಾಡಬೇಕಾಯಿತು ಇವರ ನಿಷ್ಠೆಯೂ ಮಿಲ್‌ನ ವ್ಯಕ್ತಿವಾದದಿಂದ ಬಹುತ್ವವಾದಕ್ಕೂ; ನಂತರ ಫೇಬಿಯನ್ ಸಮಾಜಕ್ಕೂ ಅಲ್ಲಿಂದ ಮುಂದೆ ಮಾರ್ಕ್ಸ್ ತತ್ವಕ್ಕೂ, ತದನಂತರ ಪ್ರಜಾತಂತ್ರ ಕಾರ್ಮಿಕ ಸಂಘಟನೆಗಳ ಕಡೆಗೆ ಒಲಿಯಿತು.

ಅವರ ಬೌದ್ಧಿಕ ಜೀವನದ ಪ್ರಾರಂಭದಲ್ಲಿ ಮೇಟ್‌ಲ್ಯಾಂಡ್, ಗೀರ್ಕೆ, ಫಿಗ್ಗೀಸ್ ಅರ್ನೆಸ್ಟ ಬಾರ್ಕರ್‌ರ ಪ್ರಭಾವದಿಂದ ಬಹುತ್ವವಾದವನ್ನು ಸ್ವೀಕರಿಸಿದರು. ಹಾಬ್‌ಹೌಸ್ ರಿಂದ ಅವರು "ಒಂದು ಪೂರ್ಣವಾದ ಅಂದರೆ ಕುಂದಿಲ್ಲದ ರಾಜ್ಯ ಸಿದ್ಧಾಂತವು ನೀತಿಯುತವಾದ ಸಮರ್ಥನೆ ಹೊಂದಿರಬೇಕು" ಎಂಬುದನು ತಿಳಿಸಿದರು. ಅವರ ಲೇಖನಗಳಲ್ಲಿ ನಾವು ಮಾರಲ್ ವ್ಯಾಲಿಡಿಟಿ, ಎಥಿಕಲ್ ಜೆಸ್ಟಿಫಿಕೇಷನ್ ಎಂಬ ಮಾತುಗಳನ್ನು ನೋಡುತ್ತೇವೆ. ಇಷ್ಟಲ್ಲದೆ ಲಾಕ್ ಮತ್ತು ಮಿಲ್‌ರ ಉದಾರವಾದ ಗಳಿಂದಲೂ ಇವರು ಆಕರ್ಷಿಸಲ್ಪಟ್ಟರು. ಆದುದರಿಂದ ಪ್ರಾರಂಭದಲ್ಲಿ ಇವರು ಉದಾರ ವಾದಿ ಹಾಗೂ ಬಹುತ್ವವಾದಿಗಳಾಗಿದ್ದರು. ತತ್ಕಾಲದಲ್ಲಿ ವಿಶೇಷವಾಗಿ ಕೇಳಿ ಬರುತ್ತಿದ್ದ

ಮಾರ್ಕ್ಸ್ ಮತ್ತು ಲೆನಿನ್ನರ ಕೆಲವು ತತ್ವಗಳಿಗೂ ಮನಸೋತಿದ್ದರು. ಆದರೆ ದ್ವಂದ್ವಾತ್ಮಕ ಭೌತಿಕವಾದ, ಹಿಂಸಾತ್ಮಕ ಕ್ರಾಂತಿ, ಕಾರ್ಮಿಕರ ಸರ್ವಾಧಿಕಾರ ಮುಂತಾದ ತತ್ವಗಳನ್ನು ಇವರು ಒಪ್ಪಲಿಲ್ಲ. ಅವರು ಮಾರ್ಕ್ಸ್‌ವಾದಿಗಳಾಗಿ ಮಾರ್ಪಟ್ಟ ಕಾಲದಲ್ಲಿ ಕೂಡ ಸರ್ವಾಧಿಕಾರಿ ಪದ್ಧತಿಯನ್ನು ವಿರೋಧಿಸಿದರು. ಅವರಿಗೆ ಪ್ರಜಾ ಪ್ರಭುತ್ವದಲ್ಲಿ ಪೂರ್ಣ ನಂಬಿಕೆ ಇದ್ದಿತು. ವ್ಯಕ್ತಿಸ್ವಾತಂತ್ರ್ಯ ಹಾಗೂ ವ್ಯಕ್ತಿಗಳ ಹಕ್ಕು ಬಾಧ್ಯತೆಗಳು, ರಾಜ್ಯಕ್ಕೆ ವ್ಯಕ್ತಿಯು ಏಕೆ ವಿಧೇಯತೆಯನ್ನು ಸಲ್ಲಿಸಬೇಕು ? ಎಂಬ ವಿಷಯಗಳಲ್ಲಿ ಅವರ ಅಭಿಪ್ರಾಯಗಳು ಏಕನಿಷ್ಠೆಯಿಂದ ಇರುವುದು.

ಲಾಸ್ಕಿಯವರು ವ್ಯಕ್ತಿಸ್ವಾತಂತ್ರ್ಯದ ಬಗ್ಗೆ ತೀವ್ರವಾದ ಆಸಕ್ತಿಯನ್ನು ವಹಿಸಿದ್ದರು. ಸಾಂಪ್ರದಾಯಬದ್ಧವಾದ, ಉದಾರವಾದವನ್ನು ಉಗ್ರವಾಗಿ ಟೀಕಿಸಿದರು. ಅಂತಹ ಇವರ ಟೀಕೆಗಳು ಇಂಗ್ಲಿಷ್ ಉದಾರವಾದಿ ಪಂಥವು, ಮಿಲ್ ಮತ್ತು ಗ್ರೀಕರಿಂದ ಲಾಸ್ಕಿಯವರ ಉದಾರವಾದ ತತ್ವವನ್ನು ಕೈಗಾರಿಕಾ ಕ್ರಾಂತಿಯ ನಂತರ ಉಂಟಾದ ಸಮಾಜವಾದಿ ಸವಾಲಿಗೆ ಉತ್ತರೋಪಾದಿಯಾಗಿದ್ದಂತಹ ಉದಾರವಾದ ಆಗಿದ್ದಿತು.[4] ತಮ್ಮ ವಿದ್ಯಾರ್ಥಿಗಳಿಗೆ ಹಾಬ್‌ಹೌಸ್ ಬರೆದಿರುವ 'ಲಿಬರಲಿಸಂ' ಎಂಬ ಗ್ರಂಥವನ್ನು ಇವರು ಶಿಫಾರಸ್ಸು ಮಾಡುತ್ತಿದ್ದರು. ಹಾಗೆಯೇ ಶಿಫಾರಸ್ಸು ಮಾಡುವಾಗ ಆ ಗ್ರಂಥವು ಸಮಾಜವಾದ ತಿಳಿಯಲು ಮೊದಲ ಪೀಠಿಕೆ ಎಂದು ಹೇಳುತ್ತಾರೆ.[5]

ಲಾಸ್ಕಿಯವರೇ ತಮ್ಮ ಚಿಂತನಕ್ರಮವನ್ನು ತಮ್ಮ ಕಾಲಕ್ಕೆ ಅನುಗುಣವಾಗಿರು ವಂತಹ ಬೆಂತಾಮ್ ಸಿದ್ಧಾಂತದ ಅನ್ವಯ[6] ಎಂದು ಹೇಳುತ್ತಾರೆ. ಆದುದರಿಂದ ಲಾಸ್ಕಿಯವರು ಸಮಂಜಸವಾದ ತತ್ವಜ್ಞಾನಿಗಳಾಗಲಿಲ್ಲವೆಂದು ಹೇಳುವುದು ಶುದ್ಧ ತಪ್ಪು. ಅವರು ನಿಜವಾಗಿಯೂ ಮಾರ್ಕ್ಸ್‌ವಾದ ಮತ್ತು ಬೆಂಥಾಮ್‌ವಾದದ ತತ್ವಗಳನ್ನು ಹೊಂದಾಣಿಕೆ ಮಾಡಲಿಲ್ಲ. ಅದೇ ರೀತಿ ಬೆಂಥಾಮ್‌ವಾದ ತತ್ವಕ್ಕೆ ಬದಲಾಗಿ ಮಾರ್ಕ್ಸ್‌ವಾದ ತತ್ವದ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಮಾರ್ಕ್ಸ್ ವಾದಿಗಳು ಉದಾರವಾದಿ ರಾಜ್ಯದ ಸಿದ್ಧಾಂತವನ್ನು ಟೀಕೆ ಮಾಡಿದ್ದಾರೆ. ಅದರ ಮುಖ್ಯಾಂಶವನ್ನು ಲಾಸ್ಕಿಯವರು ಒಪ್ಪಿದ್ದಾರೆ. ಮಾರ್ಕ್ಸ್‌ವಾದವನು ಒಪ್ಪಿಕೊಂಡಾಗ ನಮಗೆ ಕಾಯಿದೆಯ ಸಾರವು ಅರ್ಥವಾಗುತ್ತವೆಂದೂ ಅವರು ಹೇಳುತ್ತಾರೆ. ಇದುವರೆಗೂ ಅಧ್ಯಯನ ಮಾಡಿರುವ ಲಾಸ್ಕಿಯವರ ಗ್ರಂಥಗಳಲ್ಲಿ ಎರಡು ಮುಖ್ಯ ಅಂಶ ಗಳನ್ನು ಗಮನಿಸಿದ್ದೇನೆ. 1. ಸ್ವಾತಂತ್ರ್ಯ ಮತ್ತು ಅಧಿಕಾರಿಶಾಹಿ 2. ಸ್ವಾತಂತ್ರ್ಯ ಮತ್ತು ಸಮಾನತೆ– ಈ ಎರಡು ವಿಷಯಗಳ ಬಗ್ಗೆ ಲಾಸ್ಕಿಯವರು ಎಲ್ಲಾ ಗ್ರಂಥ ಗಳಲ್ಲಿಯೂ ಒಂದೇ ವಿಧವಾದ ಅಭಿಪ್ರಾಯದ ಒಮ್ಮತವಿದೆ.

ಪ್ರಾಚೀನ ಕಾಲದಿಂದಲೂ ಮಾನವನ ಸ್ವಾತಂತ್ರ್ಯದ ಬಗ್ಗೆ ಹಾಗೂ ವ್ಯಕ್ತಿತ್ವದ ಬಗ್ಗೆ ವಿಶೇಷ ಚರ್ಚೆ ನಡೆದುಬಂದಿದೆ. ಮನುಷ್ಯನು ಸ್ವಾಭಾವಿಕವಾಗಿ ಸ್ವಾತಂತ್ರ್ಯದಲ್ಲಿಯೇ ಹುಟ್ಟುತ್ತಾನೆಯೇ? ಅಥವಾ ಅವನ ಸ್ವಾತಂತ್ರ್ಯವನ್ನು

ಅಪಹರಿಸುವ ಅಥವಾ ಮೊಟಕು ಮಾಡುವ ಸಮಾಜದ ಹಾಗೂ ರಾಜ್ಯದ ಚೌಕಟ್ಟಿನಲ್ಲಿ ಹುಟ್ಟುತ್ತಾನೆಯೋ? ಈ ವಿಷಯಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಉಂಟಾಗಿವೆ.

ಮನುಷ್ಯನು ಜನ್ಮತಃ ಸ್ವತಂತ್ರನೆಂದೂ ಆದರೆ ಸಮಾಜದ ಸಂಕೋಲೆಗಳಿಗೆ ಸಿಕ್ಕಿ ಅವನು ಸ್ವಾತಂತ್ರ್ಯವನ್ನು ಕಳೆದುಕೊಂಡನೆಂದೂ ರೂಸೋ ಅಭಿಪ್ರಾಯ ಪಡುತ್ತಾನೆ. ಆದರೆ ಪ್ರಾಚೀನಕಾಲದ ಅರಿಸ್ಟಾಟಲ್‌ನ ಪ್ರಕಾರ ಮನುಷ್ಯನು ಜನ್ಮತಃ ಸಾಮಾಜಿಕ ಪ್ರಾಣಿ. ಅವನ ರೀತಿ, ನಡವಳಿಕೆಗಳು, ಶಿಕ್ಷಣ, ಸಂಸ್ಕೃತಿ, ಧರ್ಮ ಜೀವನದ ಗುರಿ ಉದ್ದೇಶಗಳನ್ನು ಸಮಾಜವೇ ನಿರ್ಣಯಿಸುತ್ತದೆ. ವ್ಯಕ್ತಿಯು ತನ್ನ ಪರಿಪೂರ್ಣತೆಯನ್ನು ಸಮಾಜದಿಂದಲೇ ಪಡೆಯಬೇಕು. ಸಮಾಜದ ಚೌಕಟ್ಟಿನಾಚೆಗೆ ಇರುವ ವ್ಯಕ್ತಿಯು ಒಬ್ಬ ದೇವರಾಗಬಹುದು ಅಥವಾ ಮೃಗವಾಗಿರಬಹುದು. ಆದರೆ ನಿಜವಾದ ಮನುಷ್ಯನು ತನ್ನ ಪರಿಪೂರ್ಣತೆಯನ್ನು ಸಮಾಜದಲ್ಲಿ ಕಂಡುಕೊಳ್ಳಬೇಕು.

ರೂಸೋವು ವ್ಯಕ್ತಿಯು ಜನ್ಮತಃ ಸ್ವತಂತ್ರನೆಂದು, ಕೇವಲ ಒಂದೇ ವಾಕ್ಯದಲ್ಲಿ ಹೇಳಿರುವನು. ಆದರೆ ಅವನ ಬರವಣಿಗೆಗಳನ್ನು ವಿಮರ್ಶಿಸಿ ನೋಡಿದಾಗ ಅವನು ವ್ಯಕ್ತಿಯನ್ನು ಸಂಪೂರ್ಣವಾಗಿ ಸಾರ್ವಜನಿಕ ಇಚ್ಛೆಗೆ ಒಳಪಡಿಸಿರುತ್ತಾನೆ. ಒಟ್ಟಿನ ಮೇಲೆ ಅರಿಸ್ಟಾಟಲ್‌ನಿಂದ ಇಂದಿನವರೆಗೂ ವ್ಯಕ್ತಿಸ್ವಾತಂತ್ರ್ಯ ಹಾಗೂ ವ್ಯಕ್ತಿಯ ಮೇಲಿನ ಅಧಿಕಾರಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಕಂಡುಬರುತ್ತದೆ. ಅನೇಕ ಗ್ರಂಥಗಳು ದೀರ್ಘ ಚರ್ಚೆಯನ್ನು ನಡೆಸಿವೆ.

ರಾಜ್ಯವು ಸಮಾಜವನ್ನು ಸಂಘಟನೆ ಮಾಡುವ ಒಂದು ಅತ್ಯಂತ ಬಲಯುತವಾದ ಮತ್ತು ಸಾಮಾಜಿಕ ಸಂಸ್ಥೆ ಸಮಾಜದಲ್ಲಿ ಅನೇಕ ಸಂಘಸಂಸ್ಥೆಗಳು ಇದ್ದರೂ ರಾಜ್ಯಕ್ಕೆ ಮಾತ್ರ ಒಂದು ವಿಶಿಷ್ಟ ಸ್ಥಾನ ಉಂಟು. ವ್ಯಕ್ತಿಗಳನ್ನು ಕಡ್ಡಾಯವಾಗಿ ಕಾಯಿದೆಗಳನ್ನು ಮಾನ್ಯ ಮಾಡುವಂತೆ ದಂಡಿಸುವ ಹಕ್ಕನ್ನು ರಾಜ್ಯವು ಒಂದೇ ಪಡೆದಿದೆ. ಆದರೆ ಇತರ ಸಂಸ್ಥೆಗಳು ಮಾನವನ ನಾನಾ ಪುರೋಭಿವೃದ್ಧಿಗೆ ಕಾರಣವಾಗುತ್ತದೆ. ಆದರೆ ಅವುಗಳಲ್ಲಿ ಬಲಾತ್ಕಾರ ಶಕ್ತಿ ಇಲ್ಲದಿರುವುದರಿಂದ ಅವುಗಳಿಗೆ ಎಷ್ಟೋ ಸಂದರ್ಭದಲ್ಲಿ ತಮ್ಮ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ನಿಶ್ಯಕ್ತವಾಗುತ್ತವೆ. ಈ ಸಂಸ್ಥೆಗಳಿಗೂ ರಾಜ್ಯಕ್ಕೂ ಇರುವ ಸಂಬಂಧವು ಬಹಳ ಸೂಕ್ಷ್ಮವಾದುದು. ವ್ಯಕ್ತಿಗಳ ಮೇಲೆ ತನ್ನ ದರ್ಪವನ್ನು ಚಲಾಯಿಸುವ ಅಧಿಕಾರವು ರಾಜ್ಯಕ್ಕೆ ಇರುವಂತೆ ಸಂಘಸಂಸ್ಥೆಗಳ ಮೇಲೂ ಇರುತ್ತದೆ. ಈ ಬಗ್ಗೆ 19ನೇ ಶತಮಾನದಿಂದೀಚೆಗೆ ಸ್ವಲ್ಪ ಟೀಕೆಗಳು ನಡೆದಿರುತ್ತವೆ.

ಮನುಷ್ಯನಿಗೋಸ್ಕರ ಸಂಘಸಂಸ್ಥೆಗಳು ಬಂದಿವೆಯೋ ಹೊರತು ಸಂಘಸಂಸ್ಥೆಗಳಗೋಸ್ಕರ ಮನುಷ್ಯರು ಇಲ್ಲ ಎಂಬ ಅಭಿಪ್ರಾಯ ಹತ್ತೊಂಬತ್ತನೆ ಶತಮಾನದಿಂದೀಚೆಗೆ ಬಂದುದಾಗಿದೆ. ಸಂಘಸಂಸ್ಥೆಗಳು ಮನುಷ್ಯನ ಅನುಭವದಿಂದ ಉದ್ಭವಿಸಿ

ದವು. ನಮ್ಮ ಸಂಪ್ರದಾಯಗಳು, ಪದ್ಧತಿಗಳು, ನಂಬಿಕೆಗಳು ಸರಿಯಾದ ರೀತಿಯಲ್ಲಿ ದೃಢಪಟ್ಟು ಸಮಾಜದ ಮಾನ್ಯತೆ ಪಡೆದ ಮೇಲೆ ಅವುಗಳೇ ಸಂಸ್ಥೆಗಳಾಗಿ ಪರಿಣಮಿಸುವುವು. ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ಕಾರ್ಯಕ್ಷೇತ್ರವಿದೆ. ಆ ಕಾರ್ಯಕ್ಷೇತ್ರವನ್ನು ಸಂಸ್ಥೆಯ ಸದಸ್ಯರೇ ನಿರ್ಣಯಿಸುತ್ತಾರೆ. ಸಂಸ್ಥೆಯ ಮುಖ್ಯ ಉದ್ದೇಶವಾದರೂ ವ್ಯಕ್ತಿಗಳು ತಮ್ಮ ಒಳಿತನ್ನು ಎಲ್ಲರ ಒಳಿತಿನಲ್ಲಿ ಅರಿತುಕೊಳ್ಳುವುದಾಗಿದೆ.

ಕಾಲವು ಬದಲಾಯಿಸಿದಂತೆ ಪೀಳಿಗೆಗಳು ಬದಲಾಯಿಸಿದಂತೆ 'ಒಳ್ಳಿತು' ಎಂಬ ಅಭಿಪ್ರಾಯವು ಬದಲಾಯಿಸುತ್ತದೆ. ಒಂದು ಕಾಲದಲ್ಲಿ ಗುಲಾಮಗಿರಿ ಪದ್ಧತಿ ಮತ್ತು ಬಂಡವಾಳಶಾಹಿ ಪದ್ಧತಿಯೂ ಉತ್ತಮ ಪದ್ಧತಿಯೆಂದೂ ಜನರು ಭಾವಿಸಿದ್ದರು. ಆದರೆ ಇಂದು ಅವುಗಳನ್ನು ಕೇಡೆಂದು ಭಾವಿಸುತ್ತಾರೆ. ನಮ್ಮ ದೇಶದಲ್ಲಿಯೂ ಕೂಡ ರಾಜತ್ವ, ಜಾತಿಪದ್ಧತಿ, ಅವಿಭಕ್ತ ಕುಟುಂಬ ಇವುಗಳೇ ಸಮಾಜದ ಭದ್ರತೆಯನ್ನು ಉಳಿಸಿದವು ಎಂಬ ಭಾವನೆ ಇದ್ದಿತು. ಕಾಲ ಸರಿದಂತೆ ಅವುಗಳನ್ನು ಸಾಮಾಜಿಕ ಪಿಡುಗು ಎಂದು ಕರೆಯುತ್ತಾರೆ. 19ನೇ ಶತಮಾನದ ರಾಷ್ಟ್ರೀಯ ದೇಶ ವಾತ್ಸಲ್ಯವು ಅತ್ಯಂತ ಶ್ಲಾಘನೀಯವಾದ ಒಳಿತೆಂದು ಜನತೆ ಭಾವಿಸಿದ್ದಿತು. ಆದರೆ 20ನೇ ಶತಮಾನದಲ್ಲಿ ಅದು ಅಸಮರ್ಪಕವೆಂದು, ಅನ್ಯಾಯವೆಂದು ನೀತಿರಹಿತವಾದುದೆಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ 'ಒಳ್ಳಿತು' ಎಂಬ ಅಭಿಪ್ರಾಯಗಳು ಬದಲಾವಣೆ ಹೊಂದಿದಂತೆ ಅದಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಬದಲಾವಣೆ ಹೊಂದಬೇಕು. ಆದರೆ ಕೆಲವು ಸಂಸ್ಥೆಗಳು ಸಮಾಜದಲ್ಲಿ ಬೇರು ಬಿಟ್ಟಿರುವುದರಿಂದ ಕಾಲವು ಬದಲಾದರೂ ಅವುಗಳಲ್ಲಿ ಬದಲಾವಣೆಗಳಾಗುವುದಿಲ್ಲ. ಹಳೆಯ ಸಂಪ್ರದಾಯಗಳು ಅವೈಚಾರಿಕವಾಗಿದ್ದು ವಿವೇಕಗಳನ್ನು ನಾಶ ಮಾಡುತ್ತವೆ. ವಿವೇಕ ನಾಶವಾದಾಗ ಎಲ್ಲವೂ ನಾಶವಾಗುತ್ತದೆ. ಅವೈಚಾರಿಕ ಸಂಪ್ರದಾಯ ಪದ್ಧತಿಗಳ ಕಟ್ಟಳೆ ವಿವೇಕವನ್ನು ನಾಶಮಾಡಿ ಮನುಷ್ಯನ ಅಧೋಗತಿಗೆ ಕಾರಣವಾಗಿ ಕುರುಡು ನಂಬಿಕೆಗಳಿಂದ ಈ ಸಂಸ್ಥೆಗಳು ನಿಲ್ಲಲ್ಪಟ್ಟಿವೆ. ಅನೇಕ ಸಂಸ್ಥೆಗಳು ಯಾವುದೋ ಕಾಲದಲ್ಲಿ ವ್ಯಕ್ತಿ ಪ್ರಗತಿಗೆ ಕಾರಣವಾಗಿದ್ದವು. ಆದರೆ ಅವೇ ಇಂದಿನ ವ್ಯಕ್ತಿಯ ಹೀನ ಸ್ಥಿತಿಗೆ ಕಾರಣವಾಗಿವೆ. ವ್ಯಕ್ತಿ ನಾಗರೀಕನಾಗಿ ಪ್ರಗತಿಶೀಲನಾಗಿ ಮುಂದುವರಿಯಲು ಸಂಘಸಂಸ್ಥೆಗಳ ರಚನೆಯಲ್ಲಿ ವಿಚಾರದಲ್ಲಿ, ಧ್ಯೇಯ ಆದರ್ಶದಲ್ಲಿ, ರೂಪರೇಷದಲ್ಲಿ ಬಹಳಮಟ್ಟಿಗೆ ಬದಲಾವಣೆ ಅತ್ಯವಶ್ಯಕ ಮತ್ತು ಸಾರ್ವಜನಿಕರ ತಿಳುವಳಿಕೆಯನ್ನು ಹೆಚ್ಚಿಸಿ ಅವರನ್ನು ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗಲು ಮುಖಂಡರು ಪ್ರಯತ್ನಿಸಬೇಕು. ಕ್ರೈಸ್ತ, ಬುದ್ಧ ಕನ್‌ಪ್ಯೂಷಿಯಸ್ ಮತ್ತು ಮಹಾತ್ಮಗಾಂಧಿಯವರಂತಹ ಪ್ರತಿಭಾನ್ವಿತ ಮುಖಂಡರೂ ಸಮಾಜಕ್ಕೆ ಒಂದು ಹೊಸ ದೃಷ್ಟಿಕೋನ ಕೊಡಬಲ್ಲರು. ಇಂತಹ ಪ್ರತಿಭಾನ್ವಿತ ವ್ಯಕ್ತಿಗಳು ವ್ಯಕ್ತಿ ಮನಸ್ಸನ್ನು ಅಂಧಶ್ರದ್ಧೆಯಿಂದಲೂ, ದುರ್ಬುದ್ಧಿ

ಯಿಂದಲೂ ಬಿಡುಗಡೆ ಮಾಡಿದ್ದರು. ಇದೇ ರೀತಿಯಲ್ಲಿ ಲಾಸ್ಕಿಯವರು ಕೂಡ ರಾಜಕೀಯ ಕ್ಷೇತ್ರದಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಸಾಮಾಜಿಕ ಸಂಬಂಧದಲ್ಲಿ ಮನುಷ್ಯನ ಮನಸ್ಸಿನಲ್ಲಿ ಅಡಗಿದ್ದ ಕುರುಡು ನಂಬಿಕೆಗಳನ್ನು ನಾಶಗೊಳಿಸಲು ಪ್ರಯತ್ನಿಸಿದರು.[6]

ಸಾಧಾರಣವಾಗಿ ಯಾವ ರಾಜಕೀಯ ಚಿಂತನಕಾರನನ್ನಾಗಲಿ ಅಥವಾ ತತ್ವ ಜ್ಞಾನಿಯಾಗಲಿ ನಾವು ವಿಮರ್ಶಿಸಬೇಕಾದರೆ ಅವನು ಮನುಷ್ಯನ ಸ್ವಭಾವವನ್ನು ಹೇಗೆ ತಿಳಿದಿದ್ದಾನೆ ಎಂಬುದನ್ನು ತಿಳಿಯಬೇಕು.

ಲಾಸ್ಕಿಯೂ ಅರಿಸ್ಟಾಟಲನಂತೆ ಮನುಷ್ಯನು ಕೇವಲ ರಾಜಕೀಯ ಪ್ರಾಣಿ ಎಂದು ತಿಳಿಯುವುದಿಲ್ಲ ಅಥವಾ ಆ್ಯಡಂಸ್ಮಿತ್‌ನಂತೆ ಆರ್ಥಿಕ ಪ್ರಾಣಿಯಂತೆಯೂ ತಿಳಿಯುವುದಿಲ್ಲ. ಆದರೆ ಆರ್ಥಿಕ ಮತ್ತು ರಾಜಕೀಯ ವಿಷಯಗಳು ಜೀವನದಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸಿವೆ. ಆದರೆ ಸಮಾಜದಲ್ಲಿ ಮನುಷ್ಯನ ಸಮಗ್ರ ಜೀವನವು ಇದರಿಂದಲೇ ಪರಿಪೂರ್ಣವಾಗುವುದಿಲ್ಲ. ಆರ್ಥಿಕ ಸಮಸ್ಯೆಗಳು ರಾಜಕೀಯ ಸಮಸ್ಯೆಯ ಮೇಲೆ ಬಹುಮಟ್ಟಿಗೆ ತನ್ನ ಪರಿಣಾಮವನ್ನು ಬೀರುತ್ತವೆ ಎಂಬ ಕಾರ್ಲ್ ಮಾರ್ಕ್ಸ್‌ನ ತತ್ವವನ್ನು ಲಾಸ್ಕಿಯೂ ಬಹುಮಟ್ಟಿಗೆ ಅಂಗೀಕರಿಸಿದರು. ಸಾಮಾಜಿಕ ಜೀವನದಲ್ಲಿ ಮನುಷ್ಯನ ಸಿದ್ಧಾಂತಗಳು ಮತ್ತು ಕಾಯಿದೆ ಮುಂತಾದವೆಲ್ಲವನ್ನು ಆರ್ಥಿಕ ಪರಿಸ್ಥಿತಿಗಳೇ ನಿರ್ಣಯಿಸುವುದರಿಂದ ಆರ್ಥಿಕ ಸ್ವಾತಂತ್ರ್ಯವಿಲ್ಲದ ಮೇಲೆ ರಾಜಕೀಯ ಸ್ವಾತಂತ್ರ್ಯ ಅರ್ಥಹೀನವಾದುದು.

ರೂಸೋವಿನ ಪ್ರಕಾರ ರಾಜಕೀಯವು ಪ್ರತಿಯೊಬ್ಬ ವ್ಯಕ್ತಿಗೂ ಸಂಬಂಧಿಸಿರು ವಂತಹದ್ದು. ಲಾಕ್ ಪ್ರಕಾರ ಆಳ್ವಿಕೆಯೂ ಒಪ್ಪಿಗೆ ಆಧಾರದ ಮೇಲೆ ಇರಬೇಕು ಎಂಬುದನ್ನು ಲಾಸ್ಕಿಯೂ ಒಪ್ಪುತ್ತಾನೆ. ಹೀಗೆ ಹೇಳುವಾಗ ಅವನು ಪ್ರತಿನಿಧಿ ಸರ್ಕಾರವನ್ನು ಪುಷ್ಟೀಕರಿಸುವ ಸಂದರ್ಭದಲ್ಲಿ ಇವನು ಪ್ಲೇಟೊ, ಹೆಗಲ್ ಮತ್ತು ಬೋಸಾಂಕೆ ತಿಳಿಸಿದಂತಹ ಸರ್ವಾಧಿಕಾರಿ ಅಧಿಕಾರಿಶಾಹಿಯನ್ನು ಧಿಕ್ಕರಿಸು ತ್ತಾನೆ.[7]

ಲಾಸ್ಕಿಯವರು ಅವರ ಕಾಲದ ರಾಜಕೀಯ ತತ್ವಶಾಸ್ತ್ರದ ಉಗ್ರ ವಿಮರ್ಶಕ ರಾಗಿದ್ದರು. ಆ ಕಾಲದಲ್ಲಿ ಬಹಳಮಟ್ಟಿಗೆ ಪ್ರಚಲಿತವಾಗಿದ್ದ ರಾಜ್ಯದ ಪರಮಾಧಿ ಕಾರ ಸಿದ್ಧಾಂತವನ್ನು ಇವರು ತಿರಸ್ಕರಿಸುತ್ತಾರೆ. ರಾಜಕೀಯದಲ್ಲಿ ರಾಜ್ಯದ ಪರಮಾಧಿಕಾರಕ್ಕೆ ದೊರಕಿರುವ ಹಿರಿಮೆಯನ್ನು ಖಂಡಿಸುತ್ತಾರೆ. ಜರ್ಮನ್ ತತ್ವಜ್ಞಾನದ ಪ್ರಕಾರ ಪ್ರತಿಯೊಂದು ರಾಷ್ಟ್ರದಲ್ಲಿಯೂ ಒಂದು ಕೇಂದ್ರಿಕೃತವಾದ ಸಾರ್ವಭೌಮ ಅಧಿಕಾರಶಾಹಿಯೂ ಇರಲೇಬೇಕು. ಈ ವಿಷಯದಲ್ಲಿ ಲಾಸ್ಕಿಯವರು ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಲಾಸ್ಕಿಯ ಪ್ರಕಾರ ಅನೇಕ ಸಂಸ್ಥೆಗಳಲ್ಲಿ ರಾಜ್ಯವು ಒಂದು ಸಂಸ್ಥೆ. ಅದು ಸಂಸ್ಥೆಗಳ ಸಂಸ್ಥೆ. ಅದರ ರಚನೆಯೂ ಫೆಡರಲ್ ರಚನೆಯದಾಗಿರುತ್ತದೆ.[8] ಅದರ ಅಧಿಕಾರ ವ್ಯಾಪ್ತಿಯೂ ಮಿತಿಗೊಳಿಸಲ್ಪಟ್ಟ ಅಧಿಕಾರ. ಇವರ ಪ್ರಕಾರ ಸ್ವಾತಂತ್ರ್ಯ ಎಂಬುದು ಪರವಾನಗಿ ಅಲ್ಲ. ಅದು ಸ್ಪಷ್ಟ

ವಾಸ್ತವಿಕವಾಗಿ ನಿಶ್ಚಯವಾಗಿ ಮನುಷ್ಯನ ದುಷ್ಟ ಪ್ರವೃತ್ತಿಗಳ ಮೇಲೆ ಹಾಕಿರುವ ನಿರ್ಬಂಧವೇ ಆಗಿರುತ್ತದೆ. ಕಾಯಿದೆಯು ಒಪ್ಪಿಗೆ ಆಧಾರದ ಮೇಲೆ ಇರತಕ್ಕದು. ಪ್ರಜಾಪ್ರಭುತ್ವ ತತ್ವವನ್ನು ಶ್ಲಾಘಿಸುವ ಲಾಸ್ಕಿ ಕಮ್ಯುನಿಸಂ ತತ್ವಗಳ ಧ್ಯೇಯ ಆದರ್ಶಗಳನ್ನು ಒಪ್ಪುತ್ತಾರೆ. ಆದರೆ ಕಮ್ಯುನಿಸಂ ಪದ್ಧತಿ ಸರ್ಕಾರವನ್ನು ಒಪ್ಪುವುದಿಲ್ಲ ಏಕೆಂದರೆ ಕಮ್ಯುನಿಸ್ಟ್ ಪಕ್ಷ ಪದ್ಧತಿಯಲ್ಲಿ ವಿರೋಧಪಕ್ಷಗಳಿಗೆ ಅವಕಾಶವಿಲ್ಲದಿರುವುದರಿಂದ ಪ್ರಜಾಪ್ರಭುತ್ವ ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯ. ಇಂಗ್ಲೆಂಡಿನಲ್ಲಿರುವ ಪಾರ್ಲಿಮೆಂಟರಿ ಸರ್ಕಾರ ಪದ್ಧತಿಯನ್ನು ಒಂದು ಮಾದರಿ ಎಂದು ಪರಿಗಣಿಸಿ ಅದನ್ನು ಇತರೇ ರಾಷ್ಟ್ರಗಳು ಅನುಸರಿಸಬೇಕೆಂದು ಹೇಳುತ್ತಾರೆ.

ನಮ್ಮ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳ ಆರ್ಥಿಕ ತಳಹದಿಯ ಮೇಲೆ ನಿಂತಿರುವುದರಿಂದ, ಆ ತಳಹದಿಯನ್ನು ಸರಿಪಡಿಸಿದಾಗ ಮಾತ್ರ ನಮ್ಮ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳ ಬಗೆಹರಿಸುವ ರೀತಿಯೂ ನಮಗೆ ವೇದ್ಯವಾಗುತ್ತದೆ. ಇವರ ಪ್ರಕಾರ ಜನಜೀವನದಲ್ಲಿ ವೈವಿಧ್ಯತೆಯೂ ಕಂಡುಬರುವುದರಿಂದ ಅವರ ಚಿಂತನಕ್ರಮದಲ್ಲೂ ವೈವಿಧ್ಯತೆ ಇರುವುದು ಸಹಜ. ಲಾಸ್ಕಿಯವರ ಪ್ರಕಾರ ನಮ್ಮ ಸಮಾಜದಲ್ಲಿ ಸ್ಥಿತಿಗತಿಗಳ ವ್ಯತ್ಯಾಸ ಹೊಂದಲು ಮುಖ್ಯ ಅಂಶವೆಂದರೆ ಆಸ್ತಿಯ ಆರ್ಥಿಕ ಪರಿಸ್ಥಿತಿಯೇ ಮುಖ್ಯವಾದುದು. ಮನುಷ್ಯನ ಅವಕಾಶವು ಅವನ ಪಿತ್ರಾರ್ಜಿತ ಪರಿಸ್ಥಿತಿಯನ್ನು ಅವಲಂಬಿಸಿದೆ. ಆಸ್ತಿಉಳ್ಳವರು ಯೋಚಿಸುವಂತೆ ಆಸ್ತಿ ಇಲ್ಲದವರು ಯೋಚಿಸಲಾರರು. ಆದ್ದರಿಂದ ಸಮಾನತೆಯೂ ಅಸಾಧ್ಯವಾಗಿರುವಂತಹ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವು ನಿಸ್ಸಹಾಯಕ. ಬಂಡವಾಳಶಾಹಿ ಪರಸ್ಪರ ವಿರೋಧಾಭಿಪ್ರಾಯವನ್ನುಂಟು ಮಾಡುವಂತಹ ಸಮಾಜವನ್ನು ಸೃಷ್ಟಿಮಾಡಿದೆ. ಈ ರೀತಿ ಪರಸ್ಪರ ಹೋರಾಟಗಳು ವರ್ಗ ವರ್ಗದ ನಡುವೆ ಉಂಟಾಗುವುದು ಸಾಮ್ರಾಜ್ಯಶಾಹಿ ಯುದ್ಧಗಳಿಗೆ ಕಾರಣವಾಗುತ್ತದೆ. ಕಮ್ಯುನಿಸಂನಲ್ಲಿ ಒಂದು ಮುಖ್ಯ ತತ್ವವನ್ನು ಇವರು ಒಪ್ಪುತ್ತಾರೆ. ಸಮಾಜವು ಸಮಾನತೆಯ ಆಧಾರದ ಮೇಲೆ ಸೃಷ್ಟಿಸಿರುವುದರಿಂದ ಪರಸ್ಪರ ವೈಷಮ್ಯವು ಕಡಿಮೆಯಾಗುವುದೆಂದು ನಂಬಿದ್ದರು. ಅವರು ಸ್ವಲ್ಪಮಟ್ಟಿಗೆ ಮಾತ್ರ ಖಾಸಗಿ ಆಸ್ತಿಯನ್ನು ಸಮರ್ಥಿಸುತ್ತಾರೆ. ಅಂದರೆ ಖಾಸಗಿ ಆಸ್ತಿಯ ದುಡಿಮೆಯ ಪರಿಣಾಮವಾಗಿ ಮಾಡಿಕೊಂಡಿರುವಂತಹ ಆಸ್ತಿಯನ್ನು ಸಮರ್ಥಿಸುತ್ತಾರೆ.[9]

ಲಾಸ್ಕಿಯುವರು ಲೇಸೆಫೇರ್ ತತ್ವವನ್ನು ಸಂಪೂರ್ಣವಾಗಿ ವಿವರಿಸುತ್ತಾರೆ.[10] ಲೇಸೆಫೇರ್ ಆರ್ಥಿಕ ಕ್ಷೇತ್ರದಲ್ಲಿ ಪೈಪೋಟಿ, ಏಕಸ್ವಾಮ್ಯ ಮತ್ತು ಉಗ್ರವಾದ ಆರ್ಥಿಕ ಅಸಮಾನತೆಯನ್ನುಂಟು ಮಾಡುತ್ತದೆ. ಲಾಸ್ಕಿ ಬ್ರಿಟಿಷ್ ಕಾರ್ಮಿಕ ಪಕ್ಷದ ಬೌದ್ಧಿಕ ನಾಯಕರಾಗಿದ್ದರು. ಇವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಉತ್ತಮತೆಯನ್ನು ಕಂಡುಕೊಳ್ಳಬೇಕು. ಇಂಗ್ಲೆಂಡಿನ ಸಮಗ್ರ ಜನಾಂಗದ ಆಸಕ್ತಿಯನ್ನು ಹೊಂದಿದ್ದಾನೆಯೇ ಹೊರತು ಕೇವಲ ಸಾಂಪ್ರದಾಯಿಕ ಪಕ್ಷದ ಕಟ್ಟಳೆಗಳಿಗೆ ಇವರು

ಬದ್ಧರಾಗಿರಲಿಲ್ಲ. ಪ್ರತಿನಿಧಿ ಸರ್ಕಾರವು ಯಶಸ್ವಿಯಾಗಲು ಕಾರ್ಯಾತ್ಮಕ ಪ್ರಾತಿನಿಧ್ಯ ಮತ್ತು ಪ್ರಾದೇಶಿಕ ಪ್ರಾತಿನಿಧ್ಯ ಎರಡೂ ಇರಬೇಕು ಎಂದಿದ್ದಾರೆ. ಸಮಾಜವಾದಿ ಪದ್ಧತಿಯ ಆರ್ಥಿಕತೆ, ಕಾರ್ಖಾನೆಗಳ ಶಾಸನ ಆಗಬೇಕು ಎಂದು ಹೇಳುತ್ತಾರೆ. ಸಾಮಾಜಿಕ ಸಂಬಂಧಗಳು, ರಾಜಕೀಯ ರಚನೆ ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿರುವುದು. ರಾಜ್ಯವು ಸಾರ್ವಜನಿಕ ಟ್ರಸ್ಟ್ ಆಗಿರುವುದರಿಂದ ಅದಕ್ಕೆ ವಿರುದ್ಧವಾಗಿ ಹೋಗಬಾರದು. ಈ ಅಭಿಪ್ರಾಯವನ್ನು ಜಾನ್‌ಲಾಕ್‌ರ ಉದಾರವಾದ ತತ್ವದಲ್ಲಿ ಕಾಣಬಹುದು. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾರ್ವಜನಿಕ ಟ್ರಸ್ಟ್‌ಗೆ ವಿರುದ್ಧವಾಗಿ ರಾಜ್ಯವು ನಡೆದುಕೊಳ್ಳುವುದು. ಇದಕ್ಕೆ ಕಾರಣ ರಾಜ್ಯವು ಉತ್ಪನ್ನಗಳನ್ನು ತಯಾರು ಮಾಡುವ ಯಂತ್ರಗಳ ಒಡೆಯರೊಡನೆ ಮೈತ್ರಿತ್ವವನ್ನು ಹೊಂದಿರುವುದು. ಇದರಿಂದಾಗಿಯೇ ರಾಜ್ಯವು ನಿಷ್ಪಕ್ಷಪಾತವಾಗಿ ಇರುವುದಿಲ್ಲ. ಆದುದರಿಂದ ಪ್ರಸ್ತುತದಲ್ಲಿರುವ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕೆ ಬಂಡವಾಳಶಾಹಿಗಳು ಹೆದರುತ್ತಾರೆ. ಇದು ಎಲ್ಲಾ ಸಂಪ್ರದಾಯವಾದಿ ಸಮಾಜದಲ್ಲಿ ಕಂಡುಬರುವ ಜಾಡ್ಯ. ಬದಲಾವಣೆಯನ್ನು ಸಮಾಜದಲ್ಲಿ ಒಪ್ಪುವುದಿಲ್ಲ ಉತ್ಪನ್ನಗಳ ಮಾಲೀಕರು ತೀರಾ ಅಗತ್ಯ ಕಂಡು ಬಂದಾಗ ಪ್ರಜಾಪ್ರಭುತ್ವದ ಅಂಗರಚನೆಗಳನ್ನಾದರೂ ಬದಲಾಯಿಸಬಹುದು. ಆದರೆ ತಮ್ಮ ಹಿಡಿತದಲ್ಲಿರುವ ಅಧಿಕಾರ ವ್ಯಾಪ್ತಿಯನ್ನು ಕಡಿಮೆಮಾಡಲು ಇಷ್ಟಪಡುವುದಿಲ್ಲ.[12] ಇದರಿಂದ ಆಂತರಿಕವಾಗಿ ವರ್ಗಕಲಹಗಳು ಉಂಟಾಗುತ್ತದೆ. ಅಂತಿಮವಾಗಿ ಸಾಮ್ರಾಜ್ಯಶಾಹಿ ಯುದ್ಧವಾಗಲು ಕಾರಣವಾಗುತ್ತದೆ.

ಕೂಲಿಗಾರರ ಆಶೋತ್ತರಗಳನ್ನು ಶಾಂತಿಯುತವಾಗಿ ಬಗೆಹರಿಸದಿದ್ದಲ್ಲಿ, ರಷ್ಯಾದಲ್ಲಿ ಆದಂತೆ ನಮ್ಮಲ್ಲಿಯೂ ಕ್ರಾಂತಿಯೂ ಆದೀತೆಂದು ಹೇಳುತ್ತಾರೆ. ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳೆರಡರಲ್ಲಿಯೂ ಸ್ವಾತಂತ್ರ್ಯ ಮತ್ತು ಸಮಾನತೆ ಇಲ್ಲದಿದ್ದ ಪಕ್ಷದಲ್ಲಿ ಪ್ರತಿನಿಧಿಸರ್ಕಾರ ಕೇವಲ ಒಂದು ಬಾಯಿಮಾತಾಗಿರುತ್ತದೆ ಒಂದು ಉತ್ತಮ ಸರ್ಕಾರವೆಂದರೆ ಪ್ರತಿಯೊಬ್ಬ ವ್ಯಕ್ತಿಗೂ ಮೂಲಭೂತ ಹಕ್ಕುಗಳನ್ನು ಅನುಭವಿಸುವ ಅವಕಾಶವಿರಬೇಕು.

ರಾಜ್ಯಶಾಸ್ತ್ರದ ಅಧ್ಯಯನದಲ್ಲಿ ಎರಡು ವಿಧವಾದ ದೃಷ್ಟಿಕೋನಗಳನ್ನು ಕಾಣಬಹುದು. ಅವುಗಳು ಯಾವುವೆಂದರೆ ಮೌಲ್ಯಾತ್ಮಕ ಹಾಗೂ ಅನುಭವಾತ್ಮಕ. ಆಧುನಿಕ ರಾಜಕೀಯ ತತ್ವಶಾಸ್ತ್ರದ ವ್ಯಾಸಂಗದಲ್ಲಿ ಎರಡು ದೃಷ್ಟಿಕೋನಗಳಿಗೂ ಅವಕಾಶವುಂಟು. ಒಂದು ಸಮಾಜದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಆ ಸಮಾಜದ ಮೌಲ್ಯಗಳಿಗೂ ಅದರ ಇತಿಹಾಸದಲ್ಲಿ ಕಂಡು ಬರುವ ಮುಖ್ಯ ಘಟನೆಗಳು ಆ ಸಮಾಜದ ಮುಖ್ಯ ಲಕ್ಷಣಗಳನ್ನು ನಿರ್ಧರಿಸಿರುವುದನ್ನು ಕಾಣುತ್ತೇವೆ.

ಮೌಲ್ಯಾಧಾರಿತ ರಾಜ್ಯ ಸಿದ್ಧಾಂತದ ಮುಖ್ಯ ಗುರಿ ಸಮಾಜವು ಅಂಗೀಕರಿಸಿ

ದಂತಹ ಮನೌಲ್ಯಗಳ ತಳಹದಿಯ ಮೇಲೆ ಕಾನೂನು ಮತ್ತು ವಿಧಿಗಳನ್ನು ರಚಿಸುವುದು ಹಾಗೂ ಅವುಗಳನ್ನು ಕಡ್ಡಾಯವಾಗಿ ಜಾರಿಗೆ ತರುವುದು. ಇದರ ಬಗ್ಗೆ ಚರ್ಚೆ ಮಾಡುವಾಗ ವ್ಯಕ್ತಿಗೂ ರಾಜ್ಯಕ್ಕೂ ಇರುವ ಅನ್ಯೋನ್ಯತೆಯನ್ನು ತಿಳಿಯುವುದು ಅಗತ್ಯ. ವ್ಯಕ್ತಿಯೂ ರಾಜ್ಯದ ವಿಧಿಗಳು ಹಾಗೂ ಕಾನೂನುಗಳಿಗೆ ಅನುಗುಣವಾಗಿ ತನ್ನ ನೀತಿ ನಡವಳಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು. ರಾಜ್ಯವೂ ಕೂಡ ತಾನು ರಚಿಸುವ ಕಾನೂನುಗಳು, ವಿಧಿಗಳು, ವ್ಯಕ್ತಿಯೂ ಸಹಕಾರವನ್ನು ಪಡೆಯುವಂತಹದ್ದಾಗಿರಬೇಕು. ಎಂದರೆ ವ್ಯಕ್ತಿಯ ಸಾಹಿತ್ಯ ಮತ್ತು ರಾಜ್ಯದ ಅಧಿಕಾರಗಳ ಪರಸ್ಪರ ಪೂರಕವಾಗಿರಬೇಕು. ಹಾಗಿದ್ದರೇ ಮಾತ್ರ ರಾಜ್ಯದಲ್ಲಿ ಸಮೃದ್ಧಿ ಇರುತ್ತದೆ. ಇದು ಹೇಗೆ ಸಾಧ್ಯ ?

ಇದನ್ನು ತಿಳಿಯಲು ನಾವು ಹಕ್ಕುಗಳ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಹಕ್ಕುಗಳು ವ್ಯಕ್ತಿ ಮತ್ತು ರಾಜ್ಯದ ನಿಕಟ ಸಂಬಂಧಗಳನ್ನು ಸೂಚಿಸುತ್ತವೆ. ಹಕ್ಕುಗಳಿಲ್ಲದಿದ್ದರೆ ವ್ಯಕ್ತಿ ಸ್ವಾತಂತ್ರ್ಯವಿಲ್ಲ. ಆದುದರಿಂದ ಪ್ರತಿಯೊಂದು ರಾಜ್ಯದ ಲಕ್ಷಣಗಳನ್ನು ಪರಿಶೀಲಿಸುವಾಗ ಆ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಹಕ್ಕುಗಳನ್ನು ಪರಿಶೀಲಿಸಬೇಕೆಂದು ತಿಳಿಸುತ್ತಾರೆ. ಅವರ ಪ್ರಕಾರ ಸಿದ್ಧಾಂತವೇ ಸೃಜನಾತ್ಮಕ (ಕ್ರಿಯೇಟಿವ್) ರಾಜಕೀಯ ದೃಷ್ಟಿಯ ಹೆದ್ದಾರಿ. ಹಕ್ಕುಗಳು ವ್ಯಕ್ತಿಯ ಸ್ಥಾನ ಮಾನಗಳನ್ನು ರಾಜ್ಯದ ಮುಖ್ಯ ಉದ್ದೇಶಗಳನ್ನು ತಿಳಿಸುತ್ತವೆ. ಅವುಗಳನ್ನು ದೊರಕಿಸಿ ಕೊಡುವ ಮೂಲಕ ಸಮಸ್ತ ಜನಸ್ತೋಮದ ಯೋಗಕ್ಷೇಮವನ್ನು ನೋಡಿಕೊಳ್ಳುವ ಕಾರ್ಯವು ರಾಜ್ಯಕ್ಕೆ ಸುಲಭವಾಗಿರುತ್ತದೆ.[13]

ಸಮಾಜದಿಂದ ಮಾನ್ಯತೆಯನ್ನು ಪಡೆದು ರಾಜ್ಯದಿಂದ ಕಾಯಿದೆಯ ಮೂಲಕ ಅಥವಾ ಸಂವಿಧಾನದ ಮೂಲಕ ದೃಢೀಕರಿಸಲ್ಪಟ್ಟ ಯಾವ ಅವಕಾಶಗಳನ್ನು, ಸೌಲಭ್ಯಗಳನ್ನು ಅನುಭವಿಸಲು ವ್ಯಕ್ತಿಯು ಇಚ್ಛಿಸುತ್ತಾನೆಯೋ ಅದೇ ಅವನ ಹಕ್ಕುಗಳು. ಇವುಗಳಲ್ಲಿ ಮೂರು ಅಂಶಗಳು ಅಡಗಿವೆ.

(ಎ) ವ್ಯಕ್ತಿಗಳು ಇಷ್ಟಪಡುವ ಎಲ್ಲಾ ಅವಕಾಶಗಳು, ಸೌಲಭ್ಯಗಳು ಹಕ್ಕುಗಳಾಗುವುದಿಲ್ಲ. ವ್ಯಕ್ತಿಯು ಇಷ್ಟಪಡುವ ಅನುಕೂಲಗಳು, ಅವಕಾಶಗಳು ಸಾರ್ವತ್ರಿಕವಾಗಿರಬೇಕು, ಸ್ವಾರ್ಥದ್ದಾಗಿರಬಾರದು. ಅವುಗಳು ಸಾರ್ವತ್ರಿಕವಾಗಿ ಒಳ್ಳೆತನ್ನು ಕುರಿತಂತಹವುಗಳಾಗಿರಬೇಕು. ಈ ಅಭಿಪ್ರಾಯವನ್ನು ಟಿ. ಎಚ್. ಗ್ರೀನ್, ಅರ್ನೆಸ್ಟ ಬಾರ್ಕರ್ ವ್ಯಕ್ತಪಡಿಸಿದ್ದಾರೆ.*

(ಬಿ) ವ್ಯಕ್ತಿಯು ಇಚ್ಛಿಸುವ ಅನುಕೂಲಗಳು ಮತ್ತು ಅವಕಾಶಗಳು ಸಮಾಜದ ಮಾನ್ಯತೆಯನ್ನು ಪಡೆದಿರಬೇಕು.† ಪ್ರತಿಯೊಬ್ಬ ವ್ಯಕ್ತಿಯೂ

* Earnest Barker—Political Thought in England. 1848–1914.

† Ibid p. 25–26.

ಸ್ವಾರ್ಥವನ್ನು ತೊರೆದು ಎಲ್ಲರ ಒಳಿತನ್ನು ಎಂದರೆ ಸಾಮಾನ್ಯ ಒಳ್ಳಿತನ್ನು ಇಚ್ಛಿಸು ವುದರಿಂದ ಅವನು ಇಚ್ಛಿಸುವ ಬಯಕೆಗಳು ಹಕ್ಕುಗಳೆಂದು ಮಾನ್ಯತೆಯನ್ನು ಪಡೆದೇ ಪಡೆಯುವುವು.

(೩) ಹಕ್ಕುಗಳಿಗೆ ರಾಜ್ಯದ ಮಾನ್ಯತೆಯೂ ಇರತಕ್ಕದ್ದು. ಇಲ್ಲದಿದ್ದರೇ ಅವು ಕೇವಲ ನೀತಿ ವಾಕ್ಯಗಳಾಗುತ್ತವೆ. ರಾಜ್ಯದ ಮಾನ್ಯತೆಯೆಂದರೆ ಶಾಸನರೂಪ ವಾಗಿರಬೇಕು. ಸಮಾಜವು ಯಾವ ಹಕ್ಕುಗಳನ್ನು ಮಾನ್ಯತೆ ಮಾಡಿರುತ್ತವೆಯೋ ಅವುಗಳಿಗೆ ಕಾಯಿದೆಯ ರಕ್ಷಣೆಯನ್ನು ನೀಡಲು ಸರ್ಕಾರವು ಅವುಗಳನು, ದೃಢೀಕರಿಸಲು ಶಾಸನಗಳನ್ನು ಮಾಡುತ್ತದೆ.

ಆದುದರಿಂದ ಹಕ್ಕುಗಳಿಗೆ ತ್ರಿವಿಧವಾದ ಅಂಶಗಳು ಇರುತ್ತವೆ (1) ಅವುಗಳು ಸ್ವಾರ್ಥರಹಿತವಾದ ವ್ಯಕ್ತಿಯ ಹಾಗೂ ಸಮಾಜದ ಒಳ್ಳಿತನ್ನು ಅಪೇಕ್ಷಿಸುವುದರಿಂದ ಅವಕ್ಕೆ ನೀತಿಯುತವಾದ ತಳಹದಿ ಇರುತ್ತದೆ.

(2) ಅವುಗಳು ವ್ಯಕ್ತಿಯ ಶ್ರೇಯೋಭಿವೃದ್ಧಿಗೆ ಅಗತ್ಯವೆಂದು ಸಮಾಜವು ಅಂಗೀಕರಿಸಿರುವುದರಿಂದ ಅವು ವ್ಯಕ್ತಿಯ ಸಾಮಾಜಿಕ ಅಥವಾ ಸಾಂಘಿಕ ಜೀವನವನ್ನು ಸುಖಮಯವನ್ನಾಗಿ ಮಾಡಲು ಸಾಧ್ಯವಿರುವುದರಿಂದ ಅವುಗಳಿಗೆ ಸಾಮಾಜಿಕ ಅಸ್ತಿತ್ವವು ಇರುತ್ತದೆ.

(3) ಅವುಗಳಿಗೆ ಕಾಯಿದೆಯ ರಕ್ಷಣೆ ಇರುವುದರಿಂದಲೂ, ರಾಜ್ಯದಿಂದ ದೃಢೀಕರಣವಾಗಿರುವುದರಿಂದಲೂ ಅವು ರಾಜಕೀಯ ಕ್ಷೇತ್ರದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಇರುವಿಕೆಯನ್ನು ಭದ್ರಪಡಿಸುತ್ತವೆ.

ಮೇಲ್ಕಂಡ ಮೂರು ಅಂಶಗಳಲ್ಲಿ ರಾಜಕೀಯ ಅಂಶವು ಮುಖ್ಯವಾದುದು. ರಾಜ್ಯವು ವ್ಯಕ್ತಿಯ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ಸಮಾಜದ ಮೌಲ್ಯ ಗಳನ್ನು ಗೌರವಿಸಿ ತನ್ನ ಪರಮಾಧಿಕಾರದ ಚಲಾವಣೆಯ ಮೂಲಕ ಸಾರ್ವತ್ರಿಕ ಕ್ಷೇಮಾಭಿವೃದ್ಧಿಯನ್ನು ಜಾರಿಗೆ ತರುವುದರಿಂದ ರಾಜಕೀಯ ಅಂಶಕ್ಕೆ ಪ್ರಾಧಾನ್ಯತೆ ಇರುತ್ತದೆ. ಈ ಸಂದರ್ಭದಲ್ಲಿ ಲಾಸ್ಕಿಯವರು ಹಕ್ಕುಗಳ ಬಗ್ಗೆ ಕೆಳಕಂಡಂತೆ ವ್ಯಾಖ್ಯಾನ ಮಾಡುತ್ತಾರೆ.

"ಯಾವ ಸಾಮಾಜಿಕ ಜೀವನದ ವಾತಾವರಣವು ಇಲ್ಲದಿದ್ದಲ್ಲಿ ವ್ಯಕ್ತಿಯು ತನ್ನ ಪರಿಪೂರ್ಣತೆಯನ್ನು ಪಡೆಯಲು ಅಶಕ್ತನಾಗುತ್ತಾನೆಯೋ ಅಂತಹ ವಾತಾವರಣವೇ ಹಕ್ಕುಗಳಾಗುತ್ತದೆ. ಅರ್ಥಾತ್ ರಾಜ್ಯವು ವ್ಯಕ್ತಿಯು ಪರಿಪೂರ್ಣತೆ ಯನ್ನು ಕಂಡುಕೊಳ್ಳಲು ಸಹಾಯಕವಾಗುವಂಥ ವಾತಾವರಣವನ್ನು ಕಲ್ಪಿಸಬೇಕು. ಅಂದರೆ ಹಕ್ಕುಗಳ ಇರುವಿಕೆಯಿಂದ ಮಾತ್ರ ವ್ಯಕ್ತಿಯ ವ್ಯಕ್ತಿತ್ವವು ಪರಿಪೂರ್ಣ ವಾಗುತ್ತದೆ[14]

(1) ಹಕ್ಕುಗಳನ್ನು ರಾಜ್ಯವು ಸೃಷ್ಟಿಸುವುದಿಲ್ಲ. ಅವು ರಾಜ್ಯಕ್ಕೆ ಪೂರ್ವಭಾವಿ ಯಾಗಿರುವುವು. ಅವು ರಾಜ್ಯಕ್ಕೆ ಪೂರ್ವಭಾವಿಯಾಗಿದ್ದರೂ ಸಮಾಜಕ್ಕೆ ಪೂರ್ವಭಾವಿ

ಯಾಗಿಲ್ಲ. ಸ್ವಾರ್ಥರಹಿತವಾಗಿ ಸಾಮಾಜಿಕ ಕಲ್ಯಾಣ ದೃಷ್ಟಿಯಿಂದ ವ್ಯಕ್ತಿಗಳು ಅಪೇಕ್ಷಿಸುವ ಭಾಧ್ಯತೆಗಳು ಕ್ರಮೇಣವಾಗಿ ರೂಢಿ ಸಂಪ್ರದಾಯಗಳಲ್ಲಿ ಮಿಳಿತು ರಾಜ್ಯದ ಕಾಯಿದೆಗಳಿಂದ ದೃಢೀಕರಿಸಲ್ಪಟ್ಟಮೇಲೆ ಹಕ್ಕುಗಳಾಗುತ್ತವೆ. ಅವುಗಳನ್ನು ರಾಜ್ಯವು ಗುರುತಿಸಲಿ ಅಥವಾ ಬಿಡಲಿ ಅವುಗಳಿಂದ ರಾಜ್ಯದ ಕಾರ್ಯ ಚಟುವಟಿಕೆ ಗಳಿಗೆ ಸಮರ್ಥನೆ ದೊರೆಯುವುದರಿಂದ ಅವು ನಿರ್ದಿಷ್ಟವಾದ ಕಾಲದಲ್ಲಿ ಮತ್ತು ಸ್ಥಳದಲ್ಲಿ ಜನ್ಮತಾಳಿರಬೇಕು. ಕಾಲ ಧರ್ಮಗಳು ಬದಲಾಯಿಸಿದಂತೆ ವಿಧ ವಿಧವಾದ ಹಕ್ಕುಗಳನ್ನು ಜನರು ಆಶಿಸುತ್ತಾರೆ. ಅವುಗಳಿಗೆ ತಕ್ಕಂತೆ ರಾಜ್ಯವು ತನ್ನ ಶಾಸನಗಳ ಮೂಲಕ ಆಡಳಿತ ವಿಧಿನಿಯಮಗಳ ಮೂಲಕ ಇವುಗಳನ್ನು ಮಾನ್ಯ ಮಾಡುತ್ತವೆಯೇ ಹೊರತು ಅವುಗಳನ್ನು ಸೃಷ್ಟಿಸುವುದಿಲ್ಲ[15].

(೩) ಹಕ್ಕುಗಳು ಜೀವನದಲ್ಲಿ ಸೌಕರ್ಯಗಳನ್ನುಂಟು ಮಾಡಲು ಇರುವುದರಿಂದ ಅಂಥ ಸೌಕರ್ಯಗಳನ್ನು ಪಡೆಯಲು ವ್ಯಕ್ತಿಯು ತನ್ನ ಕರ್ತವ್ಯಗಳನ್ನು ಮಾಡಲೇ ಬೇಕು. ಹಕ್ಕುಗಳಲ್ಲಿ ಕರ್ತವ್ಯದ ಅಂಶಗಳೂ ಒಳಗೊಂಡಿರುತ್ತವೆ. ಇವೆರಡೂ ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ತನ್ನ ಸುಖ ಸೌಕರ್ಯಗಳಿಗೋಸ್ಕರ ಸಮಾಜದಿಂದ ಯಾವ ಸೌಲಭ್ಯಗಳನ್ನು ವ್ಯಕ್ತಿಯು ಅಪೇಕ್ಷಿಸುತ್ತಾನೋ ಅದೇ ರೀತಿ ಇತರರಿಗೂ ಅದೇ ಸೌಲಭ್ಯಗಳು ಇರಬೇಕೆಂದು ಅಪೇಕ್ಷಿಸಬೇಕು. ಇತರರ ಹಕ್ಕು ಗಳನ್ನು ಮಾನ್ಯ ಮಾಡಬೇಕು. ಅದು ಅವನ ಮುಖ್ಯ ಕರ್ತವ್ಯ. ಈ ಬಗ್ಗೆ ಲಾಸ್ಕಿ ಯವರು ಕೆಳಕಂಡಂತೆ ತಿಳಿಸುತ್ತಾರೆ.

" ನಮಗೆ ಹಕ್ಕುಗಳಿರುವಂತೆಯೇ ಕರ್ತವ್ಯಗಳೂ ಇರುತ್ತವೆ. ನಮ್ಮ ವ್ಯಕ್ತಿತ್ವ ವನ್ನು ರಕ್ಷಿಸಿಕೊಳ್ಳುವುದು ಮತ್ತು ಅದನ್ನು ವೃದ್ಧಿಗೊಳಿಸಿಕೊಳ್ಳುವುದು ನಮ್ಮ ಹಕ್ಕು. ಅಗಾಧವಾದ ಸಾಮಾಜಿಕ ಒತ್ತಡದ ನಡುವೆ ನಮ್ಮ ವಿಶೇಷವಾದ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಹಕ್ಕು ನಮಗೆ ಇದೆ. ಆದರೆ ನಮ್ಮ ಹಕ್ಕುಗಳು ಪ್ರಾಪ್ತವಾಗಿವೆ. ತನ್ಮೂಲಕ ನಾವು ನಮ್ಮ ವಿಶಿಷ್ಟ ಕೊಡುಗೆಯನ್ನು ಕೊಡಲು ಸಾಧ್ಯವಾಗುತ್ತದೆ. ನಮ್ಮ ಹಕ್ಕುಗಳು ಸಮಾಜದಲ್ಲಿ ಅಂತರ್ಗತವಾಗಿರುತ್ತದೆ. ಸಮಾಜದ ಹಾಗೂ ನಮ್ಮ ರಕ್ಷಣೆಗೋಸ್ಕರ ಅವು ಇರುವುವು. ನನ್ನ ಪರಿಪೂರ್ಣತೆಗೆ ಸಹಾಯಕವಾಗುವ ವಾತಾವರಣವನ್ನು ಕಲ್ಪಿಸುವುದರಿಂದ ಅದು ನಮ್ಮ ಮೇಲೆ ಒಂದು ಹೊಣೆಯನ್ನು ಹಾಕಿರುತ್ತದೆ. ಇತರರಿಂದ ನನ್ನನ್ನು ರಕ್ಷಿಸುವುದರಿಂದ ನಾನು ಕೂಡ ಇತರರ ಮೇಲೆ ದಾಳಿಮಾಡಬಾರದು ಅದೇ ಹೊಣೆ. ನನಗೆ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಿರುವುದರ ಅರ್ಥವೇನೆಂದರೆ, ನಾನು ಆ ಶಿಕ್ಷಣದಿಂದ ದೊರೆಯುವ ಫಲವನ್ನು ಸಮಾಜದ ಏಳಿಗೆಗಾಗಿ ವಿನಿಯೋಗಿಸಬೇಕು. ನಾನು ಕೇವಲ ರಾಜ್ಯಕ್ಕಾಗಿ ಇರುವುದಿಲ್ಲ ಎಂಬುದು ನಿಜ. ಆದರೆ ರಾಜ್ಯವೂ ಕೂಡ ನನಗೊಬ್ಬನಿಗೋಸ್ಕರ ಇರುವುದಿಲ್ಲ. ಯಾವುದನ್ನು ನಾನು ನನ್ನ ಹಕ್ಕೆಂದು ವಾದಿಸುತ್ತೇನೆಯೋ ಅದು ಎಲ್ಲರ ಜೊತೆಯಲ್ಲಿ ನಾನು ಸಾಮಾನ್ಯ ಒಳಿತಿಗೋಸ್ಕರ

ಅನಿಸುವಂಥದ್ದು .... ಹಕ್ಕುಗಳು ಕರ್ತವ್ಯಗಳು ಸಾಮಾಜಿಕ ಗುರಿಗಳಲ್ಲಿ ಪರ್ಯಾಯಗೊಳ್ಳುತ್ತವೆ. ಸಮಾಜಕ್ಕೆ ವಿರೋಧ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಯಾವ ಹಕ್ಕುಗಳಿರುವುದಿಲ್ಲ. ಸಾರ್ವಜನಿಕ ಶ್ರೇಯಸ್ಸಿಗೆ ನನ್ನ ಕೊಡುಗೆಯನ್ನು ನೀಡಲು ನನಗೆ ಕೊಟ್ಟಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ನನ್ನ ಕರ್ತವ್ಯ ನಾನು ಉತ್ತಮ ಪೌರನಾಗಿ ಸಮಾಜದ ಸಾರ್ವತ್ರಿಕ ಏಳಿಗೆಗಾಗಿ ಮಾಡಬೇಕಾದ ಕರ್ತವ್ಯಗಳನ್ನು ಮಾಡು ವುದರಿಂದ ಮಾತ್ರ ಹಕ್ಕುಗಳನ್ನು ಅನುಭವಿಸುತ್ತಿದ್ದೇನೆಂದೂ ತಿಳಿಯಬೇಕು. ಯಾರು ತಮ್ಮ ಕರ್ತವ್ಯಗಳನ್ನು ಮಾಡುವುದಿಲ್ಲವೋ ಅವರು ಹಕ್ಕುಗಳಿಗೆ ಬಾಧ್ಯರಲ್ಲ. ನನ್ನ ವ್ಯಕ್ತಿತ್ವವು ಸಮಾಜದ ವ್ಯವಸ್ಥೆಗೆ ಅನುಕೂಲವಾಗಿರಬೇಕು. ಅಂಥ ವ್ಯಕ್ತಿತ್ವದ ಬೆಳವಣಿಗೆಗೆ ಸಮಾಜವು ರಾಜ್ಯವು ಕಲ್ಪಿಸಿಕೊಡುವ ಅವಕಾಶಗಳಿಗೆ ಹಕ್ಕುಗಳೆನ್ನ ಬೇಕು. ಸಾರ್ವಜನಿಕ ಹಿತಾಸಕ್ತಿಗಳಿಗೋಸ್ಕರ ನನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳ ಬೇಕು.[16]

ಲಾಸ್ಕಿಯವರು ಹಕ್ಕುಗಳನ್ನು ಎರಡು ರೀತಿಯಲ್ಲಿ ನೋಡುತ್ತಾರೆ. ಪ್ರಾರಂಭ ದಲ್ಲಿ ಅವರು ಟಿ. ಎಚ್. ಗ್ರೀನ್ ಮತ್ತು ಜಾನ್ ಸ್ಟುಯರ್ಟ್ ಮಿಲ್‌ರಂತೆ ಉದಾರ ವಾದೀ ಪಂಥಕ್ಕೆ ಸೇರಿದವರಾಗಿದ್ದರು. ವ್ಯಕ್ತಿ ಸ್ವಾತಂತ್ರ್ಯವೇ ಆ ಪಂಥದ ಮುಖ್ಯ ತತ್ವ. ಈ ಕಾರಣಕ್ಕಾಗಿ ಅವರು ಪ್ರಾರಂಭದಲ್ಲಿ ಬಹುತ್ವವಾದಿ ಸಿದ್ಧಾಂತವನ್ನು ಪುಷ್ಟೀಕರಿಸಿದರು. ಅಧಿಕಾರದ ವಿಕೇಂದ್ರೀಕರಣವೇ ಹಕ್ಕುಗಳ ಭದ್ರತೆಗೆ ಸರಿಯಾದ ಕ್ರಮವೆಂದೂ ತಿಳಿಸಿದ್ದರು. ನಂತರ ಅವರು ಸಮಾಜವಾದಿ ಪಂಥವನ್ನು ಅನುಮೋದಿಸಲು ತೊಡಗಿದ ಮೇಲೆ ಕೈಗಾರಿಕೆಗಳ ರಾಷ್ಟ್ರೀಕರಣವು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನುಂಟು ಮಾಡುವುದೆಂದೂ, ತನ್ಮೂಲಕ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯಸಮ್ಮತವಾದ ಹಕ್ಕುಗಳು ದೊರೆಯುವುದೆಂದೂ ವಾದಿಸಿದರು. ಜಾನ್ ಸ್ಟುಯರ್ಟ್ ಮಿಲ್‌ರಂತೆ ವಿಚಾರ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ಮತ್ತೆ ಕೆಲವು ಸಂದರ್ಭದಲ್ಲಿ ಪ್ರೌಡನ್‌ರಂತೆ ಆಸ್ತಿಯ ಹಕ್ಕನ್ನು ತೊಡೆದುಹಾಕಬೇಕೆಂದೂ, ಮತ್ತೆ ಕೆಲವು ವೇಳೆಯಲ್ಲಿ ಉತ್ಪನ್ನಗಳ ಸಾಧನಗಳನ್ನು ರಾಷ್ಟ್ರೀಕರಿಸಿ ಪ್ರಜಾಸತ್ತಾತ್ಮಕ ಸಮಾಜವಾದಿ ತತ್ವವನ್ನು ಎತ್ತಿಹಿಡಿದರು. ಇಷ್ಟಾದರೂ ಅವರು ವ್ಯಕ್ತಿಸ್ವಾತಂತ್ರ್ಯದ ಮೂಲ ಸಿದ್ಧಾಂತವನ್ನು ಬಿಟ್ಟುಕೊಡಲಿಲ್ಲ. ಮಾರ್ಕ್ಸವಾದವನ್ನು ಬಹುಮಟ್ಟಿಗೆ ಅಂಗೀಕರಿಸಿದರೂ ಅವರು ಸರ್ವಾಧಿಕಾರ ತತ್ವವನ್ನು ಒಪ್ಪಲಿಲ್ಲ.

ಲಾಸ್ಕಿಯವರು ಹಕ್ಕುಗಳ ಬಗ್ಗೆ, ಇದುವರೆಗೂ ತತ್ವಜ್ಞಾನಿಗಳೂ ಪ್ರತಿಪಾದಿಸಿದ್ದ ಅನೇಕ ಸಿದ್ಧಾಂತಗಳನ್ನು ತಳ್ಳಿ ಹಾಕಿದ್ದಾರೆ. ಹಕ್ಕುಗಳೆಂದರೆ ಮಾನವ ವರ್ಗವು ತನ್ನ ಶೈಶಾವಸ್ಥೆಯಲ್ಲಿ ಹೊಂದಿದ್ದ ಹಾಗೂ ಕಾಲ ಸರಿದಂತೆ ಕ್ಷೀಣಿಸಿದಂಥ ಸ್ಥಿತಿಯ ಪುನರುಜ್ಜೀವನದಲ್ಲಿ; ನಾವು ಹಿಂದಿರುಗಿ ಹೋಗಬೇಕಾದಂತಹ ಸ್ವರ್ಣಯುಗ ಯಾವುದೂ ಇಲ್ಲ[17]. ಆಧುನಿಕ ರಾಜ್ಯವು ಹಿಂದಿನ ರಾಜ್ಯದಂತೆ ಇರುವುದಿಲ್ಲ. ಹಕ್ಕು

ಗಳು ನಾಗರೀಕತೆಯ ಜೊತೆಯಲ್ಲಿಯೇ ವಿಕಾಸಗೊಂಡ ನಾಗರೀಕ ಸಮಾಜದ ಜನಸ್ತೋಮದ ಅನುಕೂಲಕ್ಕಾಗಿ ಉದ್ಭವಿಸಿರುವ ಆವಶ್ಯಕತೆಗಳು, ಆಧುನಿಕ ಪ್ರಜಾಪ್ರಭುತ್ವದ ರಾಜ್ಯಗಳ ಸಂಗಡ ಅದರೊಡನೆ ಬೆಳೆದು ಬಂದ ವಿಕಸಿತ ಆಶೋತ್ತರಗಳ ಗುಚ್ಛ.

ಸ್ವಾಭಾವಿಕ ಹಕ್ಕುಗಳೆಂಬ ಸಿದ್ಧಾಂತವನ್ನು ತಳ್ಳಿಹಾಕುತ್ತಾರೆ. ವೃದ್ಧಿಯಾಗುತ್ತಿರುವ ಸಾಮಾಜಿಕ ಜೀವನದ ಪರಿಣಾಮವಾಗಿ ಉದ್ಭವಿಸುವಂತಹ ಹಕ್ಕುಗಳಿಗೆ ಇಂಥ ಸಿದ್ಧಾಂತವು ತೀರಾ ವ್ಯತಿರಿಕ್ತವಾಗಿದೆ. ಹಕ್ಕುಗಳು ಪ್ರಗತಿಶೀಲವಾದವು. ಅವುಗಳು ಎಲ್ಲಾ ಕಾಲದಲ್ಲಿಯೂ ಒಂದೇ ರೀತಿ ಇರುವುದಿಲ್ಲ. ಪ್ರಕೃತಿಸಿದ್ಧವಾದ ಹಕ್ಕುಗಳು ಎಂಬುದು ಅರ್ಥವಿಲ್ಲದವುಗಳು. ಸಮಾಜದ ಪೂರ್ವಭಾವಿ ಹಕ್ಕು ಯಾವುದೂ ಇಲ್ಲ ಸ್ವಾಭಾವಿಕ ಹಕ್ಕುಗಳೆಂದರೆ ಅವು ಶಾಶ್ವತವಾಗಿ ಇರಲೇಬೇಕು. ಆದರೆ ಕಾಲ ಸರಿದಂತೆ ಹಕ್ಕುಗಳ ಬೇಡಿಕೆ ಮತ್ತು ಪೂರೈಕೆಗಳೂ ಬದಲಾಯಿಸುತ್ತವೆ.[18] ಉದಾಹರಣೆಗೆ ಪ್ರಾಚೀನ ಗ್ರೀಸ್‌ನಲ್ಲಿ ಗುಲಾಮಗಿರಿ ಪದ್ಧತಿ ಇದ್ದಿತು. ಪೌರನಿಗೆ ಗುಲಾಮರನ್ನು ಇಟ್ಟುಕೊಳ್ಳುವ ಹಕ್ಕು ಇದ್ದಿತು. ಇದು ಸ್ವಾಭಾವಿಕವೆಂದು ಅರಿಸ್ಟಾಟಲನೂ ತಿಳಿಸುತ್ತಾನೆ. ಆದರೆ ಆಧುನಿಕ ಕಾಲದಲ್ಲಿ ಇದನ್ನು ಯಾರೂ ಒಪ್ಪುವುದಿಲ್ಲ. ಇದು ಸ್ವಾಭಾವಿಕವೇ ಆಗಿದ್ದಲ್ಲಿ ಈ ಹಕ್ಕು ಇಂದಿಗೂ ಜಾರಿಯಲ್ಲಿರುತ್ತಿದ್ದಿತು. ಆದುದರಿಂದ ಒಂದು ಕಾಲದಲ್ಲಿ ಯಾವುದನ್ನು ಸ್ವಾಭಾವಿಕ ಹಕ್ಕೆಂದು ಭಾವಿಸಿದ್ದರೋ ಅದು ಈ ಕಾಲದಲ್ಲಿ ಹಾಗೆ ಉಳಿದಿಲ್ಲ ಮತ್ತು ಆ ಭಾವನೆಯೂ ಇಲ್ಲ.

ಹಾಬ್ಸನ ಪ್ರಕಾರ ಮನುಷ್ಯನ ಆಸೆಗಳನ್ನು ಈಡೇರಿಸುವಂತಹ ಸಾಮರ್ಥ್ಯವೇ ಹಕ್ಕು. ಇದನ್ನು ಲಾಸ್ಕಿಯವರು ತಿರಸ್ಕರಿಸುತ್ತಾರೆ.[19] ಯಾವ ಸಭ್ಯತೆಯ ಸಮಾಜವೂ ಖೂನಿ ಅಥವಾ ಮಾನವ ವಧೆಯ ಆಸೆಯನ್ನು ಮಾನ್ಯತೆ ಮಾಡುವುದಿಲ್ಲ. ಆದುದರಿಂದ ಅದು ಹಕ್ಕಾಗಲಾರದು. ಮನುಷ್ಯನು ಬದುಕಿರಬೇಕಾದರೆ ಅವನ ಜೀವಕ್ಕೆ ಭದ್ರತೆ ಇರಲೇಬೇಕು ಆದುದರಿಂದ ಜೀವಿಸುವ ಹಕ್ಕು ಸ್ಥಿರವಾಗಿರಬೇಕಾದರೆ ನಮ್ಮ ಆಸೆಆಕಾಂಕ್ಷೆಗಳ ಮೇಲೆ ಹತೋಟಿ ಇರಲೇಬೇಕು.

ಹಾಬ್ಸ್ ಮತ್ತು ಬೆಂಥಾಮ್ ಪ್ರಕಾರ ಹಕ್ಕುಗಳು ರಾಜ್ಯದ ಸೃಷ್ಟಿಯಾಗಿವೆ. ಅವುಗಳನ್ನು ಕಾಪಾಡುವುದು ಅವುಗಳ ಅರ್ಥ ಸ್ವರೂಪಗಳನ್ನು ನಿರ್ಧರಿಸುವುದೂ ರಾಜ್ಯದ ಹೊಣೆ. ಬೆಂಥಾಮ್‌ರ ಪ್ರಕಾರ ನೈಸರ್ಗಿಕ ಹಕ್ಕುಗಳೆಂಬ ಮಾತು ಅವಿವೇಕದ ಪಾಂಡಿತ್ಯವನ್ನು ಸೂಚಿಸುತ್ತದೆ. ಎಲ್ಲಾ ಹಕ್ಕುಗಳು ರಾಜ್ಯದಿಂದ ಉಗಮವಾಗಿರುವುದರಿಂದ ರಾಜ್ಯದ ವಿರುದ್ಧ ಯಾವ ಹಕ್ಕು ವ್ಯಕ್ತಿಗಿರುವುದಿಲ್ಲ.

ಲಾಸ್ಕಿಯವರದು ಇದೊಂದು ಆಕರ್ಷಕ ಸಿದ್ಧಾಂತ ಸಾಮಾನ್ಯವಾಗಿ ನ್ಯಾಯಾಲಯಗಳ ಗಮನಕ್ಕೆ ತೆಗೆದುಕೊಳ್ಳುವುದು ರಾಜ್ಯದಿಂದ ಗುರುತಿಸಲ್ಪಟ್ಟ ಹಕ್ಕುಗಳನ್ನು ಮಾತ್ರ. ಕಾನೂನುಬದ್ಧ ಹಕ್ಕುಗಳ ಸಿದ್ಧಾಂತವನ್ನು ಸ್ವಲ್ಪಮಟ್ಟಿಗೆ ಒಪ್ಪಿದರೂ ರಾಜಕೀಯ ತತ್ವಶಾಸ್ತ್ರಕ್ಕೆ ಅದರ ಕೊಡುಗೆ ಅಲ್ಪವಾದುದು. ಕಾನೂನು

ಬದ್ಧ ಹಕ್ಕುಗಳ ಸಿದ್ಧಾಂತವು ಒಂದು ರಾಜ್ಯದ ಲಕ್ಷಣಗಳನ್ನು ಸೂಚಿಸಬಹುದು. ಒಬ್ಬ ಕಿವುಡನಿಗೆ ಅಥವಾ ಮೂಕನಿಗೆ ಕಾಯಿದಾತ್ಮಕವಾಗಿ ವಿವಾಹವಾಗುವ ಹಕ್ಕು ಇದೆ ಎಂದರೆ ಅವನ ಆ ಹಕ್ಕನ್ನು ನಿರಾಕರಿಸಲು ಯಾವ ಚರ್ಚ್‌ಗೂ ಅಥವಾ ರಿಜಿಸ್ಟ್ರಾರ್‌ಗೂ ಅಧಿಕಾರವಿಲ್ಲ ಎಂದರ್ಥ ಮಾತ್ರ. ಹಾಗೆಂದ ಮಾತ್ರಕ್ಕೆ ಅವನಿಗೆ ಅಂಥಹ ಹಕ್ಕು ಇರಲೇಬೇಕೆಂಬ ಅರ್ಥ ಬರುವುದಿಲ್ಲ. ಲಾಸ್ಕಿಯವರು ಬೆಂಥಾಮ್ ಮತ್ತು ಆಸ್ಟಿನ್ನರಂತೆ ಕಾಯಿದೆಯೂ ದಯಪಾಲಿಸುವ ರಿಯಾಯಿತಿಗಳೇ ಹಕ್ಕುಗಳು ಎಂಬುದನ್ನು ಒಪ್ಪುವುದಿಲ್ಲ. ಕಾಯಿದೆಗಳು ಹಕ್ಕುಗಳನ್ನು ಗುರುತಿಸುತ್ತವೆಯೇ ಹೊರತು ಅವುಗಳನ್ನು ಸೃಷ್ಟಿಸುವುದಿಲ್ಲ. ಕಾನೂನಿನ ಪ್ರಕಾರ ಮತ್ತು ಅದರ ರಕ್ಷಣೆ ಯಿಂದ ಪ್ರತಿಯೊಬ್ಬ ವ್ಯಕ್ತಿಯೂ ಹಕ್ಕುಗಳನ್ನು ಊರ್ಜಿತಪಡಿಸಿಕೊಳ್ಳುತ್ತಾನೆ. ಅವನ ಹಕ್ಕುಗಳಿಗೆ ರಕ್ಷಣೆ ಕೊಡುವುದು ರಾಜ್ಯದ ಕರ್ತವ್ಯ. ಈ ಕರ್ತವ್ಯವನ್ನು ಪಾಲಿಸುವವರೆಗೂ ರಾಜ್ಯಕ್ಕೆ ಅದರ ಕಾಯಿದೆಗಳಿಗೆ ನಿಷ್ಠೆಯನ್ನು ತೋರಿಸುವುದು ವ್ಯಕ್ತಿಯ ಆದ್ಯ ಕರ್ತವ್ಯ. ರಾಜ್ಯವು ತನ್ನ ಕರ್ತವ್ಯವನ್ನು ಎಂದರೆ ವ್ಯಕ್ತಿಗಳ ಹಕ್ಕನ್ನು ರಕ್ಷಿಸದೇಹೋದಲ್ಲಿ ಅಥವಾ ಹಕ್ಕುಗಳ ಮೇಲೆ ದಾಳಿ ಮಾಡಿದಲ್ಲಿ ಆಗ ವ್ಯಕ್ತಿಗೆ ರಾಜ್ಯಕ್ಕೆ ಅವಿಧೇಯತೆಯನ್ನು ತೋರಿಸುವ ಹಕ್ಕು ಇರುತ್ತದೆ.[20]

ನಾಗರೀಕ ಜೀವನವು ಉದ್ದೇಶಪೂರಿತವಾಗಲು ಸಮಾಜದ ಆದರ್ಶವು ಅದರ ವ್ಯಕ್ತಿಗಳ ಆದರ್ಶವನ್ನು ಅಳವಡಿಸಿಕೊಂಡಿರಬೇಕು. ಸಮಾಜವೂ, ರಾಜ್ಯವೂ ವ್ಯಕ್ತಿಗಳ ಜೀವನವನ್ನು ಸುಖಮಯವನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ. ಆದರೆ ಅದೇ ಒಂದು ಕಾರಣದಿಂದ ಅದು ವ್ಯಕ್ತಿಗಳ ಮೇಲೆ ತನ್ನ ಅಮಿತವಾದ ಅಧಿಕಾರವನ್ನು ದರ್ಪವನ್ನೂ ಚಲಾಯಿಸಲಾಗದ ಅದಕ್ಕೆ ವ್ಯಕ್ತಿಯ ಸ್ವಾತಂತ್ರ್ಯವನ್ನು ಕುಂಟಿತ ಗೊಳಿಸುವ ಅಧಿಕಾರ ಇರುವುದಿಲ್ಲ. ಈ ವಿಷಯದಲ್ಲಿ ಲಾಸ್ಕಿಯವರ ಅಭಿಪ್ರಾಯವು ಸ್ವಲ್ಪಮಟ್ಟಿಗೆ ಗ್ರೀನ್‌ರ ಅಭಿಪ್ರಾಯವನ್ನೇ ಅನುಮೋದಿಸಿದ್ದಾರೆ.

ಗ್ರೀನರ ಪ್ರಕಾರ ವ್ಯಕ್ತಿತ್ವವು ಬೆಳೆಯಲು ವಿಕಾಸಗೊಳ್ಳಲು ರಾಜ್ಯದ ಅಗತ್ಯ ಇರುತ್ತದೆ. ಆದರೂ ವ್ಯಕ್ತಿಗೆ ಕೆಲವಾರು ಹಕ್ಕುಗಳಿರುತ್ತವೆ. ಹಕ್ಕುಗಳು ರಾಜ್ಯದ ಕೃಪಾಶ್ರಯದಿಂದ ಬಂದವುಗಳಲ್ಲ. ವ್ಯಕ್ತಿಯು ಸ್ವಯಂಪ್ರಜ್ಞೆಯುಳ್ಳವನು. ಆ ಪ್ರಜ್ಞೆ ಇರುವುದರಿಂದಲೇ ಅವನು ತನ್ನ ಕರ್ತವ್ಯಗಳನ್ನು ಸಂತೋಷದಿಂದ ಮಾಡುವನು. ಆದರೆ ಇಂಥ ಸಂದರ್ಭದಲ್ಲಿ ಅವನಿಗೆ ಹಲವಾರು ಅಡಚಣೆಗಳು ಬರಬಹುದು. ಆ ಅಡಚಣೆಗಳನ್ನು ನಿವಾರಿಸಿ ವ್ಯಕ್ತಿಯ ನೈತಿಕ ಜೀವನವನ್ನು ಸಾಧ್ಯವಾಗುವಂತೆ ಮಾಡುವುದೇ ರಾಜ್ಯದ ಮುಖ್ಯ ಕರ್ತವ್ಯ. ರಾಜ್ಯದ ಗುರಿ ಸಾರ್ವತ್ರಿಕ ಹಿತಸಾಧನೆ ಯಾಗಿರುತ್ತದೆ. ಆದುದರಿಂದ ಅದು ಜಾರಿಗೆ ತರುವ ಕಾಯಿದೆಗಳು ಈ ಗುರಿಯನ್ನು ಕುರಿತುದಾಗಿದೆ. ಪ್ರಜೆಗಳು ನಿಷ್ಠೆಯನ್ನು ತೋರಿಸುವುದೂ ಈ ಕಾರಣಕ್ಕಾಗಿ. ಪರಂತು ರಾಜ್ಯದ ಕಾಯಿದೆಗಳಾಗಲೀ, ಆಜ್ಞೆಗಳಾಗಲೀ ಈ ಧ್ಯೇಯ ಉದ್ದೇಶಗಳನ್ನು ಮರೆತು ಅವುಗಳಿಗೆ ವಿರುದ್ಧವಾಗಿ ವರ್ತಿಸಿದಾಗ ಪ್ರಜೆಗಳಿಗೆ ಕಾನೂನನ್ನು

ವಿರೋಧಿಸುವ ಹಕ್ಕು ಇರುತ್ತದೆ. ರಾಜ್ಯನಿಷ್ಠೆಯು ಮೂಲ ಇಚ್ಛೆಯೇ ಹೊರತು ಬಲಾತ್ಕಾರವಲ್ಲ ಎಂಬುದೇ ಗ್ರೀನ್‌ರ ಮುಖ್ಯ ಆದೇಶ. ಆದರೆ ಕಾನೂನನ್ನು ಯಾವ ಸಂದರ್ಭದಲ್ಲಿ ಮಾತ್ರ ಉಲ್ಲಂಘನೆ ಮಾಡಬಹುದೆಂಬುದನ್ನು ಗ್ರೀನರು ಚರ್ಚಿಸಿದ್ದಾರೆ. ಯಾವುದಾದರೂ ಒಂದು ಕಾಯಿದೆಯೂ ನೀತಿಬಾಹಿರವಾದುದೆಂದೂ ಕಂಡು ಬಂದಾಗ ಅದನ್ನು ಪ್ರತಿಭಟಿಸಬಹುದು ಆದರೆ ಕಾನೂನಿನ ಉಲ್ಲಂಘನೆಯಿಂದ ಸಮಾಜಕ್ಕೆ ಹಾನಿಯುಂಟಾಗದಂತೆ ಎಚ್ಚರಿಕೆ ವಹಿಸಬೇಕು. ಎಂದರೆ ಆತನ ಉಲ್ಲಂಘನೆ ಯಿಂದ ಸಮಾಜದ ಕಲ್ಯಾಣವು ಖಚಿತವಾದಲ್ಲಿ ಮಾತ್ರ ಅವನು ಅಂಥ ಕ್ರಮವನ್ನು ಕೈಗೊಳ್ಳಬಹುದು. ಗ್ರೀನ್‌ರ ಪ್ರಕಾರ "ಮಾನವ ಪ್ರಜ್ಞೆಯು ಸ್ವಾತಂತ್ರ್ಯವನ್ನು ಕೋರುತ್ತದೆ. ಸ್ವಾತಂತ್ರ್ಯವು ಹಕ್ಕುಗಳಲ್ಲಿ ಅಡಕವಾಗಿರುತ್ತದೆ. ಈ ಹಕ್ಕುಗಳು ರಾಜ್ಯದಿಂದ ದೃಡೀಕರಿಸಲ್ಪಟ್ಟವುಗಳು". ಆದುದರಿಂದ ಮಾನವನ ನೀತಿಯುತವಾದ ಪ್ರಜ್ಞೆಯು ನಿಷ್ಠೆಯ ಮೂಲವಾಗಿರುತ್ತದೆ. ಹೀಗೆ ತರ್ಕಮಾಡಿದ ಗ್ರೀನ್‌ರು ಬ್ರಿಟಿಷ್ ಉದಾರವಾದಿ ಸಿದ್ಧಾಂತವನ್ನು ತಮ್ಮ ಆದರ್ಶವಾದಿ ಸಿದ್ಧಾಂತದೊಡನೆ ವಿಲೀನ ಮಾಡುತ್ತಾರೆ. ಅವರು ಲಾಕ್‌ನಂತೆ ರಾಜ್ಯದ ಕಾಯಿದೆಗಳನ್ನು ಉಲ್ಲಂಘನೆ ಮಾಡುವ ಹಕ್ಕು ಜನಸ್ತೋಮಕ್ಕೆ ಇರುವುದೆಂದು ತಿಳಿಸಿದರೂ, ಆ ಹಕ್ಕನ್ನು ಕೇವಲ ವಿಶೇಷ ಸಂದರ್ಭದಲ್ಲಿ ಮಾತ್ರ ಚಲಾಯಿಸಬಹುದೆಂದೂ ತಿಳಿಸಿದ್ದಾರೆ.

ಮೇಲ್ಕಂಡ ಗ್ರೀನ್‌ರ ಅಭಿಪ್ರಾಯಗಳನ್ನು ಲಾಸ್ಕಿಯವರ ಚಿಂತನೆಗಳಲ್ಲೂ ಕಾಣಬಹುದು. ಆದರೆ ಕೆಲವು ವಿಷಯಗಳಲ್ಲಿ ಲಾಸ್ಕಿಯವರ ಚಿಂತನೆಯಲ್ಲಿ ಭಿನ್ನತೆ ಯನ್ನು ಕಾಣಬಹುದು.

ಲಾಸ್ಕಿಯವರ ಅಭಿಪ್ರಾಯದಲ್ಲಿ ರಾಜ್ಯದ ಕಾಯಿದೆಗಳಿಗೆ ನಿಷ್ಠೆಯನ್ನು ತೋರುವುದು ಅಥವಾ ಉಲ್ಲಂಘನೆ ಮಾಡುವುದು ವ್ಯಕ್ತಿಯ ತೀರ್ಪಿಗೆ ಸಂಬಂಧ ಪಟ್ಟದ್ದಾಗಿದೆ. ಅಂತಿಮತೀರ್ಪು ವ್ಯಕ್ತಿಯ ಅಂತರ್ವಾಣಿಗೆ ಸಂಬಂಧಿಸಿದ್ದು. ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಸಂದರ್ಭದಲ್ಲಿ ರಾಜ್ಯದ ಕಾರ್ಯವು ಸರಿಯೆಂದು ತೀರ್ಮಾನಿಸಿದಾಗ ತನ್ನ ನಿಷ್ಠೆಯನ್ನು ತೋರಿಸುವುದು. ಪ್ರತಿಯೊಂದು ಸಮಾಜದಲ್ಲಿಯೂ ಬಲಾತ್ಕಾರ ಮಾಡುವ ಶಕ್ತಿಯೂ ಹೊಂದಿರಬೇಕೆಂಬುದೇ ಮುಖ್ಯವಲ್ಲ[21] ಅದರ ಇರುವಿಕೆಯೇ ನಿಷ್ಠೆಗೆ ಕಾರಣಭೂತವಲ್ಲ. ರಾಜ್ಯದ ಕಾರ್ಯಗಳು ಮತ್ತು ಅದರ ಚಟುವಟಿಕೆಗಳು ಮುಂತಾದವುಗಳನ್ನು ಜನತೆಯೂ ಏಕೆ ಮಾನ್ಯಮಾಡುತ್ತಾರೆಂದರೆ ಅವುಗಳ ಮೂಲಕ ತಾವು ಯಾವುದನ್ನು ಸದುದ್ದೇಶವೆಂದೂ ತಿಳಿದಿರುತ್ತಾರೋ ಅದು ಈಡೇರಿಸಲು ರಾಜ್ಯದ ಕಾರ್ಯಗಳು ಕಾಯಿದೆಗಳು ಸಾಧಕಗಳಾಗುತ್ತವೆ ಎಂಬ ಅರಿವು ಇರುವುದರಿಂದ ಅರ್ಥಾತ್ ರಾಜ್ಯದ ಕಾರ್ಯಗಳು ಪ್ರಜೆಗಳು ತಿಳಿದಿರುವಂತಹ ಸದುದ್ದೇಶಗಳನ್ನು ನೆರವೇರಿಸುವ ಬಗ್ಗೆ. ಜನತೆಯಲ್ಲಿ ಖಂಡಿತವಾದ ನಂಬಿಕೆ ಇರಬೇಕು.*

* State in Theory and Practice By Laski p–17.

ಒಟ್ಟಿನಲ್ಲಿ ಎರಡು ಮುಖ್ಯವಾದ ಅಂಶಗಳು ಇದರಿಂದ ವೇದ್ಯವಾಗುತ್ತವೆ. (1) ರಾಜ್ಯವು ತನ್ನ ಉದ್ದೇಶ, ಗುರಿಗಳನ್ನು ಸಾಧಿಸಲು ಜನತೆಯ ಸಹಕಾರ ನಿಷ್ಠೆಯನ್ನು ಕೋರುತ್ತದೆ ಆದ್ದರಿಂದ ಅದರ ಉದ್ದೇಶಿತ ಗುರಿಗಳು ಪ್ರಜಾಪ್ರಿಯವಾಗಿರಬೇಕು, ಹಾಗಿಲ್ಲದಿದ್ದಲ್ಲಿ ಅವಿಧೇಯತೆಗೆ ಅದು ದಾರಿ ಮಾಡಿಕೊಡುತ್ತದೆ.

(2) ಕಾಯಿದೆಯ ಮೂಲ ನೈತಿಕ ಪ್ರಜ್ಞೆ ಹಾಗೂ ಸಾಮಾಜಿಕ ಮೌಲ್ಯಗಳು. ಅವುಗಳನ್ನು ಅನುಸರಿಸುವಂತೆ ಕಾಯಿದೆಯನ್ನು ರಚಿಸಬೇಕು. ಕಾಯಿದೆಯು ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿರಬೇಕೇ ಹೊರತು, ನ್ಯಾಯವು ಕಾಯಿದೆಯ ಚೌಕಟ್ಟಿನಲ್ಲಿ ಮಾತ್ರ ಸೀಮಿತವಾಗಿರಬಾರದು.

ವ್ಯಕ್ತಿಗೆ ದೊರಕಬೇಕಾದ ಹಕ್ಕುಗಳನ್ನು ನಿರೂಪಿಸುವುದರಲ್ಲಿ ಉದಾರವಾದಿ ಹಾಗೂ ವ್ಯಕ್ತಿವಾದಿ ಚಿಂತನಕಾರರೂ ಹಾಕಿರುವ ಮಾದರಿಯನ್ನು ಲಾಸ್ಕಿಯವರು ಅನುಸರಿಸುವುದಿಲ್ಲ. ಈಗಿನ ಸ್ಥಿತಿಗತಿಗಳಿಗೆ ವ್ಯಕ್ತಿವಾದವು ಸರಿಹೊಂದುವುದಿಲ್ಲ. ಆದುದರಿಂದ ಹಕ್ಕುಗಳ ನಿರೂಪಣೆಯನ್ನು ಸಮಾಜವಾದಿ ತತ್ವಗಳಿಗೆ ಅನುಸಾರವಾಗಿ ಮಾಡಬೇಕು. ನಮ್ಮ ರಾಜಕೀಯ ಅವನತಿಗೆ ಮುಖ್ಯಕಾರಣ ನವಜೀವನಕ್ಕೆ ತಕ್ಕಂತೆ ನವಚೈತನ್ಯವನ್ನು ಪಡೆಯದಿರುವುದು.* ಈ ನವಚೈತನ್ಯದ ಮೌಲ್ಯಗಳು ಸ್ವಾತಂತ್ರ್ಯವನ್ನು ಶಾಂತಿಯುತವಾದ ವ್ಯವಸ್ಥೆಯನ್ನು ಸಮನ್ವಯಗೊಳಿಸಲು ಸಹಾಯಕವಾಗುತ್ತವೆ. ಹೀಗೆ ನವಚೈತನ್ಯದಿಂದ ಪ್ರೇರಿತವಾದ ಸಮಾಜವಾದಿ ಪದ್ಧತಿಯೂ ವ್ಯಕ್ತಿತ್ವದ ಬೆಳವಣಿಗೆಗೆ ಅಡ್ಡಿ ಬರುವುದಿಲ್ಲ. ಆದರೆ ಆದರ ಕ್ರಮವೂ ವಿಧಾನವೂ ವ್ಯಕ್ತಿ ಸಿದ್ಧಾಂತದ ಕ್ರಮ ವಿಧಾನಗಳಿಂದ ಭಿನ್ನವಾಗಿರುತ್ತದೆ.

ಲಾಸ್ಕಿಯವರ ಅಭಿಪ್ರಾಯದಲ್ಲಿ ಬದಲಾಯಿಸಿದ ಸಮಾಜದ ಬೆಳಕಿನಲ್ಲಿ ಹಕ್ಕುಗಳ ವ್ಯಾಖ್ಯಾನವನ್ನು ಬದಲಾಯಿಸಿ ಕಾಣಬೇಕು. ಬಂಡವಾಳಶಾಹಿ ಪದ್ಧತಿಯ ನೆರಳಲ್ಲಿ ಬೆಳೆದುಬಂದ ವ್ಯಕ್ತಿವಾದದ ಮುಖ್ಯ ದೋಷವೆಂದರೆ ಅದು ಸಾಮಾಜಿಕ ಜೀವನಕ್ಕೆ ಒಂದು ಅಣುವಾದ (Atomism) ವ್ಯಾಖ್ಯಾನವನ್ನು ಕೊಟ್ಟಿತು. ಈ ವ್ಯಾಖ್ಯಾನದ ಪ್ರಕಾರ ಸಮಾಜದ ಪ್ರತಿಯೊಬ್ಬನು ತನ್ನದೇ ಆದ ಸ್ವಾಯತ್ತತೆಯನ್ನು ಪಡೆದಿದ್ದಾನೆ. ಆದಕಾರಣ ಅವನ ವ್ಯಕ್ತಿತ್ವವು ಪ್ರತ್ಯೇಕತೆಯನ್ನು ವಿಶಿಷ್ಟತೆಯನ್ನು ಅಪೇಕ್ಷಿಸುತ್ತದೆ. ಆದುದರಿಂದ ಸರ್ಕಾರವೆಂಬುದು ಕೇಡು. ಅದರ ಕ್ಷೇತ್ರವು ಸಾಧ್ಯವಾದಷ್ಟು ಕಡಿಮೆಯಾಗಿರಬೇಕು.

(ಅ) ರಾಜ್ಯದೊಳಗೆ ಶಾಂತಿಯನ್ನು ಕಾಪಾಡುವುದು, ಮತ್ತು (ಆ) ಪರರಾಷ್ಟ್ರಗಳ ಆಕ್ರಮಣವಾಗದಂತೆ ನೋಡಿಕೊಳ್ಳುವುದು ಆಗಿದೆ. ಇದಲ್ಲದೆ ಮತ್ತೆ ಯಾವ ವಿಷಯದಲ್ಲಿಯೂ ಅದು ಹಸ್ತಕ್ಷೇಪ ಮಾಡಬಾರದು.

ಲಾಸ್ಕಿಯವರ ಪ್ರಕಾರ ಉದಾರವಾದಿಗಳ ಮೇಲ್ಕಂಡ ತರ್ಕವು ಒಂದು ಕಾಲದಲ್ಲಿ ಸಮಂಜಸವಾಗಿದ್ದಿತು. ಊಳಿಗಮಾನ್ಯ ಪದ್ಧತಿಯ ಕಾಲದಿಂದ

* Democracy in Crisis–By H. J. Laski p–61.

ಆಚರಣೆಯಲ್ಲಿದ್ದ ನಿರಂಕುಶಶಾಹಿಯನ್ನು ಎದುರಿಸುವ ಸಂದರ್ಭದಲ್ಲಿ ಇಂತಹ ವಾದವನ್ನು ಉದಾರವಾದಿಗಳು ಮುಂದೊಡ್ಡಿದ್ದರು. ಆದ್ದರಿಂದ ನಿರಂಕುಶ ಪ್ರಭುಗಳ ದಬ್ಬಾಳಿಕೆಯನ್ನು ಅವರ ಬೆಂಬಲಿಗರೂ ಅನುಭವಿಸುತ್ತಿದ್ದ ಸವಲತ್ತುಗಳನ್ನು ವಿರೋಧಿಸಲು ಇಂತಹವಾದವು ಅಗತ್ಯವಾಗಿದ್ದಿತು.

ಆದರೆ ನಿರಂಕುಶ ಪ್ರಭುತ್ವವು ಕೊನೆಗೊಂಡ ಮೇಲೆ ಮಧ್ಯಮವರ್ಗದ ಆಳ್ವಿಕೆಯೂ ಪ್ರಾರಂಭವಾದ ಮೇಲೆ ಸಮಾನತೆಯ ಬದಲು ಮತ್ತೊಂದು ಬಗೆಯ ಸವಲತ್ತುಗಳು ತಲೆ ಎತ್ತಿದವು. ಅವು ನೂತನವಾಗಿ ಅಸ್ತಿತ್ವಕ್ಕೆ ಬಂದ ಬೂರ್ಜ್ವಾ (ಮಧ್ಯಮವರ್ಗ) ವರ್ಗಕ್ಕೆ ಮಾತ್ರ ಸೀಮಿತವಾಗಿದ್ದವು. ಈ ಕಾರಣಗಳಿಂದ ಉದಾರ ವಾದಿ ತತ್ವಜ್ಞಾನಿಗಳು ಲೇಸೆಫೇರ್ ತತ್ವವನ್ನು ತಮ್ಮ ಸಿದ್ಧಾಂತದಲ್ಲಿ ಅಳವಡಿ ಕೊಂಡರು. ಪರಿಣಾಮದಲ್ಲಿ ರಾಜಕೀಯ ಸ್ವಾತಂತ್ರ್ಯವೂ ಇದ್ದರೂ ಆರ್ಥಿಕ ಸಮಾನತೆಯೂ ಇಲ್ಲದಂತಾಯಿತು. ಇದರಿಂದ ಸ್ವಾತಂತ್ರ್ಯವು ಕೇವಲ ಬಾಯಿ ಮಾತಾಯಿತು. ಸ್ವಾತಂತ್ರ್ಯವು ಅದರ ಫಲವು ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿತ್ತು. ಆಳುವ ಬಂಡವಾಳಶಾಹಿಗಳಿಗೆ ಮಾತ್ರ ಅದು ಲಭ್ಯವಾಯಿತು. ಶ್ರಮಜೀವಿಗಳಿಗೆ ಅದು ಇದ್ದರೂ ಇಲ್ಲದಂತಾಯಿತು. ಲಿಬರಲ್ ರಾಜ್ಯದಲ್ಲಿ ಅಲ್ಪಸಂಖ್ಯಾತರಾದ ಶ್ರೀಮಂತರಿಗೆ ಎಲ್ಲಾ ಹಕ್ಕುಗಳು ಅರ್ಥಗರ್ಭಿತವಾಯಿತು. ಬಹುಸಂಖ್ಯಾತರಾದ ಬಡವರಿಗೆ ದೊರಕಿದುದು ಕೇವಲ ಶೋಷಣೆ ಮಾತ್ರ. ಆದುದರಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಸಮರ್ಥಿಸುವ ಲಿಬರಲ್ ಪ್ರಜಾಪ್ರಭುತ್ವವು ರಾಜಕೀಯ ಸ್ವಾತಂತ್ರ್ಯವನ್ನು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯೊಡನೆ ಸಮನ್ವಯ ಮಾಡಲು ಅವಶ್ಯಕವಾಗಿರುತ್ತದೆ. ವ್ಯಕ್ತಿತ್ವದ ಬೆಳವಣಿಗೆಯೂ ಕೇವಲ ಅಲ್ಪಸಂಖ್ಯಾತರಾದ ಶ್ರೀಮಂತರಿಗೆ ಮಾತ್ರ ಸಾಧ್ಯ. ಈ ಕಾರಣಗಳಿಂದ ಲಾಸ್ಕಿಯವರು ಬಂಡವಾಳಶಾಹಿಯ ನೇತೃತ್ವದಲ್ಲಿ ಕಂಡುಬರುವ ಪ್ರಜಾಪ್ರಭುತ್ವವನ್ನು ಕಟುವಾಗಿ ಟೀಕಿಸುತ್ತಾರೆ.

ಇಂತಹ ವ್ಯವಸ್ಥೆಯಲ್ಲಿ ರಾಜ್ಯವು ನಿಷ್ಪಕ್ಷಪಾತವಾಗಿರುವುದೂ ಸಾಧ್ಯವಿಲ್ಲ ಕಾಯಿದೆಯ ಮುಂದೆ ಎಲ್ಲರೂ ಸಮಾನರೂ ಎಂಬುದು ನಿಜ. ಆದರೆ ರಾಜ್ಯದ ಒಲವು ಯಾವಾಗಲೂ ಆರ್ಥಿಕವಾಗಿ ಬಲಿಷ್ಠರಾದವರ ಕಡೆ ಇರುತ್ತದೆ. ಹಕ್ಕುಗಳ ಬಗ್ಗೆ ವ ನಾಡುವ ಶಾಸನಗಳು ಬಂಡವಾಳಶಾಹಿಗಳ ಹಿತವನ್ನೇ ಕೋರುವುವು ಈ ಕಾರಣ ಗಳಿಂದ ಬಂಡವಾಳಶಾಹಿಗಳಿಗೂ ಶ್ರಮಜೀವಿಗಳಿಗೂ ಘರ್ಷಣೆ ಆಗದೆ ಇರದು. ಸ್ವಾತಂತ್ರ್ಯವನ್ನು ಕೇವಲ ಆ ವರ್ಗದ ದೃಷ್ಟಿಯಿಂದ ನೋಡುವ ಬಂಡವಾಳಶಾಹಿ ಗಳು ತಮ್ಮ ಹಿತಾಸಕ್ತಿಗಳಿಗೆ ತೊಂದರೆ ಬಂದಾಗ ಪ್ರಜಾಪ್ರಭುತ್ವವನ್ನು ನಾಶ ವ ನಾಡಲು ಹೇಸುವುದಿಲ್ಲ. ಆದ ದರಿಂದ ಒಂದು ತೃಪ್ತಿಕರವಾದ 'ಹಕ್ಕುಗಳ ಸಿದ್ಧಾಂತವು' ಸವಲತ್ತುಗಳಿಲ್ಲದ ಸಮಾನತೆಯ ಆಧಾರದ ಮೇಲೆ ರೂಪಿಸಲ್ಪಟ್ಟ ಸಮಾಜದಲ್ಲಿ ಮಾತ್ರ ಸಾಧ್ಯ ಎಂದು ಲಾಸ್ಕಿಯವರು ತಿಳಿಸುತ್ತಾರೆ[22]

ರಾಜ್ಯದಲ್ಲಿ ಒಬ್ಬ ವ್ಯಕ್ತಿಗೆ ದೊರಕಬಹುದಾದ ಹಕ್ಕುಗಳು ಯಾವುವು ? ಲಾಸ್ಕಿಯವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ದುಡಿಮೆಯೇ ಹಕ್ಕು, ಸರಿಯಾದ ವೇತನದ ಹಕ್ಕು, ಕ್ಲುಪ್ತ ಕಾಲದವರೆಗೆ ದುಡಿಮೆ ಹಾಗೂ ವಿಶ್ರಾಂತಿಯ ಹಕ್ಕು, ಶಿಕ್ಷಣ ಪಡೆಯುವ ಹಕ್ಕು, ರಾಜಕೀಯದಲ್ಲಿ ಭಾಗವಹಿಸುವ ಹಕ್ಕು, ಮತ್ತು ಆಸ್ತಿಯ ಹಕ್ಕುಗಳು ಇರತಕ್ಕದ್ದು.

ಎಲ್ಲಾ ಹಕ್ಕುಗಳು ವ್ಯಕ್ತಿತ್ವದ ಬೆಳವಣಿಗೆಗೆ ಅತ್ಯಗತ್ಯವಾದವುಗಳೆಂದು ಲಾಸ್ಕಿಯವರು ತಿಳಿಸಿರುತ್ತಾರೆ. ವ್ಯಕ್ತಿತ್ವವು ಸಮಗ್ರವಾದ ರಾಜ್ಯದಲ್ಲಿ ಮಿಳಿತವಾಗಿರುವುದಿಲ್ಲ. ಸ್ವಾತಂತ್ರ್ಯವು ಹಕ್ಕುಗಳ ಸಮುಚ್ಛಯದ ಇರುವಿಕೆಯಿಂದ ಲಭ್ಯವಾಗಿರುವುದರಿಂದ ಹಕ್ಕುಗಳು ಚಲಾವಣೆಯಲ್ಲಿರುವ ರಾಜ್ಯದಲ್ಲಿ ಮಾತ್ರ ಸ್ವಾತಂತ್ರ್ಯವು ಜೀವಂತವಾಗಿರುತ್ತದೆ.

ಗ್ರಾಮರ್ ಆಫ್ ಪಾಲಿಟಿಕ್ಸ್ ಗ್ರಂಥದಲ್ಲಿ ಮೊದಲನೆಯ ಸ್ಥಾನವನ್ನು ದುಡಿಮೆಯ ಹಕ್ಕಿಗೆ ಕೊಟ್ಟಿರುತ್ತಾರೆ. ಅವರ ಪ್ರಕಾರ ಪ್ರತಿಯೊಬ್ಬ ನಾಗರೀಕನಿಗೂ ದುಡಿಮೆಯ ಹಕ್ಕು ಇರುತ್ತದೆ. ಪ್ರತಿಯೊಬ್ಬನು ತನ್ನ ಬೆವರು ಸುರಿಸಿ ತಿನ್ನಬೇಕು. ಆದುದರಿಂದ ಇದು ಅವನಿಗೆ ಇರಲೇಬೇಕಾದ ಹಕ್ಕು. ಆದುದರಿಂದ ಅವನಿಗೆ ಉದ್ಯೋಗವನ್ನು ಕಲ್ಪಿಸುವುದು ಸಮಾಜದ ಕರ್ತವ್ಯ. ಅವನಿಗೆ ಉದ್ಯೋಗ ದೊರೆಯದಿದ್ದಲ್ಲಿ ಶಕ್ತಿಗನುಸಾರ ದುಡಿಯಲು ಅವಕಾಶಗಳನ್ನು ಕಲ್ಪಿಸಿಕೊಡುವುದು. ಇದನ್ನು ಕಾರ್ಯಗತ ಮಾಡಲು ನಿರುದ್ಯೋಗವನ್ನು ತಡೆಯಲು ವಿಮೆ ಪದ್ಧತಿಯನ್ನು ಜಾರಿಗೆ ತರಬೇಕು ಹಾಗೂ ರಾಷ್ಟ್ರಯೋಜನೆಯಲ್ಲಿ ನಿರುದ್ಯೋಗ ನಿವಾರಣೆಗೆ ಸೂಕ್ತಕ್ರಮಗಳನ್ನು ಸೂಚಿಸಿರಬೇಕು.

ಉದ್ಯೋಗದ ಹಕ್ಕಿನ ಜೊತೆಯಲ್ಲಿಯೇ ಇರುವುದು ದುಡಿಮೆಗೆ ತಕ್ಕ ವೇತನದ ಹಕ್ಕು. ವ್ಯಕ್ತಿಗಳು ಮಾಡುವ ಕೆಲಸಕ್ಕೆ ಸರಿಯಾದ ಸಂಬಳ ದೊರಕಬೇಕು. ರಾಜ್ಯವು ಪ್ರಜೆಗಳ ಜೀವನಕ್ಕೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಬೇಕು. ಅವರ ಜೀವನವನ್ನು ಆತಂಕವಿಲ್ಲದೆ ನಡೆಸಿಕೊಂಡು ಹೋಗಲು ಅತ್ಯಗತ್ಯವಾಗಿ ಬೇಕಾಗುವ ಸಾಕಷ್ಟು ವೇತನವಾದರೂ ಅವರಿಗೆ ದೊರಕುವಂತೆ ಮಾಡಬೇಕು.

ಉದ್ಯೋಗಸ್ಥನಿಗೆ ಸಾಕಷ್ಟು ವಿಶ್ರಾಂತಿ ಇರಬೇಕು. ಅವನ ಕೆಲಸದ ವೇಳೆಯನ್ನು ಕ್ಲಿಪ್ತ ಮಾಡಬೇಕು.[23]

ಈ ಹಕ್ಕುಗಳನ್ನು ವ್ಯಕ್ತಿಗಳು ಅನುಭವಿಸಲು ಸಮಾಜವಾದಿ ತತ್ವಗಳ ಆಧಾರದ ಮೇಲೆ ರಾಜ್ಯವನ್ನು ರೂಪಿಸಬೇಕು.

ಪ್ರತಿಯೊಬ್ಬ ಪ್ರಜೆಗೂ ವಿದ್ಯಾಭ್ಯಾಸದ ಹಕ್ಕು ಇರುವುದು ಅಗತ್ಯ. ವ್ಯಕ್ತಿಯ ಅಭಿವೃದ್ಧಿಗೆ ವಿದ್ಯೆ ಆಗತ್ಯ. ವಿದ್ಯೆಯು ಪೌರನನ್ನು ಉತ್ತಮ ಮನುಷ್ಯನನ್ನಾಗಿ ಮಾಡುತ್ತದೆ. ಸಾಕಷ್ಟು ಬೌದ್ಧಿಕ ಬೆಳವಣಿಗೆ ಇಲ್ಲದಿದ್ದರೆ, ಪೌರನು ಸಮಾಜಕ್ಕೆ ತನ್ನ ಉತ್ತಮ ಸೇವೆಯನ್ನು ಸಲ್ಲಿಸಲಾರನು. ವಿದ್ಯಾಭ್ಯಾಸದ ಹಕ್ಕೆಂದರೆ ಎಲ್ಲರಿಗೂ

ಒಂದೇ ವಿಧವಾದ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ಅರ್ಥ ಬರುವುದಿಲ್ಲ. ಎಲ್ಲರಿಗೂ ಅತ್ಯಗತ್ಯವಾಗಿ ಇರುವ ಶಿಕ್ಷಣವೆಂದರೆ ಎಲ್ಲರೂ ಉತ್ತಮ ನಾಗರೀಕರಾಗಲು ಅತ್ಯಗತ್ಯವಾದ ಪ್ರಾಥಮಿಕ ವಿದ್ಯಾಭ್ಯಾಸ. ಆದರೆ ವಿದ್ಯಾಭ್ಯಾಸವನ್ನು ದೊರಕಿಸಿಕೊಡುವ ಸಂದರ್ಭದಲ್ಲಿ ತಾಯಿತಂದೆಗಳ ಆರ್ಥಿಕಸ್ಥಿತಿಯನ್ನು ನೋಡಬಾರದು. ವಿದ್ಯಾರ್ಥಿಯ ಬೌದ್ಧಿಕ ಮತ್ತು ಮಾನಸಿಕ ಸ್ಥಿತಿಗತಿಗಳನ್ನು, ಅವನ ಜಾಣ್ಮೆ ಮತ್ತು ಕೌಶಲ್ಯಗಳನ್ನು ಗಮನಿಸಬೇಕು.

ಪ್ರತಿಯೊಬ್ಬ ವ್ಯಕ್ತಿಗೂ ರಾಜಕೀಯ ಹಕ್ಕುಗಳು ಇರಬೇಕು. ರಾಜಕೀಯ ಹಕ್ಕುಗಳೆಂದರೆ ಮತ ನೀಡುವ ಹಕ್ಕು ಹಾಗೂ ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕುಗಳನ್ನು ಒಳಗೊಂಡಿರುವ ಪ್ರಜಾಸತ್ತಾತ್ಮಕ ಸರ್ಕಾರ. ಈ ಹಕ್ಕುಗಳಿಂದ ರಾಜ್ಯಾಡಳಿತದಲ್ಲಿ ವ್ಯಕ್ತಿಯು ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಸಾರ್ವತ್ರಿಕವಾದ ವಯಸ್ಕ ಮತದಾನ ಪದ್ಧತಿಯನ್ನು ಲಾಸ್ಕಿಯವರು ಅನುಮೋದಿಸುತ್ತಾರೆ. ಹಾಗೆಯೇ ಚುನಾವಣೆಯಲ್ಲಿ ಸ್ಪರ್ಧಿಸಲು ಎಲ್ಲರಿಗೂ ಅರ್ಹತೆ ಇರುತ್ತದೆ. ಆದರೆ ನೌಕರಶಾಯಿಯು ಮಾತ್ರ ಪ್ರತಿಭಾವಂತರ ಹಸ್ತದಲ್ಲಿರಬೇಕೆಂಬುದು ಲಾಸ್ಕಿಯವರ ಅಭಿಮತ. ರಾಜ್ಯದ ಪದವಿಗಳಿಗೆ ಎಲ್ಲರಿಗೂ ಸಮಾನ ಅವಕಾಶ ಇರಬೇಕು ಧರ್ಮ, ಜಾತಿ, ಕುಲ, ಲಿಂಗ, ಭಾಷೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.

ಭಾಷಣ ಸ್ವಾತಂತ್ರ್ಯ ಹಾಗೂ ಪ್ರಕಟಣಾ ಸ್ವಾತಂತ್ರ್ಯದ ಹಕ್ಕುಗಳು ವ್ಯಕ್ತಿತ್ವದ ಬೆಳವಣಿಗೆಗೆ ಹಾಗೂ ವಿಕಾಸಕ್ಕೆ ಅತ್ಯಗತ್ಯವೆಂದೂ ಲಾಸ್ಕಿಯವರು ಹೇಳುತ್ತಾರೆ. ಭಾಷಣ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಮೂಲ ತತ್ವಗಳಲ್ಲಿ ಒಂದಾಗಿದೆ. ಭಾಷಣ ಸ್ವಾತಂತ್ರ್ಯವು ಇಲ್ಲದಿದ್ದಲ್ಲಿ ಸಾಮಾಜಿಕ ಜೀವನವು ಪ್ರಯೋಜನವಿಲ್ಲದಂತಾಗುತ್ತದೆ. ಮತ್ತೊಬ್ಬರ ಅಭಿಪ್ರಾಯವನ್ನು ತಿಳಿಯಲು ಜ್ಞಾನ ಪ್ರಸಾರವಾಗಲು ಭಾಷಣ ಸ್ವಾತಂತ್ರ್ಯ ಇರಲೇಬೇಕು. ಈ ಹಕ್ಕನ್ನು ಯುದ್ಧ ಕಾಲದಲ್ಲಿಯೇ ಆಗಲೀ ತುರ್ತು ಪರಿಸ್ಥಿತಿಯಲ್ಲಿಯೇ ಆಗಲೀ ಮೊಟಕುಗೊಳಿಸಬಾರದು. ಹಾಗೆ ಮೊಟಕುಗೊಳಿಸಿದಲ್ಲಿ ವ್ಯಕ್ತಿಗಳು ಆಲೋಚಿಸುವ ಅಭಿಪ್ರಾಯಗಳು ಹೊರಗೆ ಬರುವುದಿಲ್ಲ. ಅವನ ಯೋಚನೆಯಿಂದ ಸಮಾಜಕ್ಕೆ ದಕ್ಕಬೇಕಾದ ಉತ್ತಮ ಕೊಡುಗೆಗಳು ಅವನಲ್ಲಿಯೇ ಹುದುಗಿ ಹೋಗುತ್ತದೆ. ಆದ್ದರಿಂದ ಸಾಮಾಜಿಕ, ಆರ್ಥಿಕ ಹಾಗೂ ವೈಜ್ಞಾನಿಕ ಪ್ರಗತಿ ಕುಂಠಿತವಾಗಬಹುದು. ವ್ಯಕ್ತಿಯು ಸರ್ಕಾರವನ್ನು ಟೀಕಿಸಬಹುದು. ಅದರ ಹುಳುಕುಗಳನ್ನು, ದೋಷಗಳನ್ನು ಬಯಲು ಮಾಡಬಹುದು. ಅವುಗಳಿಗೆ ಪರಿಹಾರವನ್ನು ಸೂಚಿಸಬಹುದು. ಆದರೂ ಅವನ ಟೀಕೆಗಳನ್ನು ಭಾಷಣದ ಮೂಲಕ ಅಥವಾ ಪ್ರಕಟಣೆಯ ಮೂಲಕ ಮಾಡಬಾರದೆಂಬ ಪ್ರತಿಬಂಧವನ್ನು ಹಾಕಬಾರದು. ಅವನ ಟೀಕೆಗಳು ಸಲಹೆಗಳು ಸಮಾಜದ ಯೋಗಕ್ಷೇಮಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಅವನ ಈ ಹಕ್ಕುಗಳನ್ನು ರಕ್ಷಿಸಲು ನ್ಯಾಯಾಂಗದ ರಕ್ಷಣೆ ಅಗತ್ಯ, ಎಂದರೆ ನ್ಯಾಯಾಂಗವು ಕಾರ್ಯಾಂಗ ಹಿಡಿತದಿಂದ ಬಿಡುಗಡೆ ಹೊಂದಬೇಕು.

ಲಾಸ್ಕಿಯವರ ಪ್ರಕಾರ ವ್ಯಕ್ತಿಗೆ ಸಂಘಸಂಸ್ಥೆಗಳನ್ನು ಕಟ್ಟುವುದಕ್ಕೂ ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವುದಕ್ಕೂ ಅವಕಾಶವಿರಬೇಕು. ಇವುಗಳು ಇಲ್ಲದಿದ್ದರೇ ಪ್ರಜಾಪ್ರಭುತ್ವವು ಅಸಮರ್ಥಕವಾಗುತ್ತದೆ. ಇವುಗಳನ್ನು ಪ್ರತಿಬಂಧಿಸಿದರೆ ರಾಜ್ಯದಲ್ಲಿ ರಹಸ್ಯವಾದ ಪಿತೂರಿ ಸಂಘಗಳು, ಭಯೋತ್ಪಾದಕ ಸಂಸ್ಥೆಗಳು ಉದ್ಭವಿಸಿ ರಾಜ್ಯ ನಾಶವಾಗಲು ಕಾರಣವಾಗುತ್ತದೆ. ಆದುದರಿಂದ ವ್ಯಕ್ತಿಗಳಿಗೆ ಸಾರ್ವಜನಿಕ ಸಭೆ ಸಂಘಗಳಲ್ಲಿ ಭಾಗವಹಿಸುವ ಹಕ್ಕು ಇರಲೇಬೇಕು.[24]

ಲಾಸ್ಕಿಯವರು ಆಸ್ತಿಯ ಹಕ್ಕಿನ ವಿಷಯದಲ್ಲಿ ಮಾತ್ರ ಮಿತಿಯನ್ನು ಸೂಚಿಸುತ್ತಾರೆ. ಆಸ್ತಿಯು ದುಡಿಮೆಯ ಫಲವಾಗಿರಬೇಕು. ದುಡಿಮೆಯೂ ವ್ಯಕ್ತಿಯ ಬೆಳವಣಿಗೆಗೆ ಸಹಾಯಕವಾಗುವಂತಿರಬೇಕು. ಅವನ ದುಡಿಮೆಯು ಅವನಿಗೂ ಸಮಾಜಕ್ಕೂ ಉಪಯೋಗವಾಗುವಂತಿರಬೇಕು. ಆದರೆ ಬಂಡವಾಳಶಾಹಿ ಸಮಾಜದಲ್ಲಿ ಇದು ಸಾಧ್ಯವಿಲ್ಲ

ನನ್ನ ಆಸ್ತಿಯ ಹಕ್ಕು ಇತರ ಪ್ರಜೆಗಳ ಮೇಲೆ ಅಧಿಕಾರ ನಡೆಸುವಂತಿರಬಾರದು. ಹಾಗಾದಲ್ಲಿ ಅವರ ಸ್ವಾತಂತ್ರ್ಯವಾದ ವ್ಯಕ್ತಿತ್ವವು ನನ್ನ ಇಚ್ಛೆಯನ್ನು ಅವಲಂಬಿಸಿರುತ್ತದೆ. ಆಗ ಅವರು ನಿಜಕ್ಕೂ ಪೌರತ್ವದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಯಾವ ಮನುಷ್ಯನಿಗೂ ಸಭ್ಯವಾದ ರೀತಿಯಲ್ಲಿ ತನ್ನ ಆಸೆಯನ್ನು ತೃಪ್ತಿಗೊಳಿಸಿಕೊಳ್ಳುವುದಕ್ಕಿಂತ ಮಿಗಿಲಾದ ಆಸ್ತಿಯ ಹಕ್ಕು ಇರಬಾರದು. ಹಾಗಿದ್ದರೆ ಅವನ ವ್ಯಕ್ತಿತ್ವಕ್ಕೆ ಪ್ರಾಮುಖ್ಯತೆ ಇರುವುದಿಲ್ಲ. ಅದರ ಬದಲು ಅವನ ಆಸ್ತಿಗೆ ಪ್ರಾಧಾನ್ಯತೆ ದೊರಕುತ್ತದೆ. ಆಗ ಅವನು ತನ್ನ ಹಿತಾಸಕ್ತಿಯಿಂದ ಪ್ರೇರಿತನಾಗುವುದಿಲ್ಲ. ತನ್ನ ಆಸ್ತಿಯ ಹಿತದ ಕಡೆಗೆ ಲಕ್ಷಿಸುತ್ತಾನೆ. ತನ್ನ ಉತ್ತಮತನ ಅವನಿಗೆ ಬೇಕಿಲ್ಲ. ತನ್ನ ಆಸ್ತಿಯ ಹೆಚ್ಚಳದಿಂದ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಾನೆ. ಆದುದರಿಂದ ಮಿತಿಯುಳ್ಳ ಆಸ್ತಿಯನ್ನು ಲಾಸ್ಕಿಯವರು ಸಮರ್ಥಿಸುತ್ತಾರೆ.[25]

ಹಕ್ಕುಗಳನ್ನು ರಕ್ಷಣೆ ಮಾಡುವುದು ಹೇಗೆ? ಹಕ್ಕುಗಳನ್ನು ಲಿಖಿತ ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದರೆ ಹಾಗೂ ಸಂವಿಧಾನವೇ ಮೂಲಭೂತವಾದ ಕಾಯಿದೆಯೆಂದು ಆ ರಾಜಕೀಯ ಸಮಾಜವು ಒಪ್ಪಿಕೊಂಡಿದ್ದಾಗ ಹಕ್ಕುಗಳ ಇರುವಿಕೆ ಸಾಧ್ಯವಾಗುತ್ತದೆ ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಆದರೆ ಇದನ್ನು ಲಾಸ್ಕಿಯವರು ಒಪ್ಪುವುದಿಲ್ಲ. ಅವರ ಪ್ರಕಾರ ಮುಗ್ಗು ಹಿಡಿದ ಕಡಿತವು ಆ ಹಕ್ಕುಗಳಿಗೆ ಹೆಚ್ಚಿನ ಪವಿತ್ರತೆಯನ್ನು ಕೊಡಬಹುದು.[26] ಆದರೆ ಅವುಗಳನ್ನು ಪಡೆಯುವುದು ಅದರಿಂದ ಸಾಧ್ಯವಿಲ್ಲ ಅಮೇರಿಕದ ಸಂವಿಧಾನದ ಮೊದಲನೆಯ ತಿದ್ದುಪಡಿಯು ವಾಕ್‌ಸ್ವಾತಂತ್ರ್ಯವನ್ನೂ, ಸಭಾಸ್ವಾತಂತ್ರ್ಯದ ಹಕ್ಕನ್ನು ಕಾಯಿದಾತ್ಮಕವಾಗಿ ಕೊಟ್ಟಿದೆ ನಾಲ್ಕನೆಯ ತಿದ್ದುಪಡಿಯ ಪ್ರಕಾರ ವಾರೆಂಟ್ ಇಲ್ಲದೆ ಯಾವ ನಾಗರೀಕನ ಮನೆಯನ್ನು ಶೋಧಿಸುವುದಿಲ್ಲವೆಂದು ತಿಳಿಸಲಾಗಿದೆ. ಎಂಟನೆಯ ತಿದ್ದುಪಡಿಯ ಪ್ರಕಾರ ಅಧಿಕ ಜಾಮೀನಿನಿಂದ ನಾಗರೀಕನಿಗೆ ರಕ್ಷಣೆ ಕೊಡುತ್ತದೆ. ಆದರೆ ಒಂದು

'ಹಿಸ್ಟಿರೀಕಲ್' ಬುದ್ಧಿಭ್ರಮಣೆಯಾದ ವಾರದಲ್ಲಿ ಕಾರ್ಯಾಂಗದ ಅಧಿಕಾರವು ಇವೆಲ್ಲವನ್ನು ಕೊನೆಗಾಣಿಸಿತು. ಹಕ್ಕುಗಳನ್ನು ಉಳಿಸಿಕೊಳ್ಳುವುದು ರೂಢಿ ಮತ್ತು ಸಂಪ್ರದಾಯಗಳ ಮೇಲೆ ನಿಂತಿರುವುದೇ ವಿನಃ ಕಾಯಿದೆಯ ಮೇಲಲ್ಲ ಎಂದು ಲಾಸ್ಕಿಯವರು ವಾದಿಸುತ್ತಾರೆ.

ಮಾಂಟೆಸ್ಕ್ಯೂ ಮತ್ತು ಲಾಕ್‌ರು ಅಧಿಕಾರ ವಿಭಜನೆಯಿಂದ ಹಕ್ಕುಗಳ ಇರುವಿಕೆ ಸಾಧ್ಯವೆನ್ನುತ್ತಾರೆ. ಆ ಸಿದ್ಧಾಂತವು ನ್ಯಾಯಾಂಗದ ಸ್ವಾತಂತ್ರ್ಯತೆಯನ್ನು ಎತ್ತಿಹಿಡಿಯುತ್ತದೆ. ನ್ಯಾಯಾಂಗವು ಸ್ವತಂತ್ರವಾಗಿದ್ದರೆ ಹಕ್ಕುಗಳ ಅಸ್ತಿತ್ವಕ್ಕೆ ಚ್ಯುತಿಯಿಲ್ಲ ಎಂಬುದು ನಿಜ. ಆದರೆ ನ್ಯಾಯಾಂಗವನ್ನು ನೇಮಕಮಾಡುವ ಅಧಿಕಾರವು ಕಾರ್ಯಾಂಗದಲ್ಲಿ ನೆಲೆಸಿರುವುದರಿಂದ ನ್ಯಾಯಾಂಗದ ಸ್ವಾತಂತ್ರ್ಯವು ಭದ್ರವಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ[27]. ಲಾಸ್ಕಿಯವರ ಪ್ರಕಾರ ಜನತೆಯ ಹಕ್ಕುಗಳ ಸ್ಥಿರತೆಯನ್ನು ಉಳಿಸಲು ಮೂರು ಅಗತ್ಯವಾದ ಸ್ಥಿತಿಗಳಿರಬೇಕು. ಅವು ಯಾವುವೆಂದರೆ:

(ಅ) ಅಧಿಕಾರದ ವಿಕೇಂದ್ರೀಕರಣ: ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದರಿಂದ ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯ ಜನರೇ ಬಗೆಹರಿಸಲು ಸಾಧ್ಯವಾಗುತ್ತದೆ. ಕೇಂದ್ರವು ಮೇಲ್ವಿಚಾರಣೆ ಮಾಡಬಹುದೇ ವಿನಃ ಆಜ್ಞಾಪಿಸಲಾಗದು. ಇದರಿಂದ ಸ್ಥಳೀಯ ಜನರಿಗೆ ಆಡಳಿತದ ಅನುಭವವು ದೊರೆಯುವುದಲ್ಲದೆ ಜವಾಬ್ದಾರಿಯುತವಾದ ಸಾರ್ವಜನಿಕ ಸೇವೆಮಾಡಲು ಅವಕಾಶವಾಗುವುದು. ಇದು ಹಕ್ಕುಗಳ ರಕ್ಷಣೆಯ ಪ್ರಮುಖ ಸಾಧನ.

(ಆ) ಕೇಂದ್ರ ಸರ್ಕಾರದ ಸೇವಾ ಇಲಾಖೆಗಳಲ್ಲಿ ಸಲಹಾ ಸಮಿತಿಗಳನ್ನು ರಚಿಸುವುದು ಇಂತಹ ಸಮಿತಿಗಳು ತಜ್ಞರಿಂದ ಕೂಡಿರುವುದರಿಂದ ಅಧಿಕಾರವು ಕೈಗೊಳ್ಳುವ ಪ್ರತಿಯೊಂದು ನೀತಿಯೂ ಜವಾಬ್ದಾರಿಯಾಗಿರುವುದು. ಆದರೆ ಸರ್ಕಾರವು ನಾಮಕರಣದ ಮೂಲಕ ಇಂತಹ ಸಮಿತಿಗಳನ್ನು ರಚಿಸಿದರೆ ಯಾವ ಪುರುಷಾರ್ಥವೂ ಇರುವುದಿಲ್ಲ. ಸಲಹಾ ಸಮಿತಿಯೂ ಇಲಾಖೆ ಕಾರ್ಯಕ್ಕೆ ಸಂಬಂಧಿಸಿದಂತೆ ಇರುವ ಸಂಸ್ಥೆಗಳಿಂದ ಚುನಾಯಿತರಾಗಿರಬೇಕು. ಉದಾ: ಶಿಕ್ಷಣಕ್ಕೆ ಸಂಬಂಧಿಸಿದಸಲಹಾ ಸಮಿತಿಯಲ್ಲಿ ವಿದ್ಯಾರ್ಥಿಗಳ, ಉಪಾಧ್ಯಾಯರ, ಶಿಕ್ಷಣ ಸಂಸ್ಥೆಗಳ, ನಿರ್ವಾಹಕರ ಪ್ರತಿನಿಧಿಗಳಿರಬೇಕು.

(ಇ) ಸಮಾಜದಲ್ಲಿರುವ ಬೇರೆ ಬೇರೆ ಸಂಘಸಂಸ್ಥೆಗಳ ಆಂತರ್ಯ ವ್ಯವಹಾರದಲ್ಲಿ ರಾಜ್ಯವು ಹಸ್ತಕ್ಷೇಪ ಮಾಡಬಾರದು. ಎಲ್ಲಿಯವರೆಗೆ ಇಂತಹ ಸಂಘಸಂಸ್ಥೆಗಳು ಹಿಂಸಾತ್ಮಕ ಚಟುವಟಿಕೆಗಳ ಮೂಲಕ ರಾಜ್ಯವನು ಬುಡಮೇಲು ಮಾಡುವುದಿಲ್ಲವೋ ಅಲ್ಲಿಯವರೆಗೆ ಅವರ ಕಾರ್ಯಗಳ ನಿರ್ಬಂಧನೆಯನ್ನು ಮಾಡಬಾರದು.

ಲಾಸ್ಕಿಯವರ ಪ್ರಕಾರ ಹಕ್ಕುಗಳಿಗೆ ಮೂರು ಮುಖಗಳಿವೆ. ಒಂದು ವ್ಯಕ್ತಿಯ ಹಿತಾಸಕ್ತಿಗೆ ಸಂಬಂಧಿಸಿದ್ದು, ಎರಡನೆಯದು ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ್ದು,

ಮೂರನೆಯುದು ಸಮಗ್ರ ಸಮುದಾಯಕ್ಕೆ ಸೇರಿದ್ದು. ರಾಜ್ಯವು ಈ ಮೂರು ಬಗೆಯ ಹಕ್ಕುಗಳನ್ನು ಸಮನ್ವಯಗೊಳಿಸಿ ಸಮುದಾಯದಲ್ಲಿ ಶಾಂತಿ ಮತ್ತು ಅನ್ಯೋನ್ಯತೆ ಇರಲು ಸಾಧ್ಯವಾಗುವಂತೆ ಕಾಯಿದೆಗಳನ್ನು ವಿಧಿಗಳನ್ನು ರಕ್ಷಿಸಬೇಕು[28].

ಲಾಸ್ಕಿಯವರ ಚಿಂತನೆಯ ಅಂತಿಮ ಗುರಿಯಲ್ಲಿ ಏಕನಿಷ್ಠೆಯನ್ನು ಕಾಣಬಹುದು. ಅದು ವ್ಯಕ್ತಿಸ್ವಾತಂತ್ರ್ಯವನ್ನು ಕುರಿತುದಾಗಿದೆ. ಸಾಂಪ್ರದಾಯಕ ಉದಾರವಾದ ವನ್ನು ಆದರ ಸಂಗಾತಿಯಾದ ಲೇಸೆಫೇರ್ ತತ್ವದ ಮೇಲೆ ನಿಂತಿರುವ ಬಂಡವಾಳಶಾಹಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ ಲಾಸ್ಕಿಯವರು ಮಿಲ್ ಮತ್ತು ಗ್ರೀನ್‌ರಿಂದ ಮಾರ್ಪಾಡಾದ ಬ್ರಿಟಿಷ್ ಉದಾರವಾದಿ ಪಂಥವನ್ನು ಬಹುಮಟ್ಟಿಗೆ ಸಮರ್ಥಿಸಿದ್ದಾರೆ. ಸಮಾಜದಲ್ಲಿ ಸಮಾನತೆಯ ಆಧಾರದ ಮೇಲೆ ರೂಪಿಸಿದಂತಹ ಉದಾರವಾದಿ ಪ್ರಜಾ ಸರ್ಕಾರವೇ ಅವರ ಅಭೀಷ್ಟವಾಗಿದ್ದಿತೆಂದು ರೋಜರ್ ಎಚ್. ಸಾಲಿಡಾರ್‌ರವರು ತಿಳಿಸುತ್ತಾರೆ. ಲಾಸ್ಕಿಯವರ ಪ್ರಕಾರ ಸಮಾನತೆ ತಳಹದಿಯ ಮೇಲೆ ನಿರ್ಮಿತ ವಾದ ಸಮಾಜವೇ ನಿಜಕ್ಕೂ ನೈತಿಕ ಆಧಾರವನ್ನುಳ್ಳ ಸಮಾಜವಾಗಿರುತ್ತದೆ.

ಗ್ರಾಮರ್ ಆಫ್ ಪಾಲಿಟಿಕ್ಸ್ ಎಂಬ ಗ್ರಂಥದಲ್ಲಿ ತಮ್ಮ ಚಿಂತನೆಯ ಬಹುಭಾಗವು ಬೆಂಥಮನು ಒತ್ತಿಹೇಳಿರುವ ಸಾಮಾಜಿಕ ಒಳ್ಳಿತನ್ನ ಅನುಸರಿಸುವು ದೆಂದು ಹೇಳುತ್ತಾರೆ[29]. ಅವರ ಅಭಿಪ್ರಾಯದಲ್ಲಿ ಸಾಮಾಜಿಕ ಒಳ್ಳಿತೆಂದರೇ ತೊಂದರೆ ಯಿಂದ ಬಿಡುಗಡೆಯನ್ನು ಹೊಂದಿ ಸೌಖ್ಯವನ್ನು ಹೆಚ್ಚಿಸುವುದೇ ಆಗಿದೆ. ಇದನ್ನು ಸಾಧಿಸಲು ಕೈಗಾರಿಕಾ ಯುಗದಲ್ಲಿ ಬದಲಾಯಿಸಿದ ಸಮಾಜದಲ್ಲಿ ಉದಾರವಾದವನ್ನು ಕಾಲಗಳ ಬೇಡಿಕೆಗೆ ಅನುಗುಣವಾಗಿ ಅನ್ವಯಿಸತಕ್ಕದ್ದು ಎಂದರೆ ವ್ಯಕ್ತಿಸ್ವಾತಂತ್ರ್ಯವು ಇರಬೇಕು. ಸಮಾಜದ ಸಾರ್ವತ್ರಿಕ ಕ್ಷೇಮವೂ ಆಗಬೇಕು. ಇವೆರಡರ ಸಮ್ಮೇಳನವೇ ಲಾಸ್ಕಿಯವರ ಘನ ಉದ್ದೇಶವಾಗಿದ್ದಿತು.

ಪ್ರಾರಂಭದಲ್ಲಿ ಅವರು ಸ್ವಾತಂತ್ರ್ಯವೆಂದರೆ ವ್ಯಕ್ತಿಗೆ ಹಕ್ಕುಗಳನ್ನು ಇರುವ ಅವಕಾಶ ಎಂದು ತಿಳಿದರೇ, ಸ್ವಾತಂತ್ರ್ಯ ಎಂಬುದನ್ನು ನಿಷೇಧಾರ್ಥಕವಾಗಿ ತಿಳಿಯ ಬಾರದು. ಎಂದರೆ ನಿರ್ಬಂಧಗಳು ಇಲ್ಲದಿರುವುದು ಎಂಬ ಅರ್ಥದಲ್ಲಿ ಮಾತ್ರ ತಿಳಿಯಬಾರದು ಎಂದು ಸೂಚಿಸಿದರು. ಆದರೆ ಗ್ರಾಮರ್ ಆಫ್ ಪಾಲಿಟಿಕ್ಸ್‌ನ ಅವರ ಎರಡನೆ ಆವೃತ್ತಿಯಲ್ಲಿ ಅವರ ಅಭಿಪ್ರಾಯ ಬದಲಾಗಿದೆ.

"ನಾನು 1925ರಲ್ಲಿ ಸ್ವಾತಂತ್ರ್ಯವೆಂಬುದನ್ನು ನಿಷೇಧಾರ್ಥಕವಾಗಿ ನೋಡಬಾರ ದೆಂದು ತಿಳಿದಿದ್ದೆನು. ಆ ಭಾವನೆಯೂ ತಪ್ಪೆಂದು ನನಗೆ ಈಗ ದೃಢವಾಗಿದೆ. ಈಗ ಹಿಂದಿನ ಅಭಿಪ್ರಾಯವೆಂದರೆ ನಿರ್ಬಂಧಗಳ ಗೈರುಹಾಜರಿಯೇ ವ್ಯಕ್ತಿತ್ವವನ್ನು ಕಾಪಾಡುವುದು ಎಂಬ ದೃಢನಂಬಿಕೆ ನನಗಿದೆ''.

ಆದರೆ ಆ ಗ್ರಂಥದ ನಾಲ್ಕನೇ ಅಧ್ಯಾಯವನ್ನು ಓದಿದರೆ ಅವರ ಹಿಂದಿನ ಅಭಿಪ್ರಾಯಗಳೇ ವ್ಯಕ್ತವಾಗುವುದನ್ನು ನಾವು ನೋಡುತ್ತೇವೆ. 1930ರಲ್ಲಿ ಪ್ರಕಟ ವಾದ ಅವರ ಗ್ರಂಥ '' ಲಿಬರ್ಟಿ ಇನ್ ದಿ ಮಾಡರ್ನ್ ಸ್ಟೇಟ್ '' ಎಂಬುದರಲ್ಲಿ

ಸ್ವಾತಂತ್ರ್ಯವೆಂದರೆ, ಆಧುನಿಕ ನಾಗರೀಕತೆಯಲ್ಲಿ ವ್ಯಕ್ತಿಯ ಸೌಖ್ಯಕ್ಕೆ ಯಾವ ಸಾಮಾಜಿಕ ಸ್ಥಿತಿಗಳು ಅಗತ್ಯವೊ ಅವುಗಳ ಮೇಲೆ ನಿರ್ಬಂಧಗಳಿಲ್ಲದಿರುವುದೇ ಸ್ವಾತಂತ್ರ್ಯವೆಂದು ಹೇಳುತ್ತಾರೆ (ಪುಟ 42).

ಆದರೆ ವ್ಯಕ್ತಿಯ ಮೇಲೆ ಯಾವ ನಿರ್ಬಂಧಗಳು ಇರಬಾರದೆಂದು ಹೇಳುವುದಿಲ್ಲ. ವ್ಯಕ್ತಿಗಳ ಸೌಖ್ಯವನ್ನು ಭರವಸೆಮಾಡಲು ಇರಬೇಕಾದ ಸಾಮಾಜಿಕ ಸ್ಥಿತಿಗತಿಗಳು ಇರಲೇಬೇಕು. ಅವುಗಳಿಗೆ ಅಡಚಣೆಯನ್ನುಂಟುಮಾಡುವ ವ್ಯಕ್ತಿಗಳ ಮೇಲೆ ನಿರ್ಬಂಧಗಳು ಅಗತ್ಯ. ನಿಜಕ್ಕೂ ಪ್ರತಿಯೊಂದು ವಿಧಿಯೂ ಹಾಗೂ ಪ್ರತಿಯೊಂದು ಕಡ್ಡಾಯವು ಸ್ವಾತಂತ್ರ್ಯದ ಮೇಲಿನ ಮಿತಿಯಾಗಿರುತ್ತದೆ. ಆದರೆ ಅವು ವ್ಯಕ್ತಿಗಳ ಸೌಖ್ಯ ಜೀವನಕ್ಕೆ ಅತ್ಯಗತ್ಯವಾದುದರಿಂದ ಅವುಗಳನ್ನು ಮಿತಿಯೆಂದೂ, ನಿರ್ಬಂಧವೆಂದೂ ತಿಳಿಯಬಾರದು. ನಿಜಕ್ಕೂ ಅಧಿಕಾರಶಾಹಿಗೂ ಸ್ವಾತಂತ್ರ್ಯದ ಅಪೇಕ್ಷೆಗೂ ವಿರುದ್ಧ ರೀತಿಯ ಸಂಬಂಧ ಇರುತ್ತದೆ. ಸ್ವಾತಂತ್ರ್ಯವನ್ನು ವ್ಯಕ್ತಿಗೆ ದೊರಕಿಸಿಕೊಡುವ ಸಂದರ್ಭದಲ್ಲಿ ಅಧಿಕಾರದಲ್ಲಿರುವವರ ಮೇಲೆ ಕೆಲವಾರು ನಿರ್ಬಂಧಗಳನ್ನು ವಿಧಿಸಬೇಕಾಗುತ್ತದೆ. ಈ ವಿಷಯಗಳನ್ನು ಅವರ ಕಟ್ಟಕಡೆಯ ಪುಸ್ತಕಗಳಾದ ರಿಫ್ಲೆಕ್ಷನ್ ಆನ್ ದಿ ರಿವ್ಯೊಲೋಷನ್ ಆಫ್ ಅವರ್ ಟೈಮ್ಸ್ (1943) ಹಾಗೂ ಫೈತ್, ರೀಸನ್ ಅಂಡ್ ಸಿವಿಲೈಸೇಷನ್ (1944)ಗಳಲ್ಲಿ ಕಾಣಬಹುದು. ಸಮಾಜದ ಶ್ರೇಷ್ಠ ಉದ್ದೇಶಗಳಿಂದ ಸೀಮಿತವಾದ ಸ್ವಾತಂತ್ರ್ಯವನ್ನು ಇವರು ತಿಳಿಸುತ್ತಾರೆ. ಸ್ವೇಚ್ಛೆಯನ್ನು ಸ್ವಾತಂತ್ರ್ಯವೆಂದು ಲಾಸ್ಕಿಯವರು ಕರೆಯುವುದಿಲ್ಲ. ಹಿಡಿತವನ್ನು ಮೀರಿದ ಅಧಿಕಾರಶಾಹಿಯೂ ಅದನ್ನು ಉಪಯೋಗಿಸುವವರೆಗೆ ಅಪಾಯಕಾರಿಯಾದುದು. ಆ ರೀತಿ ಅಧಿಕಾರ ಹೊಂದಿರುವವರು, ತಾವು ಯಾವುದನ್ನು ಒಳ್ಳೆಯದು ಎಂದು ತಿಳಿದಿರುತ್ತಾರೋ ಅದನ್ನು ಬೇರೊಬ್ಬರ ಮೇಲೆ ಹೇರಲು ಪ್ರಯತ್ನಿಸುತ್ತಾರೆ. ಸ್ವಾತಂತ್ರ್ಯದ ಮುಖ್ಯ ಬೇಡಿಕೆ ಎಂದರೆ ರಾಜಕೀಯ ಅಧಿಕಾರದ ಮೇಲೆ ಹಾಕಿರುವ ಮಿತಿ. ಸಂಪೂರ್ಣ ಅಧಿಕಾರವು ಯಾವಾಗಲೂ ಸ್ವಾತಂತ್ರ್ಯಕ್ಕೆ ಒಂದು ಕೊಡಲಿ ಪೆಟ್ಟು. ಸ್ವಾತಂತ್ರ್ಯವು ವ್ಯಕ್ತಿತ್ವವನ್ನು ಪ್ರದರ್ಶಿಸುವ ಸಾಧನ. ಸ್ವಾತಂತ್ರ್ಯವೆಂದರೆ ಆರ್ಥಿಕ ಭದ್ರತೆಯೂ ಹೌದು. ಆರ್ಥಿಕ ಭದ್ರತೆಯಿಲ್ಲದಿದ್ದಲ್ಲಿ ಸ್ವಾತಂತ್ರ್ಯಕ್ಕೆ ಬೆಲೆ ಇರುವುದಿಲ್ಲ. ಜೆ. ಎಸ್. ಮಿಲ್ ತಿಳಿಸಿರುವಂತೆ ಹಿಂಸಾತ್ಮಕ ಪ್ರಯತ್ನದಿಂದ ಬಿಡುಗಡೆಯಾಗಿರುವುದು ಎಂಬ ಅರ್ಥವು ಬರುತ್ತದೆ. ಒಬ್ಬ ನಾಗರೀಕನ ಸರ್ವೇಸಾಮಾನ್ಯವಾದ ಹಕ್ಕೆಂದರೆ ಸಮಾನತೆಯ ಹಕ್ಕು. ಆದುದರಿಂದ ಯಾವ ರಾಜ್ಯದಲ್ಲಿಯೂ ಆಗಲಿ ಸ್ವಾತಂತ್ರ್ಯವು ಗುರಿ ಸಾಧಿಸಲು ಸಮಾನತೆಯ ಹಕ್ಕನ್ನು ಮಾನ್ಯಮಾಡುವುದು ಮುಖ್ಯವಾದುದು.

ಲಾಸ್ಕಿಯವರ ಪ್ರಕಾರ ಸ್ವಾತಂತ್ರ್ಯವೆಂದರೆ ಕೇವಲ ಹಿಡಿತದಿಂದ ಬಿಡುಗಡೆ ಹೊಂದುವುದು ಎಂಬ ಅರ್ಥ ಸರಿಯಲ್ಲ. ಸಾರ್ವಜನಿಕ ನಾಗರೀಕರಿಗೆ ವಿಧಿಸಿರುವ ಅಡೆತಡೆಗಳು ನಾಗರೀಕರ ದೃಷ್ಟಿಯಿಂದ ಅವಶ್ಯವಾಗಿರಬಹುದು. ಉದಾ: ರಸ್ತೆ

ಸಂಚಾರಕ್ಕೆ ಸಂಬಂಧಿಸಿದ ಕಾಯಿದೆಗಳು, ಕಡ್ಡಾಯ ಶಿಕ್ಷಣ ಈ ತರಹದ ಅಡೆತಡೆಗಳು ಸ್ವಾತಂತ್ರ್ಯವನ್ನು ಅಪಹರಿಸುವುದಿಲ್ಲ. ಅದು ಸ್ವಾತಂತ್ರ್ಯದ ಪೂರ್ಣ ಅವಕಾಶವನ್ನು ಅನುಕೂಲವನ್ನು ಕಲ್ಪಿಸುತ್ತದೆ. ಈ ರೀತಿ ಅಡತಡೆಗಳನ್ನು ರೂಪಿಸುವಾಗ ಅವುಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಾತ್ರ ಮಾಡಬೇಕು.

ಲಾಸ್ಕಿಯವರ ಚಿಂತನೆಯಲ್ಲಿ ಹೀಗೆ ಬದಲಾವಣೆಗಳಾಗಲು ಮುಖ್ಯ ಕಾರಣವೆಂದರೆ ಅವರ ಕಾಲದಲ್ಲಿ ಯೂರೋಪಿನ ಅನೇಕ ರಾಜ್ಯಗಳಲ್ಲಿ ಉಂಟಾದ ರಾಜಕೀಯ ವಿಪ್ಲವಗಳು, ಫ್ಯಾಸಿಸಂ, ಕಮ್ಯೂನಿಸಂ; ಸ್ಪೈನಿನಲ್ಲಿ ನಡೆದ ಅಂತರ್‌ಕಲಹ ತತ್ಪರಿಣಾಮವಾದ ಸರ್ವಾಧಿಕಾರತ್ವ, ದ್ವಿತೀಯ ಮಹಾಯುದ್ಧ, ಪ್ರಜಾಪ್ರಭುತ್ವದಲ್ಲಿ ಉಂಟಾದ ಅವನತಿ ಮುಂತಾದವುಗಳು.

ಲಾಸ್ಕಿಯವರ ಸ್ವಾತಂತ್ರ್ಯ ಸವಿಮರ್ಶೆಯ ಬಹು ಪ್ರಸಿದ್ಧವಾದ ವಾಕ್ಯವು ಅವರ ಗ್ರಾಮರ್ ಆಫ್ ಪಾಲಿಟಿಕ್ಸ್‌ನಲ್ಲಿ ಕಾಣಬಹುದು. ಅದು ನಾಲ್ಕನೆಯ ಅಧ್ಯಾಯದ ಮೊದಲ ವಾಕ್ಯ. ''ಮನುಷ್ಯರಿಗೆ ತಮ್ಮ ಉತ್ತಮತೆಯನ್ನು ಸಾಧಿಸಿಕೊಳ್ಳಲು ಇರುವ ಅವಕಾಶದ ವಾತಾವರಣವನ್ನು ಉತ್ಸುಕತೆಯಿಂದ ಉಳಿಸಿಕೊಳ್ಳುವುದೇ ಸ್ವಾತಂತ್ರ್ಯವೆಂದು ನಾನು ಅರ್ಥಮಾಡುತ್ತೇನೆ[30]. ಮುಂದಿನ ವಾಕ್ಯಗಳಲ್ಲಿ ಈ ವ್ಯಾಖ್ಯಾನವನ್ನು ಚೆನ್ನಾಗಿ ವಿವರಿಸುತ್ತಾರೆ.

(1) ಸ್ವಾತಂತ್ರ್ಯವು ಹಕ್ಕುಗಳ ಫಲ, ಹಕ್ಕುಗಳಿಲ್ಲದಿದ್ದಲ್ಲಿ ಮನುಷ್ಯರು ವ್ಯಕ್ತಿತ್ವದ ಅವಶ್ಯಕತೆಗೆ ಸಂಬಂಧವಿಲ್ಲದ ಕಾಯಿದೆಗಳಿಗೆ ಅಧೀನರು.

(2) ಸ್ವಾತಂತ್ರ್ಯವು ನಿಶ್ಚಿತವಾದುದು. ಸಾಮಾಜಿಕ ನಿಯಮಗಳು ಮನುಷ್ಯನ ಸಾಂಘಿಕವಾಸನೆಯ ಪರಿಣಾಮಗಳಾಗಿವೆ. ಸಾಮಾನ್ಯ ವಿಧಿಗಳು ಇಲ್ಲದಿದ್ದಲ್ಲಿ ನಾವು ಸಮಾಜದಲ್ಲಿ ಇರಲು ಸಾಧ್ಯವಿಲ್ಲ. ಆದುದರಿಂದ ಇತಿಹಾಸದ ಅನುಭವವೂ ನಮ್ಮ ಅನುಕೂಲಕ್ಕೋಸ್ಕರ ಸರಿಯಾದ ಜೀವನದ ಮೇಲ್ಮೆಯ ವಿಧಿಗಳನ್ನು ವಿಕಸಿಸಿಕೊಟ್ಟಿದೆ. ಆದುದರಿಂದ ಇಂಥ ವಿಧಿಗಳಿಗೆ ವಿಧೇಯತೆಯನ್ನು ಬಲಾತ್ಕಾರ ಮಾಡುವುದು ಮನುಷ್ಯನ ಸ್ವಾತಂತ್ರ್ಯಹರಣವಲ್ಲ. 'ಯಾವ ನಡತೆಯ ದಾರಿಗಳನ್ನು ಸಾಮಾನ್ಯ ಹಿತದೃಷ್ಟಿಯಿಂದ ಪ್ರತಿಬಂಧಿಸಬೇಕೋ ಮತ್ತು ತಡೆಯಿಲ್ಲದೆ ಅವುಗಳ ಚಟುವಟಿಕೆಗಳನ್ನು ತೊಡೆದುಹಾಕಿದಲ್ಲಿ ಅಂಥ ನಿರ್ಬಂಧಗಳನ್ನೂ ತಡೆಯನ್ನೂ, ಸ್ವಾತಂತ್ರ್ಯದ ಮೇಲೆ ನಡೆಸಿದ ಆಕ್ರಮಣವೆಂದು ಭಾವಿಸಬಾರದು.

(3) ಒಂದು ನಿರ್ಬಂಧವು ಕಾಯಿದಾತ್ಮಕವಾಗಿ ಅರ್ಹರಾದವರಿಂದ ಜಾರಿ ಮಾಡಲ್ಪಟ್ಟಿದೆ ಎಂಬ ಕಾರಣದಿಂದ ಮಾತ್ರ ಸಮರ್ಥಿಸಲು ಸಾಧ್ಯವಿಲ್ಲ. ಯಾರ ಮೇಲೆ ಅದರ ಪರಿಣಾಮವಾಗಬಹುದೋ ಅಂಥಹವರ ಇಚ್ಛೆಯ ಮೇಲೆ ಸೃಜಿಸಬಹುದಾದ ಪ್ರತಿಬಂಧಕಾಜ್ಞೆಗಳಾಗಿರಬೇಕು.

(4) ಸಾಮಾನ್ಯವಾಗಿ ಅನೇಕ ಪ್ರತಿಬಂಧಕಗಳನ್ನು ಜನತೆಯ ಸ್ವಾತಂತ್ರ್ಯದ ಮೇಲೆ ಮಾಡಿದ ಧಾಳಿಯೆಂದು ಪರಿಗಣಿಸುವುದಿಲ್ಲ. ಆದರೆ ಒಬ್ಬ ಮನುಷ್ಯನ

ಯೋಗ್ಯವಾದ ಕಾರ್ಯವನ್ನು ಮಾಡುವ ವೇಳೆಯಲ್ಲಿ ಆಗ ಪ್ರತಿಬಂಧಕಗಳು ಅವನ ಸ್ವಾತಂತ್ರ್ಯದ ಮೇಲಿನ ಆಕ್ರಮಣವೆಂದು ತಿಳಿಯುತ್ತಾನೆ.

"ಪ್ರತಿಬಂಧಕಗಳು ಆತ್ಮೀಯ ಸಂಪನ್ನತೆಯ ಪ್ರಯತ್ನಗಳನ್ನು ನಿರರ್ಥಕ ಮಾಡುತ್ತವೆಯೆಂದು ಗೋಚರವಾದಾಗ ಅವುಗಳನ್ನು ಮನುಷ್ಯರು ಕೇಡೆಂದು ಭಾವಿಸುತ್ತಾರೆ. ನಾವೆಲ್ಲರೂ ಜೀವನದಲ್ಲಿ ಅಪೇಕ್ಷಿಸುವುದು ನಮ್ಮ ಜೀವನದ ನೈತಿಕ ಮಟ್ಟವನ್ನು ಹೆಚ್ಚಿಸಲು ನಮ್ಮ ಸ್ವಂತ ಆರಂಭದ ಪ್ರಯತ್ನ ಈ ನಮ್ಮ ಸ್ವಂತ ಪ್ರಯತ್ನವನ್ನು ಮೊಟಕುಮಾಡಲು ಇರುವಂತೆ ನಿರ್ಬಂಧಗಳ ಪದ್ಧತಿಯನ್ನು ನಮ್ಮ ಸ್ವಾತಂತ್ರ್ಯದ ನಾಶ ಎಂದು ತಿಳಿಯುತ್ತೇವೆ. ನಾವು ನಮ್ಮ ಸ್ಥಿತಿಗತಿಗಳ ಮೇಲ್ಮೆಗಾಗಿ ಸತತವಾಗಿ ಪ್ರಯತ್ನಿಸುತ್ತೇವೆ. ನಾಗರೀಕರ ಮನಸ್ಸು ಸತತವಾಗಿ ಚುರುಕಾಗಿರತಕ್ಕದ್ದು. ನಾಗರೀಕರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸಲು ಅವರ ಇಚ್ಛೆಯ ಹಾಗೂ ಅಂತರ್ವಾಣಿಯು ವಿಚಾರ ಮಾಡುವ ಶಕ್ತಿಯನ್ನು ಪಡೆದಿರಬೇಕು".[31]

ರಾಜ್ಯದ ಹಸ್ತಕ್ಷೇಪವು ಅತಿ ಕನಿಷ್ಠವಾಗಿರಬೇಕು ಎಂಬ ಮಿಲ್‌ನ ಅಭಿಪ್ರಾಯವನ್ನು ಲಾಸ್ಕಿಯವರು ಒಪ್ಪುವುದಿಲ್ಲ. ಮನುಷ್ಯನ ನಡತೆಯೂ ಸಾಮಾಜಿಕವಾದದ್ದು. ಅವನ ನಡತೆಯೂ ಕಾರ್ಯಗಳು ಸಮಾಜದ ಮೇಲೆ ತಕ್ಕ ಪರಿಣಾಮಗಳನ್ನುಂಟು ಮಾಡುತ್ತವೆ. ಸಮಾಜದ ನಿಯಂತ್ರಣವಿಲ್ಲದ ಸ್ವಾತಂತ್ರ್ಯವು ಸ್ವೇಚ್ಛೆಯಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಸ್ವಾತಂತ್ರ್ಯವನ್ನು ರಕ್ಷಿಸುವ ಮುಖ್ಯ ಹಕ್ಕೆಂದರೆ ರಾಜ್ಯವನ್ನು ವಿರೋಧಿಸುವ ಹಕ್ಕು, ಅಧಿಕಾರವು ದುರಾಡಳಿತವಾಗಬಾರದು. ಆದ್ದರಿಂದ ಅರಾಜಕತೆಯು ಒದಗಿ ಬರಬೇಕಾದ ಸ್ಥಿತಿಯ ಹೆದರಿಕೆಯೇ ಅಧಿಕಾರದ ದುರಾಡಳಿತದಿಂದ ಸ್ವಾತಂತ್ರ್ಯವನ್ನು ಕಾಪಾಡುವ ರಕ್ಷೆ.

ಲಾಸ್ಕಿಯವರ ಚಿಂತನೆಯಲ್ಲಿ ಹಕ್ಕುಗಳೇ ಸ್ವಾತಂತ್ರ್ಯದ ತಿರುಳು. ಹಕ್ಕುಗಳನ್ನು ವಿವರಿಸುವಾಗ ಸವಲತ್ತುಗಳು ಇರಬಾರದೆಂದೂ ಖಚಿತವಾಗಿ ವಾದಿಸುತ್ತಾರೆ. ಕೆಲವರ ವಿಶೇಷ ಹಕ್ಕುಗಳು ಇತರರ ಸೌಖ್ಯದ ಅವಲಂಬನೆಯಾಗಬಾರದು.[32]

ಲಾಸ್ಕಿಯವರ ಪ್ರಕಾರ ಸ್ವಾತಂತ್ರ್ಯ ಮತ್ತು ಸಮಾನತೆಗಳಿಗೆ ವಿರೋಧಾಭಾಸವು ಇರುವುದಿಲ್ಲ. ಇಂಥ ಅಭಿಪ್ರಾಯಗಳನ್ನು ಲಾರ್ಡ್ ಆಕ್ಟನ್ ಮತ್ತು ಡಿಟಾಕ್ವಿಲೆಯವರು ತಿಳಿಸಿದ್ದರು. ಲಾಸ್ಕಿಯವರ ಪ್ರಕಾರ ಸಮಾನತೆಯೇ ಸ್ವಾತಂತ್ರ್ಯದ ತಳಹದಿ. ಎರಡೂ ಒಂದಕ್ಕೊಂದು ಪೂರಕ.[33]

ಸಮಾನತೆ ಎಂದರೆ ಎಲ್ಲರೂ ಎಲ್ಲಾ ವಿಷಯಗಳಲ್ಲಿಯೂ ಸರಿಸಮಾನರೆಂಬ ಅಭಿಪ್ರಾಯ ಬರುವುದಿಲ್ಲ. ಹಾಗೂ ಎಲ್ಲರಿಗೂ ಒಂದಲ್ಲ ಒಂದು ರೀತಿಯ ಸ್ಥಾನಮಾನಗಳಾಗಲೀ ಅಥವಾ ಪ್ರತಿಫಲವಾಗಲೀ ಇರಬೇಕೆಂಬ ಅರ್ಥ ಬರುವುದಿಲ್ಲ. ಸಮಾನತೆ ಎಂದರೆ ಯಾವನೊಬ್ಬ ಮನುಷ್ಯನಾಗಲೀ ತನ್ನ ನೆರೆಯವನಿಗಿಂತ ಮಿತಿಮೀರಿ

ಇರುವುದಕ್ಕೆ ಅವಕಾಶವಿರುವುದಿಲ್ಲ.[34] ಸಮಾಜದ ಪ್ರತಿಯೊಬ್ಬನಿಗೂ ಸಮಾನ ಅವಕಾಶಗಳೂ ಸಾಕಷ್ಟು ಇರಬೇಕು ಎಂದರೆ ಸಮಾನತೆ ಹಕ್ಕು ಇರತಕ್ಕದ್ದು. ಮೂಲಭೂತವಾದ ವಿಷಯಗಳಲ್ಲಿ ಎಲ್ಲರೂ ಒಂದೇ. ಸ್ವಾಭಾವಿಕ ಅಸಮಾನತೆಯನ್ನು ತೊಡೆದುಹಾಕುವುದು ಯಾವ ರಾಜಕೀಯ ವ್ಯವಸ್ಥೆಗೂ ಸಾಧ್ಯವಿಲ್ಲ. ಆದರೆ ಸಂಪ್ರದಾಯಗಳು, ಪದ್ಧತಿಗಳು, ಕಾನೂನುಗಳು, ಮುಂತಾದವುಗಳಿಂದ ಜನಪದ ಕೃತಕ ಅಸಮಾನತೆಯನ್ನು ತೊಡೆದುಹಾಕಲು ರಾಜ್ಯವು ಪ್ರಯತ್ನಿಸಬೇಕು. ರಾಜ್ಯದ ಮುಂದೆ ಯಾವ ಒಬ್ಬ ವ್ಯಕ್ತಿಯೂ ಶ್ರೇಷ್ಠನಲ್ಲ. ಎಲ್ಲರಿಗೂ ಜೀವನವನ್ನು ಸಭ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ತಕ್ಕ ಸೌಕರ್ಯಗಳು ಇರಲೇಬೇಕು. ಜೀವನಕ್ಕೆ ಅಗತ್ಯವಾದ ವೇತನ, ವಿದ್ಯಾಭ್ಯಾಸಗಳನ್ನು ಒದಗಿಸಿಕೊಡುವುದು ರಾಜ್ಯದ ಕರ್ತವ್ಯ. ಇವುಗಳಿಲ್ಲದಿದ್ದರೆ ಜೀವನವು ನಿರರ್ಥಕವಾಗುತ್ತದೆ. ಎಲ್ಲರಿಗೂ ಕೆಲವು ಅತ್ಯಗತ್ಯವಾಗಿ ಇರಬೇಕಾದ ಅವಕಾಶಗಳು ಇಲ್ಲದಿದ್ದಲ್ಲಿ ನಿರರ್ಥಕತೆಯ ಮನೋಭಾವವು ಬೆಳೆದು ಸ್ವಾತಂತ್ರ್ಯವು ಕುಂಠಿತವಾಗುತ್ತದೆ. ನಾಗರೀಕ ಪ್ರಪಂಚದಲ್ಲಿ ಜೀವನ ನೌಕೆಯನ್ನು ಉತ್ಸಾಹದಿಂದ ಸಾಗಿಸಲು ಕನಿಷ್ಠ ಪರಿಣಾಮದ ಆದಾಯವಾದರೂ ಇರಬೇಕು. ಆದ್ದರಿಂದ ಕೆಲವರಿಗೆ ವಿಶೇಷ ಸವಲತ್ತು ಇದ್ದರೇ, ಅದು ಸಾಧ್ಯವಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಜೀವನದ ಅವಶ್ಯಕತೆಗಳು ಎಲ್ಲರಿಗೂ ದೊರಕುವ ಭರವಸೆ ಇದ್ದಾಗ ಮಾತ್ರ ಸಮಾನತೆ ಸಾಧ್ಯ. ಸಮಾನತೆಯು ಸ್ವಾತಂತ್ರ್ಯಕ್ಕೆ ಅರ್ಥ ಕೊಡುವ ಸಾಧನ.[35]

ಲಾಸ್ಕಿಯವರ ಪ್ರಕಾರ ವ್ಯಕ್ತಿಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಹಾಗೂ ಆರ್ಥಿಕ ಸ್ವಾತಂತ್ರ್ಯಗಳು ಪರಸ್ಪರ ಹೆಣೆದುಕೊಂಡಿವೆ. ಆರ್ಥಿಕ ಸ್ವಾತಂತ್ರ್ಯವು ಸಮಾನತೆಯ ತತ್ವವನ್ನು ಅವಲಂಬಿಸಿದೆ. ಇವು ಕಾರ್ಯಗತವಾಗಲು ಸಮಾಜವಾದಿ ರಾಜ್ಯವು ಇರಬೇಕು. ಅದು ಪ್ರಜಾಪ್ರಭುತ್ವದ ಆಧಾರದ ಮೇಲೆ ರೂಪಿಸಲ್ಪಡಬೇಕು.

ಮೇಲ್ಕಂಡ ಲಾಸ್ಕಿಯವರ ವಿಚಾರಧಾರೆಯಲ್ಲಿ ಅನೇಕ ಕಿರು ಪುಸ್ತಕಗಳಿವೆ, ವಿರೋಧಾಭಾಸಗಳೂ ಇವೆ. ಲಾಸ್ಕಿಯವರು ಕೇವಲ ರಾಜ್ಯಶಾಸ್ತ್ರದ ಪಂಡಿತರು ಮಾತ್ರವಲ್ಲ. ಅವರು ತಮ್ಮ ದೇಶದ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಲೂ ಇದ್ದರು. ಲೇಬರ್‌ಪಾರ್ಟಿಯ ಕಾರ್ಯಕ್ರಮಗಳಲ್ಲಿ ಇವರ ಪಾತ್ರವು ಇದ್ದಿತು. ಇವರ ರಾಜಕೀಯ ಚಿಂತನೆಯಲ್ಲಿ ವಿಚಾರಧಾರೆಯೂ ಇದೆ, ಪ್ರಚಾರವೂ ಇದೆ. ಇವರು ಸ್ಫೂರ್ತಿ ಹೊಂದಿದ ಉದಾತ್ತ ಚಿಂತನಕಾರರೆಂದು ಹೇಳಬಹುದು.

ಅಡಿಟಿಪ್ಪಣಿಗಳು

1 ಮ್ಯಾಕ್ಸ್ ಬೆಲೋಪ್—ದಿ ಏಜ್ ಆಫ್ ಲಾಸ್ಕಿ ಇನ್ ದಿ ಪೋರ್‌ಸೈಟ್

2 ಫ್ರಾಂಕ್ ಥಾಕೂರ್‌ದಾಸ್—ರೀಸೆಂಟ್ ಇಂಗ್ಲಿಷ್ ಪೊಲಿಟಿಕಲ್ ಥಿಯರಿ (ದೆಹಲಿ) ಪು-283

3 ಜಿ. ಎನ್. ಶರ್ಮ—ಪೊಲಿಟಿಕಲ್ ಥಾಟ್ ಆಫ್ ಹೆರಾಲ್ಡ್. ಜೆ. ಲಾಸ್ಕಿ. ಪಿ ಪಿ–136–143.

4 ಫ್ರಾಂಕ್ ಥಾಕೂರ್‌ದಾಸ್—op cit –284.

5 ರೋಜರ್ ಸಾಲೋಟರ್—ಪ್ರೊಫೆಸರ್ ಲಾಸ್ಕಿ ಅಂಡ್ ಪೊಲಿಟಿಕಲ್‌ಸೈನ್ಸ್ ಇನ್ ಪೊಲಿಟಿಕಲ್ ಕ್ವಾರ್ಟಲೀ vxxi No. 3 Sept 1950.

6 ಲಾಸ್ಕಿ— ಗ್ರಾಮರ್ ಆಫ್ ಪಾಲಿಟಿಕ್ಸ್ p. 24–25.

7 ಈ ವಿಷಯವನ್ನು ಹೆಚ್ಚಾಗಿ ತಿಳಿಯಲು ಲಾಸ್ಕಿಯ ಸ್ಟೇಟ್ ಇನ್ ಥಿಯರಿ ಅಂಡ್ ಪ್ರಾಕ್ಟೀಸ್ ಮತ್ತು ಡೆಮೋಕ್ರಸಿ ಇನ್ ಕ್ರೈಸಿಸ್‌ಗಳನ್ನು ಓದಬೇಕು.

8 ಸ್ಟೇಟ್ ಇನ್ ಥಿಯರಿ ಅಂಡ್ ಪ್ರಾಕ್ಟೀಸ್‌ನಲ್ಲಿ ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ.

9 ಲಾಸ್ಕಿಯವರು ಪ್ರಾರಂಭದಲ್ಲಿ ಬರೆದ

1 ಅಥಾರಿಟಿ ಇನ್ ದಿ ಮಾಡರ್ನ್ ಸ್ಟೇಟ್

2 ಫೌಂಡೇಷನ್ಸ್ ಆಫ್ ಸಾವರಿಂಟಿ

3 ಸ್ಟಡೀಸ್ ಇನ್ ದಿ ಪ್ರಾಬಲಮ್ಸ್ ಆಫ್ ದಿ ಸಾವರಿಂಟಿಯಲ್ಲಿ ಬಹುತ್ವ ವಾದವನ್ನು ಸಮರ್ಥಿಸುತ್ತಾರೆ, ಆದರೆ ಗ್ರಾಮರ್ ಆಫ್ ಪಾಲಿಟಿಕ್ಸ್ ಬರೆಯುವ ವೇಳೆಗೆ ಆ ತತ್ವವನ್ನು ಬಿಟ್ಟು ಬಿಡುತ್ತಾರೆ.

10 ಈ ಅಭಿಪ್ರಾಯವನ್ನು ಲಾಸ್ಕಿಯವರು ಗ್ರಾಮರ್ ಆಫ್ ಪಾಲಿಟಿಕ್ಸ್, ಸ್ಟೇಟ್ ಇನ್ ಥಿಯರಿ ಅಂಡ್ ಪ್ರಾಕ್ಟಿಸ್ ಹಾಗೂ ಡೆಂಜರ್ಸ್ ಆಫ್ ಒಬಿಡಿಯನ್ಸ ಗ್ರಂಥಗಳಲ್ಲಿ ವಿವರಿಸಿದ್ದಾರೆ.

11 ಗ್ರಾಮರ್ ಆಫ್ ಪಾಲಿಟಿಕ್ಸ್ 9ನೇ ಅಧ್ಯಾಯ "ಎಕನಾಮಿಕ್ ಇನ್‌ಸ್ಟಿಟ್ಯೂಷನ್ಸ್" ನೋಡಿರಿ (p. 433–540)

12 ಡೆಮಾಕ್ರಸಿ ಇನ್ ಕ್ರೈಸಿಸ್, pp. 164–232 ಹಾಗೆಯೇ ಗ್ರಾಮರ್ ಆಫ್ ಪಾಲಿಟಿಕ್ಸ್ p. xvi ನೋಡಿ

13 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 89

14 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 91

15 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 91

16 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 93–4

17 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 89

18 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 89–90

19 ಗ್ರಾಮರ್ ಆಫ್ ಪಾಲಿಟಿಕ್ಸ್—ಪುಟ 90

20 ಗ್ರಾಮರ್ ಆಫ್ ಪಾಲಿಟಿಕ್ಸ್—90–91

21 ಸ್ಟೇಟ್ ಇನ್ ಥಿಯರಿ ಅಂಡ್ ಪ್ರಾಕ್ಟೀಸ್—ಪುಟ 5
22 ರೈಸ್ ಆಫ್ ಯುರೋಪಿಯನ್ ಲಿಬರಲಿಸಂ ನೋಡಿ
23 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—112–13
24 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—122–3
25 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—180
26 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—103
27 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—104
28 ಗ್ರಾಮರ್ ಅಫ್ ಪಾಲಿಟಿಕ್ಸ್ ಪುಟ—132–134
29 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—24–25
30 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—142
31 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—143–4
32 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—144
33 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—152
34 ಗ್ರಾಮರ್ ಆಫ್ ಪಾಲಿಟಿಕ್ಸ್ ಪುಟ—153
35 ಗ್ರಾಮರ್ ಆಫ್ ಪಾಲಿಟಿಕ್ಸ್ (ಪು. 153–4) ಹಾಗೂ ಲಿಬರ್ಟಿ ಇನ್ ದಿ ಮಾರ್ಡರ್ನ್ ಸ್ಟೇಟ್ (Chapter I ಪುಟ–44–5–1947 ಮುದ್ರಣ).

ಬಸವರಾಜಪ್ಪ

ಬುದ್ಧಿ ಮಾಂದ್ಯತೆ

ಗಣೇಶನಿಗೆ ಹತ್ತು ವರ್ಷಗಳು. ಅವನ ವಯಸ್ಸಿನ ಇತರ ಹುಡುಗರು ಶಾಲೆಯಲ್ಲಿ ನಾಲ್ಕು ಇಲ್ಲವೆ ಐದನೇ ತರಗತಿಯಲ್ಲಿದ್ದಾರೆ. ಆದರೆ ಗಣೇಶನಿಗೆ ಸ್ಪಷ್ಟವಾಗಿ ಮಾತನಾಡಲು, ಬಟ್ಟೆ ಹಾಕಿಕೊಳ್ಳಲು, ಸ್ನಾನಮಾಡಲು, ಓದಲು ಹಾಗೂ ಬರೆಯಲು ಗಡಿಯಾರ ನೋಡಿ ಘಂಟೆ ಹೇಳಲುಬಾರದು ಮತ್ತು ಎಡ ಬಲ ಯಾವುದು ಎಂದು ಹೇಳಲಾರ, ಹತ್ತು ಪೈಸೆಯ ಎರಡು ನಾಣ್ಯ ಕೊಟ್ಟು ಎಷ್ಟಾಯಿತು ಎಂದರೆ ಗೊತ್ತಿಲ್ಲ. ಕಪ್ಪು, ಬಿಳುಪು, ಕೆಂಪು ಮುಂತಾದ ಬಣ್ಣಗಳನ್ನು ಗುರುತಿಸಲಾರ. ಜ್ಞಾಪಕ ಶಕ್ತಿ ಕಡಿಮೆ, ಮುಂಗೋಪಿ ಮತ್ತು ಇನ್ನೂ ಹಲವಾರು ಸಮಸ್ಯೆಗಳನ್ನು ಇವನು ಹೊಂದಿದ್ದಾನೆ.

ಗಣೇಶನ ಸಮಸ್ಯೆ ಏನು?

ಗಣೇಶನ ಈ ಸ್ಥಿತಿಯನ್ನು ಮಾನಸಿಕ ಮತ್ತು ನರ ವಿಜ್ಞಾನ ವೈದ್ಯ ತಜ್ಞರು "ಬುದ್ಧಿ ಮಾಂದ್ಯತೆ" ಎಂದು ಕರೆಯುವರು. ವಿಶ್ವದಲ್ಲಿ ಎಲ್ಲರೂ ಒಂದೇ ರೀತಿ ಇರುವುದಿಲ್ಲ. ಉ.ದಾ. ಎತ್ತರವಾಗಿರುವವರು, ಗಿಡ್ಡಕ್ಕಿರುವವರು, ಬೆಳ್ಳಗಿರುವವರು, ಕಪ್ಪಗಿರುವವರು, ಬಲಾಢ್ಯರು, ದುರ್ಬಲರು, ಶ್ರೀಮಂತರು, ಕಡು ಬಡವರು, ದಪ್ಪಕ್ಕೆ ಅಥವಾ ಸಣ್ಣಕ್ಕಿರುವವರು ಹಾಗೂ ಇನ್ನೂ ವಿವಿಧ ರೀತಿಯ ಜನರನ್ನು ನಾವು ಕಾಣಬಹುದು. ಹಾಗೆಯೇ ನಮ್ಮ ಸುತ್ತಮುತ್ತಲಿನ ಜನಗಳಲ್ಲಿ ವಿವಿಧ ಬುದ್ಧಿಮಟ್ಟದ ಉ.ದಾ. ಅತ್ಯುತ್ತಮ, ಉತ್ತಮ, ಸರಾಸರಿ ಮತ್ತು ಕೆಳಮಟ್ಟದ ಬುದ್ಧಿಶಕ್ತಿ ಇರುವವರನ್ನು ನಾವು ಕಾಣಬಹುದು. ಯಾರ ಬುದ್ಧಿಶಕ್ತಿಯು ಜನ ಸಾಮಾನ್ಯರ ಬುದ್ಧಿಮಟ್ಟಕ್ಕಿಂತ ಕಡಿಮೆಇರುವುದೋ ಅಥವಾ ಯಾರ ಮಾನಸಿಕ ಬೆಳವಣಿಗೆಯು ಸರಾಸರಿ ಮಟ್ಟಕ್ಕಿಂತ ಕಡಿಮೆ ಇರುವುದೋ ಅಥವಾ ಯಾರಲ್ಲಿ ಮಾನಸಿಕ ಸ್ವಾಸ್ಥ್ಯ ಕೆಳಮಟ್ಟದಲ್ಲಿರವುದೋ ಅಥವಾ ಯಾರಲ್ಲಿ ಕ್ಷೀಣ ಮಾನಸಿಕ ಸಾಮರ್ಥ್ಯ ಇರುವುದೋ ಅಂತಹವರನ್ನು "ಬುದ್ಧಿ ಮಾಂದ್ಯರು" ಎಂದು ಹೇಳಬಹುದು. ಇದನ್ನು 'ಮಂಕುತನ', 'ಪೆದ್ದತನ' 'ದುರ್ಬಲ ಚಿತ್ತ'

ದಡ್ಡತನ ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ಇದು ಶೈಶಾವಸ್ಥೆಯಲ್ಲಿ ಕಾಣಿಸಿ ಕೊಳ್ಳುತ್ತದೆ.

ಬುದ್ಧಿ ಮಾಂದ್ಯತೆಯು ಮನೋರೋಗವೆ?

ಬುದ್ಧಿ ಮಾಂದ್ಯತೆ ಒಂದು 'ಸ್ಥಿತಿ'. ಖಂಡಿತವಾಗಿಯೂ ಇದು ಮನೋರೋಗವಲ್ಲ ಮತ್ತು ಈ ಸ್ಥಿತಿಯನ್ನು ತರಬೇತಿಕೊಟ್ಟು ಉತ್ತಮ ಪಡಿಸಬಹುದು. ಮನೋರೋಗಿಗಳಲ್ಲಿ ಸಾಮಾನ್ಯವಾಗಿ ವಿಚಿತ್ರ ವರ್ತನೆ, ಚಂಚಲ ಮನಸ್ಸು, ಹಿಂಜರಿತ, ಮಂಕಾಗಿರುವುದು, ಬೇಸರದಿಂದಿರುವುದು, ಆತ್ಮಹತ್ಯೆಯ ಯೋಚನೆ, ಬೇರೆಯವರಿಗೆ ಕಾಣದ ವಸ್ತು ಕೇಳದ ವಸ್ತುವಿಚಾರಗಳನ್ನು ಕಾಣುವುದು ಮತ್ತು ಕೇಳುವುದು, ಬೇರೆಯವರನ್ನು ವಿನಾಕಾರಣವಾಗಿ ಸಂಶಯಿಸುವುದು, ಯಾವ ಕಾರಣವೂ ಇಲ್ಲದೆ ಖಿನ್ನತೆ ಅಥವಾ ಸಂತೋಷವನ್ನು ವ್ಯಕ್ತಪಡಿಸುವುದು, ಮಾತಿನಲ್ಲಿ ತಾರುಮಾರುತನ, ನಿರಾಶೆ, ಒಂಟಿತನ, ನಡತೆ ಮತ್ತು ಆಲೋಚನಾ ಶಕ್ತಿಯಲ್ಲಿ ಲೋಪದೋಷ—ಮುಂತಾದವುಗಳನ್ನು ಕಾಣಬಹುದು. ಆದರೆ ಬುದ್ಧಿಮಾಂದ್ಯರಲ್ಲಿ ಈ ಲಕ್ಷಣಗಳು ಕಂಡುಬರುವುದಿಲ್ಲ.

ಬುದ್ಧಿ ಮಾಂದ್ಯರ ಲಕ್ಷಣಗಳು :

ದೈಹಿಕ ಲಕ್ಷಣಗಳು: ಹಲವಾರು ಸಂದರ್ಭಗಳಲ್ಲಿ ದೈಹಿಕ ಲಕ್ಷಣಗಳಿಂದಲೇ ಬುದ್ಧಿಮಾಂದ್ಯತೆಯನ್ನು ಗುರುತಿಸಬಹುದು. ಇವರು ಸಾಮಾನ್ಯವಾಗಿ ಸಣ್ಣ ಅಥವಾ ವಿಚಿತ್ರ ಆಕಾರದ ತಲೆ, ದೊಡ್ಡ ಅಥವಾ ಸಣ್ಣ ಮತ್ತು ಓರೆಯಾದ ಕಣ್ಣುಗಳು, ಮೆಳ್ಳಗಣ್ಣು, ದೊಡ್ಡ ಹಾಗೂ ಕೆಳಮಟ್ಟದ ಕಿವಿ, ದಪ್ಪ ಹಾಗೂ ಹೊರ ಚಾಚಿದ ನಾಲಿಗೆ ಮತ್ತು ಜೊಲ್ಲು ಸುರಿಸುವಿಕೆ, ಅಸಮನಾದ ಹಲ್ಲುಗಳು, ಹಣೆ ಮುಚ್ಚುವಂತಹ ಕೂದಲು, ಗಿಡ್ಡ ಕೈಕಾಲುಗಳು ಅಥವಾ ಚಪ್ಪಟೆಯಾದ ಕಾಲುಗಳು, ಮುಖದಲ್ಲಿ ಪೆದ್ದುತನದ ಕಳೆ—ಮುಂತಾದವುಗಳನ್ನು ಕಾಣಬಹುದು. ಇದರ ಜೊತೆಗೆ ಹಲವರಲ್ಲಿ ಮೂರ್ಛೆ ಅಥವಾ ಚರ್ಮರೋಗ ಇರಬಹುದು.

ಕುಂಠಿತ ಬೆಳವಣಿಗೆ

ಮಕ್ಕಳ ಬೆಳವಣಿಗೆಯು ಕೆಲವು ನಿರ್ದಿಷ್ಟವಾದ ಮಾದರಿಯಿಂದ ಕೂಡಿರುತ್ತವೆ. ಈ ಕೆಳಗೆ ಕೊಟ್ಟಿರುವ ಹಂತಗಳನ್ನು ಮಗುವು ನಿಧಾನವಾಗಿ ತಲುಪಿದರೆ ಅಥವಾ ಮೂರ್ಛೆ ಮತ್ತು ದೈಹಿಕ ದುರ್ಬಲತೆ ಇದ್ದರೆ ಮಗುವಿಗೆ ಬುದ್ಧಿಮಾಂದ್ಯತೆ ಇರಬಹುದು ಎಂದು ಅನುಮಾನಿಸಿ ತಜ್ಞರ ಸಲಹೆ ಪಡೆಯಬೇಕು. ಮಗುವಿನ ಮಾನಸಿಕ ವಯಸ್ಸಿಗೆ ಅನುಗುಣವಾಗಿ ಬೆಳವಣಿಗೆಯ ಕೆಲವು ಹಂತಗಳು ಹೀಗಿರುತ್ತವೆ :

ಹಂತ	ಸಾಮಾನ್ಯ ಬೆಳವಣಿಗೆಯ ವಯಸ್ಸು (ಸರಾಸರಿ ವಯಸ್ಸು)	ಮಗುವಿನ ಪ್ರಗತಿ
1.	ಮೊದಲ ಮೂರು ತಿಂಗಳು	ಕತ್ತು ನಿಲ್ಲುವುದು ಮತ್ತು ಶಬ್ದಕ್ಕೆ ಪ್ರತಿಕ್ರಿಯೆ
2.	1 ರಿಂದ 4 ತಿಂಗಳು	ಇತರರನ್ನು ನೋಡಿ ನಗುವುದು
3.	6 ತಿಂಗಳು	ಕುಳಿತುಕೊಳ್ಳಲು ಪ್ರಯತ್ನಿಸುವುದು
4.	5 ರಿಂದ 10 ತಿಂಗಳು	ಬೆಂಬಲವಿಲ್ಲದೆ ಕೂರುವುದು
5.	9 ರಿಂದ 14 ತಿಂಗಳು	ಬೆಂಬಲವಿಲ್ಲದೆ ನಿಲ್ಲುವುದು
6.	10 ರಿಂದ 20 ತಿಂಗಳು	ಚನ್ನಾಗಿ ನಡೆಯುವುದು
7.	16 ರಿಂದ 30 ತಿಂಗಳು	2–3 ಪದಗಳ ವಾಕ್ಯದಲ್ಲಿ ಮಾತನಾಡಬಲ್ಲದು
8.	24 ರಿಂದ 36 ತಿಂಗಳು (2–3 ವರ್ಷ)	ಸ್ವತಂತ್ರವಾಗಿ ತಿನ್ನುವುದು ಮತ್ತು ಕುಡಿಯುವುದು, ತನ್ನ ಹೆಸರನ್ನು ಹೇಳುವುದು
9.	36 ರಿಂದ 48 ತಿಂಗಳು (3-4 ವರ್ಷ)	ಮಲಮೂತ್ರ ವಿಸರ್ಜನೆಯ ಮೇಲೆ ಹಿಡಿತ, ಸಣ್ಣಪುಟ್ಟ ಅಪಘಾತಗಳನ್ನು ತಪ್ಪಿಸ ವುದು

(ಮೂಲ : ರಾಷ್ಟ್ರೀಯ ಬುದ್ಧಿಮಾಂದ್ಯ ಸಂಸ್ಥೆ, ಸಿಕಂದರಾಬಾದ್, 1988)

ಸಾಮಾಜಿಕ ಅಸಾಮರ್ಥ್ಯತೆ

ಬುದ್ಧಿಮಾಂದ್ಯರು ಸಾಮಾನ್ಯವಾಗಿ ತಮ್ಮನ್ನು ತಾವೇ ನೋಡಿಕೊಳ್ಳಲಾರರು. ಜೀವನೋಪಾಯಕ್ಕೆ ಒಂದು ಉದ್ಯೋಗಮಾಡಲು ಬೇಕಾದ ಚತುರತೆ ಮತ್ತು ಸಾಮರ್ಥ್ಯಗಳು ಕೆಳಮಟ್ಟದಲ್ಲಿರುತ್ತವೆ. ಆದ್ದರಿಂದ ಇತರರ ಸಹಾಯವಿಲ್ಲದೆ ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗುವುದಿಲ್ಲ. ಇವರು ಜೀವನದ ಹೆಚ್ಚು ಭಾಗವನ್ನು ಪರಾವಲಂಬಿಗಳಾಗೇ ಕಳೆದರೂ ಆಶ್ಚರ್ಯವಲ್ಲ. ಕೆಲವು ಗುಂಪಿನ ಬುದ್ಧಿಮಾಂದ್ಯರಿಗೆ ಸರಿಯಾಗಿ ಊಟ, ತಿಂಡಿ ಮಾಡಲು ಬರುವುದಿಲ್ಲ. ಇವರಿಗೆ ಏನು ಮಾಡಬೇಕೆಂದು ಬೇರೆಯವರು ಪದೇ ಪದೇ ಹೇಳುತ್ತಿರಬೇಕು. ಇವರು ಸಾಮಾನ್ಯವಾಗಿ ತಮ್ಮ ವಯಸ್ಸಿಗಿಂತಲೂ ಕಿರಿಯರೊಡನೆ ಆಟವಾಡಲು ಇಷ್ಟ ಪಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಉತ್ತಮ ಮಾರ್ಗದರ್ಶನವಿಲ್ಲದೆ ಸಮಾಜ ವಿರೋಧಿ ಕಾರ್ಯಗಳಲ್ಲಿ ತೊಡಗಬಹುದು. ಜನ್ಮತಃ ಇವರು ಸಮಾಜಗೇಡಿಗಳಲ್ಲ, ಆದರೆ ಇವರಿಗೆ ತಾವು ಮಾಡುತ್ತಿರುವ ಕಾರ್ಯಗಳ ಬಗ್ಗೆ ಸರಿ, ತಪ್ಪುಗಳ ಪ್ರಜ್ಞೆ ಸರಿಯಾಗಿ ಮತ್ತು ಚೆನ್ನಾಗಿ ಬೆಳೆದಿರುವುದಿಲ್ಲ. ನ್ಯಾಯ, ನೀತಿ, ಧರ್ಮ— ಮುಂತಾದುವುಗಳ ಬಗ್ಗೆ ಅರಿವು ಬಹಳ ಕಡಿಮೆ. ಈ ಕಾರಣದಿಂದಾಗಿ ಇವರು ಸುಲಭವಾಗಿ ಇತರರ ಪ್ರಭಾವಕ್ಕೆ ಒಳಗಾಗಿ ಕಳ್ಳತನ, ಸೂಳೆಗಾರಿಕೆ ಮುಂತಾದ ಸಮಾಜವಿರೋಧಿ ಕಾರ್ಯಗಳಿಗೆ ಬಲಿಯಾಗಬಹುದು. ಸಮರ್ಥ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಿಂದ ಇದನ್ನು ತಡೆಗಟ್ಟಬಹುದು.

ಬುದ್ಧಿಮಾಂದ್ಯರ ಸಾಮಾಜಿಕ ಬೆಳವಣಿಗೆಯನ್ನು "ಸಾಮಾಜಿಕ ಪ್ರೌಢಿಮೆ ಪ್ರಶ್ನೆಗಳನ್ನು" ಒಳಗೊಂಡಿರುವ ವಿಶೇಷ ಮಾನಸಿಕ ಪರೀಕ್ಷೆಯಿಂದ ನಿರ್ಧರಿಸ ಬಹುದು. ಇದು ಇವರ ಸಾಮಾಜಿಕ ವಯಸ್ಸನ್ನು ತಿಳಿಸುತ್ತದೆ. ಈ ಸಾಮಾಜಿಕ ಸಾಮರ್ಥ್ಯ ಸೂಚಿಯು ಬುದ್ಧಿಶಕ್ತಿ ಪರೀಕ್ಷೆಗೆ ಪೂರಕ ಮತ್ತು ಬುದ್ಧಿ ಮಾಂದ್ಯತೆಯ ಮಟ್ಟವನ್ನು ನಿರ್ಧರಿಸಲು ಬಹಳ ಉಪಯುಕ್ತ.

ಜ್ಞಾಪಕ ಮತ್ತು ಕಲಿಯುವ ಶಕ್ತಿ ಹಾಗೂ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಕಡಿಮೆ :

ಬುದ್ಧಿಶಕ್ತಿಯನ್ನು "ಹಿಂದಿನ ಅನುಭವಗಳಿಂದ ಪ್ರಯೋಜನ ಪಡೆಯುವ, ಉಪಯುಕ್ತವಾದ ವಿಷಯ ಮತ್ತು ನೈಪುಣ್ಯತೆಯನ್ನು ಕಲಿಯುವ, ಜೀವನದ ಹೊಸ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಅಮೂರ್ತವಾದ ಮತ್ತು ಸೃಜನಶೀಲವಾದ ರೀತಿ ಯಲ್ಲಿ ಯೋಚಿಸಬಲ್ಲ ಶಕ್ತಿ, ವಿಮರ್ಶಾತ್ಮಕವಾಗಿ ತೀರ್ಮಾನಗಳಿಗೆ ಬರುವ, ತಪ್ಪು ಗಳನ್ನು ಮಾಡದಿರುವ, ಮತ್ತು ಮುಂದಾಲೋಚನೆಯನ್ನು ಮಾಡುವ ಸಂಕೀರ್ಣ ಶಕ್ತಿ" ಎಂದು ವ್ಯಾಖ್ಯಾನಿಸಲಾಗಿದೆ. ಈ ಎಲ್ಲಾ ಅಂಶಗಳು ಇವರಲ್ಲಿ ಬಹಳ ಕಡಿಮೆ ಮಟ್ಟದಲ್ಲಿರುತ್ತವೆ. ಈ ಕಾರಣದಿಂದಾಗಿ ಇವರು ಜ್ಞಾಪಕ ಶಕ್ತಿ, ಕಲಿಯುವ ಶಕ್ತಿ, ಅರ್ಥಮಾಡಿಕೊಳ್ಳುವಶಕ್ತಿ, ಓದುವುದು, ಬರೆಯುವುದು, ಲೆಕ್ಕಮಾಡುವುದು—

ಮುಂತಾದುವುಗಳಲ್ಲಿ ಬಹಳ ಕೆಳಮಟ್ಟದಲ್ಲಿರುತ್ತಾರೆ. ಈ ಕ್ಲಿಷ್ಟ ಸಮಸ್ಯೆಗಳಿಂದಲೇ ಇವರಿಗೆ ವಿದ್ಯೆ ಹೆಚ್ಚಾಗಿ ಅಂಟುವುದಿಲ್ಲ ಮತ್ತು ಸಾಮಾನ್ಯ ಶಾಲೆಗಳಿಗೆ ಕಳುಹಿಸಿದರೆ ಸರ್ವೇಸಾಮಾನ್ಯವಾಗಿ ಅನುತ್ತೀರ್ಣರಾಗುತ್ತಾರೆ.

ಇವರ ಜ್ಞಾನೇಂದ್ರಿಯಗಳ ಗ್ರಹಣ ಶಕ್ತಿ ಸರಾಸರಿ ಮಟ್ಟಕ್ಕಿಂತ ಕಡಿಮೆ ಇರುವುದರಿಂದ ಇವರಿಗೆ ಚುರುಕಾಗಿ, ಸುಲಭವಾಗಿ ಮತ್ತು ಸಮರ್ಥವಾಗಿ ಅರ್ಥಮಾಡಿಕೊಳ್ಳುವ, ನೋಡುವ, ಕೇಳುವ, ಸವಿಯುವ (ಮೂಸುವ) ಮತ್ತು ಸ್ಪರ್ಶಿಸುವ ಕ್ರಿಯೆಗಳು ಸರಾಸರಿ ಮಟ್ಟಕ್ಕಿಂತ ಕಡಿಮೆ ಇರುತ್ತವೆ. ಆದ್ದರಿಂದ ಇವರಿಗೆ ಯಾವುದನ್ನಾದರು ಅರ್ಥ ಮಾಡಿಸಬೇಕಾದರೆ ಸುಲಭವಾಗಿ ಮತ್ತು ಸರಳವಾಗಿ ತಿಳಿಸಬೇಕು ಕಲಿಯುವಶಕ್ತಿ ಬಹಳ ಕಡಿಮೆ. ಕಲಿತದ್ದನ್ನು ಕೇವಲ ಸ್ವಲ್ಪ ಹೊತ್ತು ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯ. ಹಲವು ವೇಳೆ ಏನೂ ಜ್ಞಾಪಕದಲ್ಲಿ ಉಳಿಯದಿರಬಹುದು. ಇವರು ಯಾವುದೇ ಹೊಸದನ್ನು ಇತರರಂತೆ ಸುಲಭವಾಗಿ ಕಲಿಯುವುದು ಕಷ್ಟ ಮತ್ತು ಇವರ ಕಲಿಕೆ ಬಹಳ ಮಂದಗತಿಯಲ್ಲಿ ಸಾಗುತ್ತದೆ. ಇವರು ವಸ್ತುನಿಷ್ಠ 'ಜ್ಞಾಪಕಶಕ್ತಿ', 'ಕಲಿಕಾಶಕ್ತಿ', 'ಏಕಾಗ್ರತೆ', 'ಗ್ರಹಣಶಕ್ತಿ', 'ಪದ ಅರ್ಥ', 'ಪ್ರತಿಕ್ರಿಯಾ ಕಾಲ', 'ಅಮೂರ್ತ ಯೋಚನಾ ಶಕ್ತಿ'—ಇನ್ನೂ ಮುಂತಾದ ಮನೋವೈಜ್ಞಾನಿಕ ಪರೀಕ್ಷೆಗಳಲ್ಲಿ ಕೆಳಮಟ್ಟವನ್ನು ತೋರುತ್ತಾರೆ.

ಏಕಾಗ್ರತೆ ಇಲ್ಲದಿರುವಿಕೆ :

ಇವರ ಲಕ್ಷ್ಯವನ್ನು ಸೆಳೆಯುವುದು ಮತ್ತು ಅದನ್ನು ಬೇಕಾದ ಸಮಯದತನಕ ಹಿಡಿದು ನಿಲ್ಲಿಸಿಕೊಳ್ಳುವುದು ಅಥವಾ ಮುಂದುವರಿಸಿಕೊಳ್ಳುವುದು ಬಹಳ ಕಷ್ಟ. ಇವರು ಆಸಕ್ತಿ ತಳೆಯುವ ವಿಷಯಗಳು ತುಂಬಾ ಕಡಿಮೆ ಮತ್ತು ಇವರ ಮನಸ್ಸು ಸುಲಭವಾಗಿ ಚಂಚಲತೆಗೆ ಒಳಗಾಗುತ್ತದೆ. ಆದ್ದರಿಂದ ವಸ್ತುಗಳ ಬಗ್ಗೆ ಹಾಗೂ ಚಟುವಟಿಕೆಗಳಲ್ಲಿ ಏಕಾಗ್ರತೆಯನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದಾಗಿ ಇವರು ಬೇರೆಯವರಂತೆ ಯಾವುದೇ ಕೆಲಸವನ್ನು ಸತತವಾಗಿ ಮಾಡಲಾರರು.

ನಿಧಾನ ಪ್ರತಿಕ್ರಿಯೆ :

ಇವರು ಬೇರೆಯವರು ಹೇಳಿದ್ದಕ್ಕೆ, ಕೇಳಿದ್ದಕ್ಕೆ, ಮಾಡಿದ್ದಕ್ಕೆ, ಇಲ್ಲವೇ ಸುತ್ತಮುತ್ತಲಿನ ಆಗುಹೋಗುಗಳಿಗೆ ನಿಧಾನ ಪ್ರತಿಕ್ರಿಯೆ ತೋರುತ್ತಾರೆ. ಕೆಲವು ಸಂದರ್ಭಗಳಲ್ಲಿ ಪ್ರತಿಕ್ರಿಯೆಯೇ ಇಲ್ಲದಿರಬಹುದು. ಕೆಲವು ವರ್ಗದ ಬುದ್ಧಿ ಮಾಂದ್ಯರಲ್ಲಿ, ತುರ್ತು ಸಂದರ್ಭಗಳಲ್ಲಿ ಹಲವು ಸಾರಿ ಆತ್ಮ ರಕ್ಷಣೆಯ ಪ್ರೇರಣೆ ಕೂಡ ಕಂಡುಬರದಿರಬಹುದು. ಜೊತೆಗೆ ಇವರು ತಮ್ಮ ಆಲೋಚನೆ, ಅವಶ್ಯಕತೆ ಮತ್ತು ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದಿಲ್ಲ. ಬುದ್ಧಿಮಾಂದ್ಯರು ಹಲವಾರು

ಸಂದರ್ಭದಲ್ಲಿ ಕೇವಲ ಸಣ್ಣಪುಟ್ಟ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ತೋರಿಸುವುದಿಲ್ಲ. ಕೆಲವು ವೇಳೆ ಘಾಸಿಗೊಳಿಸುವ ಪ್ರಚೋದನೆಗಳಿಂದ ಇಲ್ಲವೇ ಅಪಘಾತಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮಾಡದಿರಬಹುದು.

ಮುಂಗೋಪ :

ಇವರಿಗೆ ತಮ್ಮ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಕಡಿಮೆ. ಇವರು ವಸ್ತುಗಳನ್ನು ಎತ್ತಿ ಬೀಸಾಡುವುದು, ಗಾಯಮಾಡಿಕೊಳ್ಳುವುದು, ಇಲ್ಲವೇ ಇತರರನ್ನು ಗಾಯಗೊಳಿಸುವುದು ಉಂಟು. ಮತ್ತೆ ಕೆಲವರಲ್ಲಿ ಅತಿ ಚಟುವಟಿಕೆಯನ್ನು ಕಾಣಬಹುದು. ಇವರ ಭಾವನೆಗಳು ಸುಲಭ ಭಾವಗಳಾದ ಸುಖ, ಭಯ, ಕೋಪ, ದ್ವೇಷ ಮತ್ತು ಆಶ್ಚರ್ಯಗಳಿಗೆ ಮಾತ್ರ ಸೀಮಿತಗೊಂಡಿರುತ್ತವೆ.

ಸಮನ್ವಯತೆಯ ಕೊರತೆ :

ಇವರಲ್ಲಿ ಕೆಲವರಿಗೆ ಚೀಪಲು, ಅಗಿಯಲು, ತಿನ್ನಲು, ಮತ್ತು ತಮ್ಮ ಕೈ ಕಾಲುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಬರುವುದಿಲ್ಲ.

ಬುದ್ಧಿಮಾಂದ್ಯರ ಸಂಖ್ಯೆ :

ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲಿ ಯಾವುದೇ ಅಖಿಲಭಾರತ ಮಟ್ಟದ ಸಮೀಕ್ಷೆಯನ್ನು ಮಾಡಿಲ್ಲ. ಒಂದು ಅಂದಾಜಿನ ಪ್ರಕಾರ ಪ್ರತಿ ನೂರು ಜನಸಂಖ್ಯೆಗೆ ಮೂರು ಅಥವಾ ನಾಲ್ಕು ಜನ ಬುದ್ಧಿಮಾಂದ್ಯರಿರಬಹುದು ಎಂದು ವಿಶ್ವದಾದ್ಯಂತ ತಜ್ಞರ ಅಭಿಪ್ರಾಯ. ವಿಶೇಷ ಗಮನ ಮತ್ತು ಬೇರೆಯವರ ಸಹಾಯ ಬೇಕಾಗುವ ತೀವ್ರ ಬುದ್ಧಿಮಾಂದ್ಯರ ಸಂಖ್ಯೆ ನೂರಕ್ಕೆ ಒಂದು. ಬುದ್ಧಿಮಾಂದ್ಯರಲ್ಲಿ ರೋಗ ನಿರೋಧಕ ಶಕ್ತಿಯು ಸಾಮಾನ್ಯವಾಗಿ ಕಡಿಮೆ. ಆದ್ದರಿಂದ ಇವರು ಅನೇಕ ರೋಗಗಳಿಗೆ ತುತ್ತಾಗಿ ವಯಸ್ಸಾದಂತೆಲ್ಲ ಇವರ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತದೆ. ಲಿಂಗ ಬೇಧವಿಲ್ಲದೆ ಸಮಾಜದ ಎಲ್ಲ ವರ್ಗದಲ್ಲೂ, ಧರ್ಮದಲ್ಲೂ ಇವರನ್ನು ಕಾಣಬಹುದು.

ಬುದ್ಧಿಮಾಂದ್ಯರ ವರ್ಗೀಕರಣ :

ಹಿಂದಿನ ವರ್ಗೀಕರಣದ ಪ್ರಕಾರ ಇವರನ್ನು (1) ಜಡ ಬುದ್ಧಿಯವರು, (2) ಮೂಢರು ಮತ್ತು (3) ದಡ್ಡರು ಎಂದು ಮೂರು ಗುಂಪುಗಳಾಗಿ ವಿಂಗಡಿಸಲಾಗುತ್ತಿತ್ತು. ತೀರಾ ಇತ್ತೀಚಿನ ವರ್ಗೀಕರಣದ ಪ್ರಕಾರ [ಅಮೆರಿಕದ ಮನೋವಿಜ್ಞಾನ ಸಂಘ APA, DSM-III ; ವಿಶ್ವ ಆರೋಗ್ಯ ಸಂಸ್ಥೆ ICD–9 ; ಮತ್ತು AAMD] ಬುದ್ಧಿಮಾಂದ್ಯರನ್ನು 5 ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ವರ್ಗೀಕರಣಕ್ಕೆ ಉಪಯೋಗಿಸಿರುವ ಅಳತೆಗೋಲೆಂದರೆ ಬುದ್ಧಿಮಾಂದ್ಯನು ವಸ್ತುನಿಷ್ಠ ಬುದ್ಧಿಶಕ್ತಿ

ಪರೀಕ್ಷೆಯಲ್ಲಿ ಗಳಿಸಿದ ಐ. ಕ್ಯೂ. ಅಥವಾ ಬುದ್ಧ್ಯಂಕ (I Q.). ICD ಹಾಗೂ DSM ನಡುವೆ ಬುದ್ಧಿಮಾಂದ್ಯರ ವರ್ಗೀಕರಣದಲ್ಲಿ ಸಾಮ್ಯವಿದ್ದರೂ ವರ್ಗೀಕರಣದಲ್ಲಿ ಉಪಯೋಗಿಸಿಕೊಳ್ಳಲಾಗಿರುವ ಬುದ್ಧ್ಯಂಕದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಅದನ್ನು ಈ ಕೆಳಗೆ ಕೊಡಲಾಗಿದೆ.

ಬುದ್ಧ್ಯಂಕ (I.Q.) ICD ಪ್ರಕಾರ	ಬುದ್ಧ್ಯಂಕ (I.Q.) DSM ಪ್ರಕಾರ	ಬುದ್ಧಿ ಮಾಂದ್ಯತೆಯ ವರ್ಗೀಕರಣ	ಸರಾಸರಿ ಬುದ್ಧಿಶಕ್ತಿಯ ಮಕ್ಕಳ ವಯಸ್ಸಿಗೆ ಸಮ (ಮಾನಸಿಕ ವಯಸ್ಸು)
71 ರಿಂದ 85	68 ರಿಂದ 85	ಬುದ್ಧಿ ಮಾಂದ್ಯತೆಯ ಅಂಚಿನಲ್ಲಿರುವವರು (Borderline MR)	ಸರಾಸರಿಗಿಂತ ಸ್ವಲ್ಪ ಕಡಿಮೆ ಮಂದಗತಿಯ ಕಲಿಕೆಯವರು
50 ರಿಂದ 70	52 ರಿಂದ 67	ಅಲ್ಪ ಬುದ್ಧಿ ಮಾಂದ್ಯರು (Mild MR)	8–11 ವರ್ಷ ಅಲ್ಪ ಸ್ವಲ್ಪ ವಿದ್ಯೆ ಕಲಿಸಬಹುದು
35 ರಿಂದ 49	36 ರಿಂದ 51	ಸಾಧಾರಣ ಬುದ್ಧಿ ಮಾಂದ್ಯರು (Moderate MR)	4–7 ವರ್ಷ ತರಬೇತಿ ಕೊಡಬೇಕು
20 ರಿಂದ 34	20 ರಿಂದ 35	ತೀವ್ರ ಬುದ್ಧಿ ಮಾಂದ್ಯರು (Severe MR)	4 ಇಲ್ಲವೆ 5 ವರ್ಷ ತರಬೇತಿ ಕೊಡಬೇಕು
20 ಕ್ಕಿಂತ ಕಡಿಮೆ	20 ಕ್ಕಿಂತ ಕಡಿಮೆ	ಅತಿತೀವ್ರ ಬುದ್ಧಿ ಮಾಂದ್ಯರು (Profound MR)	4 ವರ್ಷಕ್ಕಿಂತ ಕಡಿಮೆ ಸಂಪೂರ್ಣ ಪರಾವಲಂಬಿಗಳು

(ಸರಾಸರಿ ಬುದ್ಧಿಶಕ್ತಿ 90 ರಿಂದ 110 ಮತ್ತು ಮೇಲೆ)

ಬುದ್ಧಿ ಮಾಂದ್ಯತೆಯಲ್ಲಿ ಕೆಲವು ನೈದಾನಿಕ ನಮೂನೆಗಳನ್ನು ನಾವು ಕಾಣಬಹುದು. ಮೂಲತಃ ಇವು ಜೈವಿಕ ಕಾರಣಗಳಿಂದ ಉಂಟಾಗಬಹುದು. ಇವುಗಳಲ್ಲಿ ಮುಖ್ಯವಾದುವು :

(1) ಡೌನ್ ಲಕ್ಷಣದ ಬುದ್ಧಿ ಮಾಂದ್ಯರು (Down Syndrome)
ಹಿಂದಿನ ಮಂಗೋಲ್ತನದ ಲಕ್ಷಣದವರು (Mongolism))
(2) ಅಭಿಘಾತ ಮಂಕುತನ (Traumatic Amentia)
(3) ಕಿರುತಲೆ (Microcephaly)
(4) ದಡ್ಡತಲೆ (Macrocephaly) ಅಥವಾ ಪೆಡೆಸೆಣೆ ಬುದ್ಧಿಮಾಂದ್ಯರು
(5) ನೀರುತಲೆ (Hydrocephaly)

(6) ಹೆಡ್ಡ ಗುಜ್ಜತನ (Cretinism)
(7) ಫೀನೈಲ್ ಕಿಟೋನೋರಿಯಾ (Phenyl Ketonuria P.K.U.)
(8) ಅನುವಂಶೀಯ ಜಡಗುಡುರು (Amaurotic Family Idiocy)

ಬುದ್ಧಿಮಾಂದ್ಯತೆಗೆ ಕಾರಣಗಳು

ಹೆರಿಗೆಗಿಂತ ಮುಂಚಿನ ಕಾರಣಗಳು

ಮಗುವು ತಾಯಿಯ ಗರ್ಭದಲ್ಲಿರುವಾಗ ಅದರಲ್ಲೂ ಮೊದಲ ಮೂರು ತಿಂಗಳ ಕಾಲದಲ್ಲಿ ಗರ್ಭಿಣಿಸ್ತ್ರೀಗೆ ಬರುವ ದಡಾರ, ಚಿಕ್ಕಮ್ಮ, ವೈರಸ್, ಪರಂಗಿರೋಗ, ಸಕ್ಕರೆ ಖಾಯಿಲೆ, ಮೂರ್ಛೆ, ಮದ್ಯಸೇವನೆ, ಹೊಟ್ಟೆಯ ಮೇಲ್ಭಾಗಕ್ಕೆ ಅಪಘಾತ ದಿಂದ ಪೆಟ್ಟಾಗುವುದು, ಸಮತೋಲನ ಆಹಾರ ಸೇವಿಸದಿರುವುದು ಮತ್ತು ಗರ್ಭಿಣಿ ಸ್ತ್ರೀಯ ಹೊಟ್ಟೆಭಾಗವನ್ನು ಕ್ಷ-ಕಿರಣಕ್ಕೆ ಒಳಪಡಿಸುವುದು—ಮುಂತಾದವುಗಳಿಂದ ಮಗುವಿಗೆ ಬುದ್ಧಿ ಮಾಂದ್ಯತೆ ಬರಬಹುದು.

ಹೆರಿಗೆ ಸಮಯದ ಕಾರಣಗಳು

ದೀರ್ಘವಾದ ಹೆರಿಗೆ ನೋವು, ಮಗುವಿನ ತಲೆಯು ಜನನ ನಾಳದಲ್ಲಿ ಮೇಲ್ಮುಖ ವಾಗಿ ಬಹಳ ಸಮಯ ಇರುವುದು, ಜನನವಾದ ಕೂಡಲೇ ಮಗುವಿಗೆ ಉಸಿರಾಟದ ತೊಂದರೆ ಮತ್ತು ಅವಧಿಗೂ ಮೊದಲೆ ಜನನ—ಈ ಕಾರಣಗಳಿಂದ ಮಗುವಿನ ಮಿದುಳು ಹಾನಿಗೊಳಗಾಗಿ ಬುದ್ಧಿಮಾಂದ್ಯತೆ ಉಂಟಾಗಬಹುದು.

ಹೆರಿಗೆ ನಂತರದ ಕಾರಣಗಳು

ಹೆರಿಗೆ ನಂತರ ಮಗುವಿಗೆ ಬರುವ ಜ್ವರ, ಮಿದುಳುಜ್ವರ, ಪದೇಪದೇ ಬರುವ ಹಿಡಿತವಿಲ್ಲದ ಮೂರ್ಛೆ ಮತ್ತು ಸ್ಮೃತಿ ಕಳೆದುಕೊಳ್ಳುವುದು, ಅಪಘಾತಗಳಿಂದ ತಲೆಗೆ ಪೆಟ್ಟಾಗುವುದು, ತೀವ್ರಬೇಧಿ, ಅಮಶಂಕೆ, ಪೌಷ್ಟಿಕಾಂಶದ ಕೊರತೆ ಮತ್ತು ಕಾಮಾಲೆ ರೋಗ ಇವುಗಳು ಬುದ್ಧಿಮಾಂದ್ಯತೆಗೆ ಕಾರಣಗಳಾಗಬಹುದು.

ಅನುವಂಶಿಕ ಕಾರಣಗಳು

ಒಂದು ಕುಟುಂಬದಲ್ಲಿ ತಂದೆ-ತಾಯಿಗಳಲ್ಲಿ ಅಥವಾ ಪೂರ್ವಜರಲ್ಲಿ ಯಾರಿಗಾ ದರೂ ಬುದ್ಧಿಮಾಂದ್ಯತೆ ಇದ್ದರೆ ಆ ವಂಶದಲ್ಲಿ ಬುದ್ಧಿಮಾಂದ್ಯ ಮಗು ಹುಟ್ಟುವ ಸಾಧ್ಯತೆ ಇದೆ.

ಅಂತಃಸ್ರಾವಗಳ ಅಸಮತೆ, ಜೀವನಸ್ತುಕರಣ ಮತ್ತು ಬಣ್ಣದಂಡ ನ್ಯೂನತೆ ಕಾರಣಗಳು

ಪ್ರಯೋಗಗಳಿಂದ ದೃಢಪಟ್ಟಿರುವ ಮತ್ತು ಇನ್ನೂ ಅವ್ಯಕ್ತವಾದ ಕೆಲವು ಕಾರಣಗಳಿಂದ ಬುದ್ಧಿಮಾಂದ್ಯತೆ ಉಂಟಾಗಬಹುದು. ಉದಾ. ಆಹಾರ ಪದಾರ್ಥಗಳು

ಜೀವಕೋಶದಲ್ಲಿ ಜೀವವಸ್ತುವಾಗುವ ಕ್ರಿಯೆಯಲ್ಲಿ ಉಂಟಾಗುವ ಅಡಚಣೆಗಳಿಂದ; ಜೀವಕೋಶದ ವರ್ಣದಂಡಗಳಲ್ಲಿನ ನ್ಯೂನತೆಗಳಿಂದ; ಅಂತಃಸ್ರಾವಗಳ ಅಸಮತೆಯಿಂದ ಅಥವಾ ತಾರುಮಾರಿನಿಂದ (ಉದಾ. ಪಿಟ್ಯೂಟರಿ ಮತ್ತು ಥೈರಾಯಿಡ್ ಗ್ರಂಥಿ; ಮಿದುಳಿನ ತಂತಿಯ (Brain Tumor) ಬೆಳವಣಿಗೆಯಿಂದ; ವಿಕಿರಣತೆಗೆ ಒಳಗಾಗಿ ಗುಣಾಣುಗಳ ವಿಕೃತದಿಂದ; ಮಿದುಳಿನ ಪೂರೆಯುರಿತ ಮತ್ತು ರಕ್ತಸ್ರಾವವಾಗುವುದರಿಂದ; ಕಿಣ್ವದ (Enzyme) ಕೊರತೆಯಿಂದ; ಅಯೋಡಿನ್ ಕೊರತೆಯಿಂದ— ಮುಂತಾದುವುಗಳಿಂದ ಈ ಸ್ಥಿತಿ ಉಂಟಾಗಬಹುದು.

ಅನಾರೋಗ್ಯಕರ ವಾತಾವರಣ

ತಂದೆ–ತಾಯಿಗಳ, ಹಾಗೂ ಪೋಷಕರ ತಿರಸ್ಕಾರಕ್ಕೆ ಗುರಿಯಾಗಿ ಪ್ರೀತಿ, ಮಮತೆ, ಕರುಣೆ, ಹಾಗೂ ಪ್ರೋತ್ಸಾಹವಿಲ್ಲದ ಮತ್ತು ಆರೋಗ್ಯಕರವಾದ ಬೆಳವಣಿಗೆಗೆ ಪ್ರಚೋದನೆ ನೀಡದ, ಉತ್ಸಾಹವಿಲ್ಲದ ಬರಡು ವಾತಾವರಣಗಳಲ್ಲಿ ಬೆಳೆಯುವ ಮಕ್ಕಳು ಬುದ್ಧಿಮಾಂದ್ಯತೆಗೆ ತುತ್ತಾಗಬಹುದು.

ಬುದ್ಧಿಮಾಂದ್ಯತೆಯನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುಂಜಾಗರೂಕತೆ

1. ಅರ್ಹ ಹಾಗೂ ತಜ್ಞ (ಸ್ತ್ರೀ ಮತ್ತು ಪ್ರಸೂತಿ) ವೈದ್ಯರಿಂದ ಗರ್ಭವತಿಯು ತಪಾಸಣೆ ಮಾಡಿಸಬೇಕು, ಮತ್ತು ಅವರ ಸಲಹೆಯಂತೆ ನಡೆಯಬೇಕು.
2. ಔಷಧಿ ಮತ್ತು ಸೂಜಿ ಮದ್ದುಗಳ ಸೇವನೆಯು ಅನಿವಾರ್ಯವಾದರೆ ತಜ್ಞ ವೈದ್ಯರ ಸಲಹೆ ಪಡೆಯಬೇಕು.
3. ಗರ್ಭವತಿಯು ಸಮತೋಲನ ಆಹಾರವನ್ನು ಸೇವಿಸಬೇಕು.
4. ಗರ್ಭವು ಬೇಡ ಎಂದು ನಿರ್ಧರಿಸಿ ಗರ್ಭಪಾತ ಮಾಡಿಸುವ ಯೋಚನೆ ಇದ್ದಲ್ಲಿ ಅದನ್ನು ನುರಿತ ವೈದ್ಯರಿಂದ ಆಸ್ಪತ್ರೆಯಲ್ಲೇ ಮಾಡಿಸಬೇಕು.
5. ಧನುರ್ವಾಯು ಬರದಂತೆ ಗರ್ಭಿಣಿಯು ಚುಚ್ಚುಮದ್ದು ಹಾಕಿಸಿಕೊಳ್ಳಬೇಕು.
6. ಗರ್ಭಿಣಿಯು ಭಾರವಾದ ವಸ್ತುಗಳನ್ನು ಎತ್ತುವುದು, ನುಣುಪಾದ ನೆಲದಲ್ಲಿ ಓಡಾಡುವುದು, ಮರ ಹತ್ತುವುದು, ಎತ್ತರವಾದ ಕುರ್ಚಿ ಅಥವಾ ಏಣಿ ಏರುವುದು–ಮುಂತಾದುವುಗಳಿಂದ ದೂರವಿದ್ದರೆ ಅಪಘಾತ ತಪ್ಪಿಸಬಹುದು.
7. ಗರ್ಭಿಣಿಸ್ತ್ರೀಯರನ್ನು ಅನಾವಶ್ಯಕವಾಗಿ ಕ್ಷ-ಕಿರಣಕ್ಕೆ ಒಳಪಡಿಸಬಾರದು.
8. ಹೆರಿಗೆಯನ್ನು ನುರಿತ ತಜ್ಞರಿಂದಲೇ ಮಾಡಿಸಬೇಕು. ಮತ್ತು ಸಾಧ್ಯವಾದಷ್ಟುಮಟ್ಟಿಗೆ ಹೆಚ್ಚು ಸೌಕರ್ಯವಿರುವ ಆಸ್ಪತ್ರೆಯಲ್ಲೇ ಮಾಡಿಸಬೇಕು.

9. ಹುಟ್ಟಿದ ಕೂಡಲೇ ಮಗು ಅಳದಿದ್ದರೆ, ನೀಲಿ ಬಣ್ಣಕ್ಕೆ ತಿರುಗಿದ್ದರೆ ಅಥವಾ ಅಸಹಜವಾದ ಲಕ್ಷಣಗಳು ಕಂಡುಬಂದರೆ ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸಬೇಕು.
10. ಮಗುವಿಗೆ ಒಂದು ವರ್ಷ ತುಂಬುವುದರೊಳಗಾಗಿ ಗಂಟಲುಬೇನೆ, ನಾಯಿ ಕೆಮ್ಮು, ಧನುರ್ವಾಯು, ಪೋಲಿಯೋ, ದಡಾರ ಮತ್ತು ಕ್ಷಯ-ಮುಂತಾದುವು ಬರದಂತೆ ಚುಚ್ಚುಮದ್ದು ಹಾಕಿಸಬೇಕು.
11. ಮಗುವಿಗೆ ತುಂಬಾ ಜ್ವರವಿದ್ದರೆ (40°ಸೆ ಅಥವಾ 104°ಎಫ್ ಮೇಲೆ) ಮಿದುಳು ಹಾನಿಗೊಳಗಾಗಬಹುದು. ಆದ್ದರಿಂದ ಜ್ವರವನ್ನು ಕೂಡಲೆ ಇಳಿಸಬೇಕು. ಪ್ರಥಮ ಚಿಕಿತ್ಸಾ ಕ್ರಮವಾಗಿ ಒಂದು ಬಟ್ಟೆಯ ತುಂಡನ್ನು ತಣ್ಣೀರಿನಲ್ಲಿ ನೆನೆಸಿ ಮಗುವಿನ ಹಣೆ ಮತ್ತು ಕೈಕಾಲುಗಳ ಮೇಲೆ ಇಡಬೇಕು. ಮಗುವಿಗೆ ಸಕ್ಕರೆ ಅಥವಾ ಬೆಲ್ಲ ಹಾಕಿದ ನೀರನ್ನು ಕುಡಿಯಲು ಕೊಡಬೇಕು. ತಕ್ಷಣ ವೈದ್ಯಕೀಯ ಸೇವೆ ಪಡೆಯಬೇಕು.
12. ಮಗುವಿಗೆ ಮೂರ್ಛೆ ಇದ್ದರೆ ತಜ್ಞ ಮನೋ ವೈದ್ಯರ ಸಲಹೆ ಮೇರೆಗೆ ಔಷಧಿ ಕೊಡಿಸಬೇಕು ಮತ್ತು ಮೂರ್ಛೆಯನ್ನು ನಿಯಂತ್ರಿಸಲು ಸಮಯಕ್ಕೆ ಸರಿಯಾಗಿ ದಿನವೂ ಔಷಧಿ ಕೊಡಬೇಕು. ಅನಿಯಂತ್ರಿತ ಮೂರ್ಛೆ ಮಗುವಿನ ಮಿದುಳಿಗೆ ಹಾನಿಉಂಟುಮಾಡಿ ಬುದ್ಧಿಮಾಂದ್ಯ ತರಬಹುದು.
13. ಅಂಟು ರೋಗವಿರುವ ಕಾಲದಲ್ಲಿ (ಉ.ದಾ ಕಾಲರ, ಮಿದುಳುಜ್ವರ) ಮಗುವಿಗೆ ಮಲಿನ ಆಹಾರ ಕೊಡಬಾರದು. ಆದಷ್ಟು ಆಗತಾನೇ ತಯಾರಿಸಿದ ಆಹಾರ, ಕುದಿಸಿದ ನೀರು ಮತ್ತು ಹಾಲು ಕೊಡಬೇಕು.
14. ಮಿದುಳಿಗೆ ಆಘಾತವಾಗುವಂತಹ ಅಪಘಾತಗಳಿಂದ ಮಗುವನ್ನು ರಕ್ಷಿಸಬೇಕು.
15. ಆಗಿಂದಾಗ್ಗೆ ಶಿಶುಮಾರ್ಗದರ್ಶನ ಚಿಕಿತ್ಸಾಲಯಗಳಿಂದ ಮಾರ್ಗದರ್ಶನ ಪಡೆಯಬೇಕು.
16. ಬುದ್ಧಿ ಮಾಂದ್ಯತೆಯ ಇತಿಹಾಸವುಳ್ಳ ಸಂಸಾರಗಳಲ್ಲಿ ಅಥವಾ ರಕ್ತ ಸಂಬಂಧಿಗಳಲ್ಲಿ ಮದುವೆಮಾಡಬಾರದು, ಮತ್ತು ವಿವಾಹವಾಗಲಿರುವ ಹುಡುಗ ಅಥವಾ ಹುಡುಗಿಯಲ್ಲಿ ಬುದ್ಧಿ ಮಾಂದ್ಯತೆಯ ಲಕ್ಷಣಗಳು ಕಂಡುಬಂದರೆ ಮದುವೆಯನ್ನು ಮಾಡದಿರುವುದೆ ಒಳ್ಳೆಯದು. ಕಾರಣ ಇವರು ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಲು ಅಸಮರ್ಥ ರಾಗಿರುತ್ತಾರೆ ಹಾಗೂ ಬುದ್ಧಿಮಾಂದ್ಯತೆ ಮಗು ಹುಟ್ಟುವ ಸಾಧ್ಯತೆ ಜಾಸ್ತಿ ಮತ್ತು ಸಮಸ್ಯೆಗಳು ದ್ವಿಗುಣಗೊಳ್ಳುತ್ತವೆ.
17. 18 ವರ್ಷಕ್ಕಿಂತ ಕಡಿಮೆ ಅಥವಾ 35 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹೆಂಗಸರಲ್ಲಿ ಮಕ್ಕಳಾಗುವುದನ್ನು ತಡೆಗಟ್ಟಬೇಕು.

ಚಿಕಿತ್ಸೆ ಮತ್ತು ನಿರ್ವಹಣೆ

ವಿಜ್ಞಾನದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದರೂ ಸಹಾ ಬುದ್ಧಿ ಮಾಂದ್ಯತೆಯನ್ನು ಗುಣಪಡಿಸುವಲ್ಲಿ ವೈದ್ಯಕೀಯ ವಿಜ್ಞಾನ ಯಶಸ್ವಿಯಾಗಿಲ್ಲ. ಅನುವಂಶಿಕ ಮತ್ತು ಜೈವಿಕ ಕಾರಣಗಳಿಂದ ಈ ಸ್ಥಿತಿ ಉಂಟಾದರೆ ಗುಣಹೊಂದುವ ಸಾಧ್ಯತೆ ಕಡಿಮೆ. ನಮಗೆ ತಿಳಿದಿರುವ ಕಾರಣಗಳಿಂದ ಬುದ್ಧಿ ಮಾಂದ್ಯತೆ ಉಂಟಾಗುವ ಸಂಭವವಿದ್ದರೆ ಹಿಂದೆ ತಿಳಿಸಲಾಗಿರುವ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುವುದರಿಂದ ಬುದ್ಧಿಮಾಂದ್ಯ ಮಕ್ಕಳು ಹುಟ್ಟುವ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡಬಹುದು. ಬುದ್ಧಿ ಮಾಂದ್ಯತೆಯನ್ನು ಗುಣಪಡಿಸುವ ಅಥವಾ ಬುದ್ಧಿಶಕ್ತಿಯನ್ನು ಹೆಚ್ಚಿಸುವ ಮಾತ್ರೆ, ಟಾನಿಕ್, ಸೂಜಿಮದ್ದು, ಶಸ್ತ್ರಚಿಕಿತ್ಸೆಗಳು ಸದ್ಯಕ್ಕಂತೂ ಲಭ್ಯವಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ಜನಸಾಮಾನ್ಯರಲ್ಲಿ ಬುದ್ಧಿಮಾಂದ್ಯತೆ ಅದಕ್ಕೆ ಕಾರಣ, ಪರಿಹಾರ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ-ಮುಂತಾದುವುಗಳು ಬಗ್ಗೆ ಅರಿವು ಮೂಡಿಸಬೇಕು.

ಬುದ್ಧಿಮಾಂದ್ಯರಿಗೆ ನೀಡಬೇಕಾದ ನಿಜವಾದ ಚಿಕಿತ್ಸೆ ಎಂದರೆ ವ್ಯವಸ್ಥಿತ ರೀತಿಯ ತರಬೇತಿ, ಮಾರ್ಗದರ್ಶನ ಮತ್ತು ಪುನರ್ವಸತಿ ಕಾರ್ಯಕ್ರಮಗಳು. ಯಾವುದೇ ಕಾರ್ಯಕ್ರಮ ಹಾಕಿಕೊಳ್ಳುವ ಮೊದಲು ಮಗುವಿನ ಬುದ್ಧಿಮಟ್ಟ, ಮೊದಲೇ ಪಡೆದಿರುವ ಕುಶಲತೆ, ಅಭಿವೃದ್ಧಿಪಡಿಸಬಹುದಾದ ಕೌಶಲ್ಯ, ಅಭಿರುಚಿ, ಸಾಮರ್ಥ್ಯ ಹಾಗೂ ಮಗುವಿನ ಸಾಮಾಜಿಕ ಮತ್ತು ಮಾನಸಿಕ ವಯಸ್ಸು ಮುಂತಾದುವುಗಳ ಬಗ್ಗೆ ತಜ್ಞರ ಸಲಹೆ ಪಡೆಯಬೇಕು. ಮನೋವಿಜ್ಞಾನಿಗಳು ಉಪಯೋಗಿಸುವ ವಸ್ತುನಿಷ್ಠ ಮಾನಸಿಕ ಪರೀಕ್ಷೆಗಳು ಬುದ್ಧಿಮಾಂದ್ಯ ಮಗುವಿನ ವಿವಿಧ ಸಾಮರ್ಥ್ಯಗಳ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುತ್ತವೆ. ಇದಕ್ಕನುಗುಣವಾಗಿ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮನೋವಿಜ್ಞಾನಿಗಳ ಸಲಹೆ ಮೇರೆಗೆ ಬುದ್ಧಿಮಾಂದ್ಯರಿಗೆ ಆಹಾರ ತಿನ್ನುವುದು, ಉಡುಪು ಧರಿಸುವುದು, ಹಲ್ಲು ತಿಕ್ಕುವುದು, ಸ್ನಾನ ಮಾಡುವುದು, ತಲೆಬಾಚಿಕೊಳ್ಳುವುದು, ಬೂಟ್ಸ್‌ಹಾಕಿ ಕೊಳ್ಳುವುದು, ಓಡಾಡುವುದು, ಭಾಷೆ, ಸ್ವಯಂನಿರ್ದೇಶಕತೆ, ಮಲಮೂತ್ರ ವಿಸರ್ಜನೆಯ ಮೇಲೆ ಹಿಡಿತ, ಅಪಾಯಗಳಿಂದ ತಪ್ಪಿಸಿಕೊಳ್ಳುವುದು-ಮುಂತಾದ ಸ್ವ-ಸಹಾಯ ಕೆಲಸಗಳಲ್ಲಿ ತರಬೇತಿ ಮತ್ತು ಮಾರ್ಗದರ್ಶನ ನೀಡಬೇಕು. ಹೀಗೆ ಮಾಡುವುದರಿಂದ ಇವರು ಸ್ವಲ್ಪಮಟ್ಟಿಗೆ ತಮ್ಮನ್ನು ತಾವೇ ನಿಭಾಯಿಸಿಕೊಳ್ಳಲು ಸಮರ್ಥರಾಗುತ್ತಾರೆ. ಸ್ವಲ್ಪ ಮುಂದುವರೆದು ಇವರು ಮಾಡಬಹುದಾದಂತಹ ಉದ್ಯೋಗಗಳಿಗೆ ಉ.ಹಾ. ವ್ಯವಸಾಯ, ಹಾಲು ಮಾರುವುದು, ಬಟ್ಟೆ ಒಗೆಯುವುದು, ಕಸಗುಡಿಸುವುದು, ದನಕರುಗಳನ್ನು ನೋಡಿಕೊಳ್ಳುವುದು, ಅಡಿಗೆ ಕೆಲಸದಲ್ಲಿ ಸಹಾಯ ಮಾಡುವುದು, ಪಾತ್ರೆತೊಳೆಯುವುದು, ಚಾಪೆ ಹೆಣೆಯುವುದು, ಬೆತ್ತದ ಕೆಲಸ, ಸೆಯ್ಗೆ, ಅಗರಬತ್ತಿ ಮಾಡುವುದು, ಕಾಗದದ ಚೀಲ ಮಾಡುವುದು ಮತ್ತು

ಬೈಂಡಿಂಗ್, ಬಡಗಿ, ಗಾರೆ ಕೆಲಸ ಹಾಗೂ ಕಾರ್ಖಾನೆಗಳಲ್ಲಿ ಸಹಾಯಕರಾಗಿರುವುದು ಇನ್ನೂ ಮುಂತಾದ ಸುಲಭ ಮತ್ತು ಸರಳ ಕೆಲಸಗಳಲ್ಲಿ ಇವರನ್ನು ಉಪಯೋಗಿಸಿ ಕೊಳ್ಳಬಹುದು. ಇಂತಹ ಉದ್ಯೋಗಗಳಿಗೆ ತರಬೇತಿ ನೀಡುವುದರಿಂದ ಇವರ ಸಾಮಾಜಿಕ ಮತ್ತು ಆರ್ಥಿಕ ಪರಾವಲಂಬನೆಯನ್ನು ಸಾಕಷ್ಟು ಕಡಿಮೆ ಮಾಡ ಬಹುದು.

ಅದು ಯಾವುದೇ ರೀತಿಯ ತರಬೇತಿಯಾದರೂ ಇವರಲ್ಲಿ ಸುಧಾರಣೆ ಮತ್ತು ಪ್ರಗತಿ ಕಂಡು ಬರುವುದು ಬಹಳ ನಿಧಾನ. ಇವರ ಕಲಿಕೆಯು ಬಹಳ ಮಂದಗತಿ ಯಿಂದ ಸಾಗುವುದರಿಂದ ಹಲವಾರು ಸಂಧರ್ಭಗಳಲ್ಲಿ ನಿರಾಶೆಯನ್ನುಂಟು ಮಾಡ ಬಹುದು. ಆದರೆ ತರಬೇತಿ ಮತ್ತು ಚಿಕಿತ್ಸೆಯ ಫಲ ಸಾಮಾನ್ಯವಾಗಿ ಅಪ್ರಯೋಜಕವೂ ಅಲ್ಲ, ನಿರಾಶದಾಯಕವೂ ಅಲ್ಲವೆಂದು ತಿಳಿದುಕೊಂಡು, ತಾಳ್ಮೆ ಯಿಂದ ಪ್ರಾರಂಭಿಸಿದ ತರಬೇತಿಯನ್ನು ಸತತವಾಗಿ ಮತ್ತು ಕ್ರಮಬದ್ಧವಾಗಿ ಮುಂದುವರಿಸಬೇಕು. ಇವರ ತರಬೇತಿ ಕಾರ್ಯದಲ್ಲಿ ಸಹ ಭಾಗಿಗಳಾದ ವಿವಿಧ ತಜ್ಞರು, ತರಬೇತಿದಾರರು, ತಂದೆ–ತಾಯಿಗಳು ಹಾಗೂ ಕುಟುಂಬದ ಇತರ ಸದಸ್ಯರು, ನೆರೆಹೊರೆಯವರು, ಉಪಾಧ್ಯಾಯರು, ಸಮಾಜ ಕಾರ್ಯಕರ್ತರು ಮುಂತಾದವರಲ್ಲಿ ಮುಖ್ಯವಾಗಿ ಬೇಕಾಗಿರುವುದು ತಾಳ್ಮೆ, ಸಂಯಮ, ಪ್ರೀತಿ, ವಿಶ್ವಾಸ, ದಯೆ, ಕರುಣೆ, ಪ್ರೋತ್ಸಾಹ ಮುಂತಾದುವು. ತಾಯಿಯೇ ಅಲ್ಲವೆ ಮಗುವಿನ ಪ್ರಥಮ ಗುರು! ಮನೆಯೇ ಅಲ್ಲವೆ ಪ್ರಥಮ ಪಾಠಶಾಲೆ! ಮಗುವು ದಿನದ ಹೆಚ್ಚು ಸಮಯವನ್ನು ಮನೆಯಲ್ಲೇ ಕಳೆಯುತ್ತದೆ. ಆದ್ದರಿಂದ ಮನೆಯೇ ಮಗುವಿನ ಪ್ರಥಮ ತರಬೇತಿ ಕೇಂದ್ರವಾಗುವುದು ಮತ್ತು ತಜ್ಞರ ಸಲಹೆ ಮೇರೆಗೆ ತಂದೆ-ತಾಯಿಗಳೇ ತರಬೇತಿ ನೀಡುವವರಾಗಬೇಕು. ಹೀಗಾದರೆ ಮಾತ್ರ ಹೆಚ್ಚು ಪ್ರತಿಫಲವನ್ನು ನಿರೀಕ್ಷಿಸಬಹುದು.

ತರಬೇತಿಯ ಪ್ರಗತಿಗೆ ಕೆಲವು ಸಹಕಾರಿ ಅಂಶಗಳು

1. ತಂದೆ–ತಾಯಿ ಮತ್ತು ಕುಟುಂಬದ ಸದಸ್ಯರುಗಳಿಗೆ ಬುದ್ಧಿ ಮಾಂದ್ಯತೆಯ ಬಗ್ಗೆ ಹೆಚ್ಚು ವಿವರವಾಗಿ ತಿಳಿಸಬೇಕು. ಕಾರಣ ಮಗುವಿನ ನಿರ್ವಹಣೆ ಮತ್ತು ತರಬೇತಿಯಲ್ಲಿ ಇವರ ಸಹಕಾರ ಮತ್ತು ಪಾತ್ರ ಬಹಳ ಮುಖ್ಯ.

2. ಪ್ರತಿಯೊಂದು ತರಬೇತಿಯಲ್ಲೂ ಒಂದು ನಿರ್ದಿಷ್ಟ ಗುರಿಯನ್ನು ಇಟ್ಟು ಕೊಂಡು ತರಬೇತಿಯನ್ನು ಕ್ರಮವಾಗಿ ನಡೆಸಬೇಕು.

3. ಆ ಮಗುವಿಗೆ ಮೊದಲೇ ಏನು ತಿಳಿದಿದಿಯೋ ಅಲ್ಲಿಂದ ತರಬೇತಿಯನ್ನು ಪ್ರಾರಂಭಿಸಬೇಕು. ನಂತರ ಕಲಿಸಬೇಕಾದ ಕುಶಲತೆಯನ್ನು ಮುಂದುವರಿಸಬೇಕು. ಇದರಿಂದ ಮಗುವಿಗೆ ತಾನು ಜಯಗಳಿಸಿದ ಮತ್ತು ಏನನ್ನೋ ಸಾಧಿಸಿದ ಭಾವನೆ ಉಂಟಾಗುತ್ತದೆ.

4 ಪ್ರತಿಯೊಂದು ತರಬೇತಿಯನ್ನು ಸರಳವಾಗಿ, ನಿಧಾನವಾಗಿ ಮತ್ತು ಹಂತ ಹಂತವಾಗಿ ವಿಂಗಡಿಸಿ ಮಾಡಿ ತೋರಿಸಬೇಕು. ಇದು ಅನುಕರಣೆಗೆ ಬಹಳ ಸಹಕಾರಿ ಮತ್ತು ಉಪಯುಕ್ತ.

5. ಯಾವುದಕ್ಕೆ ತರಬೇತಿ ನೀಡುತ್ತಿರುತ್ತೇವೆಯೋ ಅದನ್ನು ಪದೇಪದೇ ಹೆಚ್ಚು ತಾಳ್ಮೆ ವಹಿಸಿ ಕಲಿಸಬೇಕು.

6. ತರಬೇತಿಯನ್ನು ಸಮಯಕ್ಕೆ ಮತ್ತು ಸಂದರ್ಭಕ್ಕೆ ಸರಿಯಾಗಿ ಮತ್ತು ವ್ಯವಸ್ಥಿತವಾಗಿ ನೀಡಬೇಕು.

7. ಮಗುವು ಉದ್ದೇಶಿತ ತರಬೇತಿಯ ಅಥವಾ ಯೋಜಿತ ಕಲಿಕೆಯ ಅನುಕರಣೆಯ ಹಾದಿಯಲ್ಲಿರುವಾಗ ಅಥವಾ ಅನುಕರಣೆಯ ಕೊನೆಯ ಹಂತದಲ್ಲಿರುವಾಗ ಅವನ ಪ್ರಯತ್ನವನ್ನು ಮತ್ತು ಯಶಸ್ಸನ್ನು ಹೊಗಳಿಕೆಯಿಂದ ಅಥವಾ ಅವನು ಇಷ್ಟಪಡುವ ವಸ್ತುವಿನಿಂದ [ಉ.ದಾ. ಚಾಕ್ಲೇಟ್, ಬಿಸ್ಕತ್ತು, ಸಿಹಿತಿಂಡಿಗಳು, ಆಟದ ಸಾಮಾನುಗಳು, ಹಣ್ಣು, ಹಾಲು, ಶಿಕ್ಷಿಸದಿರುವುದು, ಬೆನ್ನು ತಟ್ಟುವುದು, ಮುತ್ತಿಡುವುದು ಮುಂತಾದವನ್ನು ಮತ್ತು ವಯಸ್ಕ ಬುದ್ಧಿ ಮಾಂದ್ಯರಿಗೆ ಬೀಡಿ, ಸಿಗರೇಟ್, ತಿಂಡಿ ತಿನಸುಗಳು—ಮುಂತಾದವನ್ನು ಪುನರ್ಬಲನಾ ವಸ್ತುಗಳಾಗಿ ಅಥವಾ ತಂತ್ರವಾಗಿ ಉಪಯೋಗಿಸಬಹುದು] ಬಹುಮಾನಿಸಬೇಕು ಮತ್ತು ಸತತವಾಗಿ ಪ್ರೋತ್ಸಾಹಿಸಬೇಕು. ಯೋಜಿತ ತರಬೇತಿಯು ಅನುಕರಣೆಯ ಹಾದಿಯಲ್ಲಿರುವಾಗ ಸಹಾಯಕಾರಿಯಾಗುವ ಯಾವುದೇ ಸರಿಯಾದ ಚಲನವಲನಗಳಿಗೆ, ಪ್ರತಿಕ್ರಿಯೆಗೆ, ಅಥವಾ ಪ್ರಯತ್ನಕ್ಕೆ ಪುನರ್ಬಲವನ್ನು ನೀಡಿ ಬಹುಮಾನಿಸಬೇಕು. ಕಾರಣ ಈ ಪ್ರಾರಂಭಿಕ ಚಲನವಲನಗಳೇ ಯೋಜಿತ ತರಬೇತಿಯ ಯಶಸ್ಸಿಗೆ ನಾಂದಿ.

8. ಮಗುವು ಒಂದು ತರಬೇತಿ ಅಥವಾ ಕುಶಲತೆಯಲ್ಲಿ ಯಶಸ್ಸು ಪಡೆದಾಗ ಬಹುಮಾನಿಸುವುದನ್ನು ಕಾಲಕ್ರಮೇಣ ಕಡಿಮೆ ಮಾಡುತ್ತಾ ಬಂದು, ಬೇರೊಂದು ತರಬೇತಿಯನ್ನು ಕೈಗೆತ್ತಿಕೊಳ್ಳಬೇಕು. ಹೊಸ ಉದ್ದೇಶಿತ ತರಬೇತಿಯ ಪ್ರಾರಂಭಿಕ ಹಂತದಿಂದಲೇ ಬಹುಮಾನಿಸಬೇಕು ನಂತರ ಕಡಿಮೆ ಮಾಡುತ್ತಾ ಬರಬೇಕು.

9. ಪುನರ್ಬಲನದ ಇನ್ನೊಂದು ಅಂಶವೆಂದರೆ, ತರಬೇತಿಯು ಯೋಜಿತ ಹಂತವನ್ನು ಸಮೀಪಿಸುತ್ತಿರುವಾಗ ಅಥವಾ ಸಮೀಪಿಸಿದ ನಂತರ ಪುನರ್ಬಲನವನ್ನು ನಿರಂತರವಾಗಿ ನೀಡುವುದರ ಬದಲು ಅದನ್ನು ಯಾವಾಗಲೋ ಒಂದೊಂದು ಸಾರಿ ನೀಡಬೇಕು. ಹೀಗೆ ಮಾಡುವುದರಿಂದ ಕಲಿತ ಕುಶಲತೆ ಹಾಗೂ ತರಬೇತಿಯಲ್ಲಿ ಗಳಿಸಿದ ಪ್ರಯೋಜನ ಮತ್ತು ಪ್ರಗತಿಯನ್ನು ಕಾಪಾಡಿಕೊಂಡು ಹೋಗಲು ಬಹಳ ಸಹಕಾರಿ. ಕೆಲವು ಸಮಯದ ತನಕ ಹೀಗೆ ಮಾಡಿ ಪುನರ್ಬಲನವನ್ನು ಸಂಪೂರ್ಣವಾಗಿ ನಿಲ್ಲಿಸಬಹುದು.

10. ತರಬೇತಿಯ ಕಾಲದಲ್ಲಿ ಉಪಯೋಗಿಸುವಂತಹ ಪದಾರ್ಥಗಳು ಅಥವಾ ವಸ್ತುಗಳು ಆಕರ್ಷಕವಾಗಿಯೂ ಮತ್ತು ಸ್ಥಳೀಯವಾಗಿಯೂ ದೊರೆಯುವಂತಿರಬೇಕು.

11. ಬುದ್ಧಿ ಮಾಂದ್ಯತೆಯನ್ನು ಸಣ್ಣ ವಯಸ್ಸಿನಲ್ಲೇ ಗುರುತಿಸಿ ಸರಿಯಾದ ಮತ್ತು ವ್ಯವಸ್ಥಿತವಾದ ಕಲಿಕಾ ಹಾಗೂ ತರಬೇತಿಯ ಅವಕಾಶಗಳನ್ನು ನೀಡುವುದರಿಂದ ಇವರು ತುಂಬಾ ಕುಶಲತೆಗಳನ್ನು ಕಲಿಯಲು ಸಾಧ್ಯವಿದೆ.

12. ಯಾವುದೇ ವಯಸ್ಸಿನ ಬುದ್ಧಿಮಾಂದ್ಯರಿಗೂ ತರಬೇತಿ ನೀಡಬಹುದು.

13. ಮದುವೆಯಾದರೆ ಬುದ್ಧಿಮಾಂದ್ಯತೆ ಸರಿಯಾಗುವುದಿಲ್ಲ ಮತ್ತು ವಯಸ್ಸಾದಂತೆ ಇವರು ಸಾಮಾನ್ಯ ವ್ಯಕ್ತಿಗಳಂತಾಗುವುದಿಲ್ಲ.

14. ಬುದ್ಧಿಮಾಂದ್ಯ ಮಕ್ಕಳು ಅವರ ಸಮ ವಯಸ್ಸಿನ (ಸಮವಾದ ಮಾನಸಿಕ ಹಾಗೂ ಸಾಮಾಜಿಕ ವಯಸ್ಸು) ಇತರ ಮಕ್ಕಳಿಗಿಂತ ಚೆನ್ನಾಗಿ ಕಲಿಯುತ್ತಾರೆ. ಆದ್ದರಿಂದ ಸರಾಸರಿ ಬುದ್ಧಿಶಕ್ತಿಯ ಮಕ್ಕಳನ್ನು ತರಬೇತಿ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಬೇಕು.

15. ಬುದ್ಧಿಮಾಂದ್ಯರಿಗಾಗಿಯೇ ವಿಶೇಷ ಶಾಲೆಗಳು ಅಥವಾ ತರಬೇತಿ ಕೇಂದ್ರಗಳಿದ್ದರೆ ಅವರನ್ನು ಅಲ್ಲಿಗೆ ಸೇರಿಸಬೇಕು.

16. ಬುದ್ಧಿಮಾಂದ್ಯರ ಕಲ್ಯಾಣಕ್ಕೆ ತಂದೆ–ತಾಯಿಗಳ ಸಂಘ, ಸಂಸ್ಥೆಗಳು ಸ್ಥಾಪಿತವಾಗಬೇಕು.

ಬುದ್ಧಿಮಾಂದ್ಯರ ವಿವಿಧ ಕಾರ್ಯಕ್ರಮದಲ್ಲಿ ನಮ್ಮ ದೇಶದಲ್ಲಿ ರಾಷ್ಟ್ರೀಯ ಮಟ್ಟದ ಕೆಲವು ಸಂಸ್ಥೆಗಳು ಉ.ದಾ. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ, ಬೆಂಗಳೂರು; ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು; ಅಖಿಲ ಭಾರತ ವೈದ್ಯಕೀಯ ಸಂಸ್ಥೆ, ದೆಹಲಿ; ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆ (P.G.I), ಚಂಡೀಗಢ್; ಮತ್ತು ಇತ್ತೀಚಿಗೆ ಸ್ಥಾಪಿತವಾದ ರಾಷ್ಟ್ರೀಯ ಬುದ್ಧಿಮಾಂದ್ಯರ ಸಂಸ್ಥೆ, ಸಿಕಂದರಾಬಾದ್; ಹಾಗೂ ರಾಜ್ಯಮಟ್ಟದ ಮತ್ತು ಕೆಲವು ಖಾಸಗಿ ಸಂಸ್ಥೆಗಳು ಸಲ್ಲಿಸುತ್ತಿರುವ ಸೇವೆ ಮತ್ತು ಸಂಶೋಧನಾ ಕೊಡುಗೆಗಳು ಬುದ್ಧಿಮಾಂದ್ಯರಿಗೆ ಒಂದು ಆಶಾಕಿರಣ ಮತ್ತು ವರದಾನ. ಕೇಂದ್ರ ಸರ್ಕಾರವು ಬುದ್ಧಿಮಾಂದ್ಯರಿಗಾಗಿಯೇ ನಾಲ್ಕನೇ ವರ್ಗದ ಕೆಲಸಗಳಲ್ಲಿ ಶೇಕಡ ಒಂದರಷ್ಟನ್ನು ಕಾದಿರಿಸಲು ಯೋಚಿಸುತ್ತಿರುವುದು ಕಾನೂನಿನ ಸ್ಥಾನಮಾನ ಪಡೆದರೆ ಬುದ್ಧಿಮಾಂದ್ಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ದಿಕ್ಕಿನಲ್ಲಿ ಒಂದು ದಿಟ್ಟ ಹೆಜ್ಜೆ.

ಭಾರತ ಹಳ್ಳಿಗಳ ದೇಶ, ದೇಶದ ಹೆಚ್ಚಿನ ಜನರು ಅವಿದ್ಯಾವಂತರು. ಗ್ರಾಮ ಪ್ರದೇಶಗಳಲ್ಲಿ ಉಪಾಧ್ಯಾಯರ, ಗ್ರಾಮ ಸೇವಕರ, ಗ್ರಾಮ ಲೆಕ್ಕಿಗರ, ಅಂಗನವಾಡಿ ಮತ್ತು ಬಾಲವಾಡಿ ಕಾರ್ಯಕರ್ತರ, ಪ್ರಾಥಮಿಕ ಆರೋಗ್ಯ ಕಾರ್ಯಕರ್ತರ ಸೇವೆಯನ್ನು ಮತ್ತು ಸಹಾಯವನ್ನು ಬುದ್ಧಿಮಾಂದ್ಯತೆಯ ವಿವಿಧ ಹಂತಗಳಲ್ಲಿ ಮತ್ತು ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಬಹುದು. ಈ ಕಾರ್ಯಕರ್ತರು ಅವರವರ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ತರಬೇತಿ ಪಡೆಯುತ್ತಿರುವ ಸಮಯದಲ್ಲಿ ಬುದ್ಧಿಮಾಂದ್ಯತೆಯ ಬಗ್ಗೆಯೂ ತರಬೇತಿ ಕೊಡಬೇಕು. ತರಬೇತಿಯ ಕಾಲದಲ್ಲಿ ಈ ಕಾರ್ಯಕರ್ತ

ರನ್ನು ಕಡ್ಡಾಯವಾಗಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಅಥವಾ ರಾಷ್ಟ್ರೀಯ ಬುದ್ಧಿಮಾಂದ್ಯರ ಸಂಸ್ಥೆ ಅಥವಾ ದೇಶದ ಇನ್ನಿತರ ಇಂತಹ ಕೇಂದ್ರಗಳಿಗೆ ಕರೆದುಕೊಂಡು ಹೋಗಿ ಕಾರ್ಯತಃ ನೋಡಲು, ಹೆಚ್ಚಿಗೆ ತಿಳಿದುಕೊಳ್ಳಲು ಮತ್ತು ತಜ್ಞರೊಡನೆ ಚರ್ಚಿಸಲು ಅವಕಾಶವನ್ನು ಕಲ್ಪಿಸಬೇಕು. ಕೆಲವು ದಿನಗಳು ಈ ಕೇಂದ್ರದಲ್ಲೇ ಇದ್ದು ಅನುಭವ ಪಡೆಯುವುದು ಒಳ್ಳೆಯದು.

ಮೇಲೆ ಹೇಳಿರುವುದು ಸಾಧ್ಯವಾಗದಿದ್ದ ಪಕ್ಷದಲ್ಲಿ ಬುದ್ಧಿಮಾಂದ್ಯತೆಯ ಬಗ್ಗೆ ಹೆಚ್ಚಿಗೆ ತಿಳಿದುಕೊಂಡಿರುವ ತಜ್ಞರ ಗುಂಪೊಂದು ಹಳ್ಳಿಯ ಆರೋಗ್ಯ ಕೇಂದ್ರಕ್ಕೆ ಅಥವಾ ಅಂಗನವಾಡಿ ಕೇಂದ್ರಕ್ಕೆ ವರ್ಷದಲ್ಲಿ ಒಂದು ಅಥವಾ ಎರಡು ಬಾರಿಯಾದರೂ ಭೇಟಿ ನೀಡಬೇಕು. ಎಲ್ಲಾ ಕೇಂದ್ರಗಳಿಗೂ ಭೇಟಿ ನೀಡಲು ಸಾಧ್ಯವಾಗದಿದ್ದರೆ ಕೆಲವು ಕೇಂದ್ರಗಳನ್ನು ಆರಿಸಿ ಅಲ್ಲಿ ತರಬೇತಿ ಮತ್ತು ಶಿಕ್ಷಣವನ್ನು ನೀಡಬೇಕು. ಈ ಕೇಂದ್ರಗಳಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಟ್ಟು ಮಾದರಿ ಕೇಂದ್ರಗಳನ್ನಾಗಿ ಮಾಡಬೇಕು. ಈ ಕೇಂದ್ರದ ಮೂಲಕ ಅಕ್ಕಪಕ್ಕದ ಗ್ರಾಮಗಳಲ್ಲಿ ದೊರೆಯುವ ಕಾರ್ಯಕರ್ತರಿಗೆ ತರಬೇತಿ ನೀಡುವ ಸೌಲಭ್ಯ ಕಲ್ಪಿಸಬೇಕು. ಈ ಕೇಂದ್ರವು ಪ್ರಾಥಮಿಕ ಆರೋಗ್ಯ ಘಟಕ ಇರುವ ಕಡೆ ಇದ್ದರೆ ಬಹಳ ಉತ್ತಮ. ತಜ್ಞರು ಈ ಕೇಂದ್ರಕ್ಕೆ ಆಗಿಂದಾಗ ಭೇಟಿ ನೀಡುತ್ತಿರಬೇಕು. ತಜ್ಞರು ಭೇಟಿ ನೀಡುವ ದಿನ ಮತ್ತು ಸಮಯವನ್ನು ಮುಂಚಿತವಾಗಿಯೇ ಅಕ್ಕಪಕ್ಕದ ಗ್ರಾಮಗಳಿಗೆ ತಿಳಿಸಬೇಕು, ಈ ಗ್ರಾಮಸ್ಥರು ಅದರಲ್ಲೂ ಬುದ್ಧಿಮಾಂದ್ಯ ಮಕ್ಕಳ ತಂದೆ–ತಾಯಿಗಳು ಇದರ ಪ್ರಯೋಜನವನ್ನು ಪಡೆಯುವಂತೆ ಪ್ರೋತ್ಸಾಹಿಸಬೇಕು. ಹೀಗೆ ಬುದ್ಧಿಮಾಂದ್ಯತೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು ಮತ್ತು ಮಾರ್ಗದರ್ಶನ ನೀಡಬೇಕು.

ಈ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಲು ಬುದ್ಧಿ ಮಾಂದ್ಯತೆಯ ಬಗ್ಗೆ ಮತ್ತು ತರಬೇತಿ ಹಾಗೂ ನಿರ್ವಹಣೆ, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ–ಮುಂತಾದುವುಗಳ ಮೇಲೆ ಒಂದು ಶಬ್ದ ಚಿತ್ರವನ್ನು ತಜ್ಞರ ಸಲಹೆ ಮತ್ತು ಮೇಲ್ವಿಚಾರಣೆಯಲ್ಲಿ, ಮಾತೃಭಾಷೆಯಲ್ಲೇ ತಯಾರಿಸಿ ಪ್ರದರ್ಶನದ ವ್ಯವಸ್ಥೆ ಮಾಡಬೇಕು. ಈ ಚಿತ್ರವನ್ನು ನೋಡಿದ ಮೇಲೆ ಪ್ರೇಕ್ಷಕರಿಂದ, ಬುದಿ ಮಾಂದ್ಯರ ತಂದೆ–ತಾಯಿಗಳಿಂದ ಬರಬಹುದಾದ ಸಂದೇಹ ಹಾಗೂ ಅನುಮಾನಗಳನ್ನು ತಜ್ಞರು ಗಳು ಸ್ಥಳದಲ್ಲೇ ಇದ್ದು ಅದನ್ನು ಪರಿಹರಿಸಬೇಕು. ಈ ಉದ್ದೇಶಕ್ಕಾಗಿಯೇ ಒಂದು ಸುಸಜ್ಜಿತವಾದ 'ಸಂಚಾರಿ ಘಟಕ' ಮತ್ತು ತಜ್ಞರು ಇರಬೇಕು. ಈ ಸಂಚಾರಿ ಘಟಕವು ಸರ್ಕಾರಿ ಆಸ್ಪತ್ರೆಯ ಖಾಸಗಿ ವೈದ್ಯಕೀಯ ಸಂಸ್ಥೆ, ಅಥವಾ ಆಸ್ಪತ್ರೆಯ ಅಥವಾ ಕೇಂದ್ರ ಸರ್ಕಾರದವರು ಇತ್ತೀಚೆಗೆ ಸ್ಥಾಪಿಸುತ್ತಿರುವ ಜಿಲ್ಲಾ ಪುನರ್ವಸತಿ ಕೇಂದ್ರದಲ್ಲಿ ದೊರೆಯುವ ಮನೋವೈದ್ಯಕೀಯ ತಜ್ಞರ ಮೇಲ್ವಿಚಾರಣೆಯಲ್ಲಿರಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿರುವ ಬುದ್ಧಿ ಮಾಂದ್ಯರಿಗೆ ತರಬೇತಿ ನೀಡಲು ಮತ್ತು ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ದಿಕ್ಕಿನಲ್ಲಿ ಹಳ್ಳಿಗಳಲ್ಲೇ ಲಭ್ಯವಿರುವ ಉದಾ : ಬಡಗಿ, ಕುಂಬಾರ, ಕಮ್ಮಾರ, ಡೋಬಿ, ಸಿಂಪಿಗ, ನೃತ್ಯಗಾರರು, ಭಜನೆ, ಸಂಗೀತಗಾರರು, ಕೋಲಾಟದವರು, ವ್ಯವಸಾಯಗಾರರು, ಹಾಲು ಉತ್ಪಾದಕರು, ಅಂಗಡಿಗಳವರು, ಹಣ್ಣು ತರಕಾರಿ ಮಾರುವವರು, ನೆಯ್ಗೆಯವರು, ಲೋಕೋಪಯೋಗಿ ಗುತ್ತಿಗೆಗಾರರು, ಗಾರೆ ಕೆಲಸದವರು, ರೇಷ್ಮೆಹುಳು ಸಾಕುವವರು, ಮುಂತಾದವರುಗಳ ಸೇವೆ ಮತ್ತು ಸಹಕಾರವನ್ನು ಪಡೆಯಬಹುದು.

ಈ ಎಲ್ಲಾ ಕಾರ್ಯಕ್ರಮಗಳು ಗ್ರಾಮಮಟ್ಟದಲ್ಲಿ ಯಶಸ್ವಿಯಾಗಬೇಕಾದರೆ ಗ್ರಾಮದ ಮುಖಂಡರು, ರಾಜಕೀಯ ಧುರೀಣರು. ಸರ್ಕಾರಿ ಅಧಿಕಾರಿಗಳು, ಕುಶಲಕಲೆಗಾರರು ಮುಂತಾದವರಿಂದ ಹೆಚ್ಚಿನ ಸಹಕಾರ ಮತ್ತು ಪ್ರೋತ್ಸಾಹ ಬೇಕಾಗುತ್ತದೆ. ಈ ಮಾತುಗಳು ಪಟ್ಟಣದ ಕೊಳಚೆ ಪ್ರದೇಶಗಳಿಗೂ ಅನ್ವಯವಾಗುತ್ತವೆ. ಹೀಗೆ ಪ್ರಾಥಮಿಕ ಹಂತದಿಂದಲೇ ಈ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಬುದ್ಧಿಮಾಂದ್ಯರ ಹಲವಾರು ಸಮಸ್ಯೆಗಳನ್ನು ಪರಿಹರಿಸಬಹುದು ಮತ್ತು ದಿನೇ ದಿನೇ ಬೆಳೆಯುತ್ತಿರುವ ಬುದ್ಧಿ ಮಾಂದ್ಯರ ಸಂಖ್ಯೆಯನ್ನು ಕಡಿಮೆ ಮಾಡಬಹುದು.

1. American Association of Mental Deficiency : Manual on Terminology and Classification of Mental Retardation, Washington D.C. ; 1977.
2. American Psychiatric Association : DSM–I, 1952 ; DSM–II, 1968 ; DSM–III–R–1987. Washington D.C. ; Mental Hospital Services.
3. Doll, E. A. ; The Vineland Social Maturity Scale. Manual of Directions. Vineland N.I. ; 1935.
4. Inter–National Classification of Diseases–9 (ICD–9) World Health Organization, (1979).
5. Lewis, E. O. ; Reports of the Mental Dificiency Committee, London : H. M. Stationary Office 1929, Part–IV.
6. Lewis, E. O. : Types of Mental Deficiency and their Sociai Significance, J. Ment. Sci., 1933, 79, 298–304.
7. Mental Retardation : National Institute for the Mentally Handicapped, Manovikas Nagar, Secunderabad ; 1980.
8. Mental Retardation : Foundation for the Welfare of the Mentally Retarded ; Delhi.
9. Murphy M. : The Relationship between Intelligence and Age of walking in Normal and Feeble–minded children. Psychol. Clin, 1932–34, 22, 187–197.
10. Rosanoff, A. J. : Manual of Psychiatry and Mental Hygiene (7th Ed.), New York ; Willey–1938.

ಬಿ. ಎನ್. ಯಶೋದ

ಡಾ॥ ಬಿ. ಆರ್. ಅಂಬೇಡ್ಕರ್–ರಾಜಕೀಯ ಚಿಂತನೆ

ಕೆಳವರ್ಗದಲ್ಲಿ, ಬಡಕುಟುಂಬದಲ್ಲಿ ಜನಿಸಿದರೂ ಉನ್ನತಸ್ಥಾನವನ್ನು ಏರಿದ ಮಹಾನ್ ವ್ಯಕ್ತಿ ಡಾ॥ ಅಂಬೇಡ್ಕರ್. ಕೇವಲ ಕಾಲ್ಪನಿಕ ವಿಚಾರಗಳು, ಉದ್ದೇಶಗಳು ಅವರದಾಗಿರದೆ, ವಾಸ್ತವವಾದ ಕಾರ್ಯಶೀಲವಾದ, ತಾರ್ಕಿಕವಾದ ಅಭಿಪ್ರಾಯವು ಅವರದಾಗಿತ್ತು. ನಮ್ಮ ಭಾರತೀಯ ಸಮಾಜದ ಅವ್ಯವಸ್ಥಿತ ರೀತಿನೀತಿಗಳನ್ನು, ಘಟನಾವಳಿಗಳನ್ನು ಮಾರ್ಪಡಿಸುವುದರಲ್ಲಿಯೇ ತಮ್ಮ ಜೀವನವನ್ನು ಸವೆಸಿದ ಧೀಮಂತರು. ಪ್ರತಿಭಾಶಾಲಿಗಳಾಗಿದ್ದ ಅವರು ಕೇವಲ ಪಾಂಡಿತ್ಯದ ಪ್ರತೀಕವಷ್ಟೇ ಆಗಿರದೆ ಮಾನವೀಯತೆಯ ಪ್ರತಿಪಾದಕರಾಗಿದ್ದರು. ಪ್ರಪಂಚದ ದೀನರಲ್ಲಿನ ದೀನರ ಉದ್ಧಾರ ಮತ್ತು ಗೌರವಗಳಿಗಾಗಿ ಶ್ರಮಿಸಿದ ತ್ಯಾಗಮಯಿ. ಅವರ ಯಾವುದೇ ಧ್ಯೇಯಗಳು, ಉದ್ದೇಶಗಳು, ಕೇವಲ ಜಾತೀಯವಾದುದಾಗಿರದೆ, ವೈಯುಕ್ತಿಕ ಲಾಭಕ್ಕೆ ಸೀಮಿತವಾಗಿರದೆ, ಗುಲಾಮಗಿರಿ, ಅನ್ಯಾಯ, ಶೋಷಣೆ, ದಬ್ಬಾಳಿಕೆಯ ವಿರುದ್ಧವಾದುದಾಗಿತ್ತು. ಶೋಷಣೆಯಿಂದ ಮುಕ್ತಗೊಳಿಸುವ ಪ್ರಯತ್ನ ಅವರದಾಗಿತ್ತು.

ಮಾನವನ ಪ್ರಗತಿ ಹಾಗೂ ಅಭಿವೃದ್ಧಿಯನ್ನು ಸಾಧಿಸುವಂತಹ ವೈಜ್ಞಾನಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳತ್ತ ಅವರ ಒಲವಿತ್ತು. ಶತಮಾನಗಳಿಂದ ಮಾನವ ಜನಾಂಗವನ್ನು ಬಂಧಿಸಿದ್ದಂತ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಅಸಮಾನತೆಗಳ, ಅನ್ಯಾಯಗಳ ವಿರುದ್ಧ ಬಂಡಾಯವೆದ್ದರು. ಮಾನವನ ಘನತೆ, ಗೌರವ ಸ್ವಾತಂತ್ರ್ಯ, ಸಮಾನತೆ, ಮುಕ್ತತೆಗೆ ಪ್ರಾಧಾನ್ಯತೆ ಕೊಟ್ಟಿದ್ದರು. ವ್ಯಕ್ತಿಯ ವ್ಯಕ್ತಿತ್ವಕ್ಕೆ ಉಂಟಾಗುತ್ತಿದ್ದ ಅನ್ಯಾಯ, ಹಿಂಸೆ, ಇತರ ದಮನಕಾರಿಯಾದ ಸಾಮಾಜಿಕ ವ್ಯವಸ್ಥೆಯನ್ನು, ಪ್ರಬಲವಾಗಿ ಪ್ರತಿಭಟಿಸಿದ ವ್ಯಕ್ತಿ ಡಾ॥ ಅಂಬೇಡ್ಕರ್.

ಭಾರತದ ರಾಜಕೀಯ ಪರಂಪರೆಯ ವಿಕಾಸದಲ್ಲಿ ಡಾ. ಅಂಬೇಡ್ಕರ್ ಒಬ್ಬ "ರಾಜಕೀಯ ನಿರ್ಣಾಯಕ ವ್ಯಕ್ತಿ" ಎಂದೆನ್ನಬಹುದು. ನವಭಾರತದ ನಿರ್ಮಾಪಕರಲ್ಲಿ ಒಬ್ಬರಾದ ಅವರ ಹಲವು ಬರವಣಿಗೆಯು ಅವರನ್ನು ಒಬ್ಬ ರಾಜಕೀಯ

ನೀತಿಜ್ಞ ಮತ್ತು ರಾಜಕೀಯ ಮುತ್ಸದ್ಧಿ ಎಂಬುದನ್ನು ಪ್ರತಿಪಾದಿಸುತ್ತವೆ. ರಾಜ್ಯದ ಕಾರ್ಯದಿಂದ ಹಿಡಿದು ಸಂವಿಧಾನದ ಪ್ರತಿಯೊಂದು ಸಣ್ಣ ಮತ್ತು ಕ್ಲಿಷ್ಟಸಮಸ್ಯೆ ಗಳವರೆಗೂ ತಮ್ಮ ರಾಜಕೀಯ ವಿಚಾರಗಳನ್ನು ರೇಖಿಸಿದ್ದಾರೆ. ಅವುಗಳಲ್ಲಿ ಕೆಲವೊಂದು ಅಂಶಗಳ ಬಗ್ಗೆ ಕೆಳಕಂಡಂತೆ ವಿವರಿಸಲಾಗಿದೆ.

ಸಮಾಜ ಮತ್ತು ರಾಜ್ಯ :

ಅಂಬೇಡ್ಕರ್ ಒಬ್ಬ ರಾಷ್ಟ್ರೀಯಮಟ್ಟದ ಧುರೀಣ ಮತ್ತು ವಿಶ್ವಮಟ್ಟದ ಚಿಂತಕರು. ಅವರು ನಮ್ಮ ಸಮಾಜ ಮತ್ತು ರಾಷ್ಟ್ರದ ಮುಖ್ಯವಾದ ಹಾಗೂ ಮೂಲಭೂತ ಸತ್ವಹೀನತೆಯನ್ನು ಗುರುತಿಸಿ, ಅದನ್ನು ಆಳವಾಗಿ ವಿವರ್ಶಿಸಿ, ವೈಯುಕ್ತಿಕ ವೇದನೆಯನ್ನನುಭವಿಸಿದ ಅವರು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಂದೋಲನವನ್ನು ಹುಟ್ಟುಹಾಕಿದರು. ಮಾನವತಾವಾದಿಯಾಗಿ ಇವರು ರಾಜ್ಯಕ್ಕಿಂತ ಮಿಗಿಲಾಗಿ ಸಮಾಜಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡಿದ ಅವರು ರಾಜ್ಯದ ಅಂತಿಮಗುರಿ ಮಾನವನ ಅಭಿವೃದ್ಧಿಯನ್ನು ಸಾಧಿಸುವುದೇ ಆಗಿದೆ ಎಂದಿದ್ದಾರೆ. ಅವರು ಹೇಳುವಂತೆ ರಾಜ್ಯವು ಸಾಧನವೇ ಹೊರತು ಗುರಿಯಲ್ಲ. ಮಾನವ ಸುಖಸಂತೋಷವಾಗಿರುವಂತಹ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವ ಮತ್ತು ಪರಿಪಾಲಿಸುವಂತಹ ರಾಜ್ಯದ ವ್ಯವಸ್ಥೆಯನ್ನು ಡಾ| ಅಂಬೇಡ್ಕರ್ ಪ್ರತಿಪಾದಿಸಿದರು. ರಾಜ್ಯವು 'ಮಾನವ ಸಂಘ' ಎಂಬುದನ್ನು ಅವರು ಅಂಗೀಕರಿಸಿದರೂ ಅದೇ ಅಂತಿಮ ವಾಗಿರಲಿಲ್ಲ. ಅವರ ಪ್ರಕಾರ ರಾಜ್ಯವು ;

1. "ಪ್ರತಿಯೊಬ್ಬ ವ್ಯಕ್ತಿಗೆ ಜೀವ ವಿಮುಕ್ತತೆಯ ಹಕ್ಕು, ಹಾಗೂ ಸಂತೋಷವನ್ನು ಅರಸುವ ಹಕ್ಕು, ವಾಕ್ ಸ್ವಾತಂತ್ರ್ಯ, ಉಪಾಸನಾ ಸ್ವಾತಂತ್ರ್ಯ ಹಕ್ಕುಗಳನ್ನು ಪಾಲಿಸುವಂತಹ,

2. ಬಡತನದಲ್ಲಿರುವ ಜನಾಂಗಕ್ಕೆ ಉತ್ತಮ ಸದವಕಾಶಗಳನ್ನು ಕಲ್ಪಿಸು ವುದರ ಮೂಲಕ, ಸಾಮಾಜಿಕ, ರಾಜಕೀಯ, ಹಾಗೂ ಆರ್ಥಿಕ ಅಸಮಾನತೆಗಳನ್ನು ನಿವಾರಿಸುವಂತಹ,

3. ಪ್ರತಿ ವ್ಯಕ್ತಿಯ ಧ್ಯೇಯೋದ್ದೇಶಗಳನ್ನು ಈಡೇರಿಸುವ, ಭೀತಿಯಿಂದ ಮುಕ್ತತೆಯನ್ನು ಪಡೆಯುವಂತಹ ವಾತಾವರಣವನ್ನು ಸೃಷ್ಟಿಸುವ ಸಂಘವಾಗಿರ ಬೇಕು",[1] ಎಂಬ ತತ್ವಗಳನ್ನೊಳಗೊಂಡಿರಬೇಕೆನ್ನುತ್ತಾರೆ.

ರಾಜವೆನ್ನುವುದು ವ್ಯಕ್ತಿ ಮತ್ತು ಸಮಾಜದ ಹಿತಾಸಕ್ತಿಗಳನ್ನು ಸೇವಕನಂತೆ ಪೂರೈಸಬೇಕೇಹೊರತು ಒಡೆಯನಂತಲ್ಲ. ಅವರ ಪ್ರಕಾರ ಮಾನವನ ವಾಸ್ತವ ಸ್ವಾತಂತ್ರ್ಯವು ಕೇವಲ ರಾಜಕೀಯವಾಗಿಯಷ್ಟೇ ಅಲ್ಲ, ಅದು ಸಂಪೂರ್ಣ ಅಂದರೆ ಸಾಮಾಜಿಕ, ಆರ್ಥಿಕ, ಭೌದ್ಧಿಕ ಹಾಗು ಆಧ್ಯಾತ್ಮಿಕವಾದುದು ಆಗಿರಬೇಕು. ಜನತೆ ಯನ್ನು ಮೆಟ್ಟಿ ಆಳುವ ಆಳ್ವಿಕೆಯನ್ನು ಅವರು ವಿರೋಧಿಸಿದರು. ರಾಜ್ಯವು ಜನತೆಯ

ಪ್ರಾಯೋಗಿಕ ಅಗತ್ಯಗಳನ್ನು ಪೂರೈಸುವಂತಿದ್ದಾಗ ಅದು ವಾಸ್ತವ ಮತ್ತು ರಾಜಕೀಯದ್ಯಕ್ತವಾದುದು ಆಗುತ್ತದೆ. ರಾಜ್ಯದಲ್ಲಿರುವಂತೆ ವಿವಿಧ ಸಂಘಸಂಸ್ಥೆಗಳ ನಡುವೆ ಸಾಮರಸ್ಯವಿರಬೇಕು ಎಂಬುದು ಅವರ ನಿಲುವು. "ಸಾಮಾಜಿಕ ಸ್ವಾತಂತ್ರ್ಯ ಮೊದಲು, ರಾಜಕೀಯ ಸ್ವಾತಂತ್ರ್ಯ ಕೊನೆಗೆ''[2] ಎನ್ನುವ ಅವರ ಘೋಷಣೆಯು ಸಮಾಜಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಅವರ ಮಾತಿನಲ್ಲಿ ''ದೇಶದಲ್ಲಿನ ಸಕಲ ಕೆಡಕುಗಳಿಗೂ, ರಾಜಕೀಯ ಸ್ವಾತಂತ್ರ್ಯ ಪರಿಹಾರ ಸೂಚಿಸುತ್ತದೆ ಎಂಬ ವಾದಸರಿಯಿಲ್ಲ, ಪರಿಶುದ್ಧ ಮನಸ್ಸು ಇಲ್ಲದೆ ಇರುವವರೆಗೂ ಅಕಾರ್ಯಗಳು, ಅನೈತಿಕ ವರ್ತನೆ, ನಿತ್ಯಜೀವನದಲ್ಲಿ ತಪ್ಪುವಂತಿಲ್ಲ, ಸಹಮಾನವನೊಡನೆ ಹೇಗೆ ವರ್ತಿಸಬೇಕೆಂದು ಅರಿಯದೆ, ಮಾನವ ಮಾನವರ ನಡುವೆ ಅಡ್ಡಗೋಡೆಗಳನ್ನು ಸೃಷ್ಟಿಸುತ್ತಿರುವವರೆಗೂ ಭಾರತದೇಶ ಎಂದಿಗೂ ಉತ್ತಮವಾಗದು"[3]. ''ಸಮಾಜದಲ್ಲಿನ ದೀನದಲಿತರ ಉದ್ಧಾರವಾಗದೆ, ಅದನ್ನು ಪ್ರಜಾಸತ್ತಾತ್ಮಕ ಸರ್ಕಾರವೆಂದು ಹೇಳಿಕೊಳ್ಳುವುದು ನಮ್ಮನ್ನು ನಾವೇ ವಂಚಿಸಿಕೊಂಡಂತಾಗುತ್ತದೆ. ಪ್ರಜಾಪ್ರಭುತ್ವದ ಭದ್ರತಳಪಾಯ ಎಂದರೆ ಆ ಸಮಾಜದಲ್ಲಿನ ತೀರ ಕೆಳಹಂತದಲ್ಲಿರುವ ದೀನರ ಉದ್ಧಾರ''[4] ಹೀಗೆ ಅಂಬೇಡ್ಕರ್ ರಾಜ್ಯ ಅಥವ ಸರ್ಕಾರಕ್ಕಿಂತಲೂ ಪ್ರಮುಖವಾಗಿ ಸಾಮಾಜಿಕ ಸಮಸ್ಯೆಗಳಿಗೆ ಪ್ರಥಮ ಸ್ಥಾನವನ್ನು ನೀಡಿ ಅದರ ಪ್ರಾಥಮಿಕ ಬದಲಾವಣೆಗೆ ಸಾಮಾಜಿಕ ಮಾನ್ಯಮಾಡಿದ್ದಾರೆ.

ಪ್ರಜಾಪ್ರಭುತ್ವ:

ಡಾ॥ ಅಂಬೇಡ್ಕರ್ ಅರ್ಥೈಯಿಸುವಂತೆ ''ಪ್ರಜಾಪ್ರಭುತ್ವವೆಂದರೆ ಪ್ರಜೆಗಳೆಲ್ಲಾ ಒಂದಾಗಿ ಬೆರೆತು ಜೀವಿಸುವ ವಿಧಾನ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸುವ ಪ್ರಜೆಗಳ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಸಮಾಜದಿಂದ ಪ್ರೇರಿತವಾದ ಆ ನಿಬಂಧ ಇನ್ನೂ ನಿಕಟವಾಗಲು, ಭದ್ರವಾಗಲು ಮೂಲಕಾರಣ ಪ್ರಜಾಪ್ರಭುತ್ವ''[5]. ಆದ್ದರಿಂದ ಪ್ರಜಾಪ್ರಭುತ್ವ ಕೇವಲ ನಿರಂಕುಶ ಪ್ರಭುತ್ವವನ್ನು ಉರುಳಿಸುವುದಷ್ಟೇ ಆಗದೆ, ಪ್ರಜಾಕಲ್ಯಾಣವೇ ಅದರ ಗುರಿಯಾಗಿರಬೇಕು. ಮತ್ತೆ ಮುಂದುವರಿಸುತ್ತಾ ''ನನ್ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೆಂದರೆ ರಕ್ತಪಾತರಹಿತ ವಿಪ್ಲವದ ಮೂಲಕ ಪ್ರಜೆಗಳ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆ ತರುವಂತೆ ಬಂದು ಪದ್ಧತಿ ಮತ್ತು ಅಂತಹ ಸ್ವರೂಪವುಳ್ಳ ಸರ್ಕಾರ''[6] ಎಂದು ವರ್ಣಿಸಿದ್ದಾರೆ.

ಡಾ॥ ಅಂಬೇಡ್ಕರ್ ತಮ್ಮ ಅನೇಕ ಉಪನ್ಯಾಸಗಳಲ್ಲಿ, ಲೇಖನಗಳಲ್ಲಿ ಸಂವಿಧಾನಾತ್ಮಕವಾದ ಪ್ರಜಾಪ್ರಭುತ್ವವನ್ನು ಕುರಿತು ಸಾಕಷ್ಟು ಚರ್ಚಿಸಿರುವರಲ್ಲದೆ ಪಂಚಾಯಿತಿ ರಾಜ್ಯದ ಬಗೆಗೆ ಒಲವು ತೋರಿಸಿದ್ದಾರೆ. ಪ್ರಜಾಪ್ರಭುತ್ವವೆಂದರೆ ಕೇವಲ ರಾಜಕೀಯ ಪ್ರಜಾಪ್ರಭುತ್ವವನ್ನಲ್ಲ, ಬದಲಾಗಿ ಆರ್ಥಿಕ ಪ್ರಜಾಪ್ರಭುತ್ವಕ್ಕೆ

ಪ್ರೋತ್ಸಾಹ ನೀಡಿದ್ದಾರೆ. ಅಂದರೆ ರಾಜಕೀಯ ಪ್ರಜಾಪ್ರಭುತ್ವವನ್ನು ಆರ್ಥಿಕ ಪ್ರಜಾಪ್ರಭುತ್ವವನ್ನಾಗಿ ಪರಿವರ್ತಿಸಲು ಪ್ರೇರೆಪಿಸಿದ್ದಾರೆ, ಅವರ ಪ್ರಜಾಪ್ರಭುತ್ವದ ಪರಿಕಲ್ಪನೆಯ ಮೂಲಭೂತ ಅಂಶಗಳೆಂದರೆ; ವಿಮುಕ್ತತೆ, ಸಮಾನತೆ, ಭ್ರಾತೃತ್ವ, ಚಿಂತನೆ, ಮಾನವತೆ, ವಿಧಿನಿಯಮ, ನೈಜಹಕ್ಕು ಹಾಗೂ ಸಾಮಾಜಿಕ ಸಂಬಂಧ ಗಳಲ್ಲಿ ವ್ಯಕ್ತಿಗೆ ಪ್ರಾಧಾನ್ಯತೆ ಮುಂದುವರಿಯುತ್ತಾ "ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತ ಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯ, ಮುಂತಾದವುಗಳಿಂದ ರಾಜ್ಯಾಂಗದಲ್ಲಿ ಒತ್ತು ಇದ್ದು ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯವಿದ್ದು, ಜೀವನಾವಶ್ಯಕ ಪ್ರಾರ್ಥಮಿಕ ಸೌಲಭ್ಯಗಳೆಲ್ಲಾ ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಸಿಗುತ್ತದೋ ಅದೇ ನಿಜವಾದ ಪ್ರಜಾಪ್ರಭುತ್ವ"[7] ಎಂದಿದ್ದಾರೆ.

ಪ್ರಜೆಗಳ ಜೀವನಮಟ್ಟ ಸುಧಾರಿಸುವಲ್ಲಿ ನಮ್ಮ ದೇಶದಲ್ಲಿ ಶೀಘ್ರವಾಗಿ ಕೈಗಾರಿಕಾ ಕ್ರಾಂತಿ ನಡೆಯಬೇಕು. ಮತ್ತು ಬಂಡವಾಳಶಾಹಿಯ ಕ್ರೂರ ವಿಧಾನ ಗಳಿಂದ ಬಡಪ್ರಜೆಗಳ ಶ್ರಮವನ್ನು ಕಾಪಾಡಬೇಕಾಗಿರುವುದು, ಪ್ರಜಾಪ್ರಭುತ್ವದ ಗುರಿಯಾಗಿರಬೇಕೆನ್ನುವುದೇ ಅಂಬೇಡ್ಕರರ ಉದ್ದೇಶ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಯಶಸ್ಸಿನ ಸೆಲೆಗಟ್ಟು, ಸಮಾಜದಲ್ಲಿ ಎದ್ದುಕಾಣುವ ಅಸಮಾನತೆಗಳಿಗೆ ಸ್ಪಂದಿಸಿ ಅವುಗಳನ್ನು ದೂರ ಮಾಡುವುದರಲ್ಲಿ ಅಡಗಿದೆ. ಶೋಷಣೆಯ ಕಂದರದಲ್ಲಿರುವ ಜಾತಿಗಳಾಗಲಿ, ವರ್ಗಗಳಾಗಲಿ ಇರಕೂಡದು. ಕಾನೂನಿನ ಪ್ರಕಾರ ಆಡಳಿತದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕುಗಳಿರಬೇಕು. ರಾಜ್ಯಾಂಗದ ನಿಯಮಗಳನ್ನು ಅನುಷ್ಠಾನಕ್ಕೆ ತರಬೇಕು. ಸಮಾಜದಲ್ಲಿ ನೈತಿಕ ತತ್ವಗಳಿಗೆ, ಮೌಲ್ಯಗಳಿಗೆ, ಆದರ, ಗೌರವಗಳಿಗೆ, ಪ್ರಾಧಾನ್ಯತೆ ಸಿಗುವಂತ ವ್ಯವಸ್ಥೆಗಾಗಿ ಅಂಬೇಡ್ಕರ್ ಪ್ರತಿಧ್ವನಿ ಸಿದರು.

ಅವರ ಪ್ರಕಾರ ಪ್ರಜಾಪ್ರಭುತ್ವವ್ಯವಸ್ಥೆಯು ಮಾಂಟೆಸ್ಕ್ಯೂ ಪ್ರತಿಪಾದಿಸಿದ "ತಡೆ ಮತ್ತು ಸಮತೋಲನ ಸಿದ್ಧಾಂತ" ಮಾದರಿಯಂತಿರಬೇಕೆನ್ನುತ್ತಾರೆ. ಅಂದರೆ ಸರ್ಕಾರದ ಕೇಂದ್ರೀಕೃತ ಅಧಿಕಾರ ಮತ್ತು ವ್ಯಕ್ತಿಸ್ವಾತಂತ್ರ್ಯದ ನಡುವೆ ಸೂಕ್ತರೀತಿಯ ಸಮತೋಲನವಿರಬೇಕು ಎಂಬುದು ಅವರ ಅಭಿಪ್ರಾಯ. ಕಾರ್ಯಾಂಗವು ಹೊಂದಿರಬೇಕಾದ ಹಲವಾರು ತತ್ವಗಳನ್ನು ವಿವರಿಸುತ್ತಾ; "1. ಯಾವುದೇ ವಿಷಯದ ಬಗ್ಗೆ ಅಲ್ಪಮತೀಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಬಹುಮತೀಯರು, ಯಾವುದೇ ಅವಕಾಶ ನೀಡದೆ, ಸರ್ಕಾರ ರಚಿಸುವಲ್ಲಿ ಅವಕಾಶ ನೀಡದಿರುವುದನ್ನು ತಡೆಗಟ್ಟುವ, 2. ಬಹುಸಂಖ್ಯಾತರು ಆಡಳಿತದ ಮೇಲೆ ತಮ್ಮ ಕಾರ್ಯಾಂಗ ನಿಯಂತ್ರಣ ಪಡೆದಿದ್ದು ಅದರಿಂದ ಬಹುಮತೀಯರು, ಅಲ್ಪ ಮತೀಯರ ಮೇಲೆ ದಬ್ಬಾಳಿಕೆ ನಡೆಸುವುದನ್ನು ತಡೆಗಟ್ಟುವ, 3. ಅಲ್ಪಮತೀಯರ ನಂಬಿಕೆಯನ್ನು ಪಡೆದಿರುವಂತೆ ಅಲ್ಪಮತೀಯ ಪ್ರತಿನಿಧಿಗಳನ್ನು ಬಹುಮತೀಯಪಕ್ಷ ಕಾರ್ಯಾಂಗದಲ್ಲಿ ಸೇರಿಸಿಕೊಳ್ಳುವುದನ್ನು ತಡೆಗಟ್ಟುವ, 4. ಉತ್ತಮವಾದ ಪರಿಣಾಮ

ಕಾರಿಯಾದ ಹಾಗೂ ಆಡಳಿತಕ್ಕೆ ಅಗತ್ಯವಾದ ಸುಸ್ಥಿರವಾದ ಕಾರ್ಯಾಂಗವನ್ನು" ಅಂಬೇಡ್ಕರ್ ಪ್ರತಿಪಾದಿಸಿದರು.

ರಾಜಕೀಯ ಪಕ್ಷ:

ಉತ್ತಮ ಆಡಳಿತವು ಉತ್ತಮ ರಾಜಕೀಯ ಪಕ್ಷದ ಕೈಯಲ್ಲಿದೆ. ಪ್ರಜಾಸತ್ತೆ ಸುರಕ್ಷಿತವಾಗಿರಲು ಅದನ್ನು ಯೋಗ್ಯರು, ಆದರ್ಶವಾದಿಗಳನ್ನೊಳಗೊಂಡ ರಾಜಕೀಯ ಪಕ್ಷದ ಆಧಾರದ ಮೇಲೆ ನಿಂತಿದೆ ಎಂದಿದ್ದಾರೆ. ರಾಜಕೀಯ ಪಕ್ಷದ ಬಗ್ಗೆ ಅವರು ಸದ್ಭಾವನೆಯನ್ನು ಹೊಂದಿದ್ದರೂ ಕೂಡ ಒಂದೇ ಒಂದು ಪಕ್ಷದ ದಬ್ಬಾಳಿಕೆಯನ್ನು ಅವರು ಸಹಿಸುವುದಿಲ್ಲವೆಂಬುದನ್ನು ಕಾಣಬಹುದು. ಏಕಪಕ್ಷೀಯ ಸರ್ಕಾರಕ್ಕೆ ವಿರೋಧಿಯಾಗಿದ್ದ ಅವರು ಮಾನವನಿಂದ ಅವನ ಮೂಲಭೂತ ಸ್ವಾತಂತ್ರ್ಯ, ಹಾಗೂ ವ್ಯಕ್ತಿತ್ವವನ್ನು ಅಪಹರಿಸಿದಂತಹ ಸರ್ವಾಧಿಕಾರದಂತಿರುತ್ತದೆ ಎಂದು ಟೀಕಿಸಿದ್ದಾರೆ. ರಾಜಕೀಯ ಪಕ್ಷಗಳು ಜಾತಿಪೀಡೆಯಿಂದ ಮುಕ್ತವಾಗಿರಬೇಕು. ಅಲ್ಲಿ ಪ್ರತಿಭೆಗೆ, ಗುಣಕ್ಕೆ, ಪ್ರಾಮಾಣಿಕತೆಗೆ, ಧ್ಯೇಯೋದ್ದೇಶಗಳಿಗೆ ಬೆಲೆ ಇರಬೇಕು. ನಾಯಕರಲ್ಲಿ ಸಾರ್ವಜನಿಕ ಸೇವಾಮನೋಭಾವ, ಶ್ರಮ, ತ್ಯಾಗ, ನಿಸ್ವಾರ್ಥತೆ, ಸ್ವಚ್ಛತೆ, ಇರಬೇಕು. ಹಾಗಿದ್ದಲ್ಲಿ ಮಾತ್ರ ಸಮಾಜ ಸೇವೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ನಿರೀಕ್ಷಿಸಬಹುದು ಎಂದು ರಾಜಕೀಯ ಪಕ್ಷದ ತತ್ವಗಳನ್ನು ಕುರಿತು ವಿವರಿಸಿದ್ದಾರೆ. ಸರ್ಕಾರ ಮಾಡುವ ತಪ್ಪುಗಳನ್ನು ತಿದ್ದುವುದಕ್ಕಾಗಿ ಅದನ್ನು ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇಡುವಂತೆ ಮಾಡುವಲ್ಲಿ ಬಲಿಷ್ಠವಾದ ವಿರೋಧಪಕ್ಷದ ಅಗತ್ಯತೆಯನ್ನು ಸಹ ವಿವರಿಸಿದ್ದಾರೆ ಎಂದಿದ್ದಾರೆ.

ರಾಜಕೀಯ ಅಧಿಕಾರ

'ಅಧಿಕಾರ'ವನ್ನು ಕುರಿತು ಡಾ. ಅಂಬೇಡ್ಕರ್ ನಿಖರವಾದ ವ್ಯಾಖ್ಯಾನವನ್ನು ನೀಡಿಲ್ಲ. ಆದರೆ ಅಧಿಕಾರವೆಂದರೆ "ಬಡತನ ಪೀಡಿತ ಚಿಂತನೆಯ ಪರಿಸ್ಥಿತಿಯಲ್ಲಿ ಅಪೇಕ್ಷಿತ ಸುಧಾರಣೆಯನ್ನು ತರಬಲ್ಲಂತಹ ಸಾಮರ್ಥ್ಯ" ಎಂದು ಅರ್ಥೈಯಿಸಿದ್ದಾರೆ. ರಾಜಕೀಯ ಅಧಿಕಾರವನ್ನು ಎತ್ತಿ ಹಿಡಿದ ಅವರು ಸಮಸ್ತ ಸಾಮಾಜಿಕ ಪ್ರಗತಿಗೆ ಇದು ಕೀಲಿಕೈಯಾಗಿದೆ ಎಂದಿದ್ದಾರೆ. ಅಧಿಕಾರವೆಂಬುದು ಕೇವಲ, ಒಂದು ಸಾಧನವೇ ಹೊರತು ಅದೇ ಗುರಿಯಲ್ಲ ಎಂಬುದು ಅವರ ನಿಲುವಾಗಿದೆ. ಎಲ್ಲರ ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲವರ್ಗದವರ ವಿಮೋಚನೆ ಹಾಗೂ ಅಭಿವೃದ್ಧಿ ಸಾಧಿಸುವುದಕ್ಕಾಗಿಯೇ ಇರುವ ಒಂದು ಸಾಧನವಾಗಿದೆ.

ರಾಜಕೀಯ ಎಂಬುದು ಅಧಿಕಾರವನ್ನುಗಳಿಸಿಕೊಳ್ಳುವಲ್ಲಿ ಇರುವಂತ ಒಂದು ಆಟವಿದ್ದಂತೆ ಎನ್ನುವ ಅಂಬೇಡ್ಕರ್, ತಮಗೆ ರಾಜಕೀಯವು ಒಂದು ಜೀವನಧ್ಯೇಯ ಎಂದು ಹೇಳಿದ್ದಾರೆ. ಅವರ ಪ್ರಕಾರ ರಾಜಕಾರಣಿಯು "ಕೇವಲ ರಾಜಕೀಯದಲ್ಲಿ

ವ್ಯವಹರಿಸುವ ವ್ಯಕ್ತಿಯಲ್ಲ. ಆದರೆ ರಾಜಕಾರಣದ ವಿಧಾನಗಳನ್ನು ಹಾಗೂ ತತ್ವಗಳನ್ನು ನಿರ್ದಿಷ್ಟ ನಂಬಿಕೆಯನ್ನು ಆತ ಪ್ರತಿನಿಧಿಸುವ ವ್ಯಕ್ತಿಯಾಗಿರುತ್ತಾನೆ".[9] ಅಂಬೇಡ್ಕರ್‌ರವರು ಎಂದಿಗೂ "ಅನುಯಾಯಿ ರಾಜಕೀಯ" ("ಕ್ಯಾಂಪ್ ಫಾಲೋಯಿಂಗ್ ಪಾಲಿಟಿಕ್ಸ್") ಅಥವಾ ಕುರ್ಚಿ ರಾಜಕೀಯ ("ಚೇರ್ ಪಾಲಿಟಿಕ್ಸ್")ವನ್ನು ನಂಬಿದವರಲ್ಲ. ಬದಲಾಗಿ ಶೋಷಿತರನ್ನು ಮುಕ್ತಗೊಳಿಸುವ ರಾಜಕೀಯವನ್ನು ನಂಬಿದವರು, ಮೌಲ್ಯಭರಿತ ರಾಜಕೀಯವನ್ನು ಬೆಂಬಲಿಸಿದವರು. ಮೌಲ್ಯರಹಿತ ಬಹುತಂತ್ರ ರಾಜಕೀಯವನ್ನು ವಿರೋಧಿಸಿದವರು.

ಅಂಬೇಡ್ಕರ್ ಅಭಿಪ್ರಾಯದಲ್ಲಿ ರಾಜಕೀಯದ ಬಹುಮುಖ್ಯವಾದ ಒಂದು ತತ್ವವೆಂದರೆ ತುಳಿತಕ್ಕೆ ಒಳಗಾದ ವರ್ಗದವರಿಗಾದ ಅನ್ಯಾಯವನ್ನು ಪ್ರತಿಭಟಿಸಲು ಎಲ್ಲಾ ನ್ಯಾಯಬದ್ಧವಾದ ಹಾಗೂ ನ್ಯಾಯಬದ್ಧವಲ್ಲದ ಕ್ರಮಗಳನ್ನು ಅನುಸರಿಸಬಹುದಾಗಿತ್ತು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಸವರ್ಣೀಯ ಹಿಂದೂಗಳು ಆ ವರ್ಗದವರಿಗೆ ನಿರಾಕರಿಸಿದಂತಹ ಮೂಲಭೂತ ಹಕ್ಕುಗಳನ್ನು ಪಡೆಯುವುದು ಹಾಗೂ ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸುವುದೇ ಆಗಿತ್ತು.

ರಾಜಕೀಯ ಪ್ರತಿಭಟನೆ:

ಡಾ|| ಅಂಬೇಡ್ಕರ್‌ರವರ "ರಾಜಕೀಯ ಪ್ರತಿಭಟನಾ" ಸಿದ್ಧಾಂತವು 'ಒತ್ತಡ ಗುಂಪು ರಾಜಕೀಯ'ದ ಇತಿಮಿತಿಗಳನ್ನು ಒಳಗೊಂಡಂತಹ ಸಾಮಾಜಿಕ ತೀವ್ರ ಸುಧಾರಣಾವಾದ ಹಾಗೂ ರಾಜಕೀಯ ಸೂತ್ರಬದ್ಧತೆಯ ಎಚ್ಚರಿಕೆಯ ಸಂಮಿಶ್ರವಾಗಿತ್ತು. ಅಂದರೆ ಸಾಮಾಜಿಕ ಮೂಲಸ್ವರೂಪವನ್ನು, ರಾಜಕೀಯ ಸ್ವರೂಪವನ್ನು ಬದಲಾಯಿಸುವಲ್ಲಿ ರಾಜಕೀಯ ಪ್ರತಿಭಟನೆಯ ಅಗತ್ಯತೆಯನ್ನು ಕುರಿತು ಚಿಂತಿಸಿದ್ದಾರೆ. ಶೋಷಿತವರ್ಗವನ್ನು ಎಚ್ಚರಿಸುತ್ತಾ, ಸರ್ಕಾರ ಮತ್ತು ಸಮಾಜವನ್ನು ಎರಡು ವಿಧಾನಗಳಿಂದ ವಿರೋಧಿಸಬಹುದು ಎಂದಿದ್ದಾರೆ. (1) ಪರೋಕ್ಷ ವಿಧಾನವಾದ ಒತ್ತಡ ಗುಂಪು ರಾಜಕೀಯದಿಂದ, ರಾಜಕೀಯ ಅಧಿಕಾರವನ್ನು ಪಡೆಯುವುದು ಮತ್ತು ಪ್ರತಿಭಟಿಸುವುದು. (2) ಪ್ರತ್ಯಕ್ಷ ವಿಧಾನವಾದ ಸತ್ಯಾಗ್ರಹ ಮತ್ತು ಚಳವಳಿಗಳಿಂದ ಪ್ರತಿಭಟಿಸುವುದು. ಮತಾಂತರ ಹೊಂದುವುದನ್ನು ಪ್ರತಿಪಾದಿಸಿದರೂ ಕೂಡ ಇದನ್ನು ಅವರು ರಾಜಕೀಯ ಪ್ರತಿಭಟನಾ ವಿಧಾನವನ್ನಾಗಿ ಬಳಸಿಕೊಳ್ಳಲಿಲ್ಲ.

ರಾಜಕೀಯ ಪ್ರತಿಭಟನೆಯು ಸ್ವಾತಂತ್ರ್ಯನಂತರವೂ ಮುಂದುವರಿಯುತ್ತದೆ ಎಂಬ ಅಭಿಪ್ರಾಯವನ್ನು ಅಂಬೇಡ್ಕರ್ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಗಿರಣಿ ಮಾಲೀಕರು, ಬಂಡವಾಳಶಾಹಿಗಳು, ಜಮೀನುದಾರರು, ಲೇವಾದೇವಿಗಳು, ಜನತೆಯನ್ನು ಶೋಷಿಸುವುದು ನಿರಂತರವಾಗಿ ಮುಂದುವರಿಯುವುದರಿಂದ ರಾಜಕೀಯ ಪ್ರತಿಭಟನೆಗೆ ಅಂತ್ಯವೆನ್ನುವುದಿಲ್ಲ ಎಂದಿದ್ದಾರೆ.

ಮಾನವ ಹಕ್ಕುಗಳು:

ಅಂಬೇಡ್ಕರ್‌ರವರ ಮಾನವ ಹಕ್ಕುಗಳ ವಿಶ್ಲೇಷಣೆಯು ಅವರ ದೂರದರ್ಶಿತ್ವ ಮತ್ತು ಮಾನವತಾವಾದದ ಪ್ರತಿಬಿಂಬವಾಗಿದೆ. ಮಾನವ ಹಕ್ಕುಗಳನ್ನು ಪ್ರತಿಪಾದಿಸಿ ಸಾಮಾಜಿಕ ಗೌರವ ಮತ್ತು ಆರ್ಥಿಕ ಪ್ರಗತಿಯ ವಿಚಾರಗಳನ್ನು ಮಂಡಿಸಿದ ಕೆಲವೇ ಮಾನವತಾವಾದಿಗಳಲ್ಲಿ ಅಂಬೇಡ್ಕರ್‌ರು ಅಗ್ರಗಣ್ಯರು. ದಲಿತರು, ಹಿಂದುಳಿದ ವರ್ಗಗಳ ಸಾಮಾಜಿಕ, ರಾಜಕೀಯ, ಆರ್ಥಿಕ ಉತ್ಕರ್ಷಕ್ಕೆ ಹಲವು ಹೋರಾಟದ ದಾರಿಗಳನ್ನು ತೋರಿಸಬಲ್ಲ, ಅಂತಹ ಹೋರಾಟಗಳಿಗೆ ಪ್ರಜಾಸತ್ತಾತ್ಮಕ ಸಮಾಜ ವಾದಿ ನೆಲೆಯ ತಾತ್ವಿಕಬುನಾದಿಹಾಕಬಲ್ಲ ಸಾಮರ್ಥ್ಯಹೊಂದಿದ್ದ ವ್ಯಕ್ತಿ ಅಂಬೇಡ್ಕರ್. ಭಾರತೀಯ ಸಮಾಜದ ದಲಿತರು, ಶೋಷಿತರು, ಮಾನವ ಮೂಲಭೂತ ಹಕ್ಕುಗಳನ್ನು ಯಾವ ನಿರ್ಬಂಧವೂ ಇಲ್ಲದೆ ಅನುಭವಿಸುವಂತಾಗಲು ಸಂವಿಧಾನಾತ್ಮಕ ಕ್ರಮಗಳ ಮೂಲಕ ಕ್ರಾಂತಿಕಾರಕ ಬದಲಾವಣೆಗಳನ್ನು ಜಾರಿ ಗೊಳಿಸಲು ಪ್ರಯತ್ನಿಸಿದರು.

ನ್ಯಾಯಾಲಯಗಳು ಜಾರಿಗೊಳಿಸುವ ಮತ್ತು ಸರ್ಕಾರದ ಬದ್ಧತೆಯಿರುವ ರೀತಿಯಲ್ಲಿ ಇದ್ದರೆ ಮಾತ್ರ ಸಂವಿಧಾನಾತ್ಮಕ ಹಕ್ಕು ಅರ್ಥಪೂರ್ಣವಾಗಿರುತ್ತದೆ. ಇಲ್ಲದಿದ್ದರೆ ಅಂತಹ ಹಕ್ಕಿನ ಅಸ್ತಿತ್ವ ಪ್ರಜೆಯೊಬ್ಬನಿಗೆ ಯಾವ ಪ್ರಯೋಜನವನ್ನು ತರುವುದಿಲ್ಲ. ಭಾರತ ಸಂವಿಧಾನದ 18ನೇ ವಿಧಿಯು ಎಲ್ಲಾ ವ್ಯಕ್ತಿಗಳು ಕಾನೂನಿಗೆದುರು ಸಮಾನರು ಮತ್ತು ಎಲ್ಲರೂ ಸಮಾನ ನಾಗರೀಕ ಹಕ್ಕುಗಳನ್ನು ಹೊಂದಿದವರಾಗಿರು ತ್ತಾರೆ ಎಂಬುದನ್ನು ಸಾರುತ್ತದೆ. ಅವರ ಪ್ರಕಾರ "ಶೋಷಿತರು ಪ್ರಸ್ತುತ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನಮಾಡಬೇಕು ಪ್ರತಿಕೂಲವಾಗಿರುವ ಎಲ್ಲಾ ರಂಗಗಳಲ್ಲೂ ಪಾಲ್ಗೊಳ್ಳಬೇಕು. ಸಮಾಜದ ಅಂಕು ಡೊಂಕುಗಳನ್ನು ತರ್ಕದ ಮೂಲಕ ಪ್ರತಿನಿಧಿಸಬೇಕು. ಹಕ್ಕುಗಳು ತಾವಾಗಿ ಬರುವುದಿಲ್ಲ. ಅವನ್ನು ಕೇಳಿ ಪಡೆಯಬೇಕು, ಇಲ್ಲವೇ ಹೋರಾಡಿ ಪಡೆಯಬೇಕು. ಇದು ಇಂದಿನ ಅನಿವಾರ್ಯ ಪರಿಸ್ಥಿತಿ"[10] ಎಂದು ಸ್ಪಷ್ಟಪಡಿಸಿದ್ದಾರೆ.

ಸ್ವತಂತ್ರ ಭಾರತದಲ್ಲಿ ದಲಿತರ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸಮಾನ ನಾಗರೀಕ ಹಕ್ಕುಗಳನ್ನು ಅನುಭವಿಸಲು ಸೂಕ್ತವಾದ ಮುಕ್ತ ವಾತಾವರಣವಿರ ಬೇಕೆಂಬುದು ಅಂಬೇಡ್ಕರ್ ಅಭಿಪ್ರಾಯ. ಮಾನವ ಹಕ್ಕುಗಳನ್ನು ತಿರುಚುವುದು, ತಡೆಹಿಡಿಯುವುದು ಇಂತಹ ಪ್ರವೃತ್ತಿಗೆ ದಂಡವಿಧಿಸಬೇಕು. ಪ್ರಜೆಗಳ ನಾಗರೀಕ ಹಕ್ಕುಗಳಿಗೆ ಒದಗುವ ಅಪಾಯವನ್ನು ಅಪರಾಧವೆಂದು ಪರಿಗಣಿಸಬೇಕು ಎಂಬುದಾಗಿ ವಿವರಿಸಿದ್ದಾರೆ.

ಹೀಗೆ ವ್ಯಕ್ತಿಯು ಪ್ರತ್ಯೇಕಿಸಲಾಗದ ಹಕ್ಕನ್ನು ಪಡೆದಿರುತ್ತಾನೆ. ವ್ಯಕ್ತಿಯ ಹಕ್ಕುಗಳನ್ನು ನೈಸರ್ಗಿಕ ಮತ್ತು ಅಂತರ್ಗತ ಎಂದು ವರ್ಗೀಕರಿಸಿದ್ದಾರೆ ವ್ಯಕ್ತಿ ಮತ್ತು ಆತನ ಹಕ್ಕುಗಳನ್ನು ಕೇಂದ್ರಬಿಂದುವಾಗಿರಿಸಿಕೊಂಡ ಅಂಬೇಡ್ಕರ್,

ಸಾಮಾಜಿಕ, ರಾಜಕೀಯ ಸಂಘಟನೆಯ ತತ್ವವನ್ನು ನಿರೂಪಿಸಿದ್ದಾರೆ. ಅನ್ಯಾಯ, ದಬ್ಬಾಳಿಕೆ, ಮತ್ತು ಶಾಸನಾತ್ಮಕ ಅಧಿಕಾರ ಮತ್ತು ಜನತೆಯ ಹಕ್ಕುಗಳ ನಡುವೆ ಸ್ಪಷ್ಟ ಹೊಂದಾಣಿಕೆ ಇರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕಾನೂನು :

ಕಾನೂನಿನ ಪ್ರಾಮುಖ್ಯತೆಯನ್ನು ಎತ್ತಿಹಿಡಿದ ಅಂಬೇಡ್ಕರರು ಕಾನೂನು ಎಂಬುದು ಸಾಮಾಜಿಕ ಶಾಂತಿಯನ್ನು ವಿವಿಧ ಜನರ ನಡುವೆ ನ್ಯಾಯವನ್ನು ಕಾಪಾಡಿಕೊಂಡು ಬರುವ ಅಂಶವಾಗಿದೆ. ಇದು ಸಮಾನತೆ ಮತ್ತು ಸ್ವಾತಂತ್ರ್ಯದ ರಕ್ಷಕನಂತಿದೆ ಎಂದು ವರ್ಣಿಸಿದ್ದಾರೆ. ಪ್ರಖ್ಯಾತ ನ್ಯಾಯವಾದಿ ಮತ್ತು ನ್ಯಾಯಾಂಗಶಾಸ್ತ್ರ ವಿದ್ವಾಂಸರೂ ಆಗಿದ್ದ ಡಾ|| ಅಂಬೇಡ್ಕರರು ನಾಗರೀಕ ಸಮಾಜವೊಂದರಲ್ಲಿ ಕಾನೂನಿನ ಪಾತ್ರವನ್ನು ಕುರಿತು ವಿಶ್ಲೇಷಿಸುತ್ತಾ, ''ಸಮಾಜದ ತಪ್ಪುಗಳನ್ನು ತಿದ್ದುವುದೇ ನಿಜವಾದ ಕಾನೂನಿನ ಕರ್ತವ್ಯ'' ಎಂಬ ಅವರ ಅಭಿಪ್ರಾಯದಲ್ಲಿ ಕೆಳಕಂಡ ಸಾರ್ವಕಾಲಿಕ ತತ್ವಗಳು ಅಂತರ್ಗತವಾಗಿದೆ :

1. ಸಮಾಜವೊಂದರಲ್ಲಿ ಕಾನೂನು ನಿರೂಪಣಾ ಕ್ರಿಯೆಯು ನಿರಂತರವಾಗಿರಬೇಕು. ಅಂದರೆ ಬದಲಾಗುವ ಸಮಾಜಕ್ಕನುಗುಣವಾಗಿ ಕಾನೂನುಕಟ್ಟಳೆಗಳು ಬದಲಾಗಬೇಕು. ಆಗ ಮಾತ್ರ ಸಮಾಜವೊಂದು ಚಲನಾಶೀಲವಾಗಲು ಸಾಧ್ಯ.

2. ಸಮಾಜದಲ್ಲಿ ಸಂಬಂಧಗಳು, ಪ್ರಕ್ರಿಯೆ ಮತ್ತು ಬೆಳವಣಿಗೆಯನ್ನು ನಿರ್ಣಯಿಸಲು ಮತ್ತು ನಿರ್ದೇಶಿಸಲು ಕಾನೂನುಗಳು ಸಮಾಜದ ಅಂತರಾಳದಿಂದಲೇ ಮೂಡಿರಬೇಕು. ಈ ದಿಸೆಯ ಕಾನೂನುಗಳಿಗೆ ಧಾರ್ಮಿಕ ಮೌಲ್ಯಗಳ ಲೇಪನವೇ ಪ್ರಧಾನವಾದರೆ ಅಂತಹ ಸಮಾಜಗಳು ನಶಿಸುತ್ತವೆ.

3. ಸಮಾಜವೊಂದರಲ್ಲಿ ಕಾನೂನುಗಳನ್ನು ನಿರೂಪಿಸಲು ಎಲ್ಲಾವರ್ಗದ ಜನತೆಯೂ ಅದರಲ್ಲಿ ಪಾಲ್ಗೊಳ್ಳಬೇಕು. ಇಲ್ಲದಿದ್ದರೆ ಯಾವುದೋ '' ಸ್ಥಾಪಿತ ಹಿತಾಸಕ್ತಿ '' ದೇವರ ಮತ್ತು ಶಾಸ್ತ್ರಗಳ ಹೆಸರಿನಲ್ಲಿ ಕಾನೂನುಗಳನ್ನು ನಿರೂಪಿಸಿ ಬಹುಸಂಖ್ಯಾತರನ್ನು ಶೋಷಿಸುತ್ತದೆ.

4. ಕಾನೂನುಗಳು ದೈವೀಮೂಲದಿಂದ ರೂಪಿಸಲ್ಪಟ್ಟರೆ, ಅವುಗಳು ಜಾತ್ಯಾತೀತ ಸ್ವರೂಪ ತಳೆಯುತ್ತವೆ. ಪರಿಣಾಮವಾಗಿ ಪುರೋಹಿತಶಾಹಿ ವರ್ಗ ಸದಾ ಅಧಿಕಾರ ಚಲಾಯಿಸುತ್ತಾ ಶೋಷಿತ ವರ್ಗವಾಗಿ ಬೆಳೆಯುತ್ತದೆ. ವಿವಿಧ ಜನವರ್ಗಗಳ ನಡುವೆ ಸಾಮಾಜಿಕ ಶಾಂತಿ ಮತ್ತು ಗೌರವವನ್ನು ಕಾಪಾಡುವ ಮಹತ್ವದ ಕರ್ತವ್ಯವನ್ನು ಕಾನೂನು ನಿರ್ವಹಿಸಬೇಕು. ಮಾನವತಾವಾದ ಮತ್ತು ಸಾಮಾಜಿಕ ಪ್ರಗತಿಯ ಧೋರಣೆಯನ್ನು ಒಳಗೊಂಡಿರುವುದೇ ಕಾನೂನು. ಕಾನೂನಿನ ಪರಿಣಾಮವು ಸದಾ ಸಾರ್ವಕಾಲಿಕನಾಗಿರಬೇಕು. ಕಾನೂನಿನ ಶಿಕ್ಷಣವನ್ನು ಹೆಚ್ಚು ಬಳಕೆಗೆ ತರಬೇಕು. ಸಮಾಜದ ಸಮಗ್ರ ನೈತಿಕತೆಗೆ ಮತ್ತು ಮನುಷ್ಯನ ಮನೋಗತ

ವನ್ನು ಬದಲಾಯಿಸಲು ಮಾನವೀಯತೆಯೇ ಪ್ರಧಾನವಾದ ಶಿಕ್ಷಣವನ್ನು ಕೊಡಬೇಕು ಎಂಬುದು ಅವರ ವಾದವಾಗಿದೆ.

ಹೀಗೆ ನಾಗರೀಕ ಸಮಾಜವೊಂದರಲ್ಲಿ ಸರ್ಕಾರದ ಜಾತ್ಯಾತೀತ ಮತ್ತು ಪ್ರಗತಿಪರ ಪಾತ್ರವನ್ನು, ಕಾನೂನುಗಳ ಜ್ಯಾತ್ಯಾತೀತ ಸ್ವರೂಪವನ್ನು ಹಾಗೂ ಅವುಗಳ ನಿರೂಪಣೆಯಲ್ಲಿ ಸಮಗ್ರ ಜನತೆಯ ಪಾಲ್ಗೊಳ್ಳುವಿಕೆಯ ಅಗತ್ಯತೆಯನ್ನು ವಿವರಿಸಿದ್ದಾರೆ. "ವ್ಯಕ್ತಿಸ್ವಾತಂತ್ರ್ಯ ಮತ್ತು ವ್ಯಕ್ತಿಗೌರವಗಳಲ್ಲಿ ಅಪಾರ ನಂಬಿಕೆ ಇದ್ದುದರಿಂದಲೇ ಅಂಬೇಡ್ಕರ್ ಜ್ಯಾತ್ಯಾತೀತ ಕಾನೂನುಗಳನ್ನು ಪ್ರತಿಪಾದಿಸಿದರು"[12] ಎಂದು ರಾಜಕೀಯಶಾಸ್ತ್ರಜ್ಞ W.N. ಕ್ಯೂಬರ್ ಹೇಳಿದ್ದಾರೆ. ಈ ಕಾರಣದಿಂದಲೇ ಅಂಬೇಡ್ಕರ್ ಸಮಾಜವಾದಿ ಪ್ರಜಾಪ್ರಭುತ್ವ ಸಂವಿಧಾನವನ್ನು ಭಾರತೀಯರಿಗೆ ನೀಡಲು ಸಾಧ್ಯವಾಯಿತು.

ಅಂಬೇಡ್ಕರ್‌ರವರು ಒಬ್ಬ ಸಾಮಾಜಿಕ ಕ್ರಾಂತಿಕಾರಿಯಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಹಿಂದುಳಿದ ಜನಾಂಗದ ನಾಯಕನಾಗಿ ಮಾಡಿದ ಕಾರ್ಯಗಳು ಆತನನ್ನು ಉನ್ನತ ಸ್ಥಾನಕ್ಕೇರಿಸಿದೆ. ಮಹಾನ್ ಮಾನವತಾವಾದಿಯಾಗಿ ಶೋಷಿಸುವ ಸಮಾಜವನ್ನು ಕಟುವಾಗಿ ಟೀಕಿಸುವುದರ ಮೂಲಕ ಮಾನವತಾ ತತ್ವಗಳ ಹಲವು ಮುಖಗಳನ್ನು ಪರಿಚಯಿಸಿದ್ದಾರೆ. ಅಸಾಧಾರಣಾ ಸಾಮಾಜಿಕ ಪ್ರಜ್ಞೆ, ಕಳಕಳಿ, ಮೌಲ್ಯಗಳಲ್ಲಿ, ಅಖಂಡ ನಂಬಿಕೆಯನ್ನು ಜೀವನಪೂರ್ತಿ ತೋರಿದ ಚೇತನಶಕ್ತಿ ಡಾ|| ಅಂಬೇಡ್ಕರ್. ತನ್ನ ಜನಾಂಗಕ್ಕಾಗಿ, ಅವರ ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ, ಶಾಸಕಾಂಗಗಳ ಪ್ರಾತಿನಿಧ್ಯಕ್ಕಾಗಿ ಅವರು ನಡೆಸಿದ ಹೋರಾಟ ಅಸಾಧಾರಣ. ಅವರು ರಾಜಕೀಯದಲ್ಲಿ ಅಧಿಕಾರ ನಡೆಸಲಿಲ್ಲ, ಆದರೆ ಪ್ರಮುಖ ರಾಜಕೀಯ ನಿರ್ಣಯಗಳ ಮೇಲೆ ತಮ್ಮ ಪ್ರಭಾವ ಬೀರಿದರು. ಪಾಶ್ಚ್ಯಾತ್ಯರ ಪ್ರಭಾವ, ವಿಧಿನಿಯಮ, ನಾಗರೀಕ ಸಮಾನತೆ, ರಾಜಕೀಯ ಪಾಲ್ಗೊಳ್ಳುವಿಕೆ, ಕಾನೂನು ರಚಿಸುವುದರಲ್ಲಿ ನೀತಿನಿರ್ಣಯಗಳಲ್ಲಿ, ರಾಜರಾಂ ಮೋಹನರಾಯ್, ರಾನಡೆ ಪೂಲೇ ಅಗರ್‌ಕರ್ ಮತ್ತಿತರ ಸಾಮಾಜಿಕ ಸುಧಾರಣೆಗಳ ಪ್ರಯತ್ನ, ಪ್ರಜಾಸತ್ತಾತ್ಮಕವಾದ ಉದಾತ್ತವಾದ ವಯಸ್ಕ ಮತದಾನ, ಇವು ಭಾರತದ ರಾಜಕೀಯದಲ್ಲಿ ಜ್ಯಾತ್ಯಾತೀತ ಪ್ರವೃತ್ತಿಗಳಿಗೆ ಕಾರಣವಾದ ಕೆಲವು ಅಂಶಗಳಾಗಿವೆ. ಅವರ ರಚನಾತ್ಮಕ ಮುತ್ಸದ್ಧಿತನದಿಂದ ಆಧುನಿಕ ರಾಷ್ಟ್ರನಿರ್ಮಾಪಕರ ಶ್ರೇಣಿಯಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದ್ದರು.

ಆಧುನಿಕ ಭಾರತದ ಇತಿಹಾಸದಲ್ಲಿ ಕಾಂಗ್ರೆಸ್ ಮತ್ತು ಮಹಾತ್ಮಗಾಂಧಿಯವರು ಸ್ವತಂತ್ರ ಭಾರತದ ಹೋರಾಟಕ್ಕಾಗಿ ನೆನಪಿನ ಶಕ್ತಿಗಳಾಗಿದ್ದರೆ, ಡಾ|| ಅಂಬೇಡ್ಕರ್ ಶತಶತಮಾನಗಳಿಂದ ಪ್ರಾಣಿಗಳಿಗಿಂತ ಕೀಳಾಗಿ ಪರಿಗಣಿಸಲ್ಪಡುತ್ತಿದ್ದಂತಹ ಶೋಷಿತ ವರ್ಗದವರ ವಿಮೋಚನಾ ಹೋರಾಟಕ್ಕಾಗಿ ಅಮರ ವ್ಯಕ್ತಿಯಾಗಿದ್ದಾರೆ. ಕೆಳವರ್ಗದವರು ತಮ್ಮ ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಸ್ಫೂರ್ತಿಯ ಮೂಲಗಳಿಗಾಗಿ ನವ ಜ್ಯೋತಿಯೊಡನೆ ಅರಸುತ್ತಿದ್ದಾರೆ.

ಅಡಿ ಟಿಪ್ಪಣಿಗಳು

1 ಬಿ. ಆರ್. ಅಂಬೇಡ್ಕರ್ "ಸ್ಟೇಟ್ ಆ್ಯಂಡ್ ಮೈನಾರಿಟಿ' ಬಾಂಬೆ ಥ್ಯಾಕರ್ ಆ್ಯಂಡ್ ಕಂಪನಿ ಲಿಮಿ. 1974 ಪುಟ 3.

2 ಅಂಬೇಡ್ಕರ್ ವಾಹಿನಿ–ಜನ್ಮಶತಾಬ್ಧಿ ವಿಶೇಷಾಂಕ, 14 ಏಪ್ರಿಲ್ 1991, ಪುಟ 11.

3 'ಅಂಬೇಡ್ಕರ್ ವಾಣಿ' ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಜ್ಯ ಸಮಿತಿ ಪುಟ 44.

4 'ಅಂಬೇಡ್ಕರ್ ವಾಣಿ' ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಜ್ಯ ಸಮಿತಿ ಪು. 44.

5 'ಅಂಬೇಡ್ಕರ್ ವಾಣಿ' ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಜ್ಯ ಸಮಿತಿ ಪು. 41.

6 'ಅಂಬೇಡ್ಕರ್ ವಾಣಿ' ಕರ್ನಾಟಕ ದಲಿತ ಸಂಘರ್ಷ ಸಮಿತಿ ಪು. 42.

7 ಅಂಬೇಡ್ಕರ್ ವಾಹಿನಿ, ಜನ್ಮಶತಾಬ್ಧಿ ವಿಶೇಷಾಂಕ 14 ಏಪ್ರಿಲ್ 1991, ಪು. 26.

8 ಕುಬೇರ್ W. N. 'ಅಂಬೇಡ್ಕರ್ ಬಿ. ಆರ್. ಎ. ಪ್ರಾಕ್ಟಿಕಲ್ ಸ್ಟಡಿ' ನ್ಯೂಡೆಲ್ಲಿ ಪೀಪಲ್ಸ್ ಪಬ್ಲಿಷಿಂಗ್ ಹೌಸ್, ಪು. 39.

9 ಅಂಬೇಡ್ಕರ್ ಬಿ. ಆರ್. 'ರಾನಡೆ, ಗಾಂಧಿ ಆ್ಯಂಡ್ ಜಿನ್ನ' ಬಾಂಬೆ ಥ್ಯಾಕರ್ ಆ್ಯಂಡ್ ಕಂಪನಿ ಲಿಮಿ. 1943 ಪು. 39.

10 ಅಂಬೇಡ್ಕರ್ ವಾಹಿನಿ—ಜನ್ಮಶತಾಬ್ಧಿ ವಿಶೇಷಾಂಕ ಪು. 26.

11 'ಅಂಬೇಡ್ಕರ್ ಸಮಗ್ರ ಚಿಂತನೆ' ಒಡೆಯರ್ ಡಿ. ಹೆಗ್ಗಡೆ ಪು. 62.

12 'ಅಂಬೇಡ್ಕರ್ ಸಮಗ್ರ ಚಿಂತನೆ' ಒಡೆಯರ್ ಡಿ. ಹೆಗಡೆ ಪು. 65.

ಕೆ.ಸಂ. ೩೧೮೯೧—ಎಂ.ಯು.ಪಿ.ಎಂ.—೪೨೫ ಪ್ರತಿಗಳು—೨೧-೮-೯೧

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬